
# ಆಕಾಶದಲ್ಲರಳಿದ ಹೂ

ಹೆಚ್.ಜಿ.ರಾಧಾದೇವಿ



894.814 308 3
RAD N97
ಗ್ರಂಥ ಸ್ವಾಮ್ಯ ವಿಭಾಗ

DEPARTMENT OF PUBLIC LIBRARIES
COPY RIGHT
BUREAU
No.
STATE CENTRAL LIBRARY, BANGALORE.

# ಆಕಾಶದಲ್ಲರಳಿದ ಹೂವು

ಹೆಚ್. ಜಿ. ರಾಧಾದೇವಿ

META ENTERED

11,378 1997

# ಆಕಾಶದಲ್ಲರಳಿದ ಹೂವು

[ಸಾಮಾಜಿಕ ಕಾದಂಬರಿ]

ಲೇಖಕಿ :

ಹೆಚ್. ಜಿ. ರಾಧಾದೇವಿ

ಕೀರ್ತಿ ಪ್ರಕಾಶನ

2, ಎಸ್.ಡಿ.ಎಂ.ಲೇನ್,

ಮನವಾರ್ತೆಪೇಟೆ, ಬೆಂಗಳೂರು-53

Akashadhalaralida Hoovu — A Social novel by Smt H. G Radhadevi Published by Keerthi Prakashana, No. 2 S, D. M. Lane Manaverthipet Bangalore—560053 and Printed at Sadhana Press T. D Lane. Bangalore.

---

First Edition : 1997

Title of the Novel : AKASHADHALARALIDA HOOVU

894.814 308 3
RAD N97
ಸಾಮಾಜಿಕ ಕಾದಂಬರಿ

Authoress : H. G. Radhadevi

Rights : H. G. Radhadevi

Cover Design : P. S. Kumar

Price : Rs 32—00

84380 CR

ಪ್ರಥಮ ಮುದ್ರಣ : 1997

ಕೃತಿ : ಆಕಾಶದಲ್ಲರಳಿದ ಹೂವು

ಲೇಖಕಿ : ಹೆಚ್. ಜಿ. ರಾಧಾದೇವಿ

ಹಕ್ಕುಗಳು : ಹೆಚ್. ಜಿ. ರಾಧಾದೇವಿ

ಮುಖ ಚಿತ್ರ : ಪ. ಸ. ಕುಮಾರ್

ಪುಟಗಳು : 144

ಬೆಲೆ : ರೂ. 32—00

---

ಮುದ್ರಕರು :

ಸಾಧನಾ ಮುದ್ರಣಾಲಯ

2/2, 1ನೇ ಕ್ರಾಸ್, ತೋಟದ ದೇವರ ಗಲ್ಲಿ,

ಕಾಟನ್‌ಪೇಟೆ, ಬೆಂಗಳೂರು-53

# ಅರ್ಪಣೆ

ಆಲದೆಲೆಯ ಮೇಲೆ ಬಾಲಗೋಪಾಲನಾಗಿ ಮಲಗಿ, ಆಲದೆಲೆಯ ರೂಪದಲ್ಲಿದ್ದ ಶ್ರೀಲಕ್ಷ್ಮೀದೇವಿಗೆ ಶಿಶುತ್ವದ ನಿನ್ನ ದಿವ್ಯತೆಯ ಲೀಲಾವಿನೋದದ ಮುಗ್ಧ, ಮಂದಹಾಸದ ಆಟ ವಾಠತೋರಿಸಿ ಅಪಾರ ಆನಂದಗೊಳಿಸಿದವನು. ಅಪಾರ ಆನಂದ ಪ್ರದಳಾದ ಆಲದೆಲೆಯ ರೂಪದ ಆನಂದಮಯಿ ಶ್ರೀಲಕ್ಷ್ಮೀ ಮುಂದೆ ಭ್ರಹ್ಮಾಂಡ ಜನನಿ ಎನಿಸಿ ಶ್ರೀ ಭ್ರಹ್ಮವಾಯುಗಳ ಮಾತೇ ಎನಿಸಿದ್ದು ನೆನೆದು ಶರಣಾಗುವೆ. ಶ್ರೀಲಕ್ಷ್ಮೀ ಷದ್ಮೆಯುರರಪ ಶ್ರೀ ಕೋಲಾರ ವೆಂಕಟೇಶ್ವರ ಪ್ರಳಯದ ಕತ್ತಲು ಪರಿಹರಿಸಿ, ಮಹಾದ್ಭುತ ಕಾಂತಿಯಿಂದ ವಿಜೃಂಭಿಸಿದ ನಿನ್ನ ಪರಮ ಪುರುಷ ರೂಪ ನೋಡಿ ನಿನ್ನನ್ನು ದಿವ್ಯಾನಂದದಿಂದ ಸ್ತುತಿಸಿದ್ದು......ಸ್ಥಿರವಾಗಿ ನಿನ್ನ ಶ್ರೀ ವಕ್ಷದಲ್ಲಿ ನೆಲೆಸಿದ ಶ್ರೀ ಲಕ್ಷ್ಮೀದೇವಿಯೇ ಎಂದು ನೆನೆದು ಈ ಕೃತಿಯನ್ನು ಭಕ್ತಿಯಿಂದ ನಿನ್ನ ಚರಣಕಮಲಗಳಲ್ಲಿ ಅರ್ಪಿಸುವೆ.

ಇಂತಿ ವಂದನೆಗಳು,

**ಸೌ|| ರಾಧಾದೇವಿ ಸುದರ್ಶನ್**

# ಮುನ್ನುಡಿ

"ಆಕಾಶದಲ್ಲರಳಿದ ಹೂವು" ನಾಯಕಿ ಗೋದಾ ಅತ್ಯಂತ ಸದ್ಗುಣವಂತೆ. ಆದರೆ ಅವಳ ಸದ್ಗುಣ, ಆದರ್ಶಗಳು, ದ್ವೇಷ, ಅಸೂಯೆ ಹಾಗೂ ಅಧಿಕಾರ ಚಲಾವಣೆಯ ಅನೇಕರಿಗೆ ಅಪ್ರಿಯವಾಗುತ್ತದೆ. ಬದುಕನ್ನು ತಾಳ್ಮೆ, ಸಂಯಮದಿಂದಲೆ ಗೆದ್ದು, ತನ್ನ ಸುತ್ತಲಿದ್ದ..... ಹಲವರ ಬದುಕಿಗೆ ಬೆಳಕಾಗುತ್ತಾಳೆ. ಈಗಿನ ಕಾಲದ ಸ್ತ್ರೀ ಸಮಾನತೆ ವಾದ, ಸ್ತ್ರೀಯರ ಶೋಷಣೆ ನಿಲ್ಲಬೇಕು. ನೊಂದ ಸ್ತ್ರೀಗೆ ನೆರವು ಕೊಡಬೇಕು. ಈ ಯಾವ ವೇದಿಕೆ, ಉದ್ಗಾರಗಳ ಸೋಂಕಿಲ್ಲದ ತಾನು ನೊಂದವರ ಬದುಕಿನಲ್ಲಿ ನಲಿವು ತರುತ್ತಾಳೆ. ಗೋದಾ ಪುರುಷ ದ್ವೇಷಿ ಅಲ್ಲ, ಸಮರ್ಥ ಹೆಂಗಸು, ತನ್ನ ಪ್ರತಿಭೆಯಿಂದಲೇ ಎಲ್ಲಾ ಪಡೆಯುತ್ತಾಳೆ. ಸಮಾನತೆ ಬೇಕು ಎಂದು ಎಂದು ಮೇಜು ಕುಟ್ಟಿ..... ವಾದಿಸುತ್ತ, ಪುರುಷ ದ್ವೇಷ ಮಾಡುತ್ತ, ಪುರುಷರ ಬಗ್ಗೆ ನೂರು ಆಪಾದನೆಯಲ್ಲಿ ಸಮಯ ಕಳೆಯುವುದಲ್ಲ ಎಂದು ಗೋದಾಳ ಪಾತ್ರದ ಮೂಲಕ ವಿವರಿಸಿದ್ದೇನೆ. ನನ್ನ ಅಭಿಮಾನಿಗಳಿಗೆ ಈ ಕಾದಂಬರಿ ಪ್ರಿಯವಾಗಿರಬಹುದೆಂದು ನಂಬಿದ್ದೇನೆ.

ಇಂತಿ ವಂದನೆಗಳು,

**ಹೆಚ್. ಜಿ ರಾಧಾದೇವಿ**

# ನಮ್ಮಲ್ಲಿ ದೊರೆಯುವ ಹೆಚ್. ಜಿ. ರಾಧಾದೇವಿ ಇವರ ಸಾಮಾಜಿಕ ಕಾದಂಬರಿಗಳು

| | | |
|---|---|---|
| ಜೀವನ ಜೇನಾಯ್ತು | 54 | 00 |
| ನೀಲನಭ ಕೆಂಪಾಯ್ತು | 50 | 00 |
| ಪವಿತ್ರ ನಿರ್ಮಾಲ್ಯ | 50 | 00 |
| ಪ್ರೇಮ ಸಾಮ್ರಾಜ್ಯ | 50 | 00 |
| ಸಂಜೆ ಅರಳಿದ ಹೂವು | 45 | 00 |
| ಕೈ ಜಾರಿದ ಮುತ್ತು | 45 | 00 |
| ಬೆಳದಿಂಗಳ ಬೇಗೆ | 36 | 00 |
| ನಿನ್ನ ಗೆಜ್ಜೆ ನನ್ನ ಹೆಜ್ಜೆ | 34 | 00 |
| ಆಡಿದನೋ ರಂಗಾ | 34 | 00 |
| ಒಲಿದೇ ನಿನ್ನ ಪ್ರೀತಿಗೆ | 34 | 00 |
| ಬಾರೇ ಭಾಗ್ಯದ ಸಿರಿಯೇ | 32 | 00 |
| ಹೂ ಬಾಣದ ಜ್ವಾಲೆ | 32 | 00 |
| ಸಪ್ತವರ್ಣ ಮಿನುಗಿತು | 32 | 00 |
| ದುಂಬಿ ಮುಟ್ಟದ ಹೂ | 28 | 00 |
| ಮರಳಿ ತುಂಬಿದ ಮಡಿಲು | 26 | 00 |
| ಮನ ಹಿಗ್ಗಿ ಹೂವಾಯ್ತು | 26 | 00 |
| ಬಾನಲ್ಲಿ ಬಂಗಾರ | 24 | 00 |
| ಕತ್ತಲಲ್ಲಿ ಕಂಡ ಮಿಂಚು | 24 | 00 |
| ಅಮೃತ ಘಳಿಗೆ | 24 | 00 |
| ಆಕಾಶ ಚುಂಬನ | 24 | 00 |
| ಬೆಳ್ಳಿಯ ತೋರಣ | 23 | 00 |
| ಗೆಲುವಿನ ಹಾದಿ | 18 | 00 |

ಆಫೀಸಿನಿಂದ ಸತೀಶ ಮನೆಗೆ ಬಂದಾಗ. ಭಾಗಿರಥಮ್ಮ ಸೊಂಟಾ ನೀವಿಕೊಳ್ಳುತ್ತ ಹಾಗು ಹೀಗು ಬಂದು ಬಾಗಿಲು ತೆರೆದರು. ತಾಯಿ ಬಗ್ಗಿ ಓಡಾಡುವುದು ಕಂಡು ಸತೀಶನ ಕರುಳು ಚುರುಕ್ ಎಂದಿತು.

“ಏಕಮ್ಮ ತುಂಬಾ ನೋವಾ ?” ಎಂದ.

“ಹೌದಪ್ಪಾ.... ನೀನು ಕೊಟ್ಟ ಮಾತ್ರೆ ತೆಗೆದುಕೊಂಡೆ. ಆದರೆ ನೋವು ಗುಣವಾಗಲಿಲ್ಲ. ಸಂಜೆ ಒಂದು ಕಾಫಿ ಮಾಡ್ಲಿಕ್ಕೆ ಸಹ ಆಗಲಿಲ್ಲಪ್ಪಾ......ನೀನು ಇಲ್ಲೆ ಹತ್ತಿರ ಇರೋ ಕೃಷ್ಣ ವಿಲಾಸ್‌ಗೆ ಹೋಗಿ ಕಾಫಿ ಕುಡಿದು ಬಾ” ಎಂದರು.

ತಾಯಿಯ ಸ್ಥಿತಿ ನೋಡಿ ಅವನಿಗೆ ಅತೀವ ಮರುಕ ಆಯಿತು. ಹಸಿದು ಬಳಲಿದ ಮುಖ, ನೋವು ತಿಂದು ಸೋತ ಕಂಗಳು, ಆಗಾಗ ಆಕೆ ಸೊಂಟ ನೋವಿಂದ ಬಳಲುತ್ತಿದ್ದರು. ತೀರ ನೋವು ಹೆಚ್ಚಾದಾಗ ಅದೇ ಜಿಲ್ಲೆಯ ಹತ್ತಿರ ಇಪ್ಪತ್ತು ಮೈಲಿ ದೂರವಿದ್ದ ತಮ್ಮ ತಂಗಿಯ ಮನೆಗೆ ಹೋಗಿ ಬಿಡುತ್ತಿದ್ದರು. ತಂಗಿ ಕಾವೇರಮ್ಮ ಇದ್ದುದ್ದು ಒಂದು ಹೋಬಳಿ ಮಟ್ಟದ ಊರು. ಆದರೂ ಅಲ್ಲಿ ಒಳ್ಳೆ ವೈದ್ಯನಿದ್ದ. ಸ್ಥಳಿಯ ವ್ಯಾಮೋಹದ ಒಬ್ಬ ಶ್ರೀಮಂತರ ಮಗ ಎಂ.ಬಿ.ಬಿ.ಎಸ್. ಮುಗಿಸಿ ಬಂದು ಅಲ್ಲಿ ವೈಧ್ಯನಾಗಿದ್ದ. ಎಮ್. ಬಿ.ಟಿ.ಎಸ್., ಎಂ.ಡಿ. ಮಾಡಿದ್ದ ಹೆಣ್ಣನ್ನು ವಿವಾಹವಾದ ಮೇಲಂತು ಶ್ರೀಮಂತ ತನ್ನ ಮಗ ಸೊಸೆಗಾಗಿಒಂದು ಚಿಕಿತ್ಸಾಲಯವನ್ನೇ ಪ್ರಾರಂಭಿಸಿದ. ಸುತ್ತ ಮುತ್ತಲ ಹತ್ತಾರು ಹಳ್ಳಿ ಹೋಬಳಿ, ತಾಲೂಕುಗಳಿಂದ ರೋಗಿಗಳು ಬಂದು ಚಿಕಿತ್ಸೆ ಪಡೆಯುತ್ತ ಇದ್ದರು.

ಬಾಗಿರಥಮ್ಮ ವೈದ್ಯರಿಗಾಗಿ, ಅಲ್ಲಿಯವರೆಗೆ ಹೋಗಬೇಕಾದ ಅವಶ್ಯಕತೆ ಇರಲಿಲ್ಲ. ಜಿಲ್ಲೆಯಲ್ಲಿಯೆ ಇನ್ನು ಒಳ್ಳೆ ವೈದ್ಯರ ಚಿಕಿತ್ಸಾಲಯಗಳಿದ್ದವು. ಆದರೆ ತಾವು ಪೂರ್ತಿ ಮಲಗಿ ಬಿಟ್ಟಾಗ ಸತೀಶನಿಗೆ ತೊಂದರೆ ಆಗುತ್ತದೆ.

ತಾಯಿಗಾಗಿ ಅಡಿಗೆ, ಪಾತ್ರೆ ತೊಳೆಯುಟಾ... ಎಲ್ಲಾ ಅವನೇ ಮಾಡಬೇಕು. ತಾವು ತಂಗಿ ಮನೆ ಸೇರಿ ಒಂದು ಹದಿನೈದು ದಿನ ಚಿಕಿತ್ಸೆ ಪಡೆದು ಬರುವವರೆಗೆ, ಆವನ ಪಾಡಿಗೆ ಅವನು ಹೋಟೆಲ್ ಊಟ ಮಾಡಿಕೊಂಡು ಹೇಗೋ ಕಾಲ ತಳ್ಳುತ್ತಿದ್ದ. ಪೂರ್ತಿ ವಾಸಿಯಾದ ಮೇಲೆ ಬಂದ... ಭಾಗಿರಥಮ್ಮ ಹದಿನೈದು ದಿನದಿಂದ ಅಸ್ತವ್ಯಸ್ತವಾಗಿದ್ದ ಮನೆಯನ್ನು ಶುಚಿಗೊಳಿಸಲು ಎರಡು ದಿನಗಳ ಕಾಲ ದುಡಿಯುತ್ತಿದ್ದರು. ಇರುವ ಆ ಸ್ವಂತ ಮನೆ ತುಂಬ ದೊಡ್ಡದೇ ಇಬ್ಬರಿಗೆ. ಆದರೂ ಆಕೆ ಮನೆಯನ್ನು ಯಾವಾಗಲು ಥಳಥಳ ಇಟ್ಟಿರುತ್ತಿದ್ದರು.

"ಕಾಫಿ ಕುಡಿದು ಬಾಪ್ಪಾ. ಪಾಪಿ ನಾನು. ಬಳಲಿ ಬಂದ ಮಗನಿಗೆ ಒಂದು ಕಾಫಿ ಸಹ ಮಾಡಿ ಕೊಡ್ತಾಲ್ಲರಿ" ಮತ್ತೊಮ್ಮೆ ಹೇಳಿದರಾಕೆ.

ಅವನು ವ್ಯಥೆಯಿಂದ, "ನನ್ನ ಕಾಫಿ ಇರಲಮ್ಮ ನೀನು ಊಟ ಮಾಡಲಿಲ್ಲ ಅನಿಸತ್ತೆ. ಹೌದಾ ?" ಎಂದ. "ಒಲೆ ಪೊತ್ತಿಸಿ ಒಂದು ಅನ್ನ ಮಾಡಿಕೊಳ್ಳಲಿಕ್ಕು ಕೈಯಲ್ಲಿ ಆಗಲಿಲ್ಲಪ್ಪ. ಎರಡು ನಿಮಿಷ ಕೂತರೆ ಸೊಂಟಾ..... ಟೆಂಪರ್..... ಟಿಯರ್ ಪರ್ ಅನ್ನತ್ತೆ. ಹೇಗೋ ಎದ್ದು ಓಡಾಡಿ ಒಂದು ಅವಲಕ್ಕಿ ಮೊಸರು ಕಲಿಸಿಕೊಂಡೆ. ಪದ್ಮಮ್ಮ ಇದ್ದಿದ್ದರೆ ಹೇಗೋ ಮಡೀಲಿ ಒಂದು ಅನ್ನ ಕಾಣಿಸ್ತಾ ಇದ್ದರು. ಈಗ ಸುತ್ತಮುತ್ತಲೋರೆಲ್ಲಾ ಗ್ಯಾಸ್ ಸ್ಟೋವ್ ನೋರೆ. ನಾನು ಒಂದು ಹದಿನೈದು ದಿನ ಕಾವೇರಿ ಮನೆಗೆ ಹೋಗಿ ಬರ್ತೀನಪ್ಪಾ....." ಎಂದರಾಕೆ.

"ಅಮ್ಮ ಈ ಸಲ ಚಿಕ್ಕಮ್ಮನ ಮನೆಗೆ ಹೋದಾಗ ಆ ಹುಡುಗಿಗೆ ಇನ್ನ ಮದುವೆ ಗೊತ್ತಾಗದಿದ್ದರೇ.....ನನಗೆ ಗೊತ್ತು ಮಾಡು. ಒಂದು ದಿನದಲ್ಲಿ ಸಿಂಪಲ್ ಆಗಿ ಮದುವೆ ಶಾಸ್ತ್ರ ಆಗಿಬಿಡಲಿ" ಎಂದ.

ಭಾಗಿರಥಮ್ಮ ಸಂತಸದಿಂದ, "ನಿಜವಾಗಿ ಹೇಳ್ತಾ ಇದ್ದಿಯೇನೋ ಮಗು ?" ಎಂದರು.

"ಹೌದಮ್ಮ ಮೂರು ವರ್ಷದಿಂದ ನೀನು ಹೇಳ್ತಾ ಇದ್ದಿ. ಆದರೆ ನಾನು ಏನೋ ವ್ಯಾಮೋಹದಲ್ಲಿ ಇದ್ದೆ. ಆ ಲಾಡಿ ತನ್ನ ಆಫೀಸರನ್ನೇ ಎರಡನೆಯ ಮದುವೆ ಆಗಿದ್ದಾಳಂತೆ. ಆತ ಯಾರೋ ಮಲೆಯಾಳಿಯಂತೆ. ...ಗಳೂರಿಂದ ಮೋಹನ ಕಾಗದ ಬರೆದಿದ್ದ" ಎಂದ.

ಬಾಗಿರಥಮ್ಮ ನೊಂದು, "ಆ ಮನೆಹಾಳಿ ವಿಷಯ ಏಕಪ್ಪ ? ಆರು ವರ್ಷದ ಹಿಂದೆ ಅವಳು ಮನೆ ಹೊಸಿಲು ಧಾಟಿ ಹೋದಾಗಲೇ ಸತ್ತು ಸುಣ್ಣ ಆದಳೂಂತ ಅನ್ಕೊಂಡಿದ್ದೀನಿ. ನಿನ್ನ ಜೀವನ ಬೆಳಗೋಕೆ ಬಂದೋಳಲ್ಲ ಅವಳು ನರಕ ಮಾಡಲಿಕ್ಕೆ ಬಂದವಳು. ಯಾವ ಜನ್ಮದ ಪಾಪ ಇಷ್ಟೊ ಅನುಭವಿಸಿದಿ" ಎಂದರು.

"ಕಾಫಿ ಕುಡಿದು ಬರ್ತೀನಮ್ಮ ನೀನು ಯಾವಾಗ ಊರಿಗೆ ಹೋಗ್ತಿ ?" ಎಂದ.

"ಈಗ ಎಂಟು ಗಂಟೆ ಬಸ್ಸಿಗೆ ಹೊಡಿಸಪ್ಪಾ. ರಾತ್ರಿ ಒಂಬತ್ತೂವರೆ ಹೊತ್ತಿಗೆ ಅಲ್ಲಿರ್ತೀನಿ. ಒಂದು ನಾಲ್ಕು ಸೀರೆ, ಕುಪ್ಪಸ ಕೈ ಚೀಲದಲ್ಲಿ ಹಾಕಿಕೊಂಡಿರ್ತೀನಿ" ಎಂದರಾಕೆ.

ಅವನು ಅಲ್ಲೇ ಹತ್ತಿರಿದ್ದ ಹೋಟೆಲಿಗೆ ಹೋಗಿ ಕಾಫಿ, ಮಸಾಲೆ ದೋಸೆ ಮುಗಿಸಿ ಬಂದ. ಬರುವಾಗ ರಿಕ್ಷಾ ಒಂದನ್ನು ಗೊತ್ತು ಮಾಡಿಕೊಂಡೇ ಬಂದ.

ಭಾಗಿರಥಮ್ಮ ಸಿದ್ಧರಾಗಿದ್ದರು. ಮನೆಯ ಒಳಗಿನ ಕೋಣೆಗೆ ಬೀಗ ಹಾಕಿ ಹಿತ್ತಲ ಬಾಗಿಲು ಭದ್ರಪಡಿಸಿ, ತಾಯಿ ಬಂದ ಮೇಲೆ ಮುಂಬಾಗಿಲು ಬೀಗ ಹಾಕಿ ತಾಯಿಯ ಜೊತೆ ಹೊರಗೆ ಬಂದ.

ರಿಕ್ಷಾದಲ್ಲಿ ಕೂತು ತಾಯಿ ಮಗ ಬಸ್ ಸ್ಟ್ಯಾಂಡಿಗೆ ಬರುವ ವೇಳೆಗೆ ಬಸ್ ಸಿದ್ಧವಾಗಿತ್ತು. ಬಸ್‌ನಲ್ಲಿ ಕೂತು ಊರು ಸೇರಿದಾಗ ಎಂಟೂವರೆ. ಕಚ್ಚೆ ಹಾಕಿ ಅಕ್ಕನಂತೆ ಸೀರೆ ಉಟ್ಟಿದ್ದ ಕಾವೇರಿ, "ಏಯ್ ! ಮುಟ್ಟ ಬೇಡ ದೂರ ಹೋಗು......" ಎಂದು ಮೊಮ್ಮಗನನ್ನು ಬೆದರಿಸುತ್ತ ಇದ್ದಳು. ರಿಕ್ಷಾದಿಂದ ಇಳಿದು ಒಳ ಬಂದ ಸತೀಶ.

"ನಿಮ್ಮ ಅಕ್ಕ ತಂಗೀರ ಮಡಿ ಹಾವಳೀಲಿ ನಮಗೆಲ್ಲ ಪಡಿ ಪಾಟಲು. ರಮೇಶ ಎಲ್ಲಿ ? ಚಿಕ್ಕಪ್ಪ ಎಲ್ಲಿ ?" ಎಂದ. ಆಗ ಗಮನಿಸಿದ ಕಾವೇರಮ್ಮ,

"ಓಹೊ ! ಈಗ ಬಂದಾಳಾ ಅಕ್ಕ......ಸುಶೀಲಾ ಅಕ್ಕನ್ನ ಒಳಗೆ ಕರಕೊಂಡ್ಹೋಗಿ ಕಾಲಿಗೆ ನೀರು ಕೊಡು" ಎಂದು ಕೂಗಿ ತನ್ನ ಮೂರು ವರ್ಷದ ಪುಟ್ಟ ಮೊಮ್ಮಗನ್ನೆತ್ತಿಕೊಂಡ ಸತೀಶನಿಗೆ "ಕೂತ್ಕೋ ಸತೀಶಾ. ಇವರು ಇಲ್ಲೇ ಬಂಗಾರವಳ್ಳೀಲಿ ಸತ್ಯನಾರಾಯಣಾ ಪೂಜೆ ಮಾಡಿಸಲಿಕ್ಕೆ

ಹೋಗಿದ್ದಾರೆ. ಅಲ್ಲಿನ ಸಾಹುಕಾರ.....ರಾಮರಾಯರ ಮಗನಿಗೆ ಮದುವೆ ಆಗಿದೆ. ನೂತನ ವಧುವರರದು ಸತ್ಯನಾರಾಯಣ ಪೂಜೆ. ಒಂದು ನೂರು ಜನದ ಊಟ ಇದೆ" ಎಂದರು.

"ರಮೇಶಾ ಎಲ್ಲಿ ? ಅತ್ತಿಗೆ ಎಲ್ಲಿ ?" ಎಂದ.

"ಚುನಾವಣೆ ಬಂದರೆ ಅವನು ಕೈಗೆ ಸಿಗಲ್ಲಪ್ಪಾ. ಯಾರ್ಯಾರೋ ಬಂದು ಕರಕೊಂಡ್ಹೋಗ್ತಿರ್ತಾರೆ.ನಿನ್ನೆ ಮೂರು ದಿನದ ಮೇಲೆ ಮುಖ ತೋರಿಸಿದ್ದ. ಬಿಸಿ. ಬೇಳೆಭಾತ್ ಮಾಡಿದ್ದೀನಿ ಊಟ ಮಾಡಪ್ಪ. ಅಂದೆ ಸ್ನಾನಾ ಮಾಡಿ ಊಟ ಮಾಡ್ತೀನಿ ಅಂದ. ಅಷ್ಟರಲ್ಲಿ ಯಾರೋ ಕೂಗಿದರು. ಏನೋ ಅರ್ಜೆಂಟ್ ಮಾತುಕತೆ ಆಯ್ತು. ಬೆಂಗಳೂರಿಗೆ ಹೋಗಿ ಬರ್ತೀನಮ್ಮ. ಬರೋದು ಮೂರು ದಿನ ಆಗತ್ತೆ ಅಂತ್ಹೇಳಿ ಹೊರಟು ಬಿಟ್ಟ. ಒಂದಿಷ್ಟು ಗಸಗಸೆಯ ಪಾಯಿಸಾ ಉಂಡು ಹೋಗಪ್ಪ ಅಂದೆ. ತಿನ್ನಲಿಲ್ಲಾ..... ಉಣ್ಣಲಿಲ್ಲ" ಎಂದರು.

"ಚಿಕ್ಕಪ್ಪ ಬಿಸ್ಕಟ್ ಕೊಡಿಸು" ಎಂದು ಮುದ್ದು ಮುದ್ದಾಗಿ ಕಾಡಿಸುತ್ತಿತ್ತು ಆ ಮಗು.

"ಆರಲಿಟ್ಟು ಕಲಿಸಿ ಕೊಡ್ತೀನಿ ಅಂದರೆ ಬೇಡಂತೆ ಈ ಮುಂಡೆ ಗಂಡಂಗೆ· ಇವರಮ್ಮ ಈಚೆ ಆಗಿದ್ದಾಳೆ. ನನ್ನ ಹತ್ತಿರ ಬಂದು ಬಿಸ್ಕತ್, ಚಾಕಲೇಟ್ ಅಂತ ಕಾಡಿಸ್ತಾನೆ" ಎಂದರು. "ಅವನಿಗೆ ಬಿಸ್ಕತ್ ಕೊಡಿಸ್ತೀನಿ. ನಾನು ತೀರ ತರಾತುರೀಲಿ ಬಂದೆ. ಅಮ್ಮನ್ನ ಇಲ್ಲಿ ಬಿಟ್ಟು ಹೋಗ್ತೀನಿ. ತುಂಬಾ ಸೊಂಟಾ ನೋವು ಅಂತಿದ್ದಳು. ನೀನಾದರೆ ಕೂತ ಕಡೆ ಮಾಡ್ತಿ" ಎಂದ.

"ಹೌದಪ್ಪಾ ಅವಳು ನಂಗೆ ಹಿಂದೆ ಆರು, ಆರು ಬಾಣಂತನ ಮಾಡಿಲ್ವಾ ? ಅವಳಿಗೆ ನಾನು, ನನಗೆ ಅವಳು, ಇರು, ಕಾಫಿ ಕುಡಿದು ಹೋಗುವಂತೆ" ಎಂದು "ಸುಶೀಲ ಕಾಫಿ ಬೆರೆಸಿ ತಗೊಂಬಾ ....." ಎಂದರು.

ಆ ಹುಡುಗಿ ಕಾಫಿ ತಂದಳು.ಸತೀಶ ಕಾಫಿ ಕುಡಿದು ಆ ಮಗುವಿನೊಂದಿಗೆ ಹೊರಟ. ಆಕೆಯ ಮಗ ರಮೇಶನ ಮಗು ಅದು. ರಮೇಶ ಒಬ್ಬ ಮರಿ ಪುಂಡಾರಿ. ಅವನ ತಂದ ಆ ಊರ ಪುರೋಹಿತರು. ಅರ್ಚಕ ವೃತ್ತಿಯಲ್ಲದೆ ಜಮೀನು. ನಾಲ್ಕು ಎಕರೆ.... ಒಂದು ದೇವಸ್ಥಾನದ ವಾರು

ಪತ್ಯ ಇತ್ತು. ಮೊದಲ ಮಗಳು ಅಳಿಯ ಅವಳ ನಾಲ್ಕು ಮಕ್ಕಳನ್ನು ಇಲ್ಲೇ ಇರಿಸಿಕೊಂಡಿದ್ದರು. ಅಳಿಯ ದೇವಸ್ಥಾನ ನೋಡಿಕೊಳ್ಳುತ್ತಿದ್ದ.

ಈ ಊರಲ್ಲದೇ ಸುತ್ತಮುತ್ತಣ ಹಳ್ಳಿಗಳಲ್ಲಿ ಎಲ್ಲಿ ಮದುವೆ, ಮುಂಜಿ, ಪೂಜೆ, ಗೃಹಪ್ರವೇಶೋತ್ಸವ ನಡೆದರೂ ಕಾವೇರಮ್ಮನ ಪತಿ ರಂಗನಾಥ ಜೋಯಿಸರೇ ಹೋಗಿ ಬರುತ್ತಿದ್ದರು. ದೊಡ್ಡ ಮನೆಯ ವಿಶಾಲ ಅಂಗಳ ಜಗುಲಿ ಒಳ ಹಜಾರ. ನಾಲ್ಕು ಕೋಣೆಗಳನ್ನು ತಾವು ಇಟ್ಟುಕೊಂಡು ಹಿಂಭಾಗದ ವಿಶಾಲ ಹಜಾರ, ನಾಲ್ಕು ಕೊಠಡಿ, ಮಗಳು ಅಳಿಯನಿಗೆ ಬಿಟ್ಟು ಕೊಟ್ಟಿದ್ದರು. ಆ ಕಡೆ ಹಿಂಬಾಗಿಲಿಗೆ ಒಂದು ಪ್ರತ್ಯೇಕ ಬೀದಿಯೇ ಇತ್ತು. ಆ ಕಡೆ ಬಾಗಿಲಿಂದ ಓಡಾಡುತ್ತ ಆ ಮನೆಯಲ್ಲಿ ಅಡಿಗೆ ಮಾಡಿಕೊಳ್ಳುತ್ತ ಅವರು ಪ್ರತ್ಯೇಕವಾಗಿದ್ದರು. ಎರಡು ಮನೆಗಳ ಮಧ್ಯೆ ಪ್ರತ್ಯೇಕವಾದ ದೊಡ್ಡ ಹಿತ್ತಲು. ಹಿತ್ತಲಿನಲ್ಲಿ ಸೌತೆ, ಕುಂಬಳ, ಹೀರೆಕಾಯಿ ಮುಂತಾದ ಬಳ್ಳಿಗಳು. ನಾಲ್ಕು ಫಲಭರಿತ ತೆಂಗಿನ ಮರಗಳ ಪಾರಿಜಾತ,ಮಲ್ಲಿಗೆ,ದವದ ಮರುಘ ಬೆಳೆದಿದ್ದವು. ಒಂದೆಡೆ ತುಳಸಿ ತೋಟ, ಇನ್ನೊಂದೆಡೆ ಸಂಪಿಗೆ, ಪಾರಿಜಾತ ಮರಗಳು......ದೊಡ್ಡ ಬಾವಿಗೆ ಪಂಪ್ ಹಾಕಿಸಿದ್ದರು. ಇನ್ನೊಂದೆಡೆ ಕೊಟ್ಟಿಗೆ ದನಕರಗಳು.

ಒಂದೆಡೆ ಎರಡು ಶೌಚಗೃಹ..... ಎರಡು ಸ್ನಾನ ಗೃಹಗಳು. ದೊಡ್ಡ ಮಗಳು ಮಂಗಳಮ್ಮನ ನಾಲ್ಕು ಗಂಡು ಮಕ್ಕಳು, ಆರು ಏಳನೇ ಕ್ಲಾಸ್ ಓದಿ ಬಿಟ್ಟಿದ್ದರು. ಇಪ್ಪತ್ನಾಲ್ಕರ ದೊಡ್ಡ ಹುಡುಗ ತಂದೆಯ ಜೊತೆ ದೇವಸ್ಥಾನದ ನಿರ್ವಹಣೆ ನೋಡಿಕೊಳ್ಳುತ್ತಿದ್ದ. ಇನ್ನಿಬ್ಬರು ಹಿತ್ತಲಿನ ಅರ್ಧ ಎಕ್ಕರೆ ಜಾಗದಲ್ಲಿ ಬಗೆಬಗೆಯ ಹೂವು, ತರಕಾರಿ ಬೆಳೆಸುವುದರಲ್ಲಿ ಆಸಕ್ತರು. ಕಡೆಯ ಮಗ ಹಾಲು ಕರಿಯುವುದರಿಂದ ಹಿಡಿದು ಎಲ್ಲಾ ಕೆಲಸ ನಿರ್ವಹಿಸುತ್ತ ದನ ಕರುಗಳ ನಿರ್ವಹಣೆ ಮಾಡುತ್ತಿದ್ದ. ಗದ್ದೆ ಕಡೆ ಹೋಗಿ ಬರುತ್ತಿದ್ದ.

ಅವನ ಜೊತೆ ಮನೆ ಆಳು ಸಿಂಗ......ಈ ಎಲ್ಲಾ ಕೆಲಸಕ್ಕೆ ಸಹಾಯ ಮಾಡುತ್ತಿದ್ದ. ಉಳಿದ ಮೂರು ವಿವಾಹಿತ ಹೆಣ್ಣು ಮಕ್ಕಳು. ಅಲ್ಲೇ ಸುತ್ತಮುತ್ತಲ ಊರಲ್ಲಿದ್ದವರು ಆಗಾಗ ಬಂದು ಹೋಗಿ ಮಾಡುತ್ತಿದ್ದರು.

ಎಲ್ಲರಿಗಿಂತ ದೊಡ್ಡ ಮಳು ಮಂಗಳೆ. ಅವಳ ನಂತರ ಇಬ್ಬರು ಹೆಣ್ಣು

ಮಕ್ಕಳು. ಆಮೇಲೆ ರಮೇಶ ನಂತರ ಕಡೆಯ ಮಗಳು ತುಂಗ. ಎಲ್ಲರದು ವಿವಾಹವಾಗಿತ್ತು.

ಐವತ್ತೈದು ವರುಷದ ಕಾವೇರಮ್ಮ ಗಟ್ಟಿಪಡಿತವಾಗಿದ್ದರು. ಅವರಿಗಿಂತ ಎರಡೇ ವರ್ಷ ದೊಡ್ಡವರಾದ ಭಾಗಿರಥಮ್ಮ ಆಗಾಗ ಸೊಂಟನೋವಿಂದ ಬಳಲಿದಾಗ ತಂಗಿಯ ಮನೆಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದರು. ಅಕ್ಕ ತಂಗಿಯರಲ್ಲಿ ಒಳ್ಳೆ ಒಗ್ಗಟ್ಟು ಇತ್ತು. ಸತೀಶ ಹೋಗಿ ಮಗುವಿಗೆ ಬಿಸ್ಕತ್ ಕೊಡಿಸಿ ಬಂದ. ಅಂಗಡಿ ಕಡೆ ಹಾದು ಬರುವಾಗ ಆ ಮನೆಯ ಮುಂಬಾಗಿಲು ಹಾದು ಬರಬೇಕಿತ್ತು. ಮಂಗಳಮ್ಮ ಕೂಗಿ,

"ಬಾರೋ ಮಹಾರಾಯ ! ಯಾವಾಗ ಬಂದೆ ? ದೊಡ್ಡಮ್ಮ ಬಂದಿದ್ದಾರಾ ?" ಎಂದಳು. "ಹೌದು ! ಅಮ್ಮ ಬಂದಿದ್ದಾರೆ. ಯಥಾಪ್ರಕಾರ ಸೊಂಟನೋವಿನ ಕಂಪ್ಲೇಂಟ್" ಎಂದ.

"ಅದೊಂದು ನೆಪಾ ಇಲ್ದಿದ್ರೆ. ದೊಡ್ಡಮ್ಮ ಈ ಕಡೆ ಬರೋದೆ ಇಲ್ಲ. ಕಾಲು ತೊಳಿದುಕೊ ತಿಂಡಿ ಕೊಡ್ತೀನಿ" ಎಂದು ಬಲವಂತ ಮಾಡಿ,ಪೊಂಗಲು ಸಜ್ಜಪ್ಪ, ಆಂಬಡೆ, ಪುಳಿಯೋಗರೆ ತಂದುಕೊಟ್ಟಳು.

"ನಾಲ್ಕು ಮನೆಯವರದು ನೈವೇದ್ಯ, ಪಂಚಾಮೃತ ಇತ್ತು ಗುಡೀಲಿ. ಗೋಪಾಲಕೃಷ್ಣನಿಗೆ, ಗಣಪತಿಗೆ" ಎಂದಳು ಎರಡು, ಮೂರು ದಿನದಿಂದ ಊಟ–ತಿಂಡಿ ಸರಿ ಇರಲಿಲ್ಲ. ಹೋಟೇಲೂಟಾ ....ಇಲ್ಲಾ .... ಉಪ್ಪಿನಕಾಯಿ ಚಟ್ನಿಪುಡಿ, ಮೊಸರನ್ನದ ಊಟ......ಈ ದಿನ ಹೊಟ್ಟೆ ತುಂಬ ತಿಂಡಿ ತಿಂದ. ಅಕ್ಕ ತಮ್ಮ ಏನೇನೋ ಹರಟೆ ಹೊಡೆದರು.

"ಅಮ್ಮನ ಹತ್ತಿರ ಹೋಗೋಣಾ....." ಮಗು ಚಿದಂಬರ ಗಲಾಟೆ ಮಾಡಿದ. ಇಲ್ಲೇ ಹಿತ್ಲಿಂದಾ ಹೋಗು. ಕೊಟ್ಟಿಗೆ ಪಕ್ಕದ ರೂಮಲ್ಲಿದ್ದಾಳೆ ನಮ್ಮಮ್ಮನ ಮಡಿ ಹುಡಿ ಗೊತ್ತಲ್ಲ" ಎಂದು ನಕ್ಕಳು.

"ನಮ್ಮಮ್ಮ ಏನು ಕಡಿಮೆ ?" ಎಂದು ನಕ್ಕ ಸತೀಶ.

"ನಿಮ್ಮಪ್ಪಾ ಏನು ಊರಿಗೆ ಬಂದು ಆರು ತಿಂಗಳಾಯ್ತು ?" ಎಂದಳು. ಮಂತ್ರಾಲಯ, ತಿರುಪತಿ, ಶೃಂಗೇರಿಯಿಂದ ಹಿಡಿದು ಎಲ್ಲಿ ಯಾವ ಊರಲ್ಲಿ ಹವನ, ಹೋಮ, ಪೂಜೆ ಪುನಸ್ಕಾರ ಆದರೂ ಅಪ್ಪ ಇರ್ಲೇಬೇಕಲ್ಲ. ಈಗೇನೋ ಕೋಲಾರ ಶ್ರೀವೆಂಕಟರಮಣ ಸ್ವಾಮಿ ಗುಡೀಲಿ ಕೋಟಿ ಶ್ರೀ

ಮನ್ನಾರಾಯಣ ಯಜ್ಞ ನಡೀತಾ ಇದೆ. ಆದಾದ ಮೇಲೆ ಬೆಂಗಳೂರಿನ ಒಂದು ದೇವಸ್ಥಾನದಲ್ಲಿ ಹನ್ನೆರಡು ದಿನ ಸುದರ್ಶನ ಹೋಮ ನಡಿಸ್ತಾರೆ. ಅಪ್ಪ ಈ ತಿಂಗಳ ಕೊನೇಲಿ ಬರಬಹುದು" ಎಂದು ಮಾತು ಮುಗಿಸಿ, ಮಗುವಿನೊಡನೆ ಮನೆ ಹಿಂಭಾಗದ ಹಿತ್ತಲಿಗೆ ಬಂದು ಅಲ್ಲಿದ್ದ ಕೋಣೆಗೆ ಬಂದ.

"ಏನು ಮೂರು ದಿನ ಅಜ್ಞಾತ ವಾಸಾನಾ ?" ಎಂದ.

"ಬಾಪ್ಪಾ....ಕೂತ್ಕೊ...." ಸೊಸೆ ಚಂದ್ರಿಕಾ ಕಟ್ಟಿಗೆ ಮಂಚ ಹಾಗು ಹಾಸಿಗೆ ಮೇಲಿದ್ದಳು. ಎದುರಿಗೆ ಕುರ್ಚಿಯ ಮೇಲೆ ಕುಳಿತ. ಮಂಚದ ಪಕ್ಕದ ಮೇಲಿದ್ದ ಸ್ಟೂಲಿನಲ್ಲಿ ಸುಧಾ, ತರಂಗ, ಮಯೂರ, ತುಷಾರ ಮುಂತಾದ ಪತ್ರಿಕೆಗಳಿದ್ದವು.

"ರೂಮ್ ಸಾಕಷ್ಟು ಸುಧಾರಣೆ ಆಗಿದೆ" ಎಂದು ನಕ್ಕ.

"ಹೂಂ ತಿಂಗಳಿಗೆ ಮೂರು ದಿನ ಇಲ್ಲೇ ಇರಬೇಕಲ್ಲ. ಅದಕ್ಕೆ ರಾಜ ಭೋಗದ ಏರ್ಪಾಟು ಮಾಡಿಸಿದ್ದಾರೆ. ಸಾವಿರಪಾರು ನೂರುರೂ ಕೊಟ್ಟು. ಮಂಚ ತಂದಿದ್ದಾರೆ. ಸಾವಿರದಿನ್ನೂರು ರೂ. ಕೊಟ್ಟು ಕರ್ಲಾನ್ ಹಾಸಿಗೆ ತಂದಿದ್ದಾರೆ.

ಮೊದಲು ಗಾರೆ ನೆಲ ಇತ್ತು. ಸುಣ್ಣದ ಗೋಡೆ ಇತ್ತು. ನಿಮ್ಮ ಚಿಕ್ಕಮ್ಮನ ಕಾಲದಲ್ಲಿ ಈಗ ಮೊಸಾಯಿಕ್ ನೆಲ, ಡಿಸ್‌ಟೆಂಪರ್ ಬಳಿದ ಗೋಡೆಗಳು, ಅಟ್ಯಾಚ್ಡ್ ಬಾತ್‌ರೂಂ, ಲೆಟ್ರಿನ್, ನಲ್ಲಿ ತಿರುಗಿಸಿದರೆ ನೀರು ಎಲ್ಲ ಇವೆ. ಹೊರಗಿನೋರನ್ನ ನೀರು ನೀಡಿ ಅಂತ ಕೇಳೋ ಹಾಗಿಲ್ಲ. ನನಗೆ ಮೂರು ದಿನ ಸ್ನಾನ ಇಲ್ಲೇ ರೂಢಿ ಇಲ್ಲ. ಈಗ ಅದಕ್ಕೆಲ್ಲಾ ವ್ಯವಸ್ಥೆ ಮಾಡಿದ್ದಾರೆ" ಎಂದಳು.

"ಅವನ ಮುದ್ದಿನ ಮಡದಿ ನೀನು. ವ್ಯವಸ್ಥೆ ಮಾಡದೇ ಇರ್ತಾನಾ?" ಎಂದ.

"ಏನು ಮುದ್ದಿನ ಮಡದಿ ಅಪ್ಪಾ ? ತಿಂಗಳಿಗೆ ಒಮ್ಮೆ ದರ್ಶನ ಕೊಡ್ತಾರೆ. ಪೆಟ್ಟಿಗೆ, ಸೀರೆ ಒಡವೆಗಳಿವೆ. ಅದನ್ನ ನೋಡಿ ಸಂತೋಷ ಪಡೋಣ್ವಾ ? ಮಹರಾಯರು ತಿಂಗಳಿಗೆ ಒಮ್ಮೆ ಮನೆಗೆ ಬಂದು ನಾಲ್ಕು ದಿನ ಮನೇಲಿರ್ತಾರೆ" ಎಂದಳು.

"ಇದೊಂದು ಒಡವೆ ಇದೆಯಲ್ಲ, ಹಗಲು ರಾತ್ರಿ ಕಾಡಿಸಲಿಕ್ಕೆ" ಎಂದು ಮಗುವನ್ನು ತೋರಿಸಿ ನಕ್ಕ.

"ಚಿನ್ನ.....ಬಾಳ ತುಂಟನಪ್ಪ, ಅವನಿಂದ ನಮಗೆ ಹೊತ್ತು ಹೋಗತ್ತೆ" ಎಂದಳು. ಅತ್ತಿಗೆಯೊಡನೆ ಮಾತಾಡುತ್ತ ಕುಳಿತ. ದೊಡ್ಡಮ್ಮ ಕೂಗ್ತಾರೆ ಎಲೆ ಹಾಕಿದ್ದಾರೆ ಎಂದು ಆ ಹುಡುಗಿ ಬಂದು ಕೂಗಿದಳು.

ಮಡಿಯುಲ್ಲಿದ್ದಾಗ ಕಾವೇರಮ್ಮ ಮುಟ್ಟಾದ ಆ ಸೊಸೆಯು ರೂಮಿನ ಕಡೆ ಸುಳಿಯುತ್ತಿರಲಿಲ್ಲ. ಆ ಕಡೆ ಬಾಳೆ ಎಲೆಗಳು ಸಾಲಾಗಿ ಹಾಕಿದ್ದರು. ತಾಯಿ ಊಟಕ್ಕೆ ಕೂತಿದ್ದರು, "ನಿಂಗೆ ಬೆಳ್ಳಿ ತಟ್ಟೆ ತೆಗೀಲೇನೊ ?"

"ಬೇಡ ಎಲೆ ಊಟ ನಡಿಯುತ್ತೆ" ಎಂದ.

ಅವರ ಮನೆಯಲ್ಲಿ ಸ್ಟೀಲ್ ತಟ್ಟೆ, ಸ್ಟೀಲ್ ಸಾಮಾನು ನಿಷಿದ್ಧ. ಬಾಳೆ ಎಲೆ ಅಥವ ಬೆಳ್ಳಿ ತಟ್ಟೆ, ದೊಡ್ಡ ದೊಡ್ಡ ಗೋದಮರಿ ಕಂಚಿನ ಪಾತ್ರೆಗಳಲ್ಲಿ ಎರಡು ಹೊತ್ತು ಬಿಸಿ ಅಡುಗೆ ಮಾಡುತ್ತಿದ್ದರು. ಉಳಿದ ಸಾರು, ಹುಳಿ ಕಲ್ಗಡಿಗೆಯಲ್ಲಿ ಹಾಕಿಡುತ್ತಿದ್ದರು. ಹಲಸಂದಿ, ಸೇಂಗ, ಕಡ್ಲೆಕಾಳು, ಅವರೆಕಾಳು ಜೊತೆಗೆ ಹುರುಳಿಕಾಯಿ, ಆಲುಗಡ್ಡೆ ಹಾಕಿ ಮಸಾಲೆ ರುಬ್ಬಿ ಹಾಕಿದ ಹುಳಿ, ಹಪ್ಪಳ, ಸಂಡಿಗೆ, ಸೌತೆಕಾಯಿ ಪಲ್ಯ, ಬಾಳಕ. ತೊಕ್ಕು ಉಪ್ಪಿನಕಾಯಿ ಕೆನೆಕೆನೆ ಮೊಸರು. "ಏಕೋ... ಸರಿಯಾಗಿ ಊಟ ಮಾಡ್ತಿಲ್ಲ. ವಯಸ್ಸಿನ ಹುಡುಗ ಹೀಗೇನೇನು ಊಟ ಮಾಡೋದು ?" ಎಂದು ಗದರಿಸಿದಳು.

"ನಿಮ್ಮನೆಗೆ ಬಂದರೆ ಎರಡು ಹೊಟ್ಟೆ ಇಟ್ಕೊಕೊಂಡು ಬರಬೇಕು ನೋಡಮ್ಮ. ಅಲ್ಲಿ ಮಂಗಳಕ್ಕ ಸಿಕ್ಕಾಪಟ್ಟೆ ಏನೇನೋ ತಿಂಡಿ ತಿನಿಸಿದಳು ಇಲ್ಲಿ ನೋಡಿದರೆ ನೀನು ಹಬ್ಬದಡಿಗೆ ಮಾಡಿಸಿದ್ದಿ" ಎಂದ.

"ಇದ್ಯಾವ ಹಬ್ಬದಡಿಗೆ ಮಹರಾಯ ? ಒಬ್ಬಟ್ಟಿಲ್ಲ, ಕಲಸನ್ನ ಇಲ್ಲ, ಬೋಂಡಾ, ಆಂಬೊಡೆ ಇಲ್ಲ" ಎಂದು ನಗೆ ಚೆಲ್ಲಿದಳು.

ಊಟ ಆದಮೇಲೆ ಕಾವೇರಮ್ಮ ಬಂದು, "ಹಾಯಾಗಿ ರಮೇಶನ ರೂಮಿನಲ್ಲಿ ಮಲಗಿಕೊ. ನಿಮ್ಮ ಚಿಕ್ಕಪ್ಪ ಬಂದರೆ ಎಬ್ಬಿಸ್ತೀನಿ. ಅವರ ಮನೇಲಿ ನಾಳೆ ಅವರಪ್ಪಂದು ಅರವತ್ತು ವರ್ಷದ ಹಬ್ಬ ಇದೆ. ಹೀಗಾಗಿ

ನಿಮ್ಮ ಚಿಕ್ಕಪ್ಪ ಅಲ್ಲೇ ಉಳಿದು, ನಾಳೆ ಸಂಜೆ ಬಂದರೆ ಬರಬಹುದು" ಎಂದರು.

ರಮೇಶನ ರೂಮಿಗೆ ಹೋದ. ಜೋಡಿ ಮಂಚ ದಪ್ಪನಾದ ಮೃದು ಹಾಸಿಗೆ. ಗೋಡೆಯ ಮೇಲಿದ್ದ ಆ ರಾಧಾಕೃಷ್ಣರ ವಿವಿಧ ಪ್ರೇಮ ಭಂಗಿಯ ಚಿತ್ರಗಳು ರಮೇಶನ ರಸಿಕತೆ ಸಾರಿದವು.

ಬಿ.ಎಸ್ಸಿ. ಓದಿದ ರಮೇಶ ಬಿ.ಎ. ಪದವೀಧರೆ ಚಂದ್ರಿಕಳನ್ನು ವಿವಾಹವಾಗಿದ್ದ. ಅನುರೂಪ ದಾಂಪತ್ಯ ಅವರದು. ಮುದ್ದಾದ ಮಗ ಬಾಲಚಂದ್ರ ಎಲ್ಲರ ಪಾಲಿನ ಚಿನ್ನುಮರಿ ಆಗಿದ್ದ. ಆ ಹಾಸಿಗೆಯ ಮೇಲೆ ಮಲಗಿದಂತೆ ತನ್ನ ದಾಂಪತ್ಯ ಜೀವನ ನೆನಪಿಗೆ ಬಂದು ಮನಸು ಕಹಿ ಆಯಿತು. ತಾನು ಪ್ರೇಮಿಸಿಯೇ ವಿವಾಹವಾಗಿದ್ದ. ಎಂಟು ವರ್ಷದ ಹಿಂದೆ. ಅವಳ ರೂಪ ನೋಡಿ ಮೋಸ ಹೋಗಿದ್ದ. ಒಂದು ತಿಂಗಳು ಸಂಸಾರ ಮಾಡಿ ತನ್ನ ಬಿಟ್ಟು ಓಡಿ ಹೋದಳು. ಆ ಒಂದು ತಿಂಗಳ ಕಹಿ ದಾಂಪತ್ಯದ ನೆನಪು. ಜೀವಮಾನವಿಡುವ ತಾನು ಮರೆಯಲಾಗದ ಸರಕು. ಹೆಣ್ಣು ಎಂದರೆ ಜುಗುಪ್ಸೆ ಆಗುತ್ತಿತ್ತು. ಮೂರು ವರ್ಷದ ನಂತರ ಅವಳು ತನ್ನಿಂದ ವಿವಾಹ ವಿಚ್ಛೇದನ ಪಡೆದಿದ್ದಳು. ಈಗ ಅದಾಗಿ ಮೂರು ವರ್ಷದ ಮೇಲೆ ಮರು ಮದುವೆ ಆಗಿದ್ದಾಳೆ. ಕಾಪಿ ಕೊಂದು ಬಿಡಬೇಕು ಅವಳನ್ನ ಎನಿಸುತ್ತದೆ. ಆದರೆ ಆಗ ತಾನು ಅವಳ ಗುಣ ತಿಳಿಯದಿದ್ದಾಗ ...."ಸುಧಾ .... ನೀನಿಲ್ಲದೆ ಬದುಕಲಾರೆ" ಎಂದಿದ್ದ.

* * * *

"ಸುಮಾ ನೀನಿಲ್ಲದೇ ಬದುಕಲಾರೆ" ಮೊಟ್ಟ ಮೊದಲ ಭಾರಿ ಪ್ರೇಮ ನಿವೇದನೆ ಮಾಡಿಕೊಳ್ಳುವ ಹೊತ್ತಿಗೆ ಅವರಿಬ್ಬರ ಪರಿಚಯ ಬೆಳೆದು ಮೂರು ತಿಂಗಳಾಗಿತ್ತು.

ಅವನು ಕೆಲಸ ಮಾಡುತ್ತಿದ್ದ ಆ ಜಿಲ್ಲೆಯ ಆಫೀಸಿನ ಮುಖ್ಯ ಕಛೇರಿ ಬೆಂಗಳೂರಿನಲ್ಲಿತ್ತು. ಶಾಖಾ ಕಛೇರಿಗಳು ಈ ಜಿಲ್ಲೆ ಹಾಗೂ ಮೈಸೂರಿನಲ್ಲಿದ್ದವು. ಅವಳು ಆಗ ಮೈಸೂರಿನಿಂದ ವರ್ಗವಾಗಿ ಬಂದಿದ್ದಳು.

ಊರಿಗೊಬ್ಬ ಪದ್ಮಾವತಿ ಎಂಬಂತೇ ಇಡೀ ಆಫೀಸಿನ ಹನ್ನೆರಡು ಜನ ಕೆಲಸಗಾರರಲ್ಲಿ ಅವಳೊಬ್ಬಳೇ ಹೆಣ್ಣು. ಅಪರಿಮಿತ ಚೆಲುವೆ, ಆ ಚೆಲುವು ಎದ್ದು ಕಾಣುವಂತೆ ದಿನಕ್ಕೊಂದು ಬಗೆ ಅಲಂಕಾರ ಮಾಡಿಕೊಂಡು ಬರುತ್ತಿದ್ದಳು. ಮೇಲಾಧಿಕಾರಿಯಿಂದ ಹಿಡಿದು ಇಡೀ ಆಫೀಸಿನ ಎಲ್ಲರೂ ಅವಳಿಗಾಗಿ ಬಾಯಿ ಬಾಯಿ ಬಿಡುತ್ತ ಇದ್ದರು. ಮೇಲಾಧಿಕಾರಿ ಐವತ್ತರವೃದ್ಧ, ಇನ್ನುಳಿದ ಎಫ್.ಡಿ.ಸಿ., ಎಸ್.ಡಿ.ಸಿ.ಗಳು ಅವಳಿಗೆ ತಾಳಿಕೆ ಇಲ್ಲ. ಸೂಪರಿಂಟೆಂಟ್ ವಿವಾಹಿತ. ಅಸಿಸ್ಟೆಂಟ್ ಸೂಪರಿಡೆಂಟ್ ಆಗಿ ಯುವಕ ಅವಿವಾಹಿತನಾಗಿ, ನೋಡಲು ಲಕ್ಷಣವಾಗಿದ್ದ ಸತೀಶನ ಮೇಲೆ ಅವಳ ಕೃಪೆ ಬಿತ್ತು. ಆಫೀಸಿನ ನೀರಸ ವಾತವರಣ ರಂಗು ರಂಗಾಗಿದೆ ಎನಿಸಿತ್ತು ಸತೀಶನಿಗೆ. ಅವಳ ಜೊತೆ ಬೆಳೆದ ಸ್ನೇಹ ನಿಧಾನವಾಗಿ ಪ್ರೇಮಕ್ಕೆ ತಿರುಗಿತು. ಕಡೆಗೊಂದು ದಿನ ಸತೀಶನೇ ಬಾಯಿ ಬಿಟ್ಟ. ಆ ಜಿಲ್ಲೆಗೆ ಪಾಶ್ ಹೋಟೆಲ್ ಎನಿಸಿದ್ದ...... ಹ್ಯಾಪಿಲ್ಯಾಂಡ್‌ನಲ್ಲಿ ರುಚಿಯಾದ ಮಸಾಲು ದೋಸೆ, ಜಿಲೇಬಿ ಸವಿಯುವಾಗ ಆ ಫ್ಯಾಮಿಲಿ ರೂಮಿನಲ್ಲಿ ಅವನು, ಅವಳು ಇಬ್ಬರೇ ಇದ್ದರು. "ಸುಮನ್ ನೀನಿಲ್ಲದೇ ನಾನು ಬದುಕಲಾರೆ. ನೀನು ನನ್ನ ವಿವಾಹ ಆಗಬೇಕು" ಎಂದ.

ಸುಮನ ಮುಗುಳ್ನಗುತ್ತ "ಮಿ|| ಸತೀಶ್ ಕಾಲೇಜ್ ದಿನಗಳಿಂದಲೂ ಇಂಥಾ ಉದ್ಗಾರ ಅನೇಕ ಸಹಪಾಠಿಗಳಿಂದ ಕಡೆಗೆ ಒಬ್ಬಿಬ್ಬ ಅವಿವಾಹಿತ ಲೆಕ್ಚರ್‌ಗಳಿಂದ ಕೇಳಿ ಬಂದಿದೆ. ಮೈಸೂರಿನಲ್ಲಿ ಓದು ಮುಗಿಸಿ ಈ ಸ್ಟಿಫನ್ ಕಂಪನಿಗೆ ಸ್ಟೆನೊ ಆಗಿ ಸೇರಿದಾಗ ಮೂರು ನಾಲ್ಕು ಜನರಿಂದ ಬೇಡಿಕೆ ಬಂದಿತ್ತು. ಆ ಪೈಕಿ ಸೂಪರಿಡೆಂಟ್ ನನಗಾಗಿ ಹುಚ್ಚನಾಗಿದ್ದ. ಅವನ ಪ್ರೇಮ ನಿರಾಕರಿಸಿದ ಫಲವೇ ನನ್ನನ್ನು ಮೈಸೂರಿನಿಂದ ಎತ್ತಿ ಈ ಜಿಲ್ಲೆಗೆ ಎಸೆದ. ನಾನು ತಂದೆ ತಾಯಿಗಳನ್ನು ಬಿಟ್ಟು, ಇಲ್ಲಿ ಬಂದು ಒಂಟಿಯಾಗಿ ಹಾಸ್ಟಲಿನಲ್ಲಿ ಬದುಕುತ್ತಿದ್ದೇನೆ" ಎಂದಳು. ಸತೀಶ ದೃಢವಾಗಿ, "ಸುಮಾ ನನ್ನನ್ನು ಅರೆಬರೆ ಪ್ರೇಮವಲ್ಲ. ಅನೈತಿಕ ಪ್ರೇಮವಲ್ಲ. ನಾನು ಅವಿವಾಹಿತ. ನಿನ್ನನ್ನು ವಿವಾಹವಾಗಲು ಇಷ್ಟ ಪಡುತ್ತೇನೆ. ವರದಕ್ಷಿಣೆ, ವರೋಪಚಾರ ಯಾವ ಗೊಂದಲವಿಲ್ಲ. ಸರಳವಾಗಿ ಶಾಸ್ತ್ರೋಕ್ತವಾಗಿ ವಿವಾಹ ಆಗುತ್ತೇನೆ" ಎಂದ.

"ನೀವು ಸರಳ ವಿವಾಹ ಎಂದರೂ ನಾವು ಒಪ್ಪುವುದಿಲ್ಲ. ನಮ್ಮ ತಂದೆ

ರಿಜಿಸ್ಟ್ರಾರ್ ಆಫೀಸಿನಲ್ಲಿ ಅಧಿಕಾರಿಯಾಗಿ ಚೆನ್ನಾಗಿ ಸಂಪಾದಿಸಿದ್ದಾರೆ. ಎಲ್ಲಾ ಆಸ್ತಿ ನಮ್ಮಣ್ಣಾ ಒಬ್ಬನೇ ಏಕೆ ಲೂಟಿ ಹೊಡಿಯಬೇಕು. ಒಂದು ಲಕ್ಷ ರೂ ವರದಕ್ಷಿಣೆ. ಇಪ್ಪತ್ತು ತೊಲ ಚಿನ್ನ ಎಂದು ಕೇಳಿ. ಮೈಸೂರಿನಲ್ಲಿ ಎರಡು ಮನೆಗಳಿವೆ ಅವರ ವಾಸದ ಮನೆಯಲ್ಲದೆ. ಒಂದು ಮನೆ ಬೇಕೆಂದು ಹಠಾ ಹಿಡಿಯಿರಿ" ಎಂದು ಹೇಳಿಕೊಟ್ಟಳು.

ಸತೀಶ ಬೆದರಿ, "ಏನು ತಮಾಶೀ ಮಾಡ್ತಿಯ್ಯಾ ? ಸುಮನಾ ? ನಾನೊಬ್ಬ ವೈದಿಕ ಬ್ರಾಹ್ಮಣರ ಮಗ. ಒಂದು ಹಳೇ ಕಾಲದ ಸ್ವಂತ ಮನೆ ಇದೆ. ನಮ್ಮ ತಂದೆ ಪ್ರಖ್ಯಾತ ವೇದ ವಿದ್ವಾಂಸರು. ಚತುರ್ವೇದ ಪಾಠಂಗತರು. ಇಡೀ ಭಾರತದುದ್ದ ದೊಡ್ಡ ಕ್ಷೇತ್ರಗಳಲ್ಲಿ ಎಲ್ಲಿ ಮಹಾ ಪೂಜೆ, ಹೋಮ, ಹವನ, ಯಾಗ, ಯಜ್ಞ ಆದರೂ ಅವರಿಗೆ ಕರೆ ಇರತ್ತೆ. ಶ್ರೀ ತಿರುಪತಿ ದೇವಸ್ಥಾನದ ಆಸ್ಥಾನ ಪಂಡಿತರು. ತಂದೆ ಎಂದಾದರೂ ವರ್ಷಕ್ಕೊಮ್ಮೆ ಒಂದು ತಿಂಗಳು ಬಂದು ಮನೇಲಿ ಇದ್ದರೂ ಹೆಚ್ಚು. ಇಲ್ಲಿ ಬಂದರೂ ಬೆಳಿಗ್ಗೆ ಆರು ಗಂಟೆಗೆ ರಾಯರ ಮಠ ಸೇರಿದರೆ ರಾತ್ರಿ ಒಂಭತ್ತರ ಮೇಲೆ ಬರ್‍ತಾರೆ. ವೇದ ವಿದ್ಯೆ ಮಾರಲ್ಲ ಅಂತ ಅವರ ಹಠ. ಹೀಗಾಗಿ ಎಲ್ಲಿಯೂ ಸಂಭಾವನೆ ಸ್ವೀಕರಿಸಲ್ಲ. ಮನೆ ಒಂದು ಭಾಗ ಬಾಡಿಗೆಗೆ ಕೊಟ್ಟು ಅಮ್ಮ ಹೇಗೋ ಕಷ್ಟದಿಂದ ಜೀವನ ನಡೆಸಿದಳು. ನಂದು ಬಿ.ಕಾಂ. ಮುಗಿದು ಇದೇ ಜಿಲ್ಲೆಯ ಆಫೀಸಿನಲ್ಲಿ ಕೆಲಸಕ್ಕೆ ಸೇರಿದ ಮೇಲೆ ನಾಲ್ಕು ವರುಷಗಳಿಂದ ನನ್ನ ಮನೆಯ ಪರಿಸ್ಥಿತಿ ಹೇಗೋ ಸುಧಾರಿಸಿದೆ. ಈಗ ನನಗೆ ಮೂರು ಸಾವಿರ ರೂಪಾಯಿ ಬರುತ್ತೆ. ನಾನೇನು ಡಾಕ್ಟರಾ ? ಅಥವಾ ಇಂಜಿನಿಯರಾ ? ಮನೆ ಕೊಡಿ, ಲಕ್ಷ ರೂಪಾಯಿ ಕೊಡಿ. ಎಂದು ಕೇಳಲಿಕ್ಕೆ." ಎಂದ. ಸುಮನ ನಕ್ಕು,

"ನೀವು ಬೇಡಿಕೆ ಸಲ್ಲಿಸಿ. ನಮ್ಮಪ್ಪಾ ಖಂಡಿತ ಕೊಡ್ತಾರೆ ನಾನು ನಮ್ಮಪ್ಪನ ಮುದ್ದಿನ ಮಗಳು. ನಾನು ನಿಮ್ಮನ್ನ.... ಪ್ರೀತಿಸಿದ್ದೀನಿ ಅಂದರೇ ತಂದೆ ನಿಮ್ಮೆಲ್ಲಾ ಬೇಡಿಕೆಗೆ ಒಪ್ತಾರೆ. ಜೊತೆಗೆ ಅದ್ಧೂರಿಯ ವಿವಾಹ ಬೇಕೂಂತ ಕೇಳಿ. ಮೈಸೂರಿನಲ್ಲಿ ನನಗೆ ಕೆಲವು ಫ್ರೆಂಡ್ಸ್ ಇದ್ದಾರೆ. ಅವರೆಲ್ಲರ ವಿವಾಹ ಗ್ರಾಂಡ್ ಆಗಿ ನಡೆದಿದೆ. ಅವರೆದುರಿಗೆ ನನ್ನ ವಿವಾಹ ಗ್ರಾಂಡ್ ಆಗಿ ನಡೀಬೇಕು" ಎಂದಳು. ಒಮ್ಮೆ ಅವಳನ್ನು ಎಂಟು ದಿನದ ಹಿಂದೆ ಕರೆ

ತೆಂದು ತಾಯಿಗೂ ಪರಿಚಯ ಮಾಡಿಸಿದ. ಅವಳು ಹೊರಟ ಮೇಲೆ ತನ್ನ ಮನಸ್ಸಿನ ಆಶೆ ತಿಳಿಸಿದ. ಭಾಗಿರಥಮ್ಮ ಹಾರ್ದಿಕವಾಗಿ, "ಹುಡುಗಿ ಮುದ್ದು ಗಾರ ಗೌರಿ ಇದ್ದ ಹಾಗಿದೆ. ಒಂದು ಹಾಲು ಅನ್ನ ಹಾಕಿ, ಧಾರೆ ಎರದು ಕೊಟ್ಟರೂ ಸಾಕು. ಖಂಡಿತ ನನಗೆ ಒಪ್ಪಿಗೆ ಇದೆಯಪ್ಪಾ" ಎಂದಿದ್ದರು. ವರದಕ್ಷಿಣೆ, ವರೋಪಚಾರದ ಬಗ್ಗೆ ಅವನಿಗೆ ತುಂಬ ಅಸಹ್ಯ. ಆದರೆ ಅವನ ಆದರ್ಶಕ್ಕೆ ಕೊಡಲಿ ಪೆಟ್ಟು. ಬೀಳುವಂತೇ ಅವಳು ಹಠ ಮಾಡಿ, ಪಟ್ಟು ಬರೆಸಿದಳು. ಒಂದು ದಿನ ಭಾಗಿರಥಮ್ಮ ರಮೇಶ ಸತೀಶನೊಂದಿಗೆ ಮೈಸೂರಿಗೆ ಹೋಗಿ ಬಂದರು. ರಮೇಶನೇ ತಮ್ಮನ ಪರವಾಗಿ ಎಲ್ಲಾ ಕೇಳಿದ.

"ನಮ್ಮಣ್ಣಾ... ಬಹಳ ಸ್ವಾರ್ಥಿ. ಕೇಳದೇ ಇದ್ದರೇ ನಮಗೆ ಏನು ಸಿಗಲ್ಲ ನೀವು ನಿರ್ದಾಕ್ಷಿಣ್ಯವಾಗಿ ಕೇಳಿ. ನಾನು ಅವರನ್ನೇ ಮಾಡ್ಕೋತೀನಿ ಅಂತ ಹಠ ಹಿಡೀತೀನಿ" ಎಂದು ರಮೇಶನಿಗು ಅವಳೇ ಹೇಳಿ ಕೊಟ್ಟಿದ್ದಳು. ಆಶ್ಚರ್ಯ ಎಂದರೇ ಇವರು ಕೇಳಿದ ಎಲ್ಲಾ ಬೇಡಿಕೆ ಸಲ್ಲಿಸಿ ಸುಮನಳ ತಂದೆ ರಾಮರಾಯರು ಅದ್ಧೂರಿಯಾಗಿ ವಿವಾಹ ಮಾಡಿಕೊಟ್ಟರು. ಝುಗಿಝುಗಿಸುವ ಜರಿ ಅಂಚಿನ ಆರು ಭಾರಿ ರೇಶ್ಮೆ ಸೀರೆಗಳು. ಆ ಸೀರೆಗಳ ಬೆಲೆಯೇ ಇಪ್ಪತ್ತು ಸಾವಿರ ರೂಗಳಾಗಿತ್ತು. ಇಪ್ಪತ್ತು ತೊಲ ಚಿನ್ನದ ಒಡವೆಗಳು ಒಂದು ಲಕ್ಷ ರೂ ಕ್ಯಾಶ್. ಮೈಸೂರಿನಲ್ಲಿ ಒಂದು ಮನೆಯೊಂದಿಗೆ ಅವಳು ಸತೀಶನ ಮನೆ ತುಂಬಿದಳು. ಹಣ ನನ್ನ ಹೆಸರಿನಲ್ಲಿ ಫಿಕ್ಸೆಡ್ ಡಿಪಾಸಿಟ್ ಇಡಿ. ಪೋಸ್ಟಾಫೀಸಿನಲ್ಲಿ ಇಟ್ಟರೆ ತಿಂಗಳಿಗೆ ಸಾವಿರ ರೂ ಬಡ್ಡಿ ಬರುತ್ತೆ. ಸಮಯಾಂದರೆ ನಾನು ಕೆಲಸ ಬಿಡ್ತೀನಿ. ಕೈ ಖರ್ಚಿಗೆ ನನಗೆ ಹಣ ಬೇಕಾಗತ್ತೆ" ಮೋಹದ ಮಡದಿಯ ಅಪೇಕ್ಷೆ ಸಲ್ಲಿಸಿದ. ಮನೆಯನ್ನು ಅವಳ ಹೆಸರಿಗೆ ರಿಜಿಸ್ಟರ್ ಮಾಡಿಸಿದ್ದರು.

ಅಳಿಯನ ಕುರುಡು ಬೆಳಗಾದ ಮೇಲೆ ತಿಳಿಯಿತು ಎಂಬಂತೆ ಅವಳ ಲೀಲೆಗಳೆಲ್ಲ ಮುಂದೆ ಅವನಿಗೆ ನಿಧಾನವಾಗಿ.....ತಿಳಿಯಲಾರಂಭಿಸಿದವು. ಒಂಬತ್ತು ಗಂಟೆಗೆ ಏಳುತ್ತಿದ್ದಳು ಸುಮನ. ಎದ್ದ ಮೇಲೆ ಬೆಡ್ ಕಾಫಿ ಸತೀಶನೇ ಕೋಣೆಗೆ ತರಬೇಕು, ಮುಖ ಮಾರ್ಜನೆ, ಶೌಚ ಹಾಗೂ ಸ್ನಾನ ಮುಗಿಸಿ ಹತ್ತೂವರೆಯವರೆಗೆ ಅಲಂಕಾರದ ಕಾರ್ಯಕ್ರಮ. ಊಟ ಮಾಡಿ ಗಂಡನೊಡನೆ ಸ್ಕೂಟರ್‌ನಲ್ಲಿ ಆಫೀಸಿಗೆ ಬರುವಳು.

ಮಧ್ಯಾಹ್ನ ಪಟ್ನಾಗಿ ಹೋಟೆಲ್ ತಿಂಡಿ. ಸಂಜೆ ಆಪೀಸಿಂದ ಬಂದವಳೆ ಕಾಲು ತೊಳೆದು ಒಂದು ಸ್ಲೀವ್‌ಲೆಸ್ ನೈಟ್‌ಗೌನ್ ಹಾಕಿ ಮಲಗಿ ಬಿಟ್ಟರೆ ರಾತ್ರಿ ಎಂಟು ಗಂಟೆಗೆ ಊಟಕ್ಕೆ ಅಡಿಗೆ ಮನೆಗೆ ದಯ ಮಾಡಿಸುವುದೇ ದೊಡ್ಡದು.

"ಅಮ್ಮ ಬೆಳಗ್ಗೇನು ಸರಿಯಾಗಿ ಊಟ ಮಾಡಿಲ್ಲ. ಈಗ ನಿಧಾನವಾಗಿ ಊಟ ಮಾಡು ತಾಯಿ....." ಬಾಗಿರಥಮ್ಮ ಅಕ್ಕರೆಯಿಂದ ಉಪಚರಿಸಿದರೆ ಸುಮನ ಧೋರಣೆಯಿಂದ, "ನೋಡಿ.. ಬೆಳಗ್ಗೆ ಅನ್ನ ತಿಳಿಸಾರು ಮಾಡಿ. ನೂರೆಂಟು ಅಡಿಗೆ ಮಾಡಿ ನನ್ನ ಪ್ರಾಣಾ ಹಿಂಡಬೇಡಿ. ರಾತ್ರಿ ನಾನು ಆರಾಮವಾಗಿ ಊಟ ಮಾಡ್ತೀನಿ. ಅಡಿಗೆ ನಾನು ಬಂದ ಮೇಲೆ ನನ್ನ ಕೇಳಿ ಮಾಡಿ. ಈ ಮೆಂತ್ಯಗೊಜ್ಜು ಹಿಂಡಿ ಪಲ್ಯ ಮಾಡಬೇಡಿ. ಪ್ರತಿರಾತ್ರಿ ಚಪಾತಿ ಅಥವ ಪೂರಿ ಇರಬೇಕು. ಭಾನುವಾರ ಬಿಸಿಬೇಳೆಭಾತ್ ಕಲಸನ್ನ ಏನಾದರೂ ಸ್ಪೆಷಲ್ ಇರಬೇಕು" ಎಂದು ಗತ್ತಿನಿಂದ ಅಧಿಕಾರ ಸ್ವರದಲ್ಲಿ ನುಡಿದಳು.

ಒಂದು ತಿಂಗಳಲ್ಲೇ ಅವಳ ವರ್ತನೆಯಿಂದ ಬೇಸತ್ತಿದ್ದ ಸತೀಶ ಸಿಡಿದು, "ರ್‍ಯಾಸ್ಕಲ್ ! ಯಾರ ಜೊತೆ ಮಾತಾಡ್ತಿದ್ದಿ. ಆಕೆ ನನ್ನ ತಾಯಿ. ನಿನಗೆ ಅತ್ತೆ ಮನೆ ಅಡಿಗೆಯವಳೂಂತ ಅನ್ಕೊಂಡೆಯಾ? ತಿಂದ ತಟ್ಟೆ ಎಸೆದು ಬರ್ತಿ. ಮಡಿ ಮೈಲಿಗೆ ಹೊಂದಿಕೊಂಡು ನೀನು ಅಮ್ಮನಿಗೆ ನೆರವಾಗೋದಿರಲಿ.ನಮ್ಮ ಎಂಜಲು ಗೋಮೇ ಅಮ್ಮ ಬಳೀಬೇಕಾ ?" ಎಂದ. ಸುಮನ ಸಿಡಿದೆದ್ದು,

"ಯಾರು ರ್‍ಯಾಸ್ಕಲ್ ? ನೀವು ರ್‍ಯಾಸ್ಕಲ್ ? ಈ ಚೆಂದಕ್ಕೆ ನನ ಮದುವೆ ಏಕಾಗಬೇಕಿತ್ತು ? ಸೋಫಾ ತನ್ನಿ ಅಂದೆ ಆಗಲ್ಲ ಅಂದಿರಿ. ನಮ್ಮಪ್ಪನಿಗೆ ಕಾಗದಾ ಬರೀರಿ ಅಂದೆ. ಆಗಲ್ಲಾ ಅಂದಿರಿ. ಪೂಸಿ ಮಾಡಿ ಮದುವೆ ಏಕಾಗಬೇಕಿತ್ತು ?"

ಭಾಗಿರಥಮ್ಮ ಸೊಸೆಗೆ ಬುದ್ಧಿ ಹೇಳಿ. "ಸೋಫಾ, ಕುರ್ಚಿ, ಜೀವನದಲ್ಲಿ ಮುಖ್ಯ ಅಲ್ಲಮ್ಮ. ಗಂಡ–ಹೆಂಡ್ತಿ ಜೀವನದಲ್ಲಿ ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗಬೇಕು" ಎಂದರು .ಸುಮನ ಕಟುವಾಗಿ, "ನೀವು ಸುಮ್ನಿರಿ ಅತ್ತೆ. ನಮ್ಮಿಬ್ಬರ ಮಾತಿನ ಮಧ್ಯೆ ಬಾಯಿ ಹಾಕಬೇಡಿ. ನಿಮಪಾಡಿಗೆ

ನೀವು ಎರಡು ಹೊತ್ತು ಅಡಿಗೆ ಕೆಲಸ ಮಾಡಿಕೊಂಡು ಮನೆ ಸ್ವಚ್ಛವಾಗಿ ಇಟ್ಟರಿ" ಎಂದಳು.

ಸತೀಶ ಉಗ್ರನಾಗಿ, "ನಮ್ಮ ತಾಯಿ ಅಂದರೆ ಅಡಿಗೆಯವಳು ಕೆಲಸದಾಕೆ ಅಂತ ತಿಳಿದಿದ್ದೀಯ್ಯ ? ನೋಡಮ್ಮ ಒಂಬತ್ತು ಗಂಟೆಯವರಿಗೆ ಇವಳು ಮಲಗಿದ್ದರೂ ನೀನು ಅತ್ತೆತನ ತೋರದೆ 'ಇರ್ಲಿ ಬಿಡಪ್ಪಾ......ಏನೋ ಅವಳ ಅಭ್ಯಾಸ' ಅಂದೆ. ಆದರೆ ಈ ರ್‍ಯಾಸ್ಕಲ್ ನಿನ್ನನ್ನು ಕೆಲಸದವಳೊಂತಲೆ ತಿಳಿದಿದ್ದಾಳೆ. ನಾಳೆಯಿಂದ ಆರು ಗಂಟೆಗೆದ್ದು, ಗುಡಿಸಿ, ಸಾರಿಸಿ, ಅಮ್ಮನ ಜೊತೆಗೆ ಅಡಿಗೆ ಕೆಲಸದಿಂದ ಹಿಡಿದು ಎಲ್ಲಕ್ಕೂ ಸಹಾಯ ಮಾಡು.ಒಂಭತ್ತು ಗಂಟೆಯ ಮೇಲೆ ಎದ್ದು ಧಿಮಾಕು ಮಾಡಿದರೆ ಸುಮ್ಮನಿರಲ್ಲ" ಎಂದ.

"ನೋಡಿ..... ನನ್ನ ಮೇಲೆ ಇಲ್ಲದ ಅಧಿಕಾರ ನೀವು ಚಲಾಯಿಸಬೇಡಿ. ಒಂದು ಗುಂಜಿ ಚಿನ್ನ ನನ್ನ ಮೇಲೆ ನೀವು ಹಾಕಿಲ್ಲ, ತಾಳಿ, ಮಾಲೆ ಸಹ ನನ್ನ ತವರಿಂದು. ನಾನು ಲಕ್ಷ ರೂ. ತಂದೋಳು ನೆನಪಿರಲಿ" ಎಂದಳು.

"ಯಾರಿಗೆ ಬೇಕು ನಿನ್ನ ಲಕ್ಷ ? ನಾನು ಅದರಲ್ಲಿ ಒಂದು ಪೈಸ ಮುಟ್ಟಿಲ್ಲ ನೆನಪಿರಲಿ" ಎಂದ.

ಮಾತಿಗೆ ಮಾತು ಬೆಳೆಯಿತು. ಎಂಜಲು ಕೈನಲ್ಲೇ ಸತೀಶ ಅವಳ ಕೆನ್ನೆಗೆ ಅಪ್ಪಳಿಸಿದ. ಅವಳು ಕೋಪದಿಂದ, "ನಿಮ್ಮಂಥಾ ಪಶುವಿನ ಕೂಡ ಸಂಸಾರ ಮಾಡಲಾರೆ" ಎಂದು ಹೇಳಿ ಆ ರಾತ್ರಿ ಎಂಟು ಗಂಟೆಯಲ್ಲಿ ತನ್ನ ಸೂಟ್‌ಕೇಸ್ ಜೋಡಿಸಿಕೊಂಡು ಹೊರಟು ಹೋದಳು.

ಭಾಗಿರಥಮ್ಮ ದಿಗ್ಭ್ರಾಂತರಾಗಿ, "ಏನಪ್ಪಾ ಇದು ? ಮದುವೆ ಆಗಿ ಒಂದು ತಿಂಗಳೊಳಗೆ ಈ ರೀತಿ ರಸಕಸಿ. ಇಂಥಾ ಹೆಣ್ಣು ಉಂಟೇನೊ ?" ಎಂದರು.

"ಅಮ್ಮ ನಿನ್ನ ಒಳ್ಳೆತನ ಅವಳೆದುರು ನಡೆಯಲಿಲ್ಲ. ಒಂಭತ್ತು ಗಂಟೆಯವರಿಗೆ ಮಲಗಿ ಎದ್ದವಳಿಗೆ ಹೋಗಿ ಬೆಡ್ ಕಾಫಿ ಕೊಟ್ಟು ಉಪಚರಿಸುತ್ತಿದ್ದೆ. ಸಮಸ್ತ ಮನೆ ಕೆಲಸವೂ ನೀನೇ ಮಾಡಿಕೊಂಡು. ಅವಳು ಗಂಟೆಗಟ್ಟಲೇ ಅಲಂಕಾರದಲ್ಲಿ ಕಾಲ ಕಳೆದು ಬಂದು ಊಟಕ್ಕೆ ಕೂತರೂ ಪ್ರೀತಿಯಿಂದ ಉಪಚರಿಸಿ ಬಡಿಸ್ತಿದ್ದೆ. ಅವಳು ಬಿಸಿ ಅಡುಗೆ ಅಂತ ಸಿಡುಕಿದಾಗ ಬೀಸಣಿಗೆಯಿಂದ ಗಾಳಿ ಬೀಸ್ತಿದ್ದೆ. ಆದರೆ ನೀನೇನೊ ಒಬ್ಬ ಮಗಳ

ದ್ದಿದ್ದರೆ ಸಹನೆಯಿಂದ ಘೂಡ್ತಿರಲಿಲ್ಲವೇ ಅಂತ ಮಾಡಿದಿ. ಆದರೆ ಅವಳು ತಾನೇ ವಹಾಲಕಿ. ನೀನು ಈ ಮನೆ ಜವಾನಿ ಅನ್ನೋ ಹಾಗೆ ಆಡ್ತ ಇದ್ದಿದ್ದು. ನನಗೆ ಸರಿ ಹೋಗಲಿಲ್ಲ" ಎಂದ.

"ನನ್ನ ವಿಷಯ ಹೇಗಾದರೂ ಇರಲಪ್ಪಾ. ನೀವು ಗಂಡ ಹೆಂಡ್ತಿ ಚೆನ್ನಾಗಿದ್ದಾರೆ ಸಾಕು. ನನಗೆ ಅವಳು ಹೊಂದಿಕೊಳ್ಳದೆ ಇದ್ದರೂ ಪರ ವಾಗಿಲ್ಲ. ನಿನಗೆ ಹೊಂದಿಕೊಂಡರೂ ಸಾಕು" ಎಂದರು. ಸ... ಜೀ...ತ ದಿಂದ,

"ನನಗೂ ಕೆಲವು ವಿಷಯದಲ್ಲಿ ತಲೆನೋವೇ ...ಅಮ್ಮ. ಆಡೋ ಹಾಗಿಲ್ಲ ಅನುಭವಿಸೋ ಹಾಗಿಲ್ಲ. ನಾ...ಗಿ ಮಾಡಿಕೊಂಡದ್ದು" ಎಂದ.

ಮನೆಯ ಬಗ್ಗೆ ಅವಳ ಅಸಮಾಧಾನ. "ಆಫೀಸಿನವರಿಗೆ ಪಾರ್ಟಿ ಕೊಡಿಸಬೇಕು" ಎಂದಿದ್ದಳು.

"ಮನೇಲೆ ಅಮ್ಮ ಬೊಂಬಾಯಿ ಬೋಂಡ ಮೈಸೂರು ಪಾಕು ಚೆನ್ನಾಗೆ ಮಾಡ್ತಾಳೆ. ಕರಿಸೋಣಾ" ಎಂದ.

"ಥೂ ಈ ಮನೇಲಾ ? ಈ ಮನೆಗೆ ನಮ್ಮ ಆಫೀಸರ್ ಬಂದರೆ ನನ್ನ ಪ್ರೆಸ್ಟೀಜ್ ಹಾಳಾಗತ್ತೆ" ಎಂದಳು. ಅವಳು ಹೇಳಿದ ಹೋಟಲಲ್ಲಿ ಪಾರ್ಟಿ ಕೊಡಿಸಲು ಮೂರು ಸಾವಿರ ರೂ.ಗಳಾಗಿತ್ತು. ಒಮ್ಮೆ ಶಾಪಿಂಗ್ ಎಂದು ಹೋಗಿ, ಐದು ಸಾವಿರ ರೂ.ಗಳ ಸಾಮಾನು ಖರೀದಿಸಿದ್ದಳು. ಅವಳ ಸಂಬಳ ಎರಡು ಸಾವಿರ. ಲಕ್ಷ ರೂ. ಠೇವಣಿಯಿಂದ ಬರುತ್ತಿದ್ದದ್ದು ಸಾವಿರ.

ಸತೀಶ ಬೇಸರದಿಂದ, "ಮನೆಗೆ ಸೋಫಬೇಕು ಅಂತಿ, ಫ್ರಿಜ್ ಬೇಕು ಅಂತಿ, ಕಲರ್ ಟಿ.ವಿ.ಬೇಕು ಅಂತಿ. ಆದರೆ ಈ ದುಂದುವೆಚ್ಚಾ ನಡೆಪ್ರೆ ಹೇಗೆ ಸುಮ ? ಮದುವೆಗೆ ಬಂದೋರು ..ಮದುವೆ ಊಟ ಉಂಡು ಹೋಗಿ ದ್ದರು. ತಿರುಗ ಪಾರ್ಟಿ ಅಂತ ಮೂರು ಸಾವಿರ ಖರ್ಚು ಮಾಡಿಸಿದೆ. ಈಗ ಇದೇ ತಿಂಗಳಲ್ಲಿ ಮೂರು ಸಾವಿರ ರೂ. ಸಾಲಾ......" ಎಂದ.

"ನೀವು ದುಡಿಯೋ ಗಂಡಸು..... ನೀವು ಕೊಡಬೇಕ್ರಿ. ಇಷ್ಟಕ್ಕೆ ತಾರ ಮ್ಮಯ್ಯ ಆಡಿಸಿದರೆ ಹೇಗೆ ? ಹೊಸದಾಗಿ ಮದುವೆಯಾದ ಹೆಂಡ್ತಿ ಅಂದರೆ ಚಂದ್ರಲೋಕನ್ನೆ ಕಿತ್ತಿ ತಂದು ಕೊಡೋ ಹುಮ್ಮಸ್ಸಿರಬೇಕು. ನಾನೇನು ವಜ್ರದ ಹಾರ ಕೇಳಿದೆನಾ ? ರತ್ನದ ಪದಕ ಕೇಳಿದೆನಾ ? ಆಫ್ಟರ್ ಆಲ್

ನಾಲ್ಕ್ ಶಿಫಾನ್ ಸೀರೆಗಳು. ಅವರು ನಮ್ಮ ಆಫೀಸ್ ಸ್ಟಾಫ್ ಮೈಸೂರಿಗೆ ಬಂದು ನಮ್ಮಪ್ಪ ಹಾಕಿದ ಮದುವೆ ಊಟ ಮಾಡಿದ್ದರು. ನಾವಿಬ್ಬರು ಅದೇ ಆಫೀಸು ಕೆಲಸ ಮಾಡ್ತೀವಿ ಅಂದ ಮೇಲೆ ಇಲ್ಲೊಂದು ಪಾರ್ಟಿ ಕೊಡಬೇಡವಾ ? ನೀವು ಬಹಳ ಜಿಪುಣರೂಂತ ಅನಿಸತ್ತೆ. ಎಲ್ಲರೂ ನನಗೆ ಹನಿಮೂನಿಗೆ ಎಲ್ಲಿ ಹೋಗ್ತಿ ಅಂತ ಕೇಳ್ತಿದ್ದಾರೆ. ಸುಮ್ಮರ್ ಶುರು ಆಗ್ತಾಲೇ ಸಿಮ್ಲಾ, ನೈನಿತಾಲ್, ಡಾರ್ಜಲಿಂಗ್‌ಗೆ ಹೋಗ್ತೀನಿ ಅಂದೆ. ಆಗ ಐದು ಸಾವಿರ ರೂ. ಸರಿ ಮಾಡಿಕೊಳ್ಳಿ" ಎಂದಳು.

ಸತೀಶ ದಿಗ್ಭ್ರಾಂತನಾಗಿ, "ನನಗೆ ವರ್ಷಕ್ಕೆ ಒಂದು ಲಕ್ಷ ರೂ. ಆದಾಯ ಇದೇ ಅಂದ್ಕೊಂಡ್ಯಾ ಸುಮಾ ? ನನ್ನ ಸಂಬಳ ತಿಂಗಳಿಗೆ ಮೂರು ಸಾವಿರ. ಈ ಮನೆ ಬಿಟ್ಟರೆ ಬೇರೆ ಆಸ್ತಿ ಪಾಸ್ತಿ ಇಲ್ಲ. ಸಮಸ್ತ ಖರ್ಚು ನನ್ನ ಸಂಬಳದಲ್ಲೇ ನಡೀಬೇಕು. ನೀನು ಈ ರೀತಿ ಆಸೆ ಇಟ್ಕೊಬೇಡ" ಎಂದ.

"ಈ ಮನೆ ಮಾರೋಕೆ ಅಮ್ಮ ಒಪ್ಪಲ್ಲ. ನನಗೆ ಬಿಸಿನೆಸ್ ಇದರಲ್ಲಿಲ್ಲ ಅನುಭವಾನು ಇಲ್ಲ" ಎಂದ.

"ಅಯ್ಯೋ ! ಆ ಮುದುಕಿಗೇಕೆ ಹೆದರ್ತೀರಿ ? ನಾವಿಬ್ಬರೂ ಜೋರು ಮಾಡಿದರೆ ಹೇಳಿದ್ಹಂಗೆ ಕೇಳಿಕೊಂಡಿರತ್ತೆ. ನೀವು ಬಿಸಿನೆಸ್ ಪ್ರಾರಂಭಿಸಿ ನಿಮ್ಮ ಬೆನ್ನ ಹಿಂದೇ ನಾನಿರ್ತೀನಿ. ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರ್ತಾಳೆ ಗೊತ್ತಾ ? ನೀವು ಬಿಸಿನೆಸ್ಸಲ್ಲಿ ಲಕ್ಷಾಧೀಶರಾದಾಗ ನನ್ನ ನೆನೆಸಿಕೊಳ್ಳಿ" ಎಂದಳು.

ಅವಳ ಅತಿ ಆಶೆ ವಿಚಿತ್ರ ಸಲಹೆಗಳು ವಿತಂಡವಾದ ಎಲ್ಲಾ ನೋಡಿ, ದಾಂಪತ್ಯ ಎನ್ನುವುದು ಒಂದು ತಿಂಗಳು ಬೇಜಾರಾಗಿ ಹೋಯಿತು. ಈ ದಿನ ಅಂತು ಜಗಳ ರಸಕಸಿ ಆಗಿ, ಊರು ಬಿಟ್ಟು ಹೋದಳು. ಅಪ್ಪನ ಮನೆ ಬಲವಾಗಿದೆ. ಕೋಪ ತೀರುವವರಿಗೆ ಇದ್ದು ಬರುತ್ತಾಳೆ ಎಂದುಕೊಂಡ. ಆದರೆ ಅವನ ಊಹೆ ಸುಳ್ಳಾಗಿತ್ತು. ಒಂದು ತಿಂಗಳು ರಜ ಹಾಕಿ ಹೋಗಿದ್ದ ಸುಮನ ರಾಜಿನಾಮೆ ಕಳಿಸಿದ್ದಳು.

"ಹೋಗ್ಲಿ ನೀನೇ ಸೋತರೂ ಚಿಂತೆಯಿಲ್ಲ. ಕರೆದುಕೊಂಡು ಬಾಪ್ಪಾ. ಹೊಸದಾಗಿ ಮದುವೆಯಾದ ಹುಡುಗ ಒಂಟಿಯಾಗಿ ಇರೋದು ನೋಡ್ಲಾರೆ"

ಎಂದು ತಾಯಿ ಭಾಗಿರಥಮ್ಮ ಗೋಗರೆದರು. ಈ ಮಧ್ಯೆ ರಮೇಶ ಒಂದು ದಿನ ಬಂದಿಳಿದ. ತನ್ನ ರಾಜಕಾರಣ ಪುಡಾರಿ ಕೆಲಸದ ಸಲುವಾಗಿ ಮೈಸೂರಿನಲ್ಲಿಯೇ ಅವನದು ಜಾಸ್ತಿ ಓಡಾಟವಿತ್ತು.

"ಏನಪ್ಪ ಮೈಸೂರಿನಲ್ಲಿ ನಿನ್ನ ಹೆಂಡತಿ ಒಂಟಿಯಾಗಿ ತಂದೆ ತನಗೆ ಕೊಟ್ಟ ಆ ಮನೆಲೀರ್ತಾಳೆ. ಸಂಜೆ ಆದ್ರಾವೋನೋ ಆ ಸೂಪರಿಂಟೆಂಡೆಂಟ್ ಹುಡುಕಿ ಬರ್ತಾನೆ. ಅವನ ಹಿಂದೆ ಮೋಟಾರ್ ಬೈಸಿಕಲ್ ಮೇಲೆ ತಬ್ಬಿ ಕೂತುಹೊರಡ್ತಾಳೆ.ದಿನ ಬಂದು ರಾತ್ರಿ ಒಂಭತ್ತರವರಿಗೆ ಇದ್ದು ಹೋಗ್ತಾನೆ" ಎಂದೆಲ್ಲಾ ಹೇಳಿದ.

ಭಾಗಿರಥಮ್ಮ ಅಳುತ್ತ, "ಅಯ್ಯೋ ! ಆ ಪಾಪಿ ತೀರ ಇಂಥಾವಳಾ ? ನೀನು ಹೋಗಿ ಅವರ ತಂದೆ, ಅಣ್ಣನಿಗೆ ಝಾಡಿಸಬೇಕಿತ್ತು" ಎಂದರು.

ರಮೇಶ ಹತಾಶನಾಗಿ, "ಒಂದು ದಿನ ಅವರ ಮನೆಗೂ ಹೋಗಿದ್ದೆ ನಮ್ಮ. ಅವರ ತಂದೆ, ಅಣ್ಣ ತೀರ ಅವಳ ಸಂಬಂಧವಿಲ್ಲದ ಹಾಗೆ ಮಾತಾಡಿದರು. ನಾವು ಕೊಡೋದೆಲ್ಲಾ ಕೊಟ್ಟು, ವಿವಾಹ ಮಾಡಿಕೊಟ್ಟವಿ. ಅವಳನ್ನ ಹದ್ದಿನಲ್ಲಿ ಇಟ್ಕೋಬೇಕಾದ್ದು ನಿಮ್ಮ ಕೆಲಸ. ಚಪ್ಪಲೀಲಿ ಹೊಡೆದು ಕರ್ಕೊಂಡ್ಹೋಗಿ" ಎಂದರು.

ಆಮೇಲೆ ಹಿಂದಿನಿಂದ ತಿಳಿದ ಸುದ್ದಿ ಎಂದರೆ, ಈ ಹಿಂದೆ ಅವಳಿಗೆ ಆ ಸೂಪರಿಂಡೆಂಟ್ ಜೊತೆ ಸಂಬಂಧವಿತ್ತಂತೆ. ಆವನಿಗೆ ಮದುವೆ ಆಗಿ ಎರಡು ಮಕ್ಕಳು ಇವೆ. ಹಣದ ಆಸೆಗೆ ಕುರೂಪಿ ಹುಡುಗೀನ್ನ ವಿವಾಹ ಆಗಿ, ಆತ ಅವಳಿಂದ ಪಡೆದ ಲಕ್ಷಾಂತರ ರೂ.ನಲ್ಲಿ ಏನೋ ಸೈಡ್ ಬಿಸಿನೆಸ್ ಮಾಡ್ತಾನಂತೆ. ಆಫೀಸಲ್ಲಿ ಇವರಿಬ್ಬರದು ಗಲಾಟೆ. ಆಗಾಗಿ, ಇವಳನ್ನ ಮೈಸೂರಿಂದ ಇಲ್ಲಿಗೆ ವರ್ಗ ಮಾಡಿದ್ದಾರೆ. ಅವನಿಗೂ ವಾರ್ನಿಂಗ್ ಮಾಡಿದ್ದಾರೆ. ಅವನು ಬೇರೆ ಜಾತಿ, ಮದುವೆ ಆದೋನೂಂತ ಅವಳ ತಂದೆ, ಅಣ್ಣನು ಸಾಕಷ್ಟು ಬೈದಿದ್ದಾರೆ. ಬೇರೆ ಹುಡುಗನ್ನ ಹುಡುಕಿ ಮದುವೆಗೆ ಪ್ರಯತ್ನಿಸಿದ್ದಾರೆ. ಆದರೆ ಅವಳ ಚರಿತ್ರೆ ತಿಳಿದ ಯಾರು, ಅವರು ಕೊಡೋ ಹಣಕಾಸಿನ ಆಸೆಗೆ ಮರುಳಾಗಿ ಮದುವೆ ಆಗಿಲ್ಲ. ಇಲ್ಲಿ ಬಂದು ನಮ್ಮ ಸತೀಶಂಗೆ ಜಾಲಾ ಬೀಸಿದ್ದಾಳೆ. ತಂದೆ ಮನೆಯಿಂದ ಹಣ ಸೆಳೆಯುಲಿಕ್ಕೆ ಮದುವೆ. ಆ ಆಫೀಸರನ್ನೇ

ವಿವಾಹ ಆಗಿದ್ರೇ ಅವಳ ತಂದೆ ಮನೆಯಿಂದ ಮೂರು ಕಾಸು ಸಿಗ್ತಿರಲಿಲ್ಲ. ಅದಕ್ಕೆ ಒಂದು ಉಪಾಯ ಮಾಡಿದ್ದಾಳೆ. ಸತೀಶನ ಜೊತೆ ಮದುವೆ ಒಂದು ಜಾಲಾ. ಈಗ ತನ್ನ ಒಂದು ಲಕ್ಷ ಅವನ ಬಿಸಿನೆಸ್ ಪಾರ್ಟನರ್ ಆಗಿ ಕೊಟ್ಟಿದ್ದಾಳೆ. ಅವನು ಆಪೀಸಿಗೆ ರಾಜಿನಾಮೆ ಕೊಟ್ಟಿದ್ದಾನಂತೆ. ಈಗ ಇಬ್ಬರಿಗೂ ಯಾರ ಭಯವೂ ಇಲ್ಲ. ಮೊದಲು ಅವರಣ್ಣ ಕೊರಡೆಗಳು ತಗೊಂಡು ಅವಳಿಗೆ ಹೊಡೆದು ರೂಮಿನಲ್ಲಿ ಉಪವಾಸ ಕೆಡವಿದ್ದನಂತೆ, ಪೋಲಿಸ ಆಫೀಸರ್‌ಗೆ,ಆ ಸೂಪರಿಂಡೆಂಟ್ ಮೇಲೂ ದೂರು ಕೊಡ್ತಿದ್ದನಂತೆ. ಈಗ ಅವರು ತಮ್ಮ ಗ್ರಹಚಾರ ಹರೀತು ಅಂತ ಕೈ ತೊಳೆದ ಹಾಗೆ ಸುಮ್ಮ ನಿದ್ದಾರೆ. ಏನಾದರೂ ಮಾಡಿದರೆ ನೀನೆ ಮಾಡಬೇಕು" ಎಂದ.

ಭಾಗಿರಥಮ್ಮ ಅಳುತ್ತ ಕುಳಿತರು. ಸತೀಶ ದಿಗ್ಭ್ರಾಂತನಾಗಿ ಕುಳಿತ. ಅವಳಿಗೆ ಹಣದ ದುರಾಶೇ ಶೋಕಿಲೇಡಿ, ಕೆಲಸದಲ್ಲಿ ಸೋಮಾರಿ... ಎಂದು ಮಾತ್ರ ತಿಳಿದಿದ್ದ. ಈ ರೀತಿ ಹಿನ್ನಲೇ ಇದೆಯೆಂದು ತಿಳಿದಿರಲಿಲ್ಲ.

ಮನಸು ತಡೆಯದೇ ಒಮ್ಮೆ ಭಾಗಿರಥಮ್ಮ ಬೀಗರ ಮನೆಗೆ ಬಂದರು. "ನಮಗೇನು ಗೊತ್ತಮ್ಮ, ನಿಮ್ಮ ಹುಡುಗನ್ನ ಪ್ರೀತಿಸಿ ವಿವಾಹವಾದಳು. ಸುಖವಾಗಿರ್ತಾಳೆ ಅಂತ ನಾವು ಭಾವಿಸಿದಿವಿ. ನೀವು ಕೇಳಿದ್ದೆಲ್ಲಾ ಕೊಟ್ಟೆವಿ" ಎಂದರು.

ಭಾಗಿರಥಮ್ಮ ರೋಷದಿಂದ, "ನೀವು ಕೊಟ್ಟಿದ್ದು ಮೂರು ಕಾಸು ನಮಗೆ ದಕ್ಕಲಿಲ್ಲ. ಚಿನ್ನ ಅವಳ ಮೈಮೇಲಿದೆ. ಹಣ, ಮನೆ ಅವಳ ಹೆಸರಲ್ಲಿದೆ. ನಿಮ್ಮಿಂದ ಆಸ್ತಿ ಪಡೆಯಲಿಕ್ಕೆ ಮದುವೆ ನಾಟಕ ಆಡಿದ್ದಾಳೆ. ನನ್ನ ಮಗನ್ನ ಇದಕ್ಕೆ ಬಲಿಪಶು ಮಾಡಿಕೊಂಡಿದ್ದಾಳೆ. ಈಗ ಹೋಗಿ ಎಲ್ಲಾ ಯಾವೋನಿಗೋ ಸುರಿದು, ಅವನ ಜೊತೆ ಲೋಲಾಡ್ತಿ ಮಾಸ್ತಾ ಮೆರೀತಿದ್ದಾಳೆ. ನೀವೆಲ್ಲಾ ಸೇರಿ, ನನ್ನ ಮಗನ ಜೀವನ ಹಾಳು ಮಾಡಿದಿರಿ" ಎಂದು ಕೂಗಾಡಿದರು.

"ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ. ನಾವು ಮದುವೆ ಮಾಡಿ ನಿಮ್ಮ ಮನೆಗೆ ಕಳಿಸಿಕೊಟ್ಟ ಮೇಲೆ ನಮಗು ಅವಳಿಗೂ ಸಂಬಂಧವಿಲ್ಲ" ಎಂದರಾತ.

"ಒಮ್ಮೆ ಬನ್ನಿ ಅಪ್ಪಾ... ಸ್ವಲ್ಪ ಉಗಿದು ಬುದ್ದಿ ಹೇಳಿ. ನಾನು

ನಮ್ಮೂರಿಗೆ ಕರೆದುಕೊಂಡು ಹೋಗ್ತೀವಿ",ಎಂದಳು. ಸುಮನಳ ತಂದೆ ರಾಮರಾಯರು, ಬೀಗಿತ್ತಿಯ ಜೊತೆ ಮಗಳ ಮನೆಗೆ ಬಂದರು.

ಸುಮನ ಬಾಗಿಲು ತೆಗೆದವಳು ತಂದೆಯನ್ನು ನೋಡಿ, "ಓಹೊ ! ಏನಪ್ಪಾ ಅಪರೂಪವಾಗಿ ಹುಡುಕಿಕೊಂಡು ಬಂದಿರಿ" ಎಂದಳು.

ಆತ ಕೋಪದಿಂದ, "ಏನಮ್ಮ ನಿನ್ನ ವ್ಯವಹಾರ ? ಮದುವೆ ಮಾಡಿ ಕೊಟ್ಟ ಮೇಲೆ ಮರ್ಯಾದೆಯಾಗಿ ನಿನ್ನ ಗಂಡನ ಮನೇಲಿ ಸಂಸಾರ ಮಾಡಿ ಕೊಂಡಿರಬಾರದಾ ? ಇಲ್ಲಿ ಬಂದು ಒಂಟಿಯಾಗಿ ಏನು ಮಾಡ್ತಿದ್ದಿ ?" ಎಂದರು.

"ಅದೆಲ್ಲಾ ನನ್ನ ಸ್ವಂತ ವಿಷಯ ಡ್ಯಾಡಿ ? ನಾನು ಆ ಅಂಯೋಗ್ಯ ಗಂಡನ ಜೊತೆ ಸಂಸಾರ ಮಾಡಲ್ಲ ನನ್ನ ಜೀವಮಾನದ ಯಾವ ಆಸೆ ಪೂರೈಸಲಿಕ್ಕೂ ಅವರ ಕೈಲಿ ಸಾಧ್ಯವಿಲ್ಲ. ಇಲ್ಲಿ ನನ್ನ ಮನಸ್ಸಿಗೆ ಶಾಂತಿಯಿದೆ ಒಂಟಿಯಾಗಿ ಇರ್ತೀನಿ" ಎಂದಳು.

"ಏನು ನಿನ್ನ ತಲೆ ಮನಶ್ಯಾಂತಿ ! ಹಳೇ ಚಾಳಿ ಮತ್ತೆ ಮರುಕಳಿಸಿದೆ. ಆ ಅಯೋಗ್ಯನ ಹಿಂದೆ ತಿರುಗ್ತಿದ್ದಿ. ಬಂಗಾರದಂತ ಗಂಡನ್ನ ಬಿಟ್ಟು ಬಂದು ಹೀಗೆ ಮಾಡ್ತಿಕ್ಕೆ ನಿನ್ನ ಬಾಳಿಗೆ ನಾಚಿಕೆ ಆಗಲ್ವಾ ? ಈಗಲು ನಿಮ್ಮತ್ತೆ ಎಲ್ಲಾ ಕ್ಷಮಿಸಿ ನಿನ್ನ ಕರೆದುಕೊಂಡು ಹೋಗ್ತಾರೆ.ಅವರ ಹಿಂದೆ ಹೋಗು"ಎಂದರು.

"ನಾನು ಹೇಗಿದ್ದರೂ ನನ್ನ ಪ್ರಶ್ನಿಸೋ ಅಧಿಕಾರ ನಿಮಗಿಲ್ಲ. ಈಗ ನಾನು ಸ್ವತಂತ್ರಳು" ಎಂದಳು.

"ರಾಜಣ್ಣನಿಗೆ ಹೇಳಿ ನಾಲ್ಕು ಗೂಂಡಗಳನ್ನು ಬಿಟ್ಟು ಅವನ ಕೈಕಾಲು ಮುರಿಸ್ತೀನಿ. ಅವನ ಸ್ಕೂಟರ್ ಸುಟ್ಟು ಹಾಕಿಸ್ತೀನಿ.ಆಸ್ತಿ–ಪಾಸ್ತಿ ನಾನು ಕೊಟ್ಟಿದ್ದು ಅಳಿಯನಿಗೆ. ಮತ್ತಗೆ ಪುಸಲಾಯಿಸಿ ನಿನ್ನ ಹೆಸರಿಗೆ ಮಾಡಿಸಿ ಕೊಂಡಿದ್ದಿ" ತಂದೆ ಏನೋ ಗುಡುಗಾಡಿದರು. ಆವಳು ಯಾವುದಕ್ಕೂ ಸೊಪ್ಪು ಹಾಕಲಿಲ್ಲ. ಇವಳು ತಂದೆಯಿಂದ ಆಸ್ತಿ ಹೊಡೆಯುಲು ಮದುವೆ ಸಂಚು ಹೂಡಿ ಈ ಮದುವೆ ಮಾಡಿಕೊಂಡು ತನ್ನ ಮಗನ ಜೀವನ ಹಾಳು ಮಾಡಿದ್ದಾಳೆಂದು ತಿಳಿಯಿತು. ಆಕೆ ನಿರಾಶರಾಗಿ ಹೊರಟರು.

ಸತೀಶ ನಿರಾಶೆಯಿಂದ, "ಅಷ್ಟು ರಾಜಾ ರೋಷವಾಗಿ ಕೆಟ್ಟು ಕೆರ ಆದೋಳನ್ನ ಕರ್ಕೊಂಡು ಬಂದು ಏನು ಮಾಡಬೇಕಮ್ಮ. ತಮ್ಮ ಕೆಟ್ಟ ಹೆಸರು

ತಪ್ಪಿಸಿಕೊಳ್ಳಲಿಕ್ಕೆ ಆ ತಂದೇನು ನಾವು ಕೇಳಿದ್ದು ಸುರಿವಿದ್ದಾರೆ. ಎಲ್ಲಾ ಠಕ್ಕರೆ" ಎಂದು ವಿಚ್ಛೇದನಕ್ಕೆ ಹಾಕಿದ. ಮೂರು ವರ್ಷ ಎಳೆದಾಡಿ. ಕಡೆಗೆ ಕೋರ್ಟಿನಲ್ಲಿ ವಿಚ್ಛೇದನ ಸಿಕ್ಕಿತು.ಅವಳ ತಂದೆ ಕೊಟ್ಟ ಆ ಮಂಚ,ಹಾಸಿಗೆ, ಸ್ಟೀಲ್ ಪಾತ್ರೆ ಸೆಟ್. ಎಲ್ಲಾ ಅವರ ಮನೆಗೆ ಎಸೆದು ಬಂದ. ಈ ಪ್ರಕರಣ ಆದ ಮೇಲೆ ತಾಯಿ ಆಗಾಗ, "ಸತೀಶಾ....ಕಾವೇರಿ ಹೇಳ್ತಾಳೆ. ಅವರೂರಿನ ಒಂದು ಬಡ–ಕುಟುಂಬದ ಹುಡುಗಿ ಗೋದಾ ಅಂತ ತುಂಬಾ ಮುದ್ದಾಗಿದೆ. ಹುಡುಗಿ ತುಂಬ ಗುಣವಂತೆ. ಅತ್ತೆಗೆ ಕೂಡಿಸಿ ಮಾಡಿಹಾಕೋ ಗುಣವಿದೆ ಯಂತೆ. ಬಡತನ ಕಂಡ ಹುಡುಗಿ, ಯಾವ ದುರಾಶೆ ಇಲ್ಲ, ಒಪ್ಪವಾಗಿ ಸಂಸಾರ ಮಾಡ್ತಾಳಂತೆ" ಎಂದೆಲ್ಲಾ ವರ್ಣಿಸಿದರು.

ಸತೀಶ ಸಿಡುಕಿ, "ಅಮ್ಮ ಮದುವೆ ನ್ನೋ ಹೆಸರೇ ತೆಗಿಯ ಬೇಡಾ. ಮದುವೆ ಹೆಣ್ಣು ಈ ಪದಗಳೇ ನನಗೆ ಅಸಹ್ಯ" ಎಂದಿದ್ದ.

ಆದರೂ ಆಗಾಗ ತಂಗಿ ಮನೆಗೆ ಹೋಗಿ ಬಂದಾಗ ತಾಯಿ, "ಹುಡುಗಿ ತುಂಬಾ ಮುದ್ದಾಗಿದೆ ಕಣೋ......ಒಳ್ಳೆ ವಿನಯವಂತೆ, ಒಳ್ಳೆ ಕೆಲಸವಂತೆ" ಎಂದು ಹೊಗಳಿದಾಗ ಅವನು ಸಿಡುಕಿ, "ಅಮ್ಮ ... ಆರಂಭದ ದಿನಗಳಲ್ಲಿ ಅವಳು ಎಷ್ಟು ಒಳ್ಳೇತನ ತೋರಿ, ನನ್ನ ಮರಳು ಮಾಡಿದ್ದಳು. ಆಮೇಲೆ ಅವಳು ಎಂಥಾ ರಾಕ್ಷಸಿ ಅಂತ ತಿಳಿಯಿತು.ನಾನು ಹೆಣ್ಣುಗಳನ್ನ ನಂಬಲಮ್ಮ. ವಧು ಪರೀಕ್ಷೆಗೆ ಬಂದಾಗ ಇಲಿಗಳಂತಿರತ್ವೆ, ಆಮೇಲೆ ಬಾಲ ಬಿಚ್ಚತ್ವೆ. ನಾನು ಹೆಣ್ಣು ಅನ್ನೋ ಪದಾನ್ನೇ ದ್ವೇಷಿಸ್ತೀನಿ" ಎಂದ. ಆದರೆ ಆರು ವರ್ಷದ ಒಂಟಿತನ ಬೇಸರ ಬಂದಿತ್ತು. ಜೊತೆಗೆ ಅವಳು ವಿವಾಹವಾದ ಸುದ್ದಿ ಬಂದ ಮೇಲೆ ಏನೋ ಒಂದು ಬಗೆ ಕಿಚ್ಚು ಮೂಡಿತ್ತು.

ಹೆಣ್ಣಾದ ಅವಳೇ ಅಷ್ಟು ರಾಜರೋಷವಾಗಿ ವಿವಾಹ ಆದಾಗ ಗಂಡಾದ ತಾನು ಏಕೆ ಒಂಟಿಯಾಗಿರಬೇಕು. ತಾಯಿಗೂ ವಯಸ್ಸಾಯಿತು. ಎಲ್ಲಾ ಕೆಲಸ ತಾನೇ ಮಾಡಿಕೊಂಡು ಒದ್ದಾಡುತ್ತಾಳೆ. ಹಿಂಗಾಗಿ ಮದುವೆಗೆ ಒಪ್ಪಿಗೆ ಸೂಚಿಸಿದ್ದ. ಹುಡುಗಿ ಬಗ್ಗೆ ಯಾವುದೇ ಕನಸುಗಳಾಗಲಿ, ಮಧುರ ಭಾವನೆ ಗಳಾಗಲಿ ಅವನಿಗಿರಲಿಲ್ಲ. ಬೆಳಿಗ್ಗೆ ಐದು ಗಂಟೆಗೆ ಅವರ ಚಿಕ್ಕಪ್ಪ,

ಶ್ರೀ ವೆಂಕಟೇಶೋ ವಾಸುದೇವಃ
ಪ್ರದ್ಯುಮ್ನೋ ಮಿತ ವಿಕ್ರಮಃ

ಎಂದು ಶ್ರೀ ವೆಂಕಟೇಶ ಸ್ತೋತ್ರ ಗಟ್ಟಿ ಧ್ವನಿಯಲ್ಲಿ ಹೇಳಿಕೊಳ್ಳುತ್ತಿರುವುದು ಕೇಳಿಸಿತು. ಚಿಕ್ಕಪ್ಪ ನಾಲ್ಕು ಗಂಟೆ ಬ್ರಾಹ್ಮಿ ಮುಹೂರ್ತದಲ್ಲೆದ್ದು, ನಿತ್ಯ ಬಾಧೆಗಳನ್ನು ತೀರಿಸಿಕೊಂಡು ಎಂಥ ಚಳಿಗಾಲವಾದರೂ ಸರಿ ಬಾವಿಯ ಬಳಿ ನಿಂತು ನಾಲ್ಕಾರು ಕೊಡ ತಣ್ಣೀರು ಸುರಿದುಕೊಂಡು ಗಂಗಾ, ಸಿಂಧು, ಕಾವೇರಿ ಎಂದು ಸಪ್ತ ನದಿಗಳ ಸ್ಮರಣೆ ಮಾಡುತ್ತ ಸ್ನಾನ ಮಾಡಿ ಅಲ್ಲಿಂದ ಮುಂದೆ ಹೂವು, ತುಳಸಿ ಕಿತ್ತು ವಾಗಿಂದ ಹಿಡಿದು ಪೂಜೆ ಪ್ರಾರಂಭಿಸುವ ವರೆಗೂ ಬಗೆ ಬಗೆ ಸ್ತೋತ್ರಗಳು. ಆಮೇಲೆ ವೇದ ಮಂತ್ರಗಳನ್ನು ಪಠಿಸುತ್ತ, ಶಾಸ್ತ್ರೋಕ್ತವಾಗಿ ಪೂಜೆ ಅಭಿಷೇಕ ದೇವರ ಸಂಪುಟ ತೆಗೆದು ಸಾಲಿಗ್ರಾಮ ಶಂಖಗಳನ್ನು ಹಿಡಿದುಕೊಂಡು ಬಿಟ್ಟರೆ ಇವರಿಗೆ ಪ್ರಪಂಚವೇ ಮರೆತು ಹೋಗುತ್ತೆ" ಎಂದು ಕಾವೇರಮ್ಮ ಹಾಸ್ಯ ಮಾಡುತ್ತಿದ್ದರು.

ಆ ಮನೆಯಿಂದ ಮೊಮ್ಮಗ ಹಸಿ ಹಾಲು ತಂದು ಅಭಿಷೇಕಕ್ಕೆ ನೀಡುತ್ತಿದ್ದ. ಮಂಗಳ ಮಡಿಯಲ್ಲಿ ಕಾಸಿದ ಹಾಲು ಸಕ್ಕರೆ, ಗಸಗಸೆ ಪಾಯಸ,ಇಲ್ಲ ತುಂಬಾ ತುಪ್ಪ ಹಾಕಿ ಮಾಡಿದ ಸಿರಾ ಏನಾದರೂ ತಂದು ಕೊಡುತ್ತಿದ್ದಳು. ಅದನ್ನೇ ನೈವೇದ್ಯ ಮಾಡುತ್ತಿದ್ದರು.

ಕಾವೇರಮ್ಮ ಮಡಿಯಲ್ಲಿ ಅಡಿಗೆ ಮಾಡುತ್ತಿದ್ದರು. ಪಾತ್ರೆ ತೊಳಿ, ಬಟ್ಟೆ ಒಗಿ ಇತ್ಯಾದಿ ಕೆಲಸಕ್ಕೆ ಒಬ್ಬ ಬ್ರಾಹ್ಮಣರ ಹುಡುಗಿಯನ್ನು ಇಟ್ಟುಕೊಂಡಿದ್ದರು.

ಸೊಸೆ ಚಂದ್ರಿಕಾ ಯಾವ ಕೆಲಸವನ್ನು ಮಾಡುತ್ತ ಇರಲಿಲ್ಲ. ತನ್ನ ಮಗುವನ್ನು ನೋಡಿಕೊಳ್ಳುವುದು ಆ ಊರಲ್ಲಿದ್ದ ಮಹಿಳಾ ಸಮಾಜಕ್ಕೆ ಅವಳೇ ಅಧ್ಯಕ್ಷಿಣಿ.ಮಹಿಳಾ ಸಮಾಜಕ್ಕೆ ಹೋಗಿ ಬರುವುದು ವೀಡಿಯೋದಲ್ಲಿ ಸಿನಿಮಾ ತರಿಸಿ ಹಾಕಿ ನೋಡುತ್ತಿರುವುದು. ಅವಳಿಗೆ ಕಾವೇರಮ್ಮ ಯಾವ ಆಜ್ಞಾಪನೆಯೂ ಮಾಡುತ್ತಿರಲಿಲ್ಲ.

"ಬ್ರಾಹ್ಮಿ ಮುಹೂರ್ತದಲ್ಲೆದ್ದು, ಪೂಜೆ ಪುರಸ್ಕಾರ ವೇದ ಪಠಣಾ ಮಾಡಿ, ಬ್ರಾಹ್ಮಣತ್ವ ಕಾಪಾಡಿಕೊಂಡು ಇರೋದ್ರಿಂದಲೇ ಸುತ್ತ ಹತ್ತೂರಲ್ಲಿ ಗೌಡರು, ಎಂ.ಎಲ್.ಎ.ಗಳಿಂದ ಹಿಡಿದು ಎಲ್ಲರೂ ಅವರಿಗೆ ಕೈ ಮುಗಿತಾರೆ. ನಿಮ್ಮ ಕೈಲಿ ಪೂಜೆ, ಪುನಸ್ಕಾರ ಮಾಡಿದರೆ ನಮ್ಮ ಮನೆ ಅಭಿವೃದ್ಧಿ ಆಗತ್ತೇ ಅಂತಾರೆ" ಎನ್ನುತ್ತಿದ್ದರು. ಅವರ ಮಾತು ನಿಜವೂ ಆಗಿತ್ತು.

ಒಳ್ಳೆ ಗೌರವರ್ಣದ ಎತ್ತರ ನಿಲುವಿನ ಆತನ ಮುಖದಲ್ಲಿ ತೇಜಸ್ಸು ಎದ್ದು ಕಾಣುತ್ತಿತ್ತು. ಯಾವಾಗಲು ಕೆನೆ ಬಣ್ಣದ ರೇಶ್ಮೆ ಪಂಚೆ, ಜರಿ ಕೆಲಸ ಮಾಡಿದ ಕೆಂಪು ರೇಶ್ಮೆ ಶಾಲಿನಲ್ಲಿ, ದ್ವಾದಶ ನಾಮ ಮುದ್ರೆಗಳು, ಜುಟ್ಟು, ಜನಿವಾರದಲ್ಲೂ ಭವ್ಯವಾಗಿ ಕಾಣುತ್ತಿದ್ದರು.

ಭವ್ಯ ಸ್ವರೋಪೋ_ ಭವ ದುಃಖ ದೂರೋ ಎಂಬ ಶ್ರೀರಾಘವೇಂದ್ರ ಗುರುಗಳ ಸ್ತೋತ್ರದ ಈ ಸಾಲುಗಳು ಅವರನ್ನು ನೋಡಿದಾಗ ನೆನಪಾಗು ತ್ತಿತ್ತು. ದಾನಾ ಚಿಂತೆಗಳಿಂದ, "ಜೋಯಿಸರೇ......" ಎಂದು ಕೂಗಿ ಬಂದವರಿಗೆ ನವಗ್ರಹ ಪೂಜೆ, ಗೃಹ ಶಾಂತಿ, ಭೂಮಿ ಪೂಜೆ, ಸತ್ಯನಾರಾಯಣ ಪೂಜೆ ಯಾವುದಾದರೂ ದೇವರುಗಳಿಗೆ ಮಂಡಲ ಪೂಜೆ ಸೂಚಿಸೂತ್ತಿದ್ದರು. ಅದೆಲ್ಲಾ ಮಾಡಿದಾಗ. ಅವರ ಕಾರ್ಯ ನಿಜಕ್ಕು ಜಯವಾಗುತ್ತಿತ್ತು. ಹೀಗಾಗಿ ಜನ ಅವರನ್ನು ನಂಬುತ್ತಿದ್ದರು. ಅವರು ಪೂಜೆ ಮುಗಿಸಿ, ನೈವೇದ್ಯದ ಹಾಲು ಅಥವ ಪ್ರಸಾದ ಸ್ವೀಕರಿಸಿ. ಜಗುಲಿಗೆ ಬರುವುದರೊಳಗೆ ಒಂದು ತಂಡ ಜನ ಕಾದಿರುತ್ತಿದ್ದರು.

ಅವರಿಗೆಲ್ಲ ಪರಿಹಾರ ಹೇಳಿ. ಕಳಿಸಿ. ಹನ್ನೊಂದು ಗಂಟೆಗೆ ದೇವಾಲಯಕ್ಕೆ ಹೋಗಿ ಬಂದು, ಅಲ್ಲಿ ಅಳಿಯ, ಶ್ರೀಗೋಪಾಲಕೃಷ್ಣ, ಗಣಪತಿಗೆ, ಶ್ರೀಲಕ್ಷ್ಮಿ ಅಮ್ಮನವರಿಗೆ ನೈವೇದ್ಯ ಮಹಾಮಂಗಳಾರತಿ ಮಾಡಿದ್ದು ಕಂಡು, ತೀರ್ಥ ಪ್ರಸಾದ ಸ್ವೀಕರಿಸಿ ಮನೆಗೆ ಬಂದು ಕಾವೇರಮ್ಮ ಮಡಿಯಲ್ಲಿ ಬಡಿಸಿದ್ದು ಉಣ್ಣುನರು

ಭೋಜನ ರಸಿಕರಾದ ಅವರಿಗೆ ದಿನ ನಿತ್ಯದ ಊಟಕ್ಕು ನಾಲ್ಕಾರು ಬಗೆ ಪಲ್ಯಗಳು, ಚಟ್ನಿ, ರಾಯತ ತೊವ್ವೆ ಇರಬೇಕು. ಯಾವುದೋ ತರಕಾರಿಯಲ್ಲಿ ಏನೋ ಒಂದು ಮಾಡಿಡ ಕೂಡದು. ಪುದೀನಾ ಚಟ್ನಿ, ಹೀರೆಕಾಯಿ ಚಟ್ನಿ, ದಂಡಿನ ಸೊಪ್ಪಿನ ಮುದ್ದೆ ಪಲ್ಯ ಬೂದುಗುಂಬಳ ಕಾಯಿ ಮಜ್ಜಿಗೆ ಹುಳಿ, ಸೌತೆಕಾಯಿ ರಾಯಿತ ಬೆಂಡೆಕಾಯಿ, ಗೊಜ್ಜು, ಹೀಗೆ ಆಯಾ ತರಕಾರಿಯಲ್ಲಿ ನಿರ್ದಿಷ್ಟ ವ್ಯಂಜನ ಇರಬೇಕು. ಹಸಿ ಕೊಬ್ಬರಿ ಚಟ್ನಿ ಹುರುಳಿಕಾಯಿ ಪಲ್ಯ, ಆಲುಗಡ್ಡೆ ಚಿಪ್ಸ್ ಇವು ಮೂರಂತು ಇರಲೇಬೇಕು. ಅಚ್ಚೇರು ಅನ್ನ.....ನಾಲ್ಕು ಚಪಾತಿ ಮುಗಿಸುತ್ತಿದ್ದ.....ಜೋಯಿಸರು ರಾತ್ರಿ

ಊಟ ಮಾಡುತ್ತಿರಲಿಲ್ಲ. ಇದಲ್ಲದೇ ವರ್ಷದಲ್ಲಿ ನೂರು ಊಟ ಮನೆಯಿಂದ ಹೊರಗೆ.

ಸತೀಶ ಎದ್ದು ಬಂದ, "ರಾತ್ರಿ ಹನ್ನೆರಡು ಗಂಟೆಗೆ......ಬಂದೆವಪ್ಪಾ. ನೀನು ನಿದ್ರೆ ಮಾಡಿದ್ದಿ ಅನಿಸತ್ತೆ. ಈ ಪೂಜೆ ಮುಗಿಸಿ ಒಂಭತ್ತು ಗಂಟೆಗೆ ಹೋಗಬೇಕು. ಅವರ ಮನೇಲಿ ಷಷ್ಟ್ಯಬ್ಧಿ ಕಾರ್ಯಕ್ರಮ ಇದೆ" ಎಂದು.

"ನಾನೂ ಎಂಟು ಗಂಟೆ ಬಸ್ಸಿಗೆ ಹೋಗಬೇಕು ಚಿಕ್ಕಪ್ಪಾ. ಅಮ್ಮನ್ನ ಬಿಡಲಿಕ್ಕೆ ಬಂದಿದೆ. ಅಮ್ಮ ಇಲ್ಲಿ ಹದಿನೈದು ದಿನಾ ಇರ್ತ್ತಾಳೆ. ನನಗೆ ರಜಾ ಇಲ್ಲ ಹೋಗ್ತೀನಿ" ಎಂದ.

"ಲೇ ಇವಳೇ......ಸತೀಶ ಎಂಟು ಗಂಟೆಯ ಬಸ್ಸಿಗೆ ಹೋಗ್ತಾನಂತೆ. ಊಟ ಮಾಡಿಸಿ ಕಳಿಸು" ಎಂದು ಕೂಗಿದರು. "ಸತೀಶಾ ಬೇರೇನಾ ? ರಮೇಶಾ ಬೇರೇನಾ ? ಊಟ ಇಲ್ಲದೆ ಕಳಿಸ್ತೀನಾ ? ಮುಖ ತೊಳೆದು ಬಾರೋ ಕಾಫಿ ಕೊಡ್ತೀನಿ. ಚಿಕ್ಕಮ್ಮ ಕೂಗಿದರು" ಸತೀಶ ಮುಖ ತೊಳೆದು ಬಂದ. ಆಕೆ ಕಾಫಿ ನೀಡಿ, "ಬಾರಕ್ಕ ಹೇಳಿದಳು......ನೀನು ಮದುವೆಗೆ ಒಪ್ಪಿದ್ದಿ ಅಂತ. ನೀನು ಒಪ್ಪಿದರೆ ಎಂಟು ಗಂಟೆ ಒಳಗೆ ಹುಡುಗೀನ್ನ ಕರಿಸ್ತೀನಿ" ಎಂದರು.

"ನನಗೇನು ಹುಡುಗೀನ್ನ ನೋಡೋ ಉಲ್ಲಾಸ ಇಲ್ಲಮ್ಮ. ಅವರು ಒಪ್ಪಿದರೆ ನೀನೇ ಎಲ್ಲಾ ಸೆಟ್ ಮಾಡು. ನಾನು ಬಂದು ಹಸೆಮಣೆ ಮೇಲೆ ಕೂತ್ಕೋತೀನಿ" ಎಂದ.

"ಹಾಗಿದ್ರೆ ಇವರ ಹತ್ತಿರವೇ ಒಳ್ಳೆ ದಿನ ತೋರಿಸಿ ಒಂದಿನ ನಮ್ಮನೇಲಿ ಮದುವೆ ಆಯ್ತು ಅನಿಸ್ತೀನಿ. ಹುಡುಗಿ ತಂದೆ-ತಾಯಿ ಬಡವರು. ನಾಲ್ಕು ಹೆಣ್ಣು ಮಕ್ಕಳ ಮದುವೆ ಮಾಡಿ ಸೋತಿದ್ದಾರೆ. ಇವಳಿಗೆ ಇಪ್ಪತ್ನಾಲ್ಕು ವರ್ಷ ಗೋದಾ ಅಂತ ಹೆಸರು. ತಂದೆ-ತಾಯಿ ತೀರ ಮುದುಕರು. ಒಂದು ಎಮ್ಮೆ ಸಾಕಿ, ತಮ್ಮನ ಕೈಲಿ ಹಾಲು ಮಾರಿಸಿ, ಜೀವನಾ ಮಾಡ್ತಿದ್ದಾಳೆ. ತಮ್ಮ ಎಸ್ಸೆಲ್ಸಿ ಓದ್ತಿದ್ದಾನೆ" ಎಂದು ಹೇಳಿದರು. ಅವನಿಗೆ ಆ ವಿವರಗಳು ಕೇಳಿ ಏನೇನು ಉತ್ಸಾಹ ಮೂಡಲಿಲ್ಲ. ಆರು ಜನ ಮಕ್ಕಳನ್ನು ಹೊಂದಿದ ಬಡ-ಕುಟುಂಬದ ತಂದೆ ಅಂಗಡಿ ಕೆಲಸಗಾರ. ಇವಳು ಐದನೆಯ ಮಗಳು ಇವಳಿಗೊಬ್ಬ ತಮ್ಮ ಬೇರೆ ಇದ್ದಾನೆ. ಇಷ್ಟೇ ಅವನಿಗೆ ತಿಳಿದದ್ದು.

ಸ್ನಾನಾ ಮುಗಿಸಿ ಎಂಟು ಗಂಟೆಗೆ ಬಂದಾಗ ಚಿಕ್ಕಮ್ಮ ಬೆಳ್ಳಿ ತಟ್ಟೆಯಲ್ಲಿ ಬಿಸಿಬೇಳೆಭಾತ್ ಹಾಗು ಬೆಳ್ಳಿಯ ಲೋಟಾದಲ್ಲಿ ಗಸಗಸೆ ಖೀರು ಹಾಕಿದ್ದರು.

"ಏನಿದೆಲ್ಲಾ ಚಿಕ್ಕಮ್ಮ. ಇಷ್ಟು ಬೇಗ ಇದೆಲ್ಲಾ ಅಡಿಗೆ ?" ಎಂದ. "ರಾತ್ರಿಗೆ ಕ್ಯಾರಿಯರ್‌ನಲ್ಲಿ ಇದೇ ಬಿಸಿಬೇಳೆ ಹುಳಿಅನ್ನ ಬೆಣ್ಣೆ ಹಾಕಿ ಕಲಿಸಿದ ಮೊಸನ್ನ ಹಾಕಿದ್ದೀನಿ, ಶುಂಠಿ, ಹಸಿಮೆಣಸಿನ ಕಾಯಿ, ಕೊತ್ತಂಬರಿಸೊಪ್ಪು ಹಾಕಿ ಒಗ್ಗರಣೆ ಹಾಕಿದ್ದೀನಿ" ಎಂದರು.

"ನೋಡು ಚಟ್ನಿ ಪುಡಿ, ತೊಕ್ಕು, ನಿಂಬೆಕಾಯಿ ಉಪ್ಪಿನಕಾಯಿ, ಅಮಟೆಕಾಯಿ, ನಲ್ಲಿಕಾಯಿ, ಹಸಿಮೆಣಸಿನಕಾಯಿ, ನಿಂಬೆರಸದಲ್ಲಿ ನೆಂದು ಉಪ್ಪಿನಕಾಯಿ ಇದೆ. ಮೆಂತ್ಯ ಹಿಟ್ಟು, ಕಡಲೆ ಪುಟಾಣಿ ಹಿಟ್ಟು ಇದೆ. ಅನ್ನ ಒಂದು ಮಾಡ್ಕೊ. ಮೊಸರು ಹೆಪ್ಪು ಹಾಕ್ಕೊ. ವಾರ ವಾರ ಇಲ್ಲಿ ಬಂದು ಬಿಡು. ಹೋಟೆಲೂಟಾ ಮಾಡಬೇಡಾ" ಎಂದರು. "ಆಗ್ಲಿ ಚಿಕ್ಕಮ್ಮ....." ಎಂದು ಊಟ ಮಾಡಲು ಕುಳಿತ. ಆಲೂಗಡ್ಡೆ ಚಿಪ್ಸ್, ಅರಳು ಸಂಡಿಗೆ ಹಾಕಿದರು.

ಆ ಎಂಟು ಗಂಟೆ ಬೆಳಗಿನಲ್ಲಿಯೂ ಪಟ್ಟಾಗಿ ಊಟ ಮಾಡಿ ಚಿಕ್ಕಮ್ಮ ಡಬ್ಬಿಗಳನ್ನು ನೀಟಾಗಿ ಒಂದು ಪ್ಲಾಸ್ಟಿಕ್ ಬುಟ್ಟಿಯಲ್ಲಿ ಜೋಡಿಸಿದ್ದರು. ಆ ಪ್ಲಾಸ್ಟಿಕ್ ಬುಟ್ಟಿ ಹಿಡಿದು ಹೊರಟ. ಬೀಳ್ಕೊಡುವಾಗ ಆಕೆ ಬಾಗಿಲ ಬಳಿ ಬಂದು, "ಏನಪ್ಪಾ ಅಕ್ಕ ಹೇಳಿದಳು ಅನ್ನೋ ಧೈರ್ಯದಲ್ಲಿ ಮುಂದು ವರೀತೀನಿ. ಒಪ್ಪಿಗೆ ತಾನೆ ?" ಎಂದರು.

"ಎಲ್ಲಾ ನಿನಗೆ ಒಪ್ಪಿಸಿದ್ದೀನಿ" ಎಂದು ಚುಟುಕಾಗಿ ಹೇಳಿ ಹೊರಟುಬಿಟ್ಟ. ಊರಿಗೆ ಬಂದಾಗ ಹನ್ನೆರಡೂವರೆ. ಅಲ್ಲಿಂದಲೇ ಆಫೀಸಿಗೆ ಹೊರಟ. ಆಫೀಸಿನಲ್ಲಿ ಎದ್ದ ಒಂದು ಕಳವಳಕಾರಿ, ಸುದ್ದಿ, ಅವನನ್ನು ಅಲುಗಿಸಿತ್ತು. ಆಫೀಸ್ ಈಗೆರಡು ವರ್ಷದಿಂದ ನಷ್ಟದಲ್ಲಿ... ನಡೆಯುತ್ತಿದೆ. ಕಬ್ಬಿಣದ ಸ್ಕ್ರಾಪ್ ಮಾರಾಟ. ಆಫೀಸಿನ ಕೆಲವರು, ಸೈಡ್ ಬಿಸಿನೆಸ್ ಮಾಡಿಕೊಂಡು ಬಿಟ್ಟಿದ್ದಾರೆ. ಸಂಸ್ಥೆ ವ್ಯಾಪಾರಕ್ಕೆ ಕೆಲವರಿಂದ ನಷ್ಟ ಆಗಿದೆ. ಕೆಲವರು ಕಣ್ಣು ಮುಚ್ಚಾಲೆ ಆಡ್ತ ತಮ್ಮ ಸಂಬಂಧಿಕರ ಹೆಸರು ತೋರಿಸಿದ್ದಾರೆ. ಕೆಲವರು ನಿರ್ಭಯವಾಗಿ ತಮ್ಮ ಕಂಪನಿಯಿಂದ ದೂರ ಸರಿದಿದ್ದಾರೆ. ಕಬ್ಬಿಣದ

ಮಾರಾಟದಲ್ಲಿ ಕಂಪನಿಗೆ ಭಾರಿ ಹೊಡೆತ ಬಿದ್ದಿದೆ. ಜಿಲ್ಲಾ ಶಾಖೆ ಮುಚ್ಚಿ ಬಿಟ್ಟು ಬೆಂಗಳೂರಿನ ಹೆಡ್ ಬ್ರಾಂಚ್ ಮಾತ್ರ ನಡೆಸುವುದಾಗಿಯೂ, ಕೆಲವರನ್ನು ಮಾತ್ರ ಬೆಂಗಳೂರು ಆಫೀಸಿಗೆ ಕರೆದೊಯ್ಯುವುದು ಎಂದು ನಿರ್ಧರಿಸಲಾಗಿದೆ" ಎಂದು ತಿಳಿಯಿತು.

ಈ ವಿಷಯ ತಿಳಿದಾಗ ಚಿಂತಾಕ್ರಾಂತನಾದ ಸತೀಶ. ಉದ್ಯೋಗಕ್ಕೆ ಸೇರಿ ಎಂಟು ವರ್ಷ ಆಗಿತ್ತು. ಆ ಸಂಬಳವೇ ತಮಗೆ ಆಧಾರ. ಆ ದಿನವೇ ಮುಖ್ಯ ಆಫೀಸರ್ ಹೇಳಿ ಕಳಿಸಿ, "ಸಂಸ್ಥೆ ನಿಮ್ಮಂಥಾ ನಿಷ್ಠಾವಂತ ಕೆಲಸಗಾರರನ್ನ ಖಂಡಿತ ಕೈ ಬಿಡಲ್ಲ. ನಿಮಗೇನು ಭಯವಿಲ್ಲ" ಎಂದು ನುಡಿದರು.

ಅವನಿಗೆ ಸ್ವಲ್ಪ ಸಮಾಧಾನವಾಯಿತು. ಮನೆಗೆ ಬಂದು ಕಾಫೀ ಮಾಡಿಕೊಂಡ. ಪಕ್ಕದ ಮನೆಯವರು ಹಾಲು ಹಾಕಿಸಿಕೊಂಡು ಇದ್ದರು. ಕಾಫಿಗಾಗಿ ಉಳಿದ ಹಾಲು ಹೆಪ್ಪು ಹಾಕಿದ. ಚಿಕ್ಕಮ್ಮ ಕೊಟ್ಟ ಬಿಸಿಬೇಳೆ ಭಾತ್, ಮೊಸರನ್ನ ಎಲ್ಲಾ ಚಟ್ನಿ ಪುಡಿಯೊಡನೆ ತಿಂದ. ಅದನ್ನೆಲ್ಲಾ ತೊಳೆಯುವಾಗ ಅವನಿಗೆ ಬೇಸರ ಉಕ್ಕಿ ಬಂತು. ಎಷ್ಟು ದಿನ ಈ ಒಂಟಿತನ ? ಒಂದು ಹೆಣ್ಣು ಜೀವ ಜೊತೆಗಿದ್ದರೆ ಎನಿಸಿತು. ಗೋದಾ ಕೆಲಸವಂತೆ. ವಿನಯವಂತೆ ಎಂದಿದ್ದರು. ಮೂರು ವರ್ಷದಿಂದ ಆ ಹುಡುಗಿ ವಿವಾಹವಾಗಿಲ್ಲ. ದೇವರು ತನಗಾಗಿಯೇ......ಆ ಹುಡುಗಿಯನ್ನು ನಿರ್ಮಿಸಿರಬಹುದೆ ? ಎನಿಸಿತು.

ರಾತ್ರಿ ಎಲ್ಲಾ ಚಿತ್ರ ಕನಸು. ಏನೋ ಆಲೋಚನೆ, ಅಶಾಂತಿಯಿಂದ ನಿದ್ರೆ ಬಂದಿತು. ಬೆಳಿಗ್ಗೆ ಹಾಲಿನವನು ಬಂದು, "ಸಾಬ್......" ಎಂದು ಕೂಗಿದಾಗ ಎದ್ದ.

ಹಾಲು ತೆಗೆದುಕೊ......ಕಾಫಿ ಮಾಡು. ಅನ್ನ ಮಾಡು......ಕೆಲವು ಬಟ್ಟೆ ಬಟ್ಟಲು ತೊಳೆದುಕೊ......ಇದರಲ್ಲೇ ಸಮಯ ಹೋಯಿತು. ಅಂತೂ ಮೊಸರು, ಚಟ್ನಿಪುಡಿ, ಉಪ್ಪಿನಕಾಯಿ ಊಟ ಮಾಡಿ ಎದ್ದ.

ಎಂಟು ವರ್ಷದ ತನ್ನ ಸಂಪಾದನೆ ತಾಯಿ ಒಂದು ಚೂರು ಪೋಲು ಮಾಡಿರಲಿಲ್ಲ. ಅವನ ಸ್ವಂತ ಖರ್ಚೆಂದರೆ, ಇನ್ನೂರು ರೂ. ಮನೆ ಖರ್ಚೆಂದು ಸಾವಿರ ರೂ. ಬರುತ್ತಿತ್ತು. ಮೊದಲು ಮೂರು ವರ್ಷ ಅವನ ಸಂಬಳ ಸಾವಿರ

ದೆಂಟು ನೂರು. ಆಗ ಆಕೆ ವರ್ಷಕ್ಕೆ ಆರೇಳು ಸಾವಿರ ಉಳಿಸಿ. ಮನೆ ರಿಪೇರಿ ಮಾಡಿಸಿದ್ದರು. ಮನೆ ಅವನ ತಂದೆಗೆ ಯಾರಿಂದಲೋ ದಾನೆ ಬಂದದ್ದು ಮಣ್ಣಿನ ಮನೆ. ಗವಾಕ್ಷಿ... ನೂರಾರು ಚಿತ್ರಗಳು. ಮಳೆ ಬಂದರೆ ಸೋರುವ ಮನೆ. ನಾಳೆ ಮದುವೆಯಾಗೋ ಹುಡುಗಾ......

"ಈ ಮನೆ ನೋಡಿದರೆ ಯಾರು ಹೆಣ್ಣು ಕೊಡ್ತಾರಪ್ಪಾ ?" ಎಂದರೆ ಮನೆ ಅಭಿವೃದ್ಧಿ ಮಾಡಿಸಿದ್ದರು. ಆಮೇಲೆ ಅವನಿಗೆ ಸೂಪರಿಂಡೆಂಟ್ ಪೋಸ್ಟ್ ಸಿಕ್ಕಿ ಸಂಬಳಾ ಜಾಸ್ತಿ ಆಯಿತು. ಆಗ ಆತ ತಂಗಿ ಸಹಾಯದಿಂದ ನಲವತ್ತು ಸಾವಿರ ಸಾಲಾ ಪಡೆದು ಮನೆ ಭದ್ರ ಮಾಡಿಸಿ ನಲ್ಲಿ ಹಾಕಿಸಿಕೊಂಡರು. ಬೀದಿ ನಲ್ಲಿಗೆ ಹೋಗುವುದು ತಪ್ಪಿತು. ಪುಟ್ಟ ಬಾಲ್ಕನಿ. ದಾಟಿ ಬಂದರೆ ಹಜಾರ. ನುಣುಪಾದ ಕೆಂಪು ಸಿಮೆಂಟು ಹಾಸಿನ ನೆಲ. ಗೋಪಿ ಸುಣ್ಣಾ ಬಳೆದ ತಿಳಿ ಹಳದಿ ಗೋಡೆಗಳು.

"ಮನೆ ಈಗ ಅರಮನೆ ಆಯ್ತಪ್ಪಾ....." ಎಂದು ಆಕೆ ಹಿಗ್ಗಿ ಹೀರೆಕಾಯಾಗಿದ್ದರು......ಅಲ್ಪತೃಪ್ತರಾದ ಆಕೆ ಹಜಾರದಿಂದ ಎಡ ತುದಿಗೆ ಸಣ್ಣ ಓಣಿ ಹಾದು ಹೋದರೆ ಬಚ್ಚಲ ಮನೆ. ಆದರೆ ಪಕ್ಕ ಶೌಚಗೃಹ, ಅಡಿಗೆ ಮನೆ, ಬಚ್ಚಲ ಮನೆಗಳಲ್ಲಿ ನಲ್ಲಿ ಇದ್ದವು. ಬೇಸಿಗೆಯಲ್ಲಿಯೂ ಬಂದಷ್ಟು ನೀರು ತಾಯಿ ಮಗ ಇಬ್ಬರಿಗೆ ಸಾಕಾಗುತ್ತಿತ್ತು. ಕಷ್ಟ ಜೀವಿಯಾದ ತಾಯಿ ಇರುವುದಿಬ್ಬರು ನಮಗೆ ಏಕೆ ಕೆಲಸಗಾರರು...... ಎಂದು ಪಾತ್ರೆ, ಬಟ್ಟೆ ಎಲ್ಲಾ ತಾವೇ ಮಾಡಿಕೊಳ್ಳುತ್ತಿದ್ದರು. ಮಧ್ಯೆ ಸುಮನಳ ಜೊತೆ ಮದುವೆ. ಒಂದು ತಿಂಗಳ ದಾಂಪತ್ಯ ಜೀವನ......ಆರ್ಥಿಕವಾಗಿ ಇದರಿಂದ ಅವನಿಗೆ ಲಾಭವೂ ಇಲ್ಲ ನಷ್ಟವೂ ಇಲ್ಲ. ಅವಳ ಒಡವೆ, ವಸ್ತ್ರ ಎಂದವನು ವಿಶೇಷವಾಗಿ ಏನಕ್ಕು ಖರ್ಚು ಮಾಡಿರಲಿಲ್ಲ. ಅವರಪ್ಪ ಕೊಟ್ಟ ಹಣ, ಒಡವೆ, ಎಲ್ಲಾ ಅವಳೇ ತೆಗೆದುಕೊಂಡು ಹೋದಳು. ಸ್ಟೀಲ್ ಸಾಮಾನು, ಬೆಳ್ಳಿ ಸಾಮಾನು, ತನಗೆ ಕೊಟ್ಟ ಡ್ರೆಸ್, ವಾಚು, ಉಂಗುರ ಎಲ್ಲಾ ತಾನೇ ಒಂದು ದಿನ ಹೋಗಿ ಅವರ ಮನೆಗೆ ಎಸೆದು ಬಂದಿದ್ದ. ಈ ವರ್ಷ ತಾಯಿ ಸಂತಸದಿಂದ, "ಮನೆ ರಿಪೇರಿ ಸಾಲ ಈ ಸಲ ಏಪ್ರಿಲ್‌ಗೆ ತೀರುತ್ತಪ್ಪಾ, ನೀನೊಪ್ಪಿದರೆ ಇನ್ನೊಂದು ಮೂವತ್ತು ಸಾವಿರ ರೂ. ಸಾಲ ಮಾಡಿ, ಹಿಂದುಗಡೆ ಇರೋ ಜಾಗದಲ್ಲಿ ಎರಡು ಕೋಣೆ, ಒಂದು ಬಚ್ಚಲ

ಮನೆಯನ್ನು ಕಟ್ಟಿಸಿದರೆ, ಯಾರಾದರೂ ಬಾಡಿಗೆಗೆ ಬರ‍್ತಾರೆ. ತಿಂಗಳಿಗೆ ಒಂದು ಮೂನ್ನೂರು ರೂ. ಬರುತ್ತೆ" ಎಂದಿದ್ದರು.

ಹಿಂದುಗಡೆ ಒಂದು ಚಿಕ್ಕ ಮನೆಗಾಗುವಷ್ಟು ಜಾಗವಿತ್ತು. ಮೊದಲಿನ ಸಾಲ ಬಡ್ಡಿ ಸಮೇತ ತೀರಲು ಐದು ವರ್ಷ ಹಿಡಿಸಿತ್ತು.

"ಏಪ್ರಿಲ್ ಬರಲಿ ನೋಡೋಣ" ಎಂದಿದ್ದ. ಈಗ ಈ ಪ್ರೈವೇಟ್ ಕಂಪನಿಯ ಉದ್ಯೋಗವೇ ಅಲುಗಾಡುತ್ತ ಇದೆ. ತಮ್ಮಂಥಾ ಕೆಲವು ಕೆಲಸಗಾರರಿಗೆ ಭಯವಿಲ್ಲ ಎಂದು ಡೈರೆಕ್ಟರ್ ಅಭಯ ಸೂಸಿದ್ದಾರೆ. ಆದರೆ ಹೇಗೊ ಏನೊ ? ಯೋಚಿಸುತ್ತ ಖಿನ್ನನಾದ.

"ಅಣ್ಣಾವರೇ......" ಎಂದು ಕೂಗಿದ ಸದ್ದಾಯಿತು. ಹೋಗಿ ನೋಡಿದ. ಮಂಗಳಾನ ಮೈದುನಾ ಗೋಪಾಲ.

"ದೊಡ್ಡಮಾವರು ಚಪಾತಿ ಕಳಿಸಿದ್ದಾರೆ. ಚಟ್ನಿ, ಪಲ್ಯ ಇಷತ್ತಿಗೆ ಆಗೋ ಅಷ್ಟಿದೆ. ಚಪಾತಿ ನಾಲ್ಕು ದಿನಗಳ ಕಾಲ ತಿನ್ನೋ ಅಷ್ಟಿದೆ" ಎಂದು ಹೇಳಿ ದೊಡ್ಡ ಅಲ್ಯುಮಿನಿಯಂ ಡಬ್ಬ ಇಟ್ಟು ಹೋದ.

ಕೊಬ್ಬರಿ ಚಟ್ನಿ. ಆಲುಗಡ್ಡೆ, ಹುರುಳಿಕಾಯಿ ಹಾಕಿ ಮಾಡಿದ ಪಲ್ಯ, ನಾಲ್ಕು ಚಪಾತಿ ಜೊತೆ ಇಟ್ಟುಕೊಂಡು ತಿಂದ. ಇನ್ನು ಹತ್ತು ಹನ್ನೆರಡು ಚಪಾತಿ ಇತ್ತು.

ಇನ್ನೊಂದೆರಡು ಮೂರು ದಿನ ಬೆಳಗ್ಗೆ ಮಾತ್ರ ಅನ್ನ ಮಾಡಿಕೊಂಡರೆ ಸಾಕು. ರಾತ್ರಿ ಚಪಾತಿ, ಚಟ್ನಿಪುಡಿ, ತೊಕ್ಕು ಮಾಡಿಕೊಂಡರೆ ಸಾಕು" ಎಂದುಕೊಂಡ. ಮೂರು ನಾಲ್ಕು ದಿನ ಕಳೆಯುವುದರಲ್ಲಿ ಬೇಸರವಾಯಿತು. ಶುಕ್ರವಾರ ಆಫೀಸ್ ಮುಗಿಸಿ ಶನಿವಾರ ರಜೆ ಹಾಕಿ, ಚಿಕ್ಕಮ್ಮನ ಊರಿಗೆ ಬಂದ.

"ಬಾ.... ಬಾ.... ಶುಕ್ರವಾರ ಬಂದಿದ್ದಿ. ಶ್ರೀಲಕ್ಷ್ಮಿ ದರ್ಶನ ಮಾಡಿಬಿಡು" ಚಿಕ್ಕಮ್ಮನ ಮನೆ ಪ್ರವೇಶಿಸುತ್ತಿದ್ದಂತೆಯೆ, ಕಾವೇರಮ್ಮ ನಗುತ್ತ ದೊಡ್ಡ ಧನಿಯಲ್ಲಿ ಹೇಳಿದಳು.

"ನೋಡಮ್ಮ ಗೋದಾಲಕ್ಷ್ಮಿ ಹುಡುಗನ್ನ ನೋಡದೇ ಮದುವೆಗೆ ಹೇಗೆ ಒಪ್ಪಿಗೆ ಕೊಡಲಿ ? ಅಂದಿಹೆಯಲ್ಲ. ಇವನೇ ನಮ್ಮ ಹುಡುಗ ಸತೀಶ" ಎಂದರು. ಆ ಹುಡುಗಿ ಕೊಂಚ ಬೆರಗಿನಿಂದ ಸತೀಶನ ಕಡೇ ನೋಡಿದಳು.

ಸತೀಶನೂ ಅನಿವಾರ್ಯವಾಗಿ ಅವಳ ಕಡೆ ನೋಡಿದ. ತಿಳಿನೀಲಿ ವಾಯಲ್ ಸೀರೆ ಕುಪ್ಪಸದಲ್ಲಿ ಶಾಂತ ಮುಖ ಮುದ್ರೆಯ ಹುಡುಗಿ ಕಿವಿಯಲ್ಲಿ ತೂಗಾಡುತ್ತಿದ್ದ ಒಂದು ಮುತ್ತಿನರಿಂಗ್ ಅಗಲವಾದ ಕಪ್ಪು ಕಂಗಳು. ನೀಳ ಮೂಗು ಗೋದಿ ಬಣ್ಣದ ಈ ಹುಡುಗಿ ಚೆಲುವೆ ಎಂದು ಹೇಳಲಡ್ಡಿಯಿಲ್ಲ.

ಇಂಥ ಹುಡುಗಿ ಎರಡನೆಯ ಮದುವೆಗೆ ಸಿಗುತ್ತಾಳೆಯೆ ? ಒಂದು ಕ್ಷಣ ಅವನ ಮನಸ್ಸಿಗೆ ವಿಷಾದವೆನಿಸಿತು. ಬಡತನ ಎಂಬ ಒಂದು ಕಾರಣ ವಿಲ್ಲದಿದ್ದರೆ ಡಾಕ್ಟರೋ, ಇಂಜಿನಿಯರೋ ಹುಡುಕಿ ವಿವಾಹವಾಗಬಹುದಾದ ಹುಡುಗಿ.

"ಮಾವಾ.... ನಮಗೆ ಒಪ್ಪಿಗೆಯಿದೆ. ನಮ್ಮ ಸ್ಥಿತಿಗತಿ ಎಲ್ಲಾ ನಿಮಗೆ ಗೊತ್ತೇ ಇದೆ" ಎಂದಳು.

"ಏನಪ್ಪಾ ? ನಾಳೆ ಒಂದು ನಿಶ್ಚಯ, ನಾಳಿದ್ದು ಒಂದು ಮದುವೆ ಶಾಸ್ತ್ರ ನಮ್ಮನೇಲೆ ಮಾಡಿ ಕಳಿಸಿ ಬಿಡ್ತೀನಿ. ಸೋಮವಾರ ಹುಡುಗೀನ್ನ ಊರಿಗೆ ಕರ್‍ಕೊಂಡು ಹೋಗು. ಅಕ್ಕನ್ನ ನಿನ್ನೆ ಡಾಕ್ಟರ್ ನೋಡಿದರು. ಈ ಸಲ ಮೂರು ತಿಂಗಳು ಚಿಕಿತ್ಸೆ ತಗೊಳ್ಳಬೇಕೂಂತ ಹೇಳಿದ್ದಾರೆ. ಅಕ್ಕನ್ನ ನಾನಿಲ್ಲಿ ಮೂರು ತಿಂಗಳು ಇಟ್ಕೊಕೀನಿ" ಎಂದರು.

"ಮದುವೆ ಇಷ್ಟು ಅರ್ಜೆಂಟಾದರೆ ಹೇಗೆ ಚಿಕ್ಕಮ್ಮ ?" ಎಂದ.

"ನಾಳಿದ್ದಿನ ಮುಹೂರ್ತ ಬಿಟ್ಟರೆ,ಮತ್ತೆ ಎರಡು ತಿಂಗಳು ಮುಹೂರ್ತ ಇಲ್ಲ. ಇಬ್ಬರ ಮನಸ್ಸು ಕಲೆತ ಮೇಲೆ ತಿಂಗಳಾನುಗಟ್ಟಲೆ ಏಕೆ ಮುಂದೂಡ ಬೇಕು ?" ಎಂದರು. ಸುಮ್ಮನೆ ಅವಳ ಕಡೆ ನೋಡಿದ, ಅವಳ ಮುಖ ಕೆಂಪೇರಿಸಿ ತಲೆ ತಗ್ಗಿಸಿದಳು. ನಂತರ ಅವನು,

"ಸರಿ ಚಿಕ್ಕಮ್ಮ ನನ್ನದೇನು ಅಭ್ಯಂತರವಿಲ್ಲ. ಅಮ್ಮ ಎಲ್ಲಿ ? ಅಮ್ಮ ಹುಡುಗೀನ್ನ ನೋಡಿದ್ದಾಳಾ ?" ಎಂದ.

ಕಾವೇರಮ್ಮ ಉತ್ತರಿಸಿ, "ನಿಮ್ಮಮ್ಮ ಪಂಗಳನ್ನ ಮನೆಗೆ ಹೋಗಿ ದ್ದಾಳೆ. ಅಲ್ಲೇ ನಾವಿದುವರಿಗೂ ಇದ್ದೆವು. ಈಗ ಸಂಜೆ ದೀಪ ಹತ್ತಿಸೋ

ಹೊತ್ತಾಯಿತು. ಅಲ್ಲೀ ನಮ್ಮನೆಗೆ ಬಾಮ್ಮ ಅಂತ ಈ ಹುಡುಗೀನ್ನ ಕರ್ಕೊಂಡು ಬಂದೆ" ಎಂದರು.

"ನಾನು ಬರ್ತೀನಿ ಮಾವಾ" ಆ ಹುಡುಗಿ ಎದ್ದಳು.

"ನಾನು ಬಂದು ನಿಮ್ಮ ತಾಯಿ ಜೊತೆಗೆ ಮಾತಾಡ್ತೀನಿ" ಎಂದು ಕಾವೇರಮ್ಮ, "ಸುಶೀಲಾ.... ಸುಶೀಲಾ" ಎಂದು ಕೂಗಿದಾಗ ಕೆಲಸದ ಹುಡುಗಿ ಬಂದಳು.

"ಗೋದಾನ ಜೊತೆ ಅವರ ಮನೆಯವರಿಗೆ ಹೋಗಿ ಬಾ" ಎಂದರಾಕೆ. ಸುಶೀಲ ಅವಳ ಜೊತೆ ಹೊರಟಳು. ತೂಗಾಡುತ್ತಿದ್ದ ಅವಳ ನೀಳ ಜಡೆ ನೋಡಿ ಅಂದುಕೊಂಡ, ಹುಡುಗಿ ನಿಜಕ್ಕು ಅತಿ ಚೆಲುವೆ.

"ಬಾರೊ ! ಮಹರಾಯ ! ಕಾಫಿ ಕೊಡ್ತೀನಿ ಇದೇನು ? ಹಲಸಿನ ನಿಪ್ಪಟ್ಟಂತೆ. ಜಾರವಾಗಿದೆ ನೋಡು ಗರಿಗರಿ ಅಂತಿದೆ. ಅಕ್ಕಿಹಿಟ್ಟಿಗೆ ಮೆಣಸಿನಕಾಯಿ ಚೂರು, ಹಲಸಿನಕಾಯಿ ಕುಟ್ಟಿ ಹಾಕಿ, ಸೇಂಗ, ಪುಟಾಣಿ ಹಾಕಿ ಕಲಿಸಿದ ಹಿತವಾದ ಉಪ್ಪು ಕಾರದ ನಿಪ್ಪಟ್ಟು ತಿಂದು ಕಾಫಿ ಕುಡಿದ. ಮುಂದಿನ ಎರಡು ದಿನಗಳು ಕನಸಿನ ಲೋಕದಲ್ಲಿದ್ದಂತೆ ಮರುದಿನ ನಿಶ್ಚಯ. ಹೋಳಿಗೆ ಪಾಯಿಸದಡಿಗೆ ಮೂರನೆಯ ದಿನ ಶಾಡು ಊಟ, ಮದುವೆ, ಜೋಯಿಸರೇ ಶಾಸ್ತ್ರೋಕ್ತವಾಗಿ ಮಂತ್ರ ಹೇಳಿ ತಾಳಿ ಕಟ್ಟಿಸಿದರು.

ಅಪರೂಪಕ್ಕೆ ಬಂದಿದ್ದ ಸತೀಶನ ತಂದೆ ಭೀಮಾ ದೀಕ್ಷಿತರು. ಹೆಂಡತಿ ಭಾಗಿರಥಮ್ಮನ ಜೊತೆ ಕೂತು ಮದುವೆ ನಡಿಸಿಕೊಟ್ಟರು. ಈತ ಮೂರನೆಯ ದಿನವೇ ಮೈಸೂರಿನ ಚಾಮುಂಡಿ ದೇವಾಲಯದಲ್ಲಿ ವಿಶೇಷ ಪೂಜೆ ಇದೆ ಎಂದು ಹೊರಟು ಬಿಟ್ಟರು.

ಸತೀಶ ಹೆಂಡತಿಯ ಜೊತೆ ತಮ್ಮೂರಿಗೆ ಬಂದ. ಹಿಂದಿನ ದಿನ ರಾತ್ರಿ ಏಕಾಂತದಲ್ಲಿ ಸಮನ ಗೃಹದಲ್ಲಿ ಅವಳು ಸಿಕ್ಕಿದಾಗಲು ಸತೀಶನಿಗೆ ಮನಬಿಚ್ಚಿ ಮಾತನಾಡಲು ಆಗಲಿಲ್ಲ. ಹಾಲಿನ ಲೋಟ ಹಿಡಿದು ತಂದ ಮಡದಿಯನ್ನು ನೋಡಿ, "ಕೂತ್ಕೋ ಗೋದಾ ನನ್ನ ವಿಷಯ ಎಲ್ಲಾ ನಿನಗೆ ತಿಳಿದಿರಬಹುದು" ಎಂದ.

"ಮಾವಾ ಹೇಳಿದ್ದಾರೆ, ಹೆಂಗಸರಲ್ಲಿ ಅಂಥವರೂ ಇರ್ತಾರ ಅಂತ ಆಶ್ಚರ್ಯ ಆಯಿತು" ಎಂದಳು.

ಸತೀಶ ಅವಳ ಕೈಯಿಂದ ಹಾಲು ಪಡೆದ, "ಸಧ್ಯಕ್ಕೆ ನನ್ನ ಮನಸು ಪ್ರಶಾಂತವಾಗಿದೆ ಗೋಪಾ......ನಿಧಾನವಾಗಿ ನಾನು ನಿನಗೆ ಆತ್ಮೀಯನಾಗಬಲ್ಲೆ ಈಗ ಹಳೆ ನೆನಪುಗಳು ನನ್ನ ಕಾಡ್ತಿವೆ" ಎಂದ.

ಅವಳು ಮೃದುವಾಗಿ, "ನೀವು ಆರಾಮವಾಗಿ ನಿದ್ರೆ ಮಾಡಿ,ಮನಸ್ಸಿನ ಎಲ್ಲಾ ಅಶಾಂತಿ ಮರೆಯಾಗುತ್ತೆ. ನಾನು ಬೇಕಾದರೆ, ಕೆಳಗೆ ಒಂದು ಬೆಡ್ ಶೀಟ್ ಹಾಕಿಕೊಂಡು ಮಲಗ್ತೀನಿ" ಎಂದಳು.

"ಬೇಡಾ......ಹಳೆಕಾಲದ ಮಂಚ ವಿಶಾಲವಾಗಿದೆ. ಇಲ್ಲೀ ಮಲಗು" ಎಂದ. ಅವಳು ಆ ಮಂಚದ ಒಂದು ಬದಿಗೆ ಮಲಗು" ಎಂದ. ಅವಳು ಆ ಮಂಚದ ಬದಿಗೆ ಮಲಗಿದಳು.

ಅವಳ ಮುಡಿಯಿಂದ ಹಾದು ಬಂದ ಮಲ್ಲಿಗೆಯ ಪರಿಮಳ ಅವನನ್ನು ಉನ್ಮತ್ತನಾಗಿ ಮಾಡುತ್ತಿತ್ತು. ಎಷ್ಟು ಹೊತ್ತಿಗೆ ನಿದ್ರೆ ಬಂತು. ಸುಮನ ಳೊಡನೆ ಉನ್ಮತ್ತನಾಗಿ ಮೊದಲ ರಾತ್ರಿ ಕಳೆದ ಆ ನೆನಪುಗಳು, ಆಮೇಲೆ ಅವಳು ಮಾಡಿದ ದ್ರೋಹ ಎಲ್ಲಾ ನೆನಪಿಗೆ ಬಂದು ಮನಸು ಅಶಾಂತ ವಾಗಿತ್ತು.

ಬೆಳಿಗ್ಗೆ ಅವನೆದ್ದಾಗ ಆರು ಗಂಟೆಅವಳಿರಲಿಲ್ಲ. ಆಗಲೇ ಎದ್ದು ಹೋಗಿರ ಬಹುದು ಎಂದು ಹೊರಗೆ ಬಂದ. "ಹ್ಯಾಪೀ ಗುಡ್‌ಮಾರ್ನಿಂಗ್" ಎಂದು ಚಂದ್ರಿಕಾ ನಗುತ್ತ ಶುಭಾ ಹಾರೈಸಿದಳು.

ಸ್ನಾನ ಮುಗಿಸಿ ಬಂದ. ಆ ಹುಡುಗಿ ತನ್ನ ಸಾಮಾನು ಪೆಟ್ಟಿಗೆ ತರಲಿಕ್ಕೆ ಆ ಮನೆಗೆ ಹೋಗಿದ್ದಾಳೆ" ಎಂದು ಚಿಕ್ಕಮ್ಮ ಹೇಳಿದರು. ಕೊಂಚ ಹೊತ್ತಿಗೆ ಎರಡು ಭಾರಿ ಸೂಟ್ ಕೇಸಿನೊಂದಿಗೆ ಹಾಜರಾದಳು.ಪಾಯಿಸದೂಟ ಮಾಡಿಸಿ ಕಳಿಸಿಕೊಟ್ಟರು. ಅವನು ಅವಳ ಜೊತೆ ಊರಿಗೆ ಬಂದು ಮನೆ ಬಾಗಿಲಲ್ಲಿಳಿದಾಗ ಹತ್ತುಗಂಟೆ.

ಬೀಗ ತೆಗೆದು ಒಳಗೆ ಬಂದ, "ಇಗೊ! ಮನೆ ನಿನ್ನದು, ನನಗೆ ಆಫೀಸಿಗೆ ಹೊತ್ತಾಯ್ತು ಹೋಗ್ತೀನೆ" ಎಂದು ನುಡಿದು ಹೊರಟುಬಿಟ್ಟ. ಆಫೀಸಿಗೆ ಬಂದು ತನ್ನ ಕುರ್ಚಿಯಲ್ಲಿ ಕೂತಾಗ ತಲೆ ಧಿಮ್ ಎನ್ನುತ್ತಿತ್ತು.

"ಊಟಕ್ಕೆ ಬೇಜಾರಾಗಿದೆ" ಎಂದು ಚಿಕ್ಕಮ್ಮನ ಮನೆಗೆ ಹೋಗುವನು ಆ ಹುಡುಗಿಯನ್ನು ವಿವಾಹವಾಗಿ ಕರೆತಂದೆ. ಮನೆಯಲ್ಲಿ ಏನಿದೆ ? ಏನಿಲ್ಲ ?

ಆ ಹುಡುಗಿಗೆ ಗೊತ್ತೆ? ಒಂದು ವಾರದ ಧೂಳು ಕಸ ತುಂಬಿದ ಮನೆ. ಅಮ್ಮ ಇದ್ದಾಗ ಬಾಗಿಲು ಸಾರಿಸಿ ರಂಗವಲ್ಲಿ ಹಾಕುತ್ತಿದ್ದಳು. ಈಗ ಒಂದು ವಾರದಿಂದ ಎಲ್ಲಾ ಧೂಳು ಧಮ್ಮ. ಯೋಚಿಸುತ್ತ ಚಿಂತಾಕ್ರಾಂತನಾದ. ಹೊಸದಾಗಿ ಬಂದ ಹುಡುಗಿಗೆ ಒಂದು ಆರತಿ ಎತ್ತುವುವರಿಲ್ಲ. ಪಡಿ ಎಡಬಿಸಿ ಒಳಗೆ ಕರೆದುಕೊಳ್ಳುವವರಿಲ್ಲ.ಧೂಳು ತುಂಬಿದ ಮನೆಯಲ್ಲಿ ಒಂಟಿ ಹುಡುಗಿಯನ್ನು ಬಿಟ್ಟು ಬಂದೆ" ಎಂದು ಯೋಚಿಸಿ ಕಸಿವಿಸಿಗೊಂಡ.

"ಆಪೀಸ್ ಚೇಂಬರಿಂದ ಬಂದ ಈ ಸುದ್ದಿ ಬಾಂಬ್ ಹಾಕಿದ ಹಾಗಿದೆಯಲ್ಲಪ್ಪಾ."

ಎಫ್.ಡಿ.ಸಿ. ಮಧುಕರ ಮಾತಾಡುತ್ತಿದ್ದ, "ಪ್ರೈವೇಟ್ ಸಂಸ್ಥೆಗಳ ಹಣೆಬರಹವೇ ಇಷ್ಟು. ಹೋದ ವರ್ಷದಿಂದಲೇ ಸಂಸ್ಥೆ ನಷ್ಟದಲ್ಲಿ ಅಲುಗಾಡ್ತಿದೆ. ಆಗಲೇ ನಾವೆಲ್ಲಾ ಬೇರೆ ಕಡೆ ಕೆಲಸ ಹುಡುಕಿಕೊಳ್ಳಬೇಕಿತ್ತು" ಎಂದ ವಾಸುದೇವ ಅಸಿಸ್ಟೆಂಟ್ ಸೂಪರ್‌ವೈಸರ್ ಹೇಳುತ್ತಿದ್ದ. "ಏನಪ್ಪಾ ! ಸಮಾಚಾರ ?" ಕೊಂಚ ಆಶ್ಚರ್ಯದಿಂದ ಕೇಳಿದ ಸತೀಶ.

"ನೀನೋ ಓದಲಿಲ್ಲವಾ ಮಹರಾಯ ! ಈ ತಿಂಗಳಿಂದ ಮುಂದೆ ಆರು ತಿಂಗಳ ಕಾಲ ಸಂಬಳ ಕೊಡೋದಿಲ್ಲಾಂತ ವರದಿ ಬಂದಿದೆ" ಆಫೀಸ್ ಚೇಂಬರ್ ಬಳಿ ಹೋಗಿ ನೋಟಿಸ್ ನೋಡಿದ. "ದಯವಿಟ್ಟು ಎಲ್ಲರೂ ಸಹಕರಿಸಬೇಕು. ಈ ತಿಂಗಳಿನಿಂದ ಆರು ತಿಂಗಳ ಕಾಲ ಸಂಬಳ ಕೊಡಲಾಗುವುದಿಲ್ಲ ಅಕ್ಟೋಬರ್ ಹೊತ್ತಿಗೆ 10% ಬಡ್ಡಿಯೊಡನೆ ಆರು ತಿಂಗಳ ಸಂಬಳ ಲೆಕ್ಕ ಹಾಕಿ ಕೊಡಲಾಗುವುದು" ಎಂದಿತ್ತು.

ಅವನಿಗೆ ತಲೆ ಚಿಟ್ಟು ಹಿಡಿದಂತಾಯಿತು. ಇದುವರೆಗೆ ತಾಯಿ ತಾನು ಇಬ್ಬರೆ. ಈಗ ಒಂದು ಮದುವೆ ಬೇರೆ ಆಗಿ, ಹೆಂಡತಿ ಎಂಬ ಪ್ರಾಣಿಯನ್ನು ತಂದಿದ್ದಾನೆ. ಆರು ತಿಂಗಳು ಸಂಬಳ ನಿಂತು ಹೋದರೆ ತಾನು ಏನು ತಿನ್ನಬೇಕು ? ಸಂಬಳವನ್ನೇ ಅವಲಂಬಿಸಿದ ಪ್ರಾಣಿಗಳು ತಾವು. ಈ ಹುಡುಗಿ ಕಾಲ್ಗುಣ ಎಂಥಹುದು ? ಬಂದ ದಿನವೇ ಇಂಥಾ ವಾರ್ತೆ ಕೇಳಬೇಕೆ ? ಯೋಚಿಸುತ್ತ ಖಿನ್ನನಾದ.

ಏಪ್ರಿಲ್ ಸಂಬಳಕ್ಕೆ ಇನ್ನು ಹತ್ತು ದಿನ ಇದೆ. ಏಪ್ರಿಲ್ ಐದಕ್ಕೆ ಉಗಾದಿ ಸಂಬಳವೇ ಬರದೆ ಹಬ್ಬ ಹೇಗೆ ಮಾಡಬೇಕು ? ಈ ಚಿಂತೆಗಳಲ್ಲಿ

ಆಪೀಸ್ ಕೆಲಸ ಹೇಗೆ ಮಾಡಿದನೊ ? ಮನೆಗೆ ಬರುವ ಹೊತ್ತಿಗೆ ತಲೆ ಸಿಡಿಯುತ್ತಿತ್ತು. ಮನೆಯ ಬಳಿ ಬರುತ್ತಿದ್ದಂತೆಯೇ ಸೊಗಸಾಗಿ ನೀರು ಹನಿಸಿ ಸ್ವಚ್ಛವಾಗಿದ್ದ ಅಂಗಳ. ನಗು ನಗುತ್ತಿದ್ದ ಶುಭ್ರ ಬಿಳಿಯ ರಂಗೋಲಿ. ಕೆಂಪು ಪೈಂಟ್ ಬಳಿದ ಹೊಸ್ತಿಲು. ಹೊಸ್ತಿಲಲ್ಲಿ ಶುಭ್ರ ಬಿಳಿ ಪದ್ಮಾಕೃತಿ ರಂಗೋಲಿ, ತಿಳಿ ಗುಲಾಬಿ ಸೀರೆಯುಟ್ಟು, ಉದ್ದಕ್ಕೆ ಹೆಣೆದ ಜಡೆಗೆ ಒಂದು ಗುಲಾಬಿ ಮುಡಿಸಿದ್ದಳು. ನಗು ನಗುತ್ತ ಎಂದಿರುಗೊಂಡು, "ಕಾಲು ತೊಳೆದುಕೊಳ್ಳಿ ತಿಂಡಿ ಕೊಡ್ತೀನಿ" ಎಂದಳು. ಮಾತಿಲ್ಲದೆ ಕಾಲು ತೊಳೆದು ಬಂದ.

ತುಪ್ಪದ ವಾಸನೆ ಹಬೆ ಆಡುತ್ತಿದ್ದ ಕೇಸರಿಭಾತ್ ದ್ರಾಕ್ಷಿ ಗೋಡಂಬಿ ಹಾಕಿ ಮಾಡಿದ್ದಳು. ಪಕ್ಕದಲ್ಲಿ ಆಲುಗಡ್ಡೆ ಉಪ್ಪೇರಿ. ತಿಂಡಿ ಬಾಯಿಗಿಟ್ಟ ರುಚಿಯಾಗಿತ್ತು.

"ಮನೇಲಿ ರವೆ, ಸಾಮಾನುಗಳಿತ್ತಾ ?" ಎಂದ.

"ಇಲ್ಲ. ಅಕ್ಕಿ, ಬೇಳೆ, ಮೆಣಸಿನಪುಡಿ ಮೊದಲಾದ ಸಾಮಾನುಗಳಿವೆ ರವೆ ಒಂದು ನಂದಿನ ತುಪ್ಪ, ದ್ರಾಕ್ಷಿ ಗೋಡಂಬಿ ಪಕ್ಕದ ಮನೆ. ದಿನೇಶನ ಕೈಲಿ ತರಿಸಿದೆ ಪಕ್ಕದ ಮನೆ ಪದ್ಮಮ್ಮ ಗುರುತಾದರು. ನಿಮ್ಮ ತಾಯಿಗೆ ಅವರು ತುಂಬಾ ಆತ್ಮೀಯರಂತಲ್ವಾ ?" ಎಂದಳು.

"ದುಡ್ಡೆಲ್ಲಿತ್ತು ?" ಎಂದ.

"ನನ್ನ ಬಳಿ ಕೊಂಚ ದುಡ್ಡಿತ್ತು. ಮೊದಲ ದಿನವಂತ ಸಿಹಿ ಮಾಡಿದೆ" ಎಂದಳು.

"ಆದರೆ ನಮ್ಮ ಬದುಕಿನ ಆರಂಭ ಸಿಹಿ ಆಗಲ್ಲ ಅನಿಸತ್ತೆ ಗೋದಾ, ನಿನ್ನ ಮದುವೆ ಆಗ್ತೀನಿ ಅಂತ ನಿಶ್ಚಯಿಸಿ ಬಂದೆ ಹೋದವಾರ. ಆಫೀಸಿನ ಇಲ್ಲಿನ ಬ್ರಾಂಚ್ ಮುಚ್ಚಿ ಬಿಡ್ತಾರೆ ಅಂತ ಸುದ್ದಿ ಎದ್ದಿತು. ಆದರೆ ನಿಮ್ಮನ್ನ ಬೆಂಗಳೂರಿನ ಬ್ರಾಂಚಿಗೆ ತಗೋತೀವಿ ಅಂತ ಆಫೀಸರ್ ಹೇಳಿದ್ದರು. ಆದರೆ ಮುಂದಿನ ತಿಂಗಳಿಂದ ಇಲ್ಲಿ ಸಂಬಳ ನಿಲ್ಲಿಸಿದ್ದಾರೆ.ಆರು ತಿಂಗಳ ನಂತರ ಹತ್ತು ಶೇಖಡ ಬಡ್ತಿ ಸಮೇತ ಸಂಬಳ ಕೊಡ್ತಾರಂತೆ. ಆದರೆ ಆರು ತಿಂಗಳವರೆಗೆ ನಾವು ಹೇಗೆ ಜೀವನ ಮಾಡಬೇಕು ? ನೀನು ನೋಡಿದರೆ ಸಿಹಿ ಮಾಡಿದ್ದಿ" ಎಂದ.

"ಆರು ತಿಂಗಳವರೆಗೆ ಸಂಸಾರ ನಿರ್ವಹಣೆ ನನ್ನ ಕಡೆ ಬಿಡಿ. ನಾನು ನೋಡಿಕೊಳ್ಳುತ್ತೀನಿ" ಎಂದಳು.

"ಇಲ್ಲೂ ಒಂದು ಎಮ್ಮೆ ಕಟ್ಟುತ್ತೀಯೇನು ?" ಎಂದೆ.

"ಅದು ಹಳ್ಳಿಯಾದ್ದರಿಂದ ಎಮ್ಮೆ ಕಟ್ಟಿದ್ದೆ. ಆದರೆ ಇಲ್ಲಿ ಎಮ್ಮೆ ಕಟ್ಟೊಲ್ಲ. ಈ ಬಡಾವಣೆಯಲ್ಲಿರೋ ಐವತ್ತು ಮನೆಗಳಿಗೆ ಒಂದು ಸರಿಯಾದ ಅಂಗಡಿ ಇಲ್ಲ. ನಾನೊಂದು ಕಿರಾಣೀ ಅಂಗಡಿ ಹಾಕಬೇಕೂಂತಿದ್ದೀನಿ" ಎಂದಳು.

ಅವನು ಕೊಂಚ ಹಾಸ್ಯವೆಂಬಂತೆ ಬಂಡವಾಳಕ್ಕೆ ಏನು ಮಾಡ್ತಿ ?" ಎಂದ

ಅವಳು ಗಂಭೀರವಾಗಿ "ನನ್ನ ಬಳಿ ಕೊಂಚ ಹಣವಿದೆ. ಅದು ಮದುವೆಗಾಗಲಿ, ವರೋಪಚಾರ ವರದಕ್ಷಿಣೆಗಾಗಲಿ, ಖರ್ಚು ಮಾಡಲು ನನಗೆ ಇಷ್ಟ ಇರಲಿಲ್ಲ. ನಮ್ಮ ಮನೆ ಜಗುಲಿ ಮೇಲೆ ನಮ್ಮ ತಂದೆ ಒಂದು ಅಂಗಡಿ ಇಟ್ಟಿದ್ದರು. ಇದರಿಂದ ನಮ್ಮ ನಾಲ್ವರ ಜೀವನೋಪಾಯ ನಡೆಯುತ್ತಿತ್ತು. ಎಮ್ಮೆ ಹಾಲಿನ ವ್ಯಾಪಾರ ಮಾಡಿದ ಹಣ ನಾನು ಸಂಗ್ರಹಿಸ್ತಿದ್ದೆ. ನಮ್ಮ ತಂದೆ ಆ ಹಣ ಮುಟ್ಟುತ್ತಿರಲಿಲ್ಲ. ಎಮ್ಮೆ ಮಾರಿ ಬಿಟ್ಟೆ. ಅದೆಲ್ಲಾ ಒಟ್ಟು ಬಂಡವಾಳದ ನನ್ನ ಬಳಿ ಮುವ್ವತ್ತು ಸಾವಿರ ರೂ.ಗಳು ಇದೆ. ನೀವು ಸಂಸಾರದ ವಿಷಯದಲ್ಲಿ ಚಿಂತೆ ಮಾಡಬೇಡಿ" ಎಂದಳು. ಬಚ್ಚಲ ಮನೆಗೆ ಕೈ ತೊಳೆಯಲು ಹೋದ. ಶುಭ್ರವಾಗಿ ತೊಳೆದು ತೊಟ್ಟಿ, ಬಕೆಟುಗಳು ಹೊಸದಾದ ಮಗ್ ಬಚ್ಚಲು ಥಳಥಳಿಸುತ್ತಿತ್ತು.

ನನ್ನ ಕೋಣೆಯೊಳಗೆ ಬಂದ ಮರದ ಮಂಚ ಅದರ ಮೇಲೆ ಸುಕ್ಕಿಲ್ಲದೇ ಹಾಕಿದ್ದ ಹಾಸಿಗೆ, ಅದು ಸಿಂಗಲ್ ಮಂಚ. ಯಾರೋ ತಂದೆಗೆ ದಾನ ಕೊಟ್ಟ ಹಳೇ ಕಾಲದ ಮಂಚ, ಸುಮನಳನ್ನು ವಿವಾಹವಾದಾಗ ಅವರ ತಂದೆಯಿಂದ ಜೋಡಿ ಮಂಚ ಎರವಲು ಬಂದಿತ್ತು.

ಆದರೆ ಅವಳು ವಿವಾಹಕ್ಕೆ ಮುನ್ನವೇ ನಡತೆಗೆಟ್ಟ ಹೆಣ್ಣು ಎಂತು ಮುಂದೆ ಅವಳ ಕಥೆ ತಿಳಿದಾಗ ಆ ಮಂಚ ಎಲ್ಲಾ ವಾಪಸ್ ಕಳಿಸಿದ್ದೆ.

ಆರು ತಿಂಗಳು ಸಂಬಳ ಇಲ್ಲಾ ಎಂದಾಗ ನನ್ನ ಮನದಲ್ಲಿ ಚಿಂತೆಯ ಕಾರ್ಮೋಡಗಳು ತುಂಬಿದ್ದವು. ಆದರೆ ಆ ಹುಡುಗಿ ಬಡವಳಾದರೂ ಎಷ್ಟು ದಿಟ್ಟತನದಿಂದ ಸಮಸ್ಯೆಗೆ ಪರಿಹಾರೋಪಾಯ ಹೇಳಿದಳು.

ಅಂಗಡಿ ಎಂದರೆ ಸುಮ್ಮನಾಗುತ್ತದೆಯೆ ? ಸಂತೆಯಿಂದ ಮಾಲು ತರಬೇಕು, ಮಾರಬೇಕು ಇದೆಲ್ಲಾ ಒಂಟಿ ಹುಡುಗಿ ಹೇಗೆ ನಿಭಾಯಿಸುತ್ತಾಳೆ ? ಮಲಗಿ ಒಂದೇ ಸಮನೇ ಏನೇನೊ ಯೋಚಿಸುತ್ತಿದ್ದ. ಅವಳು ಬಂದು ದೀಪ ಅಂಟಿಸಿ ಹೋದಳು. ಒಂದು ಕ್ಷಣವೂ ಅಲ್ಲಿ ನಿಲ್ಲಲಿಲ್ಲ.

"ಏನು ತರಬೇಕು ಅಕ್ಕಾ ?" ಹೊರಗಡೆ ದಿನೇಶನ ಧ್ವನಿ ಕೇಳಿಸುತ್ತಿತ್ತು. "ಹುರುಳಿಕಾಯಿ, ಸೌತೆಕಾಯಿ, ಆಲುಗಡ್ಡೆ. ಟಿಮೇಟೊ, ಹಸಿ ಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಕರಿಬೇವಿನ ಸೊಪ್ಪು" ಎಂದು ಹೇಳುತ್ತಿದ್ದಳು.

ತಾನು ಕೋಣೆಯಲ್ಲಿ ಒಂಟಿಯಾಗಿ ಮಲಗಿ ಒಂದು ಗಂಟೆಯಾಗಿತ್ತು. ಆ ಹುಡುಗಿ ಬರಲಿಲ್ಲ ದೀಪ ಹಚ್ಚಲು ಬಂದವಳು ಒಂದು ನಿಮಿಷದಲ್ಲಿ ಸ್ವಿಚ್ ಅಂಟಿಸಿ ಓಡಿದ್ದಳು. ಎಂಟು ಗಂಟೆಯ ಹೊತ್ತಿಗೆ "ಊಟ ಮಾಡ್ತೀರಾ ?" ಎಂದಳು ಮೃದುವಾಗಿ. ಬಂದು ಊಟಕ್ಕೆ ಕೂತೆ. ತಿಳಿ ಟೊಮೇಟೊ ಸಾರು ಅತ್ಯಂತ ರುಚಿ ಆಗಿತ್ತು.ಹುರುಳೀಕಾಯಿ, ಪಲ್ಯ, ಅನ್ನ.ಮಾತಿಲ್ಲದೇ ಪಟ್ಟಾಗಿ ಊಟ ಮಾಡಿದ.

ಮಾರನೆಯ ದಿನ ಆಫೀಸ್ ಹೊತ್ತಿಗೆ ಅನ್ನ, ಚಪಾತಿ.ಹುರುಳಿಕಾಯಿ, ಆಲುಗಡ್ಡೆ ಹಾಕಿ ಹುಳಿ ಮಾಡಿದ್ದಳು. ಚಪಾತಿಯ ಸಿಲ್ಕ್ ಪದರಗಳಂತಿದ್ದ ಮೃದುತೆ, ಹುಳಿಯ ರುಚಿ ಅವನ ನಾಲಿಗೆಗೆ ಚಾಲನೆ ನೀಡಿತು.

"ಅಡಿಗೆ ತುಂಬ ರುಚಿ ಆಗಿದೆ ಗೋದಾ ?"

"ಥ್ಯಾಂಕ್ಸ್" ಎಂದಳವಳು. ಅವಳ ಮುಖದಲ್ಲಿ ತೆಳುವಾದ ಮಂದ ಹಾಸ.

ತನ್ನ ಬಳಿ ಒಂದಿನ್ನೂರು ರೂ.ಗಳಷ್ಟು ಹಣವಿತ್ತು.ಅವಳಿಗೆ ಕೊಡಲೇ? ಎಂದುಕೊಂಡ. ತನಗೆ ಸ್ಕೂಟರಿಗೆ ಪೆಟ್ರೋಲ್ ಹಾಕಿಸಲು ಎಲ್ಲಾ ವಿಷಯಕ್ಕು ಬೇಕಾಗುತ್ತದೆ. ಹೀಗೆ ಯೋಚಿಸಿ ಅವನು ಹಣ ಕೊಡಲಿಲ್ಲ. ಸಂಬಳ ಬಂದಾಗ ತನ್ನ ಬಳಿ ಒಂದು ಮುನ್ನೂರು ರೂ. ಇಟ್ಟುಕೊಂಡು ತಾಯಿಗೆ ಕೊಡುತ್ತಿದ್ದ. ಆಕೆ ಹಾಲು, ಮೊಸರಿನವರಿಗೆ ಕೊಟ್ಟು, ಸೀಮೆ ಎಣ್ಣೆ ಇಜ್ಜಲು ಮೂಟೆ ತರಿಸಿ, ಬಚ್ಚಲ ಮನೆ ಒಲೆಗೆ ಒಂದು ಮೂಟೆ

ಹೊಟ್ಟು ತರಿಸಿ, ಅಕ್ಕಿ-ಬೇಳೆ ಮುಂತಾದ ಮನೆ ಸಾಮಾನು ತರಿಸಿ, ಉಳಿದ ಸ್ವಲ್ಪ ಹಣ ತರಕಾರಿ ಮುಂತಾದ ಪದಾರ್ಥಗಳಿಗೆ ಇಟ್ಟುಕೊಳ್ಳುತ್ತಿದ್ದಳು.

ಈ ತಿಂಗಳು ಅವಳ ಬಳಿ ಏನಿತ್ತೊ? ತಂಗಿಯ ಮನೆಗೆ ಹೊರಟು ಬಿಟ್ಟಿದ್ದರು. ತನ್ನ ಬಳಿ ಉಳಿದ ಹಣ ತನ್ನ ಕೈ ಖರ್ಚಿಗೆ ಬೇಕು ಎಂದು ಯೋಚಿಸಿ ಆಫೀಸಿಗೆ ಹೊರಟು ಬಿಟ್ಟ. ಸಂಜೆ ಅವನು ಬರುವ ಹೊತ್ತಿಗೆ ನಡು ಮನೆಯ ಅರ್ಧ ಭಾಗವನ್ನು ಮರದ ಚೌಕಟ್ಟುಗಳು ಆಕ್ರಮಿಸಿದ್ದವು. ತೊಗರಿಬೇಳೆ ಇಲ್ಲಿ ಹಿಂದಿಡು. ಅಡಿಗೆ ಪೊಟ್ನ ಇಲ್ಲಿಡು, ಬಿಸ್ಕತ್, ಚಾಕ್ಲೆಟ್, ಈ ಕಡೆ ಇಡು ಸೋಪುಗಳು ನಿರಮಾ ಪೊಟ್ನ ಈ ಕಡೆ ದೂರ ಜೋಡಿಸಿ, ಸಬೀನಾ ಸೋಪುಗಳು ಆಹಾರ ಪದಾರ್ಥದ ಹತ್ತಿರ ಬೇಡ. ಆ ಕಡೆ ಬೇಕಾದರೆ ಬೆಂಕಿಪಟ್ಟ ಇಡಿ ಎಂದು ಇಬ್ಬರು ಹುಡುಗರಿಗೆ ನಿರ್ದೇಶಿಸುತ್ತಿದ್ದಳು.

ಒಬ್ಬ ಅವಳ ತಮ್ಮ ಕೃಷ್ಣ. ಇನ್ನೊಬ್ಬ ನಮ್ಮ ಪಕ್ಕದ ಮನೆ ದಿನೇಶ. ಅವನು ಬಂದದ್ದು ಗಮನಿಸಿ ಅವಳು ಒಳಗೆ ನಡೆದಳು. ಅರ್ಧ ನಡು ಮನೆ ಆಕ್ರಮಿಸಿದ ಸಾಮಾನು ನೋಡಿ ಅವನಿಗೆ ಏನೋ ಮೋಜೆನಿಸಿತು. ಅವಳು ಅವನಿಗೆ, ಕಾಲು ತೊಳೆದು ಬಂದಾಗ, "ಒಳಗೆ ಬಂದು ತಿಂಡಿತಿನ್ನಿ"ಎಂದಳು.

ಅಡಿಗೆ ಮನೆಯ ಒಂದು ಭಾಗಕ್ಕೆ ಪುಟ್ಟ ಪ್ಲಾಸ್ಟಿಕ್ ಚಾಪೆ ಹಾಸಿದಳು ತಟ್ಟೆಯಲ್ಲಿ ಚಪಾತಿ, ಪಲ್ಯ, "ಅಂಗಡಿಗೆ ಬಂಡವಾಳ ಎಷ್ಟು ಹಾಕಿದ್ದಿ ?" ಕೊಂಚ ಅಪಹಾಸ್ಯದಿಂದ ಪ್ರಶ್ನಿಸಿದ. ಅವಳು ಗಂಭೀರವಾಗಿ,

"ನೋಡಿ ಅಂಗಡಿ ಚೆನ್ನಾಗಿ ನಡೆದು ನಿಮಗೆ ಭಾರವಾಗದೇ ಇರೋ ಹಾಗಿದ್ರೆ ಇಲ್ಲಿರ್ತೀನಿ ಇಲ್ಲದಿದ್ದರೆ ನಾನು ಹೊರಟ್ಹೋಗ್ತೀನಿ. ಬೇಡದ ಹೆಂಡತಿಯಾಗಿ ನಿಮ್ಮ ಬಳಿ ಇರಲ್ಲ" ಎಂದಳು.

ಅವನಿಗೆ ಚುಚ್ಚಿದ ಹಾಗಾಯಿತು. ಆತಂಕದಿಂದ, "ಏಕೆ ಹಾಗೆ ಮಾತಾಡ್ತಿ ? ಬೇಡದ ಹೆಂಡತಿ ಅಂತ ನಾನು ನಿನಗೆ ಹೇಳಿದೆನಾ ?" ಎಂದ.

"ಗಂಡನ ಜೊತೆ ದಾಂಪತ್ಯ ಜೀವನ ನಡೆಸದಿದ್ದ ಹೆಂಡತಿ. ಗಂಡ ಹಾಕಿದ ಅನ್ನ ತಿನ್ನಬಾರದು. ಒಂದೆ ಚಾವಡಿಯಲ್ಲಿ ವಾಸ ಮಾಡಿದರೂ ತಾನು ಸಂಪಾದಿಸಿದ್ದೇ ತಿನ್ನಬೇಕು" ಎಂದಳು. ಅವನು ಚಿಂತೆಯಿಂದ, "ನಿನ್ನಂಥ ಹೆಂಡತಿಯನ್ನು ತಿರಸ್ಕರಿಸೋ ಧೈರ್ಯ ನನಗಿಲ್ಲ. ನೀನಾಗಿ ಬಂದರೆ ಸ್ವಾಗತ."

"ಬೇಡಿ ಬಂದ ಹೆಣ್ಣಾಗಿ ನಾನು ಬರಲಾರೆ, ಕಾತರಿಸಿ, ಹಾತೊರೆದು ಬಂದರೆ ಮಾತ್ರ ನನ್ನನ್ನು ನಾನು ನಿಮಗೆ ಅರ್ಪಿಸಿಕೊಳ್ಳಬಲ್ಲೆ" ಎಂದಳು.

"ಅದಕ್ಕೆಲ್ಲಾ ಸಮಯಬೇಕು ಗೋದಾ ? ಈಗ ನನ್ನ ಮನಸು ಮುರಿದಿದೆ" ಎಂದ.

ಗೋದಾ ಮಾತಾಡದೆ ಹೊರಗೆ ಬಂದಳು. "ಚಪಾತಿ ನನಗೆ ಹೊಟ್ಟೆ ತುಂಬಿದೆ. ರಾತ್ರಿ ನನಗೆ ಊಟಬೇಡ" ಎಂದ. ಅವಳು ಮಾತಾಡಲಿಲ್ಲ. ವಾಕಿಂಗ್ ಮುಗಿಸಿ ಬಂದ. ಅಕ್ಕ-ತಮ್ಮ ಊಟ ಮಾಡುತ್ತಿದ್ದರು. ಅವಳು ಅವನಿಗೆ ಒಂದು ಲೋಟ ಬಿಸಿ ಕಾಪಿ ತಂದಿಟ್ಟಳು. ಕಾಪಿ ಕುಡಿದು ಮಲಗಿದಾಗ ಅವನ ಮನಸು ಹಾಯಾಗಿತ್ತು.

"ನೀನು ನಡು ಮನೇಲಿ ಮಲಗಿಕೊ. ನಾನು ರೂಮಲ್ಲಿ ಮಲಗ್ತೀನಿ" ಎಂದು ಮಂಚದ ಕೆಳಭಾಗಕ್ಕೆ ಚಾಪೆ ಹಾಸಿಕೊಂಡು ಮಲಗಿದಳು.

ಮೂರು ತಿಂಗಳು ಉರುಳಿತು. ಅವಳ ಅಂಗಡಿ ಹೇಗೆ ಅಭಿವೃದ್ಧಿ ಹೊಂದುತ್ತಿದೆಯೆಂದು ಅವನಿಗೆ ತಿಳಿಯಲಿಲ್ಲ. "ಅಮ್ಮ ಕಾಗದ ಬರದಿದ್ದಾರೆ ಶೃಂಗೇರಿ, ಗೋಕರ್ಣ, ಧರ್ಮಸ್ಥಳ, ಉಡುಪಿ ಆ ಕಡೆ ಎಲ್ಲಾ ಹೋಗಿ ಬರ್ತಾರಂತೆ. ರಮೇಶಣ್ಣ ಕಾರು ಮಾಡಿದ್ದಾರಂತೆ. ಸೊಂಟ ಈಗ ಚೆನ್ನಾಗಾಗಿದೆಯಂತೆ. ಖರ್ಚಿಗೆ ದುಡ್ಡು ಕಳಿಸು ಕಡೇಪಕ್ಷ ಐನೂರಾದರೂ ಬೇಕೂಂತ" ಎಂದು ಪತ್ರ ಕೊಟ್ಟಳು. ಅವನು ಪತ್ರ ಓದಿ, "ಏಕಾದಶಿ ಮನೆಗೆ ಶಿವರಾತ್ರಿ ಬಂದ ಹಾಗೆ. ಈಗ ಮೂರು ತಿಂಗಳಿಂದ ನನಗೆ ನೀನು ಅನ್ನ ಹಾಕ್ತಿದ್ದಿ. ನನಗೆ ಸಂಬಳ ಸಿಂತ ವಿಷಯ ಆಕೆಗೆ ಗೊತ್ತಿಲ್ಲ. ಇನ್ನೊಂದೆರಡು ತಿಂಗಳು ಅಲ್ಲೇ ಇರು ಅಂತ ಬರೀತೀನಿ" ಎಂದ.

"ಅದೆಲ್ಲಾ ಏಕೆ ಬರೆಯಬೇಕು. ಯಾತ್ರೆ ಮುಗಿಸಿ, ಹದಿನೈದನೆಯ ತಾರೀಕು ಬರ್ತೀನಿ ಅಂದಿದ್ದಾರೆ ಬರಲಿ. ನಾನು ಭೀಮಣ್ಣನ ಕೈಲಿ ಐನೂರು ರೂ. ಕೊಟ್ಟು ಕಳಿಸಿದೆ. ಹದಿನೈದನೇ ತಾರೀಕು, ನೀವೆ ಬಂದು ಕರೆದು

ಕೊಂಡು ಬರಬೇಕಂತೆ. ಆಗಲಿ ಅಂತ ಹೇಳಿ ಕಳಿಸಿದ್ದೀನಿ. ಇಬ್ಬಿಬ್ಬರಿಗೆ ಅನ್ನ ಹಾಕಬೇಕು. ಹಾಕಲಿಕ್ಕೆ ನೀನು ತಯಾರಿದ್ದಿಯಾ ?" ಎಂದ.

ಅವಳು ತಲೆ ತಗ್ಗಿಸಿ, "ಅನ್ನ ಹಾಕಲಿಕ್ಕೆ ನಾನು ಯಾರು ? ಅಂಗಡಿ ಎಲ್ಲಾ ತೂಗಿಸ್ತಿದೆ. ಆದರೆ ಅವರು ಬಂದ ಮೇಲೆ ಇಲ್ಲಿ ಅವರಿಗೆ ಏಡು ಮನೆ ಬೇಕಾಗತ್ತೆ. ಅಂಗಡಿ ಮನೆ ಮುಂಭಾಗಕ್ಕೆ ಕಟ್ಟಿಸ್ತೀನಿ. ಹೇಗೂ ಜಾಗ ಇದೆಯಲ್ಲ" ಎಂದಳು.

"ಅದಕ್ಕೆಲ್ಲ ಹಣಾ ?" ಎಂದ.

"ನಾನು ವ್ಯವಸ್ಥೆ ಮಾಡ್ತೀನಿ" ಎಂದಳು. ಹದಿನೈದೇ ದಿನದಲ್ಲಿ ಮನೆ ಮುಂಭಾಗದಲ್ಲಿ ವಿಶಾಲವಾದ ಅಂಗಡಿ ಎದ್ದಿತು. ಉದ್ಘಾಟನೆಯೂ ಮಾಡಿದಳು.

ಭಾಗಿರಥಮ್ಮ ಕಾಗದ ಬರೆದು, "ತಂಗಿ ಯಾತ್ರೆ ಮಾಡಿಸಿದ್ದಾಳೆ. ನಾಳೆ ತೀರ್ಥ ಕ್ಷೇತ್ರ ಸಮಾರಾಧನೆ ಇದೆ. ನೀನು ಊಟಕ್ಕೆ ಬಾ. ಕಾವೇರಿಗೆ ಸೀರೆ ಕುಪ್ಪುಸ ತೆಗೆದುಕೊಂಡು ಬಾ. ಯಾತ್ರೆ ಮಾಡಿಸಿದವಳಿಗೆ ಸೀರೆ ಉಡಿಸುವ ಸಂಪ್ರದಾಯವಿದೆ. ನಾಳೆ ಸಂಜೆ ನಿನ್ನ ಜೊತೆ ಊರಿಗೆ ಬರುತ್ತೇನೆ ಎಂದು ಬರೆದಿದ್ದಾರೆ.

ನಿನ್ನ ಹೆಂಡತಿಗೆ ಆಶೀರ್ವಾದಗಳು ಎಂದು ಸೇರಿಸಿದ್ದರು. ಅವನು ಪತ್ರ ಓದಿ ಅತ್ತ ಎಸೆದ.

"ನೀವು ಬೇಕಾದರೆ ಹೋಗಿ ಬನ್ನಿ ನಾನು ಸೀರೆ ಕುಪ್ಪುಸಾ ತರಿಸಿದ್ದೇನೆ, ಕೃಷ್ಣನ ಕೈಲಿ, ನಾಳೆ ನಿಮ್ಮ ತಾಯಿನ್ನ ಕರೆದುಕೊಂಡು ಬನ್ನಿ" ಎಂದಳು. ಅವನು ಸಂಜೆ ಒಂದು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ, ತಿಂಗಳಿಗೆ ಇನ್ನೂರು ರೂ. ಸಿಗುತ್ತಿತ್ತು. ಟೈಪ್ ಮಾಡುವ ಕೆಲಸ ಅದು.

ಅದು ಅವನ ಸ್ವಂತ ಖರ್ಚಿಗಾಗುತ್ತಿತ್ತು. ಆದರೆ ಮನೆಗೆ ಏನು ಕೊಡಲಾಗುತ್ತಿರಲಿಲ್ಲ. ಮೂರು ತಿಂಗಳಿಂದ ಅವಳು ಹಾಕುವ, ಅಚ್ಚುಕಟ್ಟಾದ ರುಚಿ ರುಚಿಯಾದ ಊಟ ಮಾಡುವಾಗ ಮನಸು ಖಿನ್ನವಾಗುತ್ತಿತ್ತು. ಈಗ ತಾಯಿ ಬೇರೆ, ಇಲ್ಲದ ಖರ್ಚು ತೆಗೆದು ಪತ್ರವನ್ನು ಬರೆದಿದ್ದಾರೆ. ಅದರೆ ಈ ಹುಡುಗಿ ಆ ದಿನ ಯಾತ್ರೆಯ ಖರ್ಚಿಗೆ ಅತ್ತೆಗೆ ಐನೂರು ರೂ. ಕಳಿಸಿದಳು. ಈ ದಿನ ಸೀರೆ ತರಿಸಿದ್ದಾಳೆ. ಅತ್ತೆ ಬರುವ ಸುದ್ದಿ ಗೊತ್ತಾದೊಡನೆಯೆ

ಒಂಗಡಿ ತೆರವು ಮಾಡಿಸಿ, ಹೊರಗಡೆ ಒಂಗಡಿ ಕಟ್ಟಿಸಿ, ನಡುಮನೆ ತೆರವು ಮಾಡಿಸಿದ್ದಾಳೆ.

ಮಾರನೆಯ ದಿನ ಎದ್ದಾಗ ಹಜಾರದಲ್ಲಿ ಕೃಷ್ಣ ಮಲಗಿರಲಿಲ್ಲ. "ನಿನ್ನ ತಮ್ಮ ಎಲ್ಲಿ ?" ಎಂದ.

"ಅಂಗಡಿಯಲ್ಲೇ ಮಲಗಿದ್ದಾನೆ. ಸಾಮಾನು ಹಿಂದೆ ಸರಿಸಿದರೆ ಒಬ್ಬರು ಮಲಗಲು ಸ್ಥಳ ಆಗತ್ತೆ, ಅಂಗಡಿಗೂ ರಕ್ಷಣೇ ಇರುತ್ತೆ" ಎಂದಳು.

"ಅಮ್ಮನ್ನ ಕರ್‍ಕೊಂಡು ಬರ್‍ಲಿಕ್ಕೆ ಹೋಗಲೋ ಬೇಡವೋ ಅನಿಸ್ತಿದೆ. ನನ್ನ ಸಂಬಳ ಬರಲಿಕ್ಕೆ ಮೂರು ತಿಂಗಳಾಗತ್ತೆ ಇನ್ನು ನಿನಗೆ ಖರ್ಚು ಜಾಸ್ತಿ ಆಗುತ್ತೆ. ಅದರ ಬದಲು ಮೂರು ತಿಂಗಳು ಆಕೆ ಅಲ್ಲೇ ಇರಲಿ.ತಂಗಿಯ ಮನೇಲಿ ಆಕೆಗೆ ಹೊಂದಿಕೆ ಇದೆ" ಎಂದ.

"ಖಂಡಿತಾ ಅಲ್ಲಿ ಬಿಡಬೇಡಿ, ಪ್ರೀತಿ, ಪ್ರೇಮ ಹೊಂದಿಕೆಗೆ ನೆಂಟರ ಮನೆಗೆ ಹೋಗೋದು ಬೇರೆ. ಅನ್ನಕ್ಕೆ, ಆಶ್ರಯಕ್ಕೆ ಇನ್ನೊಬ್ಬರ ಮನೆ ಅವಲಂಬಿಸಬಾರದು. ಸದ್ಯಕ್ಕೆ ನಿಮ್ಮ ಸಂಬಳದ ವಿಷಯ ಅವರಿಗೆ ಹೇಳ ಬೇಡಿ" ಎಂದಳು.

"ರಘುನಾಥ್‌ಗೆ ಲೀವ್‌ಲೆಟರ್ ಕೊಟ್ಟು ಬರ್‍ತೀನಿ" ಕಾಫಿ ಕುಡಿದು ಎದ್ದ, "ಒಂದು ಕೆಲಸ ಮಾಡಿ, ಒಂದು ಮೈಲಿ ನೀವು ಏಕೆ ಹೋಗ್ತೀರಿ ? ಲೀವ್‌ಲೆಟರ್ ಕೃಷ್ಣ ಕೊಟ್ಟು ಬರ್‍ತಾನೆ. ನೀವು ಸ್ನಾನ ಮಾಡಿ, ಎಂಟು ಗಂಟೆಯ ಬಸ್ಸಿಗೆ ಊರಿಗೆ ಹೊರಟು ಬಿಡಿ" ಎಂದಳು. ಮೊದಲೆಲ್ಲಾ ಲೀವ್ ಹಾಕಬೇಕಾದರೆ ಒಂದು ಮೈಲಿ ದೂರದಲ್ಲಿರುವ ಗೆಳೆಯನಿಗೆ ಕೊಟ್ಟು ಬರಬೇಕಿತ್ತು. ಈಗ ಎಲ್ಲಕ್ಕೂ ಸುಲಭ ಮಾಡಿದ್ದಾಳೆ ಈ ಹುಡುಗಿ. ಆಫೀಸಿಂದ ಬಂದೊಡನೇ "ಸತೀಶ.....ಲೋ .. ಸತೀಶಾ.... ಉಪ್ಪು ತಗೊಂಬಾ ಮೆಣಸು ತಗೊಂಬಾ ತರಕಾರಿ ತಾ... ಸೀಮೆಎಣ್ಣೆ ತಗೊಂಬಾ" ಎಂಬ ಬೇಡಿಕೆಗಳು, ಹಿಂದೆ ತಾಯಿಯಿಂದ ಈಗ ಅವನಿಗೆ ಸಾಮಾನು ತರುವ ಕೆಲಸವಿರಲಿಲ್ಲ. ಸ್ನಾನಮಾಡಿ ಮತ್ತೊಮ್ಮೆ ಅವಳು ತಂದಿತ್ತ ಕಾಫಿ ಕುಡಿದು ಊರಿಗೆ ಹೋದ.

ತಾಯಿ ಮಗನನ್ನು ಸ್ವಾಗತಿಸಿದವರೇ, "ಸೀರೆ ತಂದ್ಯಾ ?" ಎಂದು ಆಕ್ಷಾಪಣೆಯಿಂದ ಕೇಳಿದರು.

ಮರು ಮಾತಾಡದೇ ಪ್ಯಾಕೆಟ್ ಕೊಟ್ಟ. ಕೆಂಪು ಜರಿ ಅಂಚಿನ ಅಚ್ಚ ಹಸಿರು, ಸ್ಪನ್ ಸಿಲ್ಕ್ ಸೀರೆ, ಹಸಿರು ಕ್ರೇಪ್ ಬ್ಲೌಸ್ ಪೀಸ್.

"ಸೀರೆ ತುಂಬಾ ಚೆನ್ನಾಗಿದೆ ಕಣೊ. ಪಾಪ ಮೂರು ತಿಂಗಳು ಇಟ್ಕೊಂಡು ಉಪಚಾರ ಮಾಡಿದ್ದಳು. ಯಾತ್ರೆಗೆ ಕರೆದುಕೊಂಡು ಹೋಗಿದ್ದಳು" ಎಂದು ತಂಗಿಯನ್ನು ಬಣ್ಣಿಸಿದಳು.

ಕಾವೇರಮ್ಮ ನಗುತ್ತ, "ಯಾತ್ರೆಗೆ ಕರ್ಕೊಂಡು ಹೋಗಿದ್ದಕ್ಕೆ ನಮ್ಮ ಋಣ ಏನು ಇಟ್ಕೊಂಡಿ ನೀನು ? ಐನೂರು ರೂಪಾಯಿ ಕಳಿಸಿದ್ದೆಯಲ್ಲ. ಪುಣ್ಯಾತ್ಗಿತ್ತಿ ಎಲ್ಲಾ ನಮಗೆ ಏನೇನೊ ಕೊಡಿಸಿದಳು. ಮಂಗಳಂಗೆ ದಂತದ ಬಾಚಣಿಗೆ ನನಗೆ ಶ್ರೀಗಂಧದ ಬಾಚಣಿಗೆ, ಇವರಿಗೆ ಲಾವಂಚದ ಎಲೆ ಅಡಿಕೆ ತಟ್ಟೆ, ಚಂದ್ರಿಕಾಗೆ ಕಂಚಿ ರೇಶ್ಮೆ ಸೀರೆ ಹೀಗೆ ಉಡುಗರೆ ಕೊಡಿಸಿದಳು. ಈಗ ಸೀರೆ ಬೇರೆ ನಂಗೆ" ಎಂದರು.

ಸುಮಾರು ನೂರು ಜನಕ್ಕೆ ಹೋಳಿಗೆ ಪಾಯಿಸದ ಊಟಕ್ಕೆ ಕರೆದಿದ್ದರು .ಊಟವಾದ ಮೇಲೆ ತಾಯಿ ಮಗ ಹೊರಟು ನಿಂತರು, ಬಸ್ ಸ್ಟ್ಯಾಂಡಿಗೆ ಬಂದಾಗ ತಾಯಿ ಮಗ ಇಬ್ಬರೇ ಉಳಿದರು. ಭಾಗಿರಥಮ್ಮ ಕೊಂಚ ಅಸಮಾಧಾನದಿಂದ, "ಒಂದು ಮಾತು ಹೇಳ್ತೀನಿ, ಏನು ತಿಳ್ಕೋಬೇಡಪ್ಪಾ ನಿನ್ನ ಹೆಂಡ್ತಿನ್ನ ಕೊಂಚ ಹದ್ದು ಬಸ್ತಿನಲ್ಲಿಟ್ಕೋಬೇಕು" ಎಂದರು

ಸತೀಶ ಚಕಿತನಾಗಿ, "ಏನು ವಿಷಯ ಅಮ್ಮ ?" ಎಂದ.

"ಏಪ್ರಿಲ್‌ಗೆ ಮನೆ ಸಾಲ ತೀರಿರಬಹುದು. ನೀನು ತಂದ ಸಂಬಳ ಎಲ್ಲಾ ಹೆಂಡತಿಗೆ ಕೊಡ್ತಿ ಅಂತ ಕಾಣತ್ತೆ. ಹೊಸದಾಗಿ ಮದುವೆ ಆಗಿದ್ದಿ, ರೂಪವತಿ, ಮರಳು ಮಾಡಿರಬಹುದು. ಆದರೆ ಎಷ್ಟು ಧೈರ್ಯ ! ಪ್ರತಿ ತಿಂಗಳು ಅವರ ತಂದೆ ತಾಯಿಗೆ ಐನೂರು ರೂ. ಕಳಿಸ್ತಿದ್ದಾಳೆ. ನಮ್ಮ ಕಾವೇರಿ ಮನೇಲಿ ಕೆಲಸ ಮಾಡ್ತಾಳಲ್ಲ ಸುಶೀಲ, ಅವಳ ಮನೆ, ಗೋದಾನ ತಂದೆ ಮನೆಯ ಪಕ್ಕಕ್ಕೆ ಇರೋದು, ತಮ್ಮನ್ನ ಅಲ್ಲೇ ಇಟ್ಕೊಂಡು ಓದಿಸ್ತಾ ಇದ್ದಾಳಂತೆ. ನಿನ್ನ ಸಂಬಳದಲ್ಲಿ ನಾನು ಜತನನಾಗಿ ಹೇಗೆ ಸಂಸಾರ ಮಾಡಿದ್ದೆ. ಅರವತ್ತು ಎಪ್ಪತ್ತು ಸಾವಿರ ಸುರಿದು ಮನೆ ಒಂದು ಹದಕ್ಕೆ ತಂದೆ. ಮನೆಯ ಮುಂಭಾಗಕ್ಕೆ ಒಂದು ಚಿಕ್ಕ ಮನೆ ಕಟ್ಟಿಸಿ ಬಾಡಿಗೆಗೆ ಕೊಡಬೇಕೂಂತಿದ್ದೆ. ಅವಳು ಹೀಗೆ ನಿನ್ನ ಸಂಬಳ ಎಲ್ಲಾ ತವರಿಗೆ ಸುರೀತ

ಕೊಡ್ತರೆ? ನಾಳೆ ನಿನ್ನದು ಮಕ್ಕಳು ಮರಿ ಸಂಸಾರ ಉದ್ಧಾರವಾಗಬೇಡ್ವೆ?" ಎಂದರು.

ಅವನು ಉತ್ತರ ಹೇಳಲು ತಡವರಿಸುವಾಗಲೇ, "ನೋಡಪ್ಪಾ ಮೂರು ತಿಂಗಳು ನಾನು ದೂರವಾಗಿದ್ದೆ. ಆವಾಗ ಆಡಿದ್ದೇ ಆಟವಾಗಿದೆ. ಈಗ ನಾನು ಬಂದು ಸ್ವಲ್ಪ ಶಾಸನ ಮಾಡ್ತೀನಿ. ನೋಡಮ್ಮ ನಿನ್ನ ತಮ್ಮನ್ನ ಮನೇಲಿ ಇಟ್ಕೊಳ್ಳೋದು ಅನ್ನ ಹಾಕೋದು ನಮಗಾಗಲ್ಲ. ಒಬ್ಬರ ಅನ್ನದ ಖರ್ಚು ಅಂದರೆ ಸುಮ್ನೆ ಆಗತ್ತೆ? ನನ್ನ ಮಗನ ಸಂಪಾದನೆ ನಾನು ಜೋಪಾನವಾಗಿ ಬೆಳೆಸಿ, ಆಸ್ತಿ ಮಾಡ್ತೀನಿ ಅಂತೀನಿ. ಸಂಬಳ ತಂದು ನನ್ನ ಕೈಗೆ ಕೊಡು. ತಮ್ಮನ್ನ ಸಾಕೋದು ತವರು ಮನೆಗೆ ಕಳಿಸೋದು ಈ ಕಾರುಬಾರುಗಳೆಲ್ಲಾ ನಿಲ್ಲಿಸ್ತೀನಿ" ಎಂದರು.

"ಅಮ್ಮ ನನಗೆ ಏಪ್ರಿಲ್‌ಯಿಂದ ಸಂಬಳಾನೆ ಬರ್ತಿಲ್ಲ" ಎಂದು ಒಮ್ಮೆಲೆ ಬಾಯಿ ಬಿಟ್ಟ.

ಆಕೆ ದಿಗ್ಭ್ರಾಂತರಾಗಿ, "ಸಂಬಳಾ ಬರ್ತಿಲ್ಲ. ಹಾಗೆಂದ್ರೇನೊ?" ಎಂದರು.

ತನ್ನ ಆಫೀಸ್ ಕಥೆ ವಿವರಿಸಿದ. "ಈಗ ಆ ಹುಡುಗೀನೆ ಒಂದು ಅಂಗಡಿ ಹಾಕಿದಾಳೆ. ಪಕ್ಕದ್ಮನೆ ಪದ್ಮಮ್ಮ ಅಂತ ಅವಳನ್ನ ಎರಡು ಬಾಯಲ್ಲಿ ಕೊಂಡಾಡ್ತಾಳೆ. ಅವರ ಮಗ ದಿನೇಶ ನಾಕೈದು ಸಲ ಪಿ.ಯು.ಸಿ. ಕಟ್ಟಿ ಓದು ನಿಲ್ಲಿಸಿ ಆಕೆ ಒದ್ದಾಡ್ತಿದ್ದರಲ್ಲ. ಓದು ಇಲ್ಲ, ಎಲ್ಲೂ ಕೆಲಸವೂ ಇಲ್ಲ. ಇವಳು ಐನೂರು ರೂಪಾಯಿ ಸಂಬಳ ಕೊಡ್ತಾಳೆ. ನನ್ನ ಮನೇನು ಮೂರು ತಿಂಗಳಿಂದ ಅವಳೇ ನೋಡಿಕೊಳ್ತಿರೋದು. ಸೊಗಸಾದ ಊಟ, ತಿಂಡಿ, ಕಾಫಿ ಎಲ್ಲಾ ಕೊಡ್ತಾಳೆ. ಅವರ ತಂದೇ ಮನೆಗೆ ಐನೂರು ಕಳಿಸ್ತಾಳೆ. ಅಂದರೆ ಅಂಗಡಿ ಸಂಪಾದನೆ ಚೆನ್ನಾಗಿರಬಹುದು" ಎಂದ.

ಆಕೆ ಕೊಂಚ ದಿಗ್ಭ್ರಾಂತರಾಗಿ, "ಹಾಗಾದ್ರೆ ನಿನಗೆ ಸಂಬಳ ಬರ್ತಾ ಇಲ್ಲವಾ?" ಎಂದರು.

"ಇಲ್ಲಮ್ಮ ನಿನಗೆ ಖರ್ಚಿಗೆ ಐನೂರು ರೂ. ಕಳಿಸಿದ್ದು ಅವಳೇ. ನಾನು ಆಗಲ್ಲ ಅಂತ ಹೇಳಿದರೂ ಬಿಡೋದಿಲ್ಲ ಅಂತ ಇದ್ದೆ. ಆದರೆ ಅವಳ ತಾಳ್ಮೆಯಿಂದ

ಹಣ ಕಳಿಸಿದಳು. ನಿನ್ನೆ ನಿನ್ನೆ ಕಾಗದ ನೋಡಿ ಸೀರೆ, ಬಟ್ಟೆ ಎಲ್ಲಾ ಅವಳೇ ತಂದದ್ದು" ಎಂದ.

"ನಿನ್ನ ಆಫೀಸ್ ಸ್ಥಿತಿ ಹೀಗಾಯ್ತಲ್ಲಪ್ಪ ಮುಂದೇನು ಗತಿ ?" ಎಂದರು.

"ಏನೋ ಅಕ್ಟೋಬರ್‌ಗೆ ಸುದ್ದಿ ಗೊತ್ತಾಗತ್ತಮ್ಮ. ಇಲ್ಲಿನ ಬ್ರಾಂಚ್ ಮುಚ್ಚಿ ಬಿಡ್ತಾರಂತೆ. ಬಾಂಬೆನಲ್ಲಿ ಹೊಸ ಆಫೀಸ್ ತೆಗೀತಾರಂತೆ. ಕೆಲವರನ್ನ ಬಾಂಬೆಯ ಹೊಸ ಬ್ರಾಂಚಿಗೆ ಕಳಿಸ್ತಾರಂತೆ" ಎಂದ. ಆಕೆ ಚಿಂತಿಸುತ್ತ,

"ನಿನ್ನನ್ನ ಬಾಂಬೆಗೆ ಹಾಕಿದರೆ ನನ್ನ ಗತಿ ಏನಪ್ಪಾ ? ಮುದುಕಿ ನಾನು ಅಲ್ಲಿ ಬಂದು ಹೇಗೆ ಸಂಸಾರ ಹೂಡಲಿ ?" ಎಂದರು.

"ನೀನು ಬರ್ತೀನ ಅಂದರೂ ಅಲ್ಲಿ ಮನೆ ನನಗೆ ಸಿಗಬೇಕಲ್ಲಮ್ಮ. ಐವತ್ತು ಸಾವಿರ, ಲಕ್ಷ ಪಗಡಿಕೊಟ್ಟರೆ ಅಲ್ಲಿ ಬಾಡಿಗೆ ಮನೆ ಸಿಗೋದು ಕಷ್ಟ. ಒಂದು ಕೋಣೆಯ ಮನೆ ಸಿಕ್ಕರೆ ಹೆಚ್ಚು. ನಿನ್ನ ಮಡಿ ಮೈಲಿಗೆ ಯಾವುದು ಅಲ್ಲಿ ನಡೆಯಲ್ಲ."

"ದೇವರು ನಮಗೆ ಇಂಥಾ ಪರೀಕ್ಷೆ ಏಕೆ ತಂದ ?" ಎಂದಾಕೆ ಚಿಂತಾಕ್ರಾಂತರಾಗಿ ನುಡಿದರು.

ತಾಯಿ ಮಗ ಊರಿಗೆ ಬಂದರು. ಗೋದಾ ಹಸನ್ಮುಖಿಳಾಗಿ ಸ್ವಾಗತಿಸಿ, "ಬನ್ನಿ ಅತ್ತೆ, ಕಾಲು ತೊಳೆದುಕೊಳ್ಳಿ ಕಾಫಿ ಕೊಡ್ತೀನಿ" ಎಂದಳು.

"ಬಸ್ಸಿನ ಮೈಲಿಗೆ ಸೀರೇಲಿ ನಾನು ಕಾಫಿ ಈಗ ಕುಡಿಯಲ್ಲಮ್ಮ" ಎಂದರು.

"ಹಂಡೇಲಿ ಬಿಸಿ ನೀರಿದೆ ಸ್ನಾನ ಮಾಡಿ. ನನ್ನ ತಮ್ಮ ಬ್ರಹ್ಮಚಾರಿ ಬೆಳಿಗ್ಗೆ ಮಡಿ ನೀರು ಹಿಡಿದಿಟ್ಟಿದ್ದಾನೆ. ಕಾಫಿ ಮಾಡಿಕೊಳ್ಳಿ" ಎಂದಳು.

"ಕಾಫಿ ಮನೆ ಹಾಳಾಯ್ತು. ಸತೀಶಂಗೆ ಮೂರು ತಿಂಗಳಿಂದ ಸಂಬಳವೇ ಇಲ್ಲವಂತಲ್ಲ. ಮನೆ ಹೇಗೆ ನಡಿಸ್ತಿ ತಾಯಿ ?" ಎಂದರು.

"ಅಂಗಡಿ ಚೆನ್ನಾಗಿ ನಡೀತಿದೆ. ಮನೆ ಖರ್ಚಿಗೆ ಏನು ತಾಪತ್ರಯವಿಲ್ಲ. ನೀವು ವಯಸ್ಸಾದವರು ಅದೆಲ್ಲಾ ನೀವು ಮನಸ್ಸಿಗೆ ಹಚ್ಚಿಕೊಬೇಡಿ" ಎಂದಳು

"ನನ್ನ ಮೈಗವ ವಿಷಯ ನಾನು ಮನಸ್ಸಿಗೆ ಹಚ್ಚಿಕೊಳ್ದೀ ಬೇರೆ ಯಾರು ಚಿಂತೆ ಮಾಡಬೇಕಮ್ಮ ? ಧಿಂರಂಗಾಂತ ನೀನಿದ್ದ ಹಾಗೆ ಇರೋ ಕಾಗತ್ಯೆ ? ಬ್ರಾಂಭರಿಗೆ ಅಂಗಡಿ-ಗಿಂಗಡಿ ಆಗಿ ಬರಲ್ಲಮ್ಮ" ಎಂದರು.

"ಗಾತ್ರಿ ಅಡುಗೆ ನಾನು ಮಾಡಿದರೆ ಊಟ ಮಾಡ್ತೀರಾ ಅತ್ತೆ ?" ಎಂದಳು.

"ನೋಡಮ್ಮ ಹಗಲು-ರಾತ್ರಿ ಎರಡು ಹೊತ್ತು ಕಚ್ಚೆ ಹಾಕಿ, ಮಡಿ ಸೀರೆ ಉಟ್ಕೊಂಡು ನೀನೇ ಅಡಿಗೆ ಮಾಡಬೇಕು. ನನಗೆ ಜಾಸ್ತಿ ಒಲೆಯ ಮುಂದೆ ಕೂಡ್ಲಿಕ್ಕಾಗಲ್ಲ. ಕಾವೇರಿ ಸಾವಿರಾರು ರೂಪಾಯಿ ಖರ್ಚು ಮಾಡಿ ಚಿಕಿತ್ಸೆ ಮಾಡಿಸಿದ್ದಾಳೆ" ಎಂದರು.

"ಒಟ್ಟಿನಲ್ಲಿ ನಿಮಗೆ ಎರಡು ಹೊತ್ತು ಮಡಿ ಅಡುಗೆ ಬೇಕು ತಾನೆ ? ಏರ್ಪಾಡು ಮಾಡ್ತೀನಿ" ಎಂದು ಗಂಡನಿಗೆ ಕಾಪಿ ಕೊಟ್ಟು ಹೊರಗೆ ನಡೆದಳು.

ಆಕೆ ಸ್ನಾನ ಮಾಡಿ ಬಂದು ಕಾಫಿ ಮಾಡಿಕೊಂಡರು. ಏನೋ ಅಸಮಾಧಾನ......ಏನೋ ಧುಮ ಧುಮ ? "ಏನಪ್ಪಾ ಹೆಣ್ಣು ಹುಡುಗಿ ಹೋಗಿ ಅಂಗಡಿ ಮೇಲೆ ಕೂತರೆ ರಾತ್ರಿ ಅಡುಗೆ ಎಷ್ಟು ಹೊತ್ತಿಗೆ ಬಂದು ಮಾಡ್ತಾಳೆ ?"

"ಅಮ್ಮ ಈ ಮನೆಗೆ ಸಂಪಾದಿಸ್ತಿರುವವಳು ಅವಳು. ಅವಳ ಮೇಲೆ ಏನು ಆಕ್ಷಾಪಣೆ ಮಾಡ್ಬೇಡ" ರಾತ್ರಿ ಏಳು ಗಂಟೆಗೆ ಕೃಷ್ಣ ಬಂದ. ಮಡಿ ಪಂಚೆ ಉಟ್ಟು ಅನ್ನ ತಿಳಿಸಾರು ಮಾಡಿದ.

ರಾತ್ರಿ ಅವರೆಲ್ಲ ಕಾಳು ಹೋಳಿನ. ಹುಳಿ ಹಾಗು ಚಟ್ನಿ ಊಟ ಮಾಡಿದಾಗ ಆಕೆ ಬರೀ ಸಾರನ್ನ ತಿಂದರು. "ಬೆಳಿಗ್ಗೆ ಮಡೀಲಿ ಕಾಫಿ ಮಾಡು. ಕಚ್ಚೆ ಹಾಕಿಕೊಂಡು ಕಾಪಿ ಮಾಡಬೇಕು" ಎಂದರಾಕೆ.

ಸುಮನಳೆದುರು ನಾಯಿ ಮರಿಯ ಹಾಗಿದ್ದ ತಾಯಿ ಇವಳನ್ನು ಕಂಡೊಡನೆ ಏಕೆ ಉರಿದು ಬೀಳುತ್ತಾರೆ ? ಎಂದವನಿಗೆ ಅರ್ಥವಾಗಲಿಲ್ಲ.

ಬೆಳಿಗ್ಗೆ ಅವರು ಆರು ಗಂಟೆಗೆ ಎದ್ದು ಮುಖ ತೊಳೆದು ಕಾಪಿ ಮಾಡಿದಳು. ಗಂಡನಿಗೆ ಕಾಫಿ ಕೊಡಲು ಹೋದಾಗ, "ಅಮ್ಮ......ಏಕೋ ತುಂಬಾ ಕಾಡಿಸ್ತಾಳೇಂತ ಅನಿಸತ್ತೆ. ನಾನು ಸ್ವಲ್ಪ ಜೋರು ಮಾಡಲಾ ?"

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ

“ಬೇಡಾ....ಮಡೀಲಿ ನನ್ನ ತಮ್ಮ ಅಡಿಗೆ ಮಾಡ್ತಾನೆ. ನನ್ನ ಕೈಲಾದಷ್ಟು ಅನುಸರಿಸ್ತೇನೆ” ಎಂದಳು.

“ನಾನಂತು ನಿಮ್ಮಿಬ್ಬರ ನಡುವೆ ಬರಲ್ಲ. ಮೂಕನ ಹಾಗೆ ಇರ್ತೇನೆ” ಎಂದ. ಗೋದಾ ಮಾತಾಡದೆ ಹೊರಗೆ ಬಂದಳು. ಅವಳು ಕಾಫಿ ಕುಡಿಯುತ್ತ ಕೂತಾಗ ಆಕೆ ಬಂದು, “ಸ್ನಾನ ಆಯ್ತೇನೇ ?” ಎಂದು ಗಡುಸಾಗಿ ಕೇಳಿದರು. “ಇಲ್ಲ ಅತ್ತೆ, ಒಂಭತ್ತು ಗಂಟೆಗೆ ಕೃಷ್ಣ ಬಂದು ಸ್ನಾನ ಮಾಡಿ ಕಾಫಿ ಮಾಡ್ತಾಳೆ. ಹಿಂದೇನೆ ಅಡಿಗೆಗಿಡ್ತಾನೆ” ಎಂದಳು.

“ಅದುವರೆಗೆ ನೀನೇನು ಕತ್ತೆ ಕಾಯ್ತಿಯ್ಯಾ ? ನಾನು ನಿನಗೆ ಏನು ಹೇಳಿದ್ದೆ ? ಸ್ನಾನ ಮಾಡಿ ಕಚ್ಚೆ ಹಾಕಿ ಸೀರೆ ಉಟ್ಕೊಂಡು ಒಲೆ ಮುಟ್ಟು ಅಂತಲ್ವಾ ?”

“ನಾನು ಸ್ಟೌವ್ ಮೇಲೆ ಮಾಡಿದ್ದೀನತ್ತೆ. ನಿಮ್ಮ ಆ ಒಲೆ ಮುಟ್ಟಿಲ್ಲ” ಎಂದು ಹೇಳಿ ಅಂಗಡಿಗೆ ನಡೆದಳು.

“ಏನಪ್ಪಾ ಇದು ಅನ್ಯಾಯ ? ಒಂಭತ್ತರವರೆಗೆ ನಾನು ಕಾಫಿ ಕಾಣದೇ ಇರಬೇಕೆ ? ಅನ್ನಕ್ಕೆ ಗತಿ ಕೆಟ್ಟೋರ ಮನೆಯಿಂದ ಬಂದೋಳಾದರೂ ಇವಳ ಥಳಕು ಪಳಕು ನೋಡು. ಬೆಳಗ್ಗೆದ್ದು ಅಂಗಡಿಗೆ ಹೋಗಿ ಕೂತಳಲ್ಲ.”

“ಅಮ್ಮ ಅವಳ ಅಂಗಡೀಲಿ ಸಂಪಾದನೆ ಆದರೆ ನಮಗೆಲ್ಲಾ ಹೊಟ್ಟೆಗೆ ಅನ್ನ. ಏಕೆ ನಿನಗೆ ಒಂದು ಕಾಫಿ ಮಾಡ್ಲಿಕ್ಕೆ ಕೈಲಾಗಲ್ಲವೇನು ?” ಎಂದ.

“ಸಾಕು ಸುಮ್ನಿರೋ ....ಆರು ತಿಂಗಳು ನಿನಗೆ ಸಂಬಳ ಬರಲಿಲ್ಲ ಅಂದರೆ ? ಅವಳೇ ನಿನ್ನ ಸಾಕಿದ ಹಾಗೆ ಆಡ್ತಿಯಾ ? ನನ್ನ ನಿನ್ನ ಸೇವೆ ಮಾಡಿಕೊಂಡು ಬಾಯಿ ಮುಚ್ಚಿಕೊಂಡು ಬಿದ್ದಿರಲೀಂತ ನಾನು ಅವಳನ್ನ ನಿನಗೆ ತಂದುಕೊಂಡದ್ದು. ತಂದೆ ಮನೇಲಿದ್ದಾಗ ಎರಡು ಹೊತ್ತು ಗಂಜಿ ಕಾಸಿ ಕುಡೀತಿದ್ದರಂತೆ. ಇವಳು ಎಮ್ಮೆ ಹಾಲು ಮಾರೋದಿರಲಿ, ಇವರಮ್ಮ ಬೆರಣಿ ತಟ್ಟಿ ಮಾರೋಳಂತೆ” ಎಂದು ಏನೇನೋ ಒದರಾಡಿದಳು. “ರಮೇಶನಿಗೆ ನಿನ್ನ ಸಂಬಳದ ವಿಷಯ ಹೇಳಿ ನರಸಿಂಹ ನಾಯಕರ ಹತ್ತಿರ ಹತ್ತು ಸಾವಿರ ಸಾಲ ತರ್ತೇನಿ. ಮನೆ ನಾನು ನಡಿಸ್ತೇನಿ. ಅವಳು ನಾನು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರಬೇಕು. ಆ ಅಂಗಡಿ ಮೊದಲು ಮುಚ್ಚಬೇಕು. ಅವಳ

ತವ್ಮು ಅವರ ಅಪ್ಪ–ಅವ್ಮು ಹತ್ತಿರ ಹೋಗಲಿ. ಇವಳು ಮನೆ ನಡಿಸೊ ಜಾವಳಿ ಸಾಕು" ಎಂದರು.

"ಆದರೆ ಹತ್ತು ಸಾವಿರ ರೂಪಾಯಿ ಸಾಲ ಯಾವ ಆಧಾರದ ಮೇಲೆ ತರ್ತಿ ನೀನು ?" ಎಂದ.

"ಶೇಕಡ ಹದಿನೈದು ಬಡ್ಡಿ ಮೇಲೆ ತರ್ತೀನಿ. ಇನ್ನು ಮೂರು ತಿಂಗಳಿಗೆ ನಿನ್ನ ಆರು ತಿಂಗಳ ಸಂಬಳ ಬಡ್ಡಿ ಸಮೇತ ಬರತ್ತಲ್ಲ. ಇಪ್ಪತ್ತು ಸಾವಿರದವರೆಗೆ ಬರತ್ತೆ. ಅದರಲ್ಲಿ ಹನ್ನೆರಡು ಸಾವಿರ ತೀರಿಸು. ಮೂರು ತಿಂಗಳ ಬಡ್ಡಿ, ಎರಡು ಸಾವಿರ ತಗೋತಾರೆ. ನಾನು ಆ ಬಿಕನಾಸಿ ಸಂಪಾದಿಸಿದ ಅನ್ನ ತಿಂದ್ಕೊಂಡು ಇರಲೇನು ? ತವರು ಮನೇಲಿ ಗಂಜಿ ಕುಡುಕೊಂಡು ಬಿದ್ದಿದ್ದೋಳು ಇಲ್ಲಿ ನನಗೆ ಅನ್ನ ಹಾಕ್ತಾಳಾ? ಲೌಡಿ ! ಪೊಗರು ನೋಡಿಕೊಂಡು ಸುಮ್ಮನಿರಲಾ ?" ಎಂದರು.

"ಅವಳು ಪೊಗರೇನು ತೋರಿಸಿದಳಮ್ಮ ? ಅವಳ ಮೇಲೆ ಏಕೆ ಹಾರಾಡ್ತಿ ?" ಎಂದ.

"ಮತ್ತಿನ್ನೇನೋ ? ನನ್ನ ಸೇವೆ ಮಾಡಿಕೊಂಡು ಬಾಯಿ ಮುಚ್ಚಿಕೊಂಡು ಬಿದ್ದಿರ್ತಾಳೇಂತ ಅವರಪ್ಪ, ಅಮ್ಮಂಗೆ ಮೂರು ಕಾಸು ಖರ್ಚಿಲ್ದಂಗೆ ಮದುವೆ ಮಾಡಿಕೊಂಡು ಬಂದೆವು. ಇಲ್ಲಿ ಬೆಳಗ್ಗೆ ಸ್ನಾನ ಮಾಡಿ ಕಾಫಿ ಮಾಡಮ್ಮ ಅಂದರೆ ಸ್ನಾನವಿಲ್ಲದೆ, ಕಾಫಿ ಮಾಡಿ ನನ್ನೆದುರೆ ಕುಡೀತಾ ಕೂತಿದ್ದಾಳೆ. ಅವಳ ಗರ್ವ ಎಷ್ಟು ?" ಎಂದರು.

"ಅವಳು ಸ್ನಾನ ಮಾಡಿ, ಕಚ್ಚೆ ಸೀರೆ ಉಟ್ಟುಕೊಂಡೇ ಕಾಫಿ ಮಾಡ ಬೇಕೂನ್ನೋ ನಿನ್ನ ಹಠ ಏಕಮ್ಮ ? ಆ ನಿನ್ನ ಮೊದಲ ಸೊಸೆ ಬಂದಾಗ ಬೆಡ್ ಕಾಪಿ ರೂಮಿಗೆ ಕಳಿಸ್ತಿದ್ದೆ. ಬೆಳಗ್ಗೆ ಐದಕ್ಕೆ ಎದ್ದು, ಬಾಗಿಲು ಸಾರಿಸಿ, ರಂಗೋಲಿ ಹಾಕೋದ್ರಿಂದ ಹಿಡಿದು ಕಸ, ಮುಸರೆ, ಬಟ್ಟೆ, ಅಡಿಗೆ ಎಲ್ಲಾ ನೀನು ಮಾಡ್ತಿದ್ದಿ. ಈಗ ಮೇಲುಗೆಲಸ ಅವಳು ಮಾಡ್ತಾಳೆ. ಅಡಿಗೆ ಕೆಲಸ ನಿನಗಾಗಲ್ವಾ ?" ಎಂದ.

"ನಿನ್ನ ಮೇಲಿನ ಪ್ರೀತಿಗೆ ಅವಳನ್ನ ಹಾಗೆ ಮೆರೆಸಿದ್ದಕ್ಕೆ ಅವಳು ಹಾಳಾಗಿ ಹೋದಳು. ಇವಳನ್ನ ನಾನು ಬಿಡಲ್ಲ" ಎಂದರು.

"ಅವಳನ್ನ ಏಕೆ ಮೆರೆಸಿದಿ ? ಲಕ್ಷ ಲಕ್ಷ ತಂದೋಳು ಬಂಗಾರ

ತಂದೋಳು. ತಿಂಗಳಿಗೆ ಎರಡು ಸಾವಿರ ರೂ ಗಳನ್ನು ತಂದೋಳೂಂತ ಅವಳು ಆಡಿದ್ದೆಲ್ಲಾ ಚೆಂದಾ ಅಂತ ಸಹಿಸಿದಿ. ಆದರೆ ನೀನು ಮೆರಸಿದ್ದ ರಿಂದ ಹಾಳಾಗಲಿಲ್ಲ ಅವಳು ಮೊದಲೇ ಹಾಳಾಗಿ ಹರಿಚಾಚಿದ್ದಳು. ಇವಳು ಬಡವರ ಮನೆ ಹುಡುಗಿ ಅನ್ನೋದೊಂದೆ ನಿನ್ನ ಆಕ್ರೋಶ. ಕೂತರೆ, ನಿಂತರೆ ಅವಳಲ್ಲಿ ನೂರು ತಪ್ಪು ಹುಡುಕಿ ಸಿಡಿ–ಮಿಡಿಗೊಳ್ಳೋಂಥಾ ಅಪರಾಧ ಅವಳೇನು ಮಾಡಿದ್ದಾಳೆ ? ಹಣ ತಂದೋಳು ಅವಳೆಂಥಾ ರ್‍ಯಾಸ್ಕಲ್ ಆಗಿ ದ್ದರೂ ಅವಳನ್ನು ನೀನು ಕ್ಷಮಿಸಿದ್ದಿ. ಪುನಃ ಅವಳಿಗೆ ಬುದ್ಧಿ ಹೇಳಿ ಈ ಮನೆಗೆ ಕರೆತರಲು ಮೈಸೂರಿಗೆ ಹೊರಟಿದ್ದಿ. ನೀತಿಗೆಟ್ಟ ಹೆಣ್ಣು ಅಂತ ತಿಳಿದಾಗ ಪೊರಕೇಲಿ ಹೊಡೆದು ಓಡಿಸಬೇಕಿತ್ತು ಅದರ ಬದಲು ಕರ್ರೊಂಬರ ಲಿಕ್ಕೆ ಹೋಗಿದ್ದಿ" ಎಂದ.

"ಅವಳ ಸಮಾಚಾರ ಹಾಳಾಗಿ ಹೋಗಲಿ ಕಣೋ. ಇವಳ ವಿಷಯ ಹೇಳು ? ಅವಳು ಎಂದೋ ಹಾಳಾಗಿ ಹೋದಳು. ಇವಳನ್ನು ನಾನು ಸೊಸೆ ಯಾಗಿ ತಂದ್ಕೊಂಡಿದ್ದು ಏಕೆ ? ನನಗೆ ಈಗ ಏನೇನು ಕೈಲಾಗಲ್ಲ. ಎರಡು ಹೊತ್ತು ಮಡಿ ಅಡಿಗೆ ಮಾಡಿಕೊಂಡು, ನಾನು ಹೇಳಿದ್ದಾಗೆ ಕೇಳ್ಕೊಂಡು ಬಿದ್ದಿರಲೀಂತ. ತಾನು ಅಂಗಡಿ ಸ್ಥಾಪಿಸಿ, ನಮಗೆ ಅನ್ನ ಹಾಕ್ತೀನಿ. ನಮ್ಮ ಮೇಲೆ ಸವಾರಿ ಮಾಡ್ತೀನೀಂತ ಅನ್ನೋ ಭ್ರಮೆ ಅವಳು ಬಿಟ್ಟು ಬಿಡಬೇಕು" ಎಂದರು.

"ನೋಡಮ್ಮ ನೀನು ನನ್ನ ಸಂಬಳ ನಂಬಿ, ಹತ್ತು ಸಾವಿರ ಸಾಲಾ ಮಾಡಬೇಡ. ಆರು ತಿಂಗಳ ಮೇಲಾದರು ಸಂಬಳ ಸಿಗತ್ತೆ ಅಂತ ಏನು ಗ್ಯಾರಂಟಿ ? ಆ ಬಡ್ಡಿ ಸಾಲಗಳ ಹಾವಳಿ ನನಗೆ ಸಾಕಾಗಿದೆ" ಎಂದ.

"ಹಾಗಾದರೆ ಮೂರು ತಿಂಗಳು ಅವಳು ಹಾಕೋ ಅನ್ನ ತಿಂದು ಕೊಂಡು ಬಿದ್ದಿರಬೇಕೇನೊ ?" ಎಂದರು.

"ಅಮ್ಮ ನಿನಗೆ ಅವಳ ಮೇಲೆ ಅಷ್ಟು ತಿರಸ್ಕಾರ ಇದ್ದರೆ ನಿನ್ನ ತಂಗಿಯ ಮನೆಗೆ ಹೋಗಿಬಿಡು. ಇಲ್ಲಿ ಬಂದು ಇಲ್ಲದ ರಸಕಸಿ ಮಾಡಬೇಡಾ" ಎಂದ.

"ಮೂರು ತಿಂಗಳು ಅಲ್ಲಿದ್ದಾಗ ಖಾಯಿಲೆ ತಾಯಿಂತ ನೋಡಲಿಕ್ಕೆ ಬರಲಿಲ್ಲ ಆಗಲೆ ನನಗೆ ಅಪಮಾನಾ ಆಯ್ತಪ್ಪಾ. ಅವಳು ನಿನಗೆ ಚೆನ್ನಾಗಿ

ಮರಳು ಮಾಡಿ ಬಿಟ್ಟಿದ್ದಾಳೇಂತ. ನಾನು ಯಾರ ಮನೆಗೂ ಹೋಗಲ್ಲ. ಅಂಗಡಿ ಮೇಲೆ ಬೇಕಾದರೆ ಅವಳ ತಮ್ಮ ದಿನೇಶಾ ಇರಲಿ. ಹೆಣ್ಣು ಹುಡುಗಿ ಅಂಗಡಿ ಮೇಲೆ ಕೂತು ವ್ಯಾಪಾರ ಮಾಡೋದೊಂದ್ರೆ ಏನೊ ? ನಾಳೇ ಕಾವೇರಿ ಮನೇಲಿ ಕೇಳಿದರೆ ನಗ್ತಾರೆ" ಎಂದರು.

"ಇವತ್ತಿನ ಪೇಟೇಲಿ ನೂರಾರು ಅಂಗಡೀಲಿ ಸಾವಿರಾರು ಸೇಲ್ಸ್ ಗರ್ಲ್ಸ್ ಇರ್ತಾರೆ. ಚಂದ್ರಿಕಾನು ಹಿಂದೆ ಬಟ್ಟೆ ಅಂಗಡೀಲಿ ಸೇಲ್ಸ್‌ಗರ್ಲ್ಸ್ ಆಗಿದ್ದಳು. ಅವಳು ಸೇಲ್ಸ್‌ಗರ್ಲ್ಸ್ ಆಗಿರೋದು ಅಪರಾಧವಲ್ಲವಾದರೆ ಇವಳು ಅಂಗಡಿ ನಡೆಸೋದು ಅಪರಾಧವಲ್ಲ" ಎಂದ.

"ನೋಡಮ್ಮ ಬೇರೆ ಸಾಧಾರಣ ಹುಡುಗಿ ಆಗಿದ್ರೆ ಗಂಡನಿಗೆ ಸಂಬಳ ವಿಲ್ಲ ಆರು ತಿಂಗಳೊಂದರೆ ಹೆದರಿ ಹೌಹಾರಿಬಿಡೋಳು. ಆದರೆ ಈ ಹುಡುಗಿ ಎಷ್ಟು ಧೀರೋದ್ದಾತ್ತವಾಗಿ ಸಮಸ್ಯೆಯನ್ನ ಎದುರಿಸಿ, ದಿಟ್ಟತನವಾಗಿ ಬದುಕನ್ನ ಎದುರಿಸ್ತಿದ್ದಾಳೆ" ಎಂದ.

"ಹೌದಪ್ಪ ನಿನ್ನ ಹೆಂಡ್ತೀನ್ನ ನೀನೆ ಹೊಗಳಿಕೊಳ್ಳಬೇಕು. ಈಗ ಸಾಲಾ ತೆಗೆಯೋದು ಬೇಡಾಂತಿಯಾ ? ಅವಳು ಹಾಕಿದ ಅನ್ನ ತಿಂತಾ, ಅವಳ ಅಡಿಯಾಳಾಗಿ ಇರಲಾ ನಾನು ?" ಎಂದರು.

ಅವನು ಬೇಸರದಿಂದ, "ನಿನಗೆ ಬೇಸರಾಂತ ಅನಿಸಿದರೆ ಚಿಕ್ಕಮ್ಮನ ಮನೆಗೆ ಹೊರಟು ಬಿಡಮ್ಮ ನೀನು ಹೊಂದಿಕೊಂಡು ಇರೋ ಹಾಗಿದ್ರೆ, ಅಡಿಗೆ, ಕಾಪಿ, ತಿಂಡಿ ಮಾಡು" ಎಂದ.

ಆಕೆ ಕೋಪದಿಂದ, "ನಾಲ್ಕು ಜನಕ್ಕೆ ಮಾಡಲಾರೆನಪ್ಪಾ ನಾನು. ಅವಳ ತಮ್ಮ, ತಿಮ್ಮ ಯಾರ್‍ಯಾರೋ ಇದ್ದಾರಲ್ಲ ನಂದೊಬ್ಬಳದು, ನಾನು ಮಣ್ಣಿನ ಕೂರೊಲೆಯಲ್ಲಿ ಮಾಡ್ಕೋತೀನಿ. ನಿಮ್ಮ ಹಣೆ-ಬರಹ ನಿಮ್ಮದು" ಎಂದರು.

"ಹಾಗೇ ಮಾಡಮ್ಮ.ಈ ವಿಷಯ ಇನ್ನು ಜಾಸ್ತಿ ಚರ್ಚಿಸಿ ನನ್ನ ಕೆಣಕ ಬೇಡಾ" ಎಂದ.

ಎಂಟೂವರೆಗೆ ಬಂದ ಗೋದಾ ಸ್ನಾನ ಮಾಡಿ ಅಡಿಗೆ ಮಾಡಿದಳು. ಒಂಭತ್ತೂ ಮುಕ್ಕಾಲಿಗೆ ಅವನು ಅನ್ನ, ಸಾರು, ಪಲ್ಯ ಊಟ ಮಾಡಿ ಹೋದ. ಅನಂತರ ಗೋದಾ ಊಟ ಮಾಡಿ ಅಂಗಡಿಗೆ ಹೋದಳು. ಕೃಷ್ಣ

ಬಂದು ಊಟ ಮಾಡಿದ. ತಮಗೆ ಒಂದು ಅನ್ನ ಸಾರು ಮಾಡುವುದ ರೊಳಗೆ ಆಕೆಗೆ ಸಾಕಾಯಿತು. ಮಾಡಿದ ಅಡಿಗೆ ರುಚಿಯಾಗಿರಲಿಲ್ಲ. ರಾತ್ರಿಗೆ ಸ್ವಲ್ಪ ಎತ್ತಿಟ್ಟುಕೊಂಡರು. ಮೂರು ಗಂಟೆಗೆ ಅಕ್ಕ, ತಮ್ಮ ಬಂದರು.

"ನಿನ್ನ ತಮ್ಮನ್ನ ಮಡಿ ಉಟ್ಕೊಂಡು ಕಾಫಿ ಮಾಡು ಅನ್ನೇ" ಎಂದು ಅಬ್ಬರಿಸಿ ಹೇಳಿದರು. ಅವಳು ಮಾತಾಡದೇ ಕಾಲು ತೊಳೆದು, ಕಾಫಿಗಿಟ್ಟಳು. ಅವನು ಏನೋ ಲೆಕ್ಕ ಮಾಡುತ್ತಾ ಕುಳಿತ. ಕ್ರಾಫ್ ಬಾಚಿ, ಮುಖ ತೊಳೆದು ಅಕ್ಕ ಕೊಟ್ಟ ಕಾಫಿ ಕುಡಿದು ಹೊರನಡೆದ.

ಅವನು ಕಾಫಿ ಕುಡಿಯುವಾಗ ಭಾಗಿರಥಮ್ಮ ಬಂದರು.

"ಅವನು ಇನ್ನು ಸ್ನಾನ ಮಾಡಲಿಲ್ಲೇನೆ ? ನನಗೆ ಗಂಟಲು ಆರ್ತಿದೆ" ಎಂದರು.

ಅವಳು ಗಂಭೀರವಾಗಿ, "ಅವನೀಗ ಸ್ವಲ್ಪ ಪಾಠ ಓದಿಕೊಂಡು, ಇಲ್ಲಿ ಟ್ಯುಟೋರಿಯಲ್ಸ್‌ಗೆ ಹೋಗ್ತ ಇದ್ದಾನೆ. ಬರೋದು ಐದುಗಂಟೆಗೆ" ಎಂದಳು.

ಕಾಫಿ, ತಿಂಡಿ ಪಾತ್ರೆ ತೊಳೆದು, ಮನೆ ಕಸ ಗುಡಿಸಿದಳು. ಈರುಳ್ಳಿ, ಆಲುಗಡ್ಡೆ ಹೆಚ್ಚಿ ಉಪ್ಪಿಟ್ಟು ಮಾಡಿದಳು. ಬಟ್ಟೆ ಒಗೆದಳು. ಐದು ಗಂಟೆಗೆ ಕೃಷ್ಣ ಬಂದ. "ನೀನು ದಿನೇಶ ಅಂಗಡಿ ನೋಡ್ಕೋತಿರಿ ನಾನು ಆರೂವರೆಗೆ ಬರ್ತೀನಿ" ಎಂದು ಚಟ್ನಿ ಹಾಗೂ ಬಿಸಿ ಸಾರು ಮಾಡಿ, ಹಾಟ್ ಬಾಕ್ಸಲ್ಲಿ ಹಾಕಿಟ್ಟಳು. ಗಂಡ ಐದೂವರೆಗೆ ಬಂದಾಗ ಕಾಪಿ ತಿಂಡಿ ಕೊಟ್ಟಳು. ಅವನು ಆರು ಗಂಟೆಗೆ ಹೊರಟು ನಿಂತ.

"ಏನಪ್ಪ ಕಾಫಿ ಇಲ್ಲದೇ ಗಂಟಲಾರಿದೆ. ನೀನಾದರೂ ಸ್ನಾನ ಮಾಡಿ, ಕಾಫಿ ಮಾಡಿ ಕೊಡ್ತಿಯಾ ? ಅವಳ ತಮ್ಮನ ಕೈಲಿ ಮಾಡಿಸೂಂದೆ, ಮಾಡಿ ಸಲಿಲ್ಲ" ಎಂದರು.

"ಅಮ್ಮ ನಾನು ಇಲ್ಲೊಂದು ಟೈಪಿಂಗ್ ಸೆಂಟರ್‌ನಲ್ಲಿ ಆರರಿಂದ ಒಂಭತ್ತರವರಿಗೆ ಕೆಲಸ ಮಾಡ್ತೇನೆ. ತಿಂಗಳಿಗೆ ಇನ್ನೂರೈವತ್ತು ಕೊಡ್ತಾರೆ. ಪೆಟ್ರೋಲ್ ಹಾಗೂ ಉಳಿದ ನನ್ನ ಸ್ವಂತ ಖರ್ಚಿಗೆ ಬೇಕು" ಎಂದು ಹೇಳಿ ಅವನು ಹೊರಟು ಬಿಟ್ಟ.

"ನಿನಗೆ ಮಡಿ ಮೈಲಿಗೆ, ತವರು ಮನೇಲಿ ಏನು ಅಭ್ಯಾಸ ಇಲ್ಲೇನೆ?" ಎಂದರು ಅಬ್ಬರಿಸಿ ಗದರಿಸುವಂತೆ.

"ನಮ್ಮ ತಾಯಿ ಮಡೀಲಿ ಮಾಡೋ ಕೆಲಸ ಎಲ್ಲಾ ತಾವೇ ಮಾಡ್ತಿದ್ದರು. ನನ್ನ ಕೈಲಿ ಏನು ಮಾಡಿಸ್ತಿರಲಿಲ್ಲ" ಎಂದಳು ಶಾಂತವಾಗಿ.

"ಇಲ್ಲಿ ನನ್ನ ಮಗನಿಗೆ ಮದುವೆ ಇಷ್ಟವಿರಲಿಲ್ಲ. ನನ್ನ ಸೊಸೆಯಾಗಿ, ನನ್ನ ಸೇವೆ ಮಾಡಲಿಕ್ಕೆ ನಿನ್ನ ಕರೆತಂದೆ" ಎಂದಳು.

ಅವಳು ಶಾಂತವಾಗಿ, "ಎರಡು ಹೊತ್ತು ಸ್ನಾನ ಮಾಡಿ, ಒಗೆದ ಸೀರೆ ಉಟ್ಕೊ, ಕಾಫಿ ತಿಂಡಿ ಮಾಡಬಲ್ಲೆ. ಆದರೆ ಮಡಿ ಸೀರೆ, ಮೇಲು ನೀರು ಹಾಕ್ಕೊಂಡು ಕಚ್ಚೆ ಹಾಕಿ ಸೀರೆ ಉಟ್ಕೋ ಇದೆಲ್ಲಾ ಇಲ್ಲದ ಆರ್ಡರ್ ಮಾಡಬೇಡಿ. ಅಲ್ಲದೇ ನನ್ನ ತಮ್ಮ ಇಲ್ಲಿಗೆ ಬಂದಿರೋದು ಓದಲಿಕ್ಕೆ ನನಗೆ ಅಂಗಡಿ ಕೆಲಸಕ್ಕೆ ಸಹಾಯ ಮಾಡಲಿಕ್ಕೆ ನಿಮಗೆ ಅಡಿಗೆ, ತಿಂಡಿ, ಕಾಫಿ ಮಾಡಲಿಕ್ಕಲ್ಲ ಶಾಂತವಾಗಿ ಯಾವುದು ಯೋಚಿಸಿ ಹೇಳಿ. ಶುಭ್ರತೆ ನಿಮಗೆ ಮುಖ್ಯವೊ ? ಆ ದೊಡ್ಡ ಹದಿನೆಂಟು ಮೊಳದ ಸೀರೆ ಕೊಳೆ ಕೋಳೆಯಾಗಿ ರೆಬರೆ ಒಗೆದು ಉಟ್ಕೊ ಅದನ್ನ ಮಡಿ ಅಂತ ನಂಬಲಾರೆ. ಅತ್ತೆ ಕಚ್ಚೆ ಬಿಚ್ಚಿ, ಬಚ್ಚಲ ಮನೇಲಿ ಉಚ್ಚೆ ಹೊಯ್ಯಲಿಕ್ಕೆ ಕೂತ್ಕೋತೀರಿ, ಇಷ್ಟುದ್ದ ಆ ಉಚ್ಚೆ ಬಚ್ಚಲಲ್ಲಿ ಸೀರೆ ಬಿದ್ದಿರತ್ತೆ. ಹಂಗೆ ಎದ್ದು ಆ ಅರೆಬರೆ ಒದ್ದೆ ಸೀರೆ ಕಚ್ಚೆ ಸಿಕ್ಕಿಸ್ಕೋತೀರಿ. ಅದು ನಿಮ್ಮ ಪಾಲಿಗೆ ಮಡಿ ಆದರೆ ಒಗೆದ ಒಳ ಲಂಗ, ಒಗೆದ ಸೀರೆ, ಶುಭ್ರವಾಗಿ ನಾನು ಧರಿಸ್ತೀನಿ. ಈ ತಿಂಗಳಿಂದ ಅರವತ್ತು ರೂಪಾಯಿ ಕೊಟ್ಟು ಪಾತ್ರೆ, ಬಟ್ಟೆ, ಕಸಕ್ಕೆ ಜನರನ್ನ ಇಡ್ತಿದ್ದೀನಿ. ಈ ! ನೋಡಿ ಬೆಳಗ್ಗೆ ಐದು ಗಂಟೆಗೆದ್ದು, ಅಡಿಗೆ ಮನೆ, ಕಸ ಮುಸ್ರೆ ಮಾಡಿ, ಮನೆ ಕಸ ಗುಡಿಸಿ, ಒಂದಿಷ್ಟು ರಾತ್ರೀದು ಪಾತ್ರೆ ತೊಳೆದುಕೊಂಡು ಹಾಲು ಹಾಕಿ ಕಾಫಿ ಮಾಡೋ ಹೊತ್ತಿಗೆ ನನಗೆ ಸಾಕಾಗತ್ತೆ. ಜೊತೆಗೆ ನಾನು ಮುಖ ತೊಳೆದು, ಹುಲ್ಲುಜ್ಜಿ ಜಡೆ ಹಾಕಿಕೊಂಡು ಒಂದು ಸೀರೆ ಬದಲಾಯಿಸೋದ್ರೊಳಗೆ ಆರೂವರೆ ಆಗತ್ತೆ. ಕೃಷ್ಣ ಒಬ್ಬನು ಅಂಗಡಿ ತೆಗೆದು ಎಲ್ಲಾ ಜೋಡಿಸಿಕೊಳ್ಳಲಿಕ್ಕೆ ಆಗಲ್ಲ. ದಿನೇಶ ಬೇರೆ ಎಲ್ಲಾ ವಿಷಯದಲ್ಲಿ ಒಳ್ಳೆ ಹುಡುಗ. ಆದರೆ ಬೆಳಗ್ಗೆ ಬೇಗ ಏಳಲ್ಲ. ಏಳೋದೇ ಒಂಭತ್ತರ ಮೇಲೆ. ಎದ್ದು ಮುಖ ತೊಳೆದು, ಸ್ನಾನ ಮಾಡಿ, ಕಾಫಿ ಕುಡಿದು ಹತ್ತರ ಮೇಲೆ

ಅಂಗಡಿಗೆ ಬರ್‍ತಾನೆ. ಬೆಳಗ್ಗೆ ಆರೂವರೆಗೆ ಹೋಗಿ ಎಲ್ಲಾ ತಮ್ಮನ ಜೊತೆ ಸರಿಯಾಗಿ ಜೋಡಿಸಿ ಎಂಟೂವರೆವರೆಗೆ ಅಲ್ಲಿರಬೇಕು. ಅಲ್ಲಿಂದ ಬಂದು ಸ್ನಾನ ಮಾಡಿ ಅಡಿಗೆ ಮಾಡಬೇಕು. ಎರಡು ತಂಡ ಅಡಿಗೆ ಮಾಡಲಾರೆ" ಎಂದಳು.

ಭಾಗಿರಥಮ್ಮ ರೋಷದಿಂದ, "ಅಯ್ಯೋ ! ತನ್ನ ತಾಯಿ ! ಶೂದ್ರ ಹೆಂಗಸನ್ನ ಮಾತ್ರ ನೀನು ಮನೆ ಕೆಲಸಕ್ಕೆ ಸೇರಿಸಬೇಡ. ನಾನು ನಾಲಿಗೆ ಹಿರಿದುಕೊಂಡು ಪ್ರಾಣ ಬಿಡ್ತೀನಿ. ನೀನು ಮಾಡಿದ ಎಲ್ಲಾ ಅನಾಚಾರ ನಾವು ಸಹಿಸಲಾರೆ. ನಾವಿನ್ನು ಪೂರ್ತಿ ನಿಮ್ಮ ಕೈಗೆ ಬಿದ್ದಿಲ್ಲ. ಈ ಮನೆ ನಂದು ಹೊರಗಡೆ ನಿನ್ನ ಅಂಗಡಿ ಮನೆ ಹಿಡಿದ್ರೆ ಸಾವಿರ ರೂಪಾಯಿವರೆಗೆ ಬಾಡಿಗೆ ಬರತ್ತೆ. ಹೀಗಾಗಿ ಈ ಮನೇಲಿದ್ದ ಮೇಲೆ ನಾನು ಹೇಳಿದ ಹಾಗೆ ಕೇಳಬೇಕು. ಅರವತ್ತು ವರ್ಷದ ಮುದುಕಿ ನಾನು ಅಡಿಗೆಯಿಂದ ಹಿಡಿದು ಎಲ್ಲಾ ನಿಭಾಯಿಸ್ತಿದ್ದೆ. ನಾಲ್ಕು ತಿಂಗಳು ಅವನಿಗೆ ಸಂಬಳ ಬರಲಿಲ್ಲಾಂದ ಮಾತ್ರಕ್ಕೆ ನೀನು ಈ ಮನೆ ಪಾರು ಪತ್ತೆದಾರಣಿ ಅಂತ ತಿಳ್ಕೋಬೇಡಾ. ಬೆಳಗಾದರೆ ಅವನಿಗೆ ಸಂಬಳ ಬರತ್ತೆ" ಎಂದರು.

"ಆರೂವರೆ ಆಯ್ತು ನಾನು ಹೋಗ್ತೀನಿ" ಎಂದು ಚುಟುಕಾಗಿ ನುಡಿದು ಗೋದಾ ಅಲ್ಲಿಂದ ಅಂಗಡಿಗೆ ಬಂದಳು. ಗೋದಾ ಆ ಅಂಗಡಿ ಸ್ಥಾಪಿಸಿದಾಗಿಂದ ಚೆನ್ನಾಗಿ ವ್ಯಾಪಾರವಾಗುತ್ತಿತ್ತು. ಶ್ರೀರಾಘವೇಂದ್ರ ಕಾಲೋನಿ ಎಂಬ ಆ ಏರಿಯಾದಲ್ಲಿ ನೂರಿಪ್ಪತ್ತಕ್ಕು ಹೆಚ್ಚು ಬ್ರಾಹ್ಮಣರ ಮನೆಗಳಿದ್ದವು. ಆ ಏರಿಯಾದಲ್ಲಿ ದಿನಸಿ ಅಂಗಡಿಗಳಿಲ್ಲ. ಒಂದು ಉಪ್ಪು ಬೆಂಕಿಪಟ್ಣ ಬೇಕಾದರೂ ಅರ್ಧ ಮೈಲಿ ದೂರ ಹೋಗ್ಬೇಕು. ಆದರೆ ಅವಳಲ್ಲಿ ಅಂಗಡಿ ಸ್ಥಾಪಿಸಿದ್ದು. ಹತ್ತಾರು ಮನೆಯವರಿಗೆ ಅನುಕೂಲವಾಗಿತ್ತು. ಮೊದ ಮೊದಲು ತಿಂಗಳ ಸಾಮಾನು ದೂರದ ಹೊರ ಅಂಗಡಿಯಲ್ಲಿ ತರುತ್ತಿದ್ದವರು. ಅಮಾಲಾಮೇಲೆ ಅವಳ ಅಂಗಡಿಯಲ್ಲಿ ತರಲಾರಂಭಿಸಿದರು. ಕೆಲವರಿಗೆ ಸುಂದರವಾದ ಹೆಣ್ಣು ಅಂಗಡಿಯಲ್ಲಿ ಕೂತಿದಾಳೆಂಬ ಆಕರ್ಷಣೆ, ಸಾಮಾನು ತುಂಬಾ ತಾಜಾ ಇರುತ್ತದೆ. ಅಳತೆ, ತೂಕ ಮೋಸವಿಲ್ಲ ಎಂದು ಕೆಲವರಿಗೆ. ಈ ಅಂಗಡಿ ಇಷ್ಟವಾಯಿತು. ಇದ್ದಬದ್ದ ತನ್ನ ಕಷ್ಟಾರ್ಜಿತ ವೆಲ್ಲಾ ಸುರಿದು, ಅಂಗಡಿಯನ್ನು ಸಾಕಿಸಿದ್ದಾಗಿದ್ದು ಗಂಡ ಪ್ರೋತ್ಸಾಹ

ಕೊಡದಿದ್ದರೂ ಅಡ್ಡಿ ಮಾಡಿರಲಿಲ್ಲ. ಆದರೆ ಅತ್ತೆ ತುಂಬ ಅಸಹನೆ ತೋರಿದ್ದಾರೆ. ಒಂದಲ್ಲ ಹತ್ತು ವರ ಬಂದಿದ್ದರೂ ಯೋಗ್ಯ ವರಗಳು ಅವರ ಮನೆ ಬಡತನ ಪರಿಸರ ನೋಡಿ ಅವಳನ್ನು ಒಪ್ಪಿರಲಿಲ್ಲ. ಅವರುಗಳು ಕೇಳಿದ ವರದಕ್ಷಿಣೆ, ವರೋಪಚಾರದ ಮೊತ್ತ ಇವರು ತೂಗಿಸಲು ಸಾಧ್ಯವಿರಲಿಲ್ಲ. ಅವಳು ಎಸ್ಸೆಲ್ಸಿ ಮುಗಿಸುವ ಹೊತ್ತಿಗೆ ಮನೆಯಲ್ಲಿ ಕಡು–ಬಡತನ ಕವಿದಿತ್ತು ನಾಲ್ಕು ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಹೊತ್ತಿಗೆ ತಂದೆ ಇದ್ದಬದ್ದ ಎಲ್ಲಾ ಆಸ್ತಿ ಕಳೆದುಕೊಂಡಿದ್ದರು. ಒಂದು ಮನೆ ಉಳಿದಿತ್ತು. ಆದರೆ ಹದಿನೆಂಟು ವರ್ಷದ ಗೋದಾ ಸಾಹಸಿ ಹೆಣ್ಣು. ಪಟ್ಟಣಕ್ಕೆ ಬಂದು ಕಾಲೇಜು ಕಲಿಯಲೇಬೇಕು ಎಂಬ ಹಠ ಅವಳಿಗಿರಲಿಲ್ಲ.

ಓದು, ವಿದ್ಯೆ ಕಡಿಮೆ ಇದ್ದರೂ ದಿಟ್ಟತನದಿಂದ ಬದುಕನ್ನು ಸ್ಥಾಪಿಸಿಕೊಂಡಳು. ತಂದೆಗೆ ಮನೆಯನ್ನು ಭೋಗ್ಯಕ್ಕೆ ಹಾಕಲು ಹೇಳಿ, ಎರಡು ಎಮ್ಮೆ ಕೊಂಡಳು. ತಂದೆಗೆ ಮನೆ ಜಗುಲಿಯ ಮೇಲೆ ಒಂದು ಸಣ್ಣ ಕಿರಾಣಿ ಅಂಗಡಿ ಹಾಕಿಕೊಟ್ಟಳು. ಅಂಗಡಿಯಿಂದ ಮನೆ ಹೇಗೊ ನಡೆಯುತ್ತಿತ್ತು. ಆದರೆ ಹಾಲಿನ ದುಡ್ಡನ್ನು ಕೂಡಿಟ್ಟು, ಮನೆ ಬಿಡಿಸಿಕೊಳ್ಳಬೇಕೆಂಬ ಅವಳ ಆಸೆ ನೆರವೇರಲಿಲ್ಲ.ಆರು ವರ್ಷದಲ್ಲಿ ಕಷ್ಟಪಟ್ಟು ಮುವ್ವತ್ತು ಸಾವಿರ ರೂ. ಕೂಡಿಸ್ಟಳು. ಆದರೆ ಮನೆ ಬಡ್ಡಿ ವಾಯಿದೆ ಮುಗಿದು ಐವತ್ತು ಸಾವಿರ ಬೆಳೆದಿತ್ತು. ಸಾಹುಕಾರ ಬಂದು ಆ ಮನೆ ಆಕ್ರಮಿಸಿಕೊಂಡ. ಆ ಮನೆಯನ್ನು ಎರಡಾಗಿ ಕಟ್ಟಿಸಿದ ಮುಂಭಾಗದ ಜಗುಲಿ, ಪ್ರುಟ್ಟ ಹಜಾರ ತಮಗೆ ಕೊಡಿ ಎಂದು ಕೇಳಿದ್ದಳವಳು ಆತ ಒಪ್ಪಿದ್ದ. ಆದರೆ ಅಂಗಡಿ ಇಡುತ್ತಾರೆಂದು ಬಾಡಿಗೆ ನಾನೂರೆಂದ. ಅದೇ ಸೈಜಿನ ಹಿಂದಿನ ಮನೆಗೆ ನೂರೈವತ್ತು ತೀರ ಸಣ್ಣ ಹೋಬಳಿ ಅದು. ಈ ಅಂಗಡಿಯಲ್ಲಿ ಅಂಥಾ ವ್ಯಾಪಾರವೂ ಆಗುತ್ತಿರಲಿಲ್ಲ. ಅಂಗಡಿ ದುಡಿಯುತ್ತಾ ಇದ್ದದ್ದೇ ಮುನ್ನೂರು ರೂ. ಹೇಗೊ ನಾಲ್ಕು ಜನ ಅರೆವೊಟ್ಟೆ ಊಟ ಮಾಡಿಕೊಂಡು ಕಾಲ ಹಾಕಿದ್ದರು. ಈ ಸ್ಥಿತಿಯಲ್ಲಿ ಅಂಗಡಿ ನಡೆಸುವುದು ಸಾಧ್ಯವಿಲ್ಲವೆಂದು ಗೋದಾ ಹಿಂದಿನ ಮನೆಗೆ ಬಾಡಿಗೆಗೆ ಹೋದಳು. ಎಮ್ಮೆ ಹಾಲಿನ ವ್ಯಾಪಾರದಲ್ಲಿಯೂ ಈಗ ಹಣ ಉಳಿಸಲು ಆಗುತ್ತಿರಲಿಲ್ಲ. ಬಾಡಿಗೆ ನೂರೈ

ವತ್ತು, ನಾಲ್ಕರ ಜೀವನಕ್ಕೆ ಒಂದು ನಾನ್ನೂರು ತೆರಬೇಕಾಗಿತ್ತು. ಬರುತ್ತಿದ್ದದ್ದೆ ಲಾಭ ಐನೂರು ರೂ. ತಿಂಗಳಿಗೆ.

ಮನೆ ಭೋಗ್ಯಕ್ಕೆ ಆರು ವರ್ಷದಲ್ಲಿ ಬಿಡಿಸಿಕೊಳ್ಳುತ್ತೇನೆಂದು ವಾಯಿದೆ ಹಾಕಿ, ನಲವತ್ತು ಸಾವಿರ ಅವರಿಂದ ಪಡೆದು, ಇಪ್ಪತ್ತು ಸಾವಿರಕ್ಕೆ ಎರಡು ಎಮ್ಮೆ. ಇಪ್ಪತ್ತು ಸಾವಿರದಲ್ಲಿ ಅಂಗಡಿ ಹೂಡಿದ್ದಳು.

ಆರು ವರ್ಷ ಬಾಡಿಗೆ ಇಲ್ಲವಾಗ ಹೇಗೋ ನಡೆದಿತ್ತು. ಆದರೆ ಈಗ ವಾಯಿದೆ ಮನೆ ಆತನಿಗೆ ಸೇರಿದ ಮೇಲೆ ಅವಳಿಗೆ ತುಂಬ ಎನಿಸಿತ್ತು. ಈ ಮಧ್ಯೆ ಅವಳ ಮದುವೆ ಆಯಿತು. ಮೂರು ವರ್ಷದಿಂದ ಸತೀಶನ ವಿಷಯ ಅವಳ ಕಿವಿಗೆ ಬಿದ್ದಿತ್ತು. ತಾಯಿಯನ್ನು ಬಿಡಲು ಆಗಾಗ ಕಾವೇರಮ್ಮನ ಮನೆಗೆ ಬರುತ್ತಿದ್ದ ಅವನನ್ನು ನೋಡಿದ್ದಳು. ಅವನ ರೂಪ ಅವಳಿಗೆ ಮೆಚ್ಚುಗೆ ಆಗಿತ್ತು. ಒಳ್ಳೆ ಉದ್ಯೋಗದಲ್ಲಿ ಇದ್ದಾನೆ. ಮೂರು ಸಾವಿರ ರೂ. ಸಂಬಳ ತೆಗೀತಾನೆ ಸ್ವಂತ ಮನೆ ಇದೆ. ತಾಯಿಗೊಬ್ಬನೆ ಮಗ. ತಂದೆ ಎಲ್ಲೋ ದೂರದಲ್ಲಿರುತ್ತಾರೆ. ಅವನಲ್ಲಿರುವ ದೋಷವೆಂದರೆ ಮದುವೆ ಆದ ಒಂದು ತಿಂಗಳೊಳಗೆ ಹೆಂಡತಿ ಅವನನ್ನು ಬಿಟ್ಟು ಓಡಿ ಹೋಗಿದ್ದು, ಮುಂದೆ ಡೈವೋರ್ಸ್ ಪಡೆದು ಅವಳು ಬೇರೆ ಮದುವೆ ಆಗಿದ್ದಾಳೆ ಎಂದು ಕಾವೇರಮ್ಮ ಕಥೆ ಹೇಳಿದ್ದರು. ನೀನು ಒಪ್ಪಿದರೆ ಅವನೊಡನೆ ಕಾಸು ಖರ್ಚಿಲ್ಲದೇ ಮದುವೆ ಆಗುತ್ತದೆ ಎಂದು ಹೇಳಿದ್ದರು. ಅವಳು ಅವನನ್ನು ಮದುವೆಯಾಗಲು ಒಪ್ಪಿಕೊಂಡಳು. ಆದರೆ ಸತೀಶನೇ ತನಗೆ ಹೆಣ್ಣು ಎಂದರೆ ಜುಗುಪ್ಸೆ ಹುಟ್ಟಿದೆ ಎಂದು ಹೇಳಿ ಮೂರು ವರ್ಷ ಮದುವೆ ಮುಂದೂಡಿದ್ದ. ಈ ಮೂರು ವರ್ಷ ಅವಳ ಬದುಕಿನಲ್ಲಿ ಅಂಥ ವ್ಯತ್ಯಾಸ ಏನು ಆಗಿರಲಿಲ್ಲ. ಆದರೆ ಕಳೆದ ಆರು ತಿಂಗಳ ಹಿಂದೆ, ಮನೆ ವಾಯಿದೆ ತೀರಿ, ಐವತ್ತು ಸಾವಿರ ಸಾಲ ತೀರಿಸಲಾರದೆ ಮನೆ ಹೊರಟು ಹೋದಾಗ ಅವಳು ಕಂಗಲಾದಳು. ಬಾಡಿಗೆ ಕೊಟ್ಟು ಸಂಸಾರ ನಡಿಸಬೇಕಾದ ಪರಿಸ್ಥಿತಿ ಅಂಗಡಿ ನಿಂತು ಹೋಗಿ ಎಮ್ಮೆ ಹಾಲಿನ ವ್ಯಾಪಾರದಲ್ಲಿ ಮನೆ ನಡಿಯತೊಡಗಿತು. ಸ್ವಂತ ಮನೆ ಹೂಡಿದಾಗಲೇ ಹಾಗು ಹೀಗು ನಡೆಯುತ್ತ ಇತ್ತು. ಈಗ ಬಾಡಿಗೆ ಮನೆಯಲ್ಲಿ ಬದುಕು ಕಷ್ಟವಾಗಿತ್ತು. ಮೂರು ತಿಂಗಳಲ್ಲಿ ಅನಿರೀಕ್ಷಿತವಾಗಿ ಇವನನ್ನು ವಿವಾಹ ಆಗಿ ಬಂದಿದ್ದಳು. ಸಂಸಾರ ನಡೆಯುತ್ತ ಇತ್ತು. ಈಗ ಬಾಡಿಗೆ

ಮನೆಯಲ್ಲಿ ಬದುಕು ಕಷ್ಟವಾಗಿತ್ತು. ಮೂರು ತಿಂಗಳಲ್ಲಿ ಅನಿರೀಕ್ಷಿತವಾಗಿ ಇವನನ್ನು ವಿವಾಹ ಆಗಿ ಬಂದಿದ್ದಳು.

ಒಂದು ದಿನ ಕಾವೇರಮ್ಮ ಹೇಳಿ ಕಳಿಸಿದ್ದರು.ಮೂರು ತಿಂಗಳ ಹಿಂದಿನ ದಿನ ಶುಕ್ರವಾರ ಅವಳು ಹೋಗಿದ್ದಳು. ಮಗಳು ಮಂಗಳಾಳ ಮನೆಯಲ್ಲಿದ್ದರು ಆಕೆ.

"ಬಾಮ್ಮ ಕೂತ್ಕೊ ನೋಡು ನಿನಗೆ ಕಂಕಣಬಲ ಬಂದಿದೆ ಅನಿಸತ್ತೆ, ನಮ್ಮ ಸತೀಶ ಮದುವೆಗೆ ಒಪ್ಪಿದ್ದಾನಂತೆ, ಮೂರು ದಿವದ ಹಿಂದೆ ಕೂಗು ಅಂದಿದ್ದ ಸುಶೀಲಳಿಗೆ ಅವಳು ಈಚೆ ಅಂದಿದ್ದಳು" ಎಂದರು ಕಾವೇರಮ್ಮ.

"ಹೌದು ! ಮಾಮಿ ! ಈ ದಿನ ಐದು ನೀರು" ಎಂದಳು.

"ಸರಿ ನಮ್ಮನೇಲೆ ಒಂದು ಮದುವೆ ಶಾಸ್ತ್ರ ಇಟ್ಕೊಳ್ತೀವಿ. ನಿಮ್ಮ ಅಪ್ಪ ಅಮ್ಮನಿಗೆ ಮೂರು ಕಾಸು ಖರ್ಚಿಲ್ಲ ಭಾವ ಹೇಗಿದ್ದರೂ ಮೈಸೂರಿಗೆ ಬಂದಿದ್ದಾರಂತೆ ರಮೇಶನಿಗೆ ಹೇಳಿ ಕರಿಸ್ಕೊಳ್ತೀನಿ. ನಿಂದು ಏನಿದೆ ಅಕ್ಕ ಪರಿತಾನಣೆ ಎಂದರು.

ಭಾಗಿರಥಮ್ಮ ಬೇಸರದಿಂದ, "ನಮ್ಮದೇನಿಲ್ಲಮ್ಮ, ಅವಳು ಏಕಾದಶಿ ನಾವು ಶಿವರಾತ್ರಿ. ಈ ಮದುವೆಗೆ ಅವನಿಗೆ ಇಷ್ಟವಿಲ್ಲ ಇನ್ನು ಸಾಸೋಲ ಮಾಡು, ವಾಲೆ, ತಾಳಿ, ಸೀರೆ ಅಂತ ನಾನು ಕೇಳಲಾರೆ. ಒಂದು ದಿನ ಸಿಹಿ ಊಟ ಮಾಡಿ ಆಯ್ತು ಅನಿಸು" ಎಂದಳು.

"ಇಂಥಾ ಧರ್ಮದ ಮದುವೆಗೆ ದತ್ತಂಶೆಟ್ಟರು ತಾಳಿ, ಗುಂಡು ಕೊಟ್ಟಾರೆ ಊಟದ ಖರ್ಚು ನಮಗಿರಲಿ. ಭಾವ ಬಂದರೆ ನೀವು ಹಸೆಗೆ ಕೂತುಕೊಳ್ಳಲಿ ನಮ್ಮ ಕೇಯುವರೆ ಮದುವೆ ಮಾಡಿಸ್ತಾರೆ" ಎಂದರು.

ಕಾವೇರಮ್ಮನ ಈ ಮಾತಿಗೆ ಭಾಗಿರಥಮ್ಮ, "ಸರಿ ಒಂದು ಲಗ್ನ ಆಗಿ ಮನೆಗೊಂದು ಸೊಸೆ ಬಂದರೆ ಎಲ್ಲಾ ಸರಿ ಹೋಗುತ್ತೆ. ನನಗಂತು ದುಡಿದು, ದುಡಿದು ಸೊಂಟಾ ಬಿದ್ದು ಹೋಗಿದೆ. ಅವನಿಗೆ ಹೆಂಡತಿ ಬೇಡದಿದ್ದರೆ ಬೇಡಾ ನನಗೆ ಸೊಸೆ ಬೇಕು" ಎಂದರು. ಅಲ್ಲಿ ಮಾತು ಮುಗಿಸಿ ದೀಪ ಹಚ್ಚುವ ಹೊತ್ತಾಗಿದೆ ಎಂದು ಮಂಗಳಾನ ಮನೆಯಿಂದ ಕಾವೇರಮ್ಮ ತಮ್ಮ ಮನೆಗೆ ಅವಳನ್ನು ಕರೆತಂದರು.

ದೀಪ ಹಚ್ಚಿ, "ಕಾಫಿ ಕುಡಿದು ಹೋಗು" ಎಂದರು. ಆ ವೇಳೆಗೆ

ಅನಿರೀಕ್ಷಿತವಾಗಿ ಸತೀಶ ಬಂದ ಮುಂದೆ ಅವನಿಗೆ ತನ್ನನ್ನು ತೋರಿಸಿ ಮದುವೆ ಗಟ್ಟಿ ಮಾಡಿಯೇ ಬಿಟ್ಟರು. ಕನಸಿನಲ್ಲಿ ನಡೆದಂತೆ ಮಾರನೆಯ ದಿನ ನಿಶ್ಚಯ ಅದರ ಮಾರನೆಯ ದಿನ ಮದುವೆ ಆಗಿತ್ತು. ನಿಶ್ಚಯಕ್ಕೆ ಸೀರೆ, ಮದುವೆಗೆ ಒಡವೆ ಯಾವುದೂ ತನ್ನಪಾಲಿಗಿಲ್ಲ. ನಿಶ್ಚಯಕ್ಕೆ ತೆಂಗಿನಕಾಯಿ, ಅಕ್ಕಿ ಅಡಿಕೆ ಉಡಿ ತುಂಬಿದರು, ಮದುವೆಗೆ ಮಾರನೆಯ ದಿನ ತಾಯಿ ಕಾವೇರಮ್ಮನ ಮನೆಯಲ್ಲಿ ಎಣ್ಣೆ ಹಚ್ಚಿ ಎರೆದಿದ್ದರು. ಊರಿನ ಧರ್ಮಾತ್ಮರಾದ ದತ್ತಂ ಶೆಟ್ಟರು, ಆರುಗಜದ ಕೃತಕ ಜರಿ ಅಂಚಿನ ಬಿಳಿ ಸ್ಪನ್ ಸಿಲ್ಕ್ ಸೀರೆ ಕೊಟ್ಟಿದ್ದರು ಅದೇ ಧಾರೆ ಸೀರೆ ಅದನ್ನುಟ್ಟು ಮಂಗಳ ಗೌರಿ ಪೂಜೆ ಮಾಡಿದ್ದಳು. ಶೆಟ್ಟರೆ ಕೊಟ್ಟ ತಾಳಿ, ನಾಲ್ಕು ಗುಂಡುಗಳನ್ನು ಕರಿಮಣಿಯೊಂದಿಗೆ ಅರಿಶಿನ ದಾರದಲ್ಲಿ ಐವರು ಮುತ್ತೈದೆಯರು ಯಾರೋ ಪೋಣಿಸಿದ್ದರು ಅಂತು ಮದುವೆ ಶಾಸ್ತ್ರ ಆಯಿತು ಸತೀಶ ತನ್ನ ಕೊರಳಿಗೆ ತಾಳಿ ಕಟ್ಟಿದ್ದ.

ಸತೀಶನ ಮನಸ್ಸಿಗೆ ಇನ್ನು ಗೊಂದಲವಿತ್ತು. ತಾಳಿ ಕಟ್ಟಿದ ಅವನು ತನ್ನನ್ನು ಹೆಂಡತಿಯಾಗಿ ದಾಂಪತ್ಯಕ್ಕೆ ಸ್ವೀಕರಿಸಲಿಲ್ಲ. ತನ್ನ ಮನದಲ್ಲಿಯೂ ಆಗ ನೂರು ಚಿಂತೆಗಳು ಇದ್ದವು. ತಂದೆ–ತಾಯಿ ಸಾತ್ವಿಕರು, ಇದುವರಿಗೆ ಅರೆ ಹೊಟ್ಟೆ ಊಟ ಮಾಡಿಕೊಂಡಾದರು ಇದ್ದರು. ಈಗ ಅವರ ಗತಿ ಏನು ? ತನ್ನ ಬಳಿ ಇರುವ ಎಮ್ಮೆ ಮಾರಬೇಕು. ತಾಯಿಗೆ ಆ ಕೆಲಸ ಸಾಗುವುದಿಲ್ಲ ಪಿ.ಯು.ಸಿ. ಫೇಲಾದ ತಮ್ಮನನ್ನು ಓದಿಸಿ, ಫೇಲಾಗಿರುವ ಪಾರ್ಟ್ಸ್ ಕಟ್ಟಿಸಬೇಕು, ತಂದೆ ತನ್ನನ್ನು ನಂಬಿ ಇದ್ದ ಮನೆಯನ್ನು ಕಳೆದುಕೊಂಡರು. ಎಮ್ಮೆ ಹಾಲಿನ ವ್ಯಾಪಾರದಲ್ಲಿ ಆರು ವರ್ಷದಲ್ಲಿ ತಾನು ಐವತ್ತು ಸಾವಿರ ಸಂಪಾದಿಸಿ, ಮನೆ ಬಿಡಿಸಿಕೊಳ್ಳುವೆ ಎಂಬ ಅವಳ ಛಲ ಸುಳ್ಳಾಗಿತ್ತು. ಬೆರೆಯವರಂತೇ ಹಾಲಿಗೆ ನೀರು ಹಾಕದೇ ಎಮ್ಮೆಗೂ ಸರಿಯಾಗಿ ಮೇವು ತಿನ್ನಿಸಿ ಹೇಗೊ ಸರ್ಕಸ್ ಮಾಡಿ ತಿಂಗಳಿಗೆ ಐನೂರು ರೂ. ಮಾತ್ರ ಕೂಡಿ ಹಾಕಿದ್ದಳು. ಮುಂದೆ ಆರು ವರ್ಷಗಳಲ್ಲಿ ಒಂದು ಎಮ್ಮೆ ಹಾಲು ಕೊಡುವುದು ನಿಲ್ಲಿಸಿತು. ಎರಡನೆ ಕರು ಹಾಕಲಿಲ್ಲ ಅದು ಅಂತು ಇಂತು ಮುವ್ವತ್ತೆರಡು ಸಾವಿರ ರೂ.ಗಳಾಗಿತ್ತು.

ಮನೆ ಬಿಡಿಸಿಕೊಳ್ಳಲು ಅವಳು ಹೋರಾಡಲಿಲ್ಲ. ಮನೆ ಒತ್ತೆ ಹಾಕಿ

ಕೊಂಡ ಸಾಹುಕಾರನ ಪಾಲಾಯಿತು. ಮತ್ತೆ ಅಂಗಡಿ ಹೂಡಲಾಗಲಿಲ್ಲ. ಎರಡು ಸಾವಿರ ಖರ್ಚು ಮಾಡಿ, ಹಾಗುಹೀಗು ಮೂರು ತಿಂಗಳು ಕಳೆಯುವ ವೇಳೆಗೆ ಅನಿರೀಕ್ಷಿತವಾಗಿ ಮದುವೆ ಆಗಿ ಇಲ್ಲಿಗೆ ಬಂದಳು. ಆದರೆ ಇಲ್ಲಿಯೂ ವಿಧಿ ಅವಳನ್ನು ವಂಚಿಸಿತು. ಇದ್ದಕ್ಕಿದ್ದಂತೆ ಗಂಡನ ಉದ್ಯೋಗ ತೂಗು ಯ್ಯಾಲೆ ಆಡುತ್ತದೆ ಆರು ತಿಂಗಳು ಸಂಬಳವಿಲ್ಲ. ಅವನಿಗೆ ಬೇರೆ ಯಾವ ಕೂಡಿಟ್ಟ ಹಣದ ಆಧಾರವಿಲ್ಲ. ಗಟ್ಟಿ ಮುಟ್ಟಾದ ಈ ಮನೆ, ಮನೆಯ ಮುಂದೆ ವಿಶಾಲ ಜಾಗ.

ಕಿರಾಣಿ ಅಂಗಡಿ ಕೆಲಸದಲ್ಲಿ ಅವಳಿಗೆ ಅನುಭವವಿತ್ತು. ಅಲ್ಲಿ ಹೋಬಳಿ ಗಿಂತ ಇಲ್ಲಿ ಜಿಲ್ಲಾ ಮಟ್ಟದ ಈ ಊರಿನಲ್ಲಿ ಅಂಗಡಿ ನಡಿಯಬಹುದೆಂದು. ಅಂಗಡಿ ಹೂಡಿದಳು ಗೆದ್ದಳು ಮೂರು ತಿಂಗಳಲ್ಲಿ ಎಮ್ಮೆಗಳಿಗೆ ಗಿರಾಕಿ ಬಂದಿತ್ತು. ಒಂದು ಎಮ್ಮೆ ಅದರ ಎರಡು ಮರಿಗಳು ಇನ್ನೊಂದು ಎಮ್ಮೆ ಅದರ ಮರಿ ಆರು ವರ್ಷದ ಕೋಣಾ ಎಲ್ಲಾ ಮಾರಾಟವಾಗಿ ಕೈಗೆ ಮುವ್ವತ್ತು ಸಾವಿರ ರೂ.ಗಳು ಬಂತು. ತಂದೆ ಹೆಸರಲ್ಲಿ ಮುವ್ವತ್ತು ಸಾವಿರ ರೂ. ಮಂತ್ಲಿ ಸ್ಕೀಮ್ ಇಟ್ಟಳು. ಅದೇ ಆತನಿಗೆ ಆಧಾರ. ತಿಂಗಳಿಗೆ ನಾನ್ನೂರು ರೂ.ಗಳವರಿಗೆ ಬರುತ್ತಿತ್ತು. ತಾಯಿ ನೂರೈವತ್ತು ಬಾಡಿಗೆ ಸಲ್ಲಿಸಿ ಉಳಿದ ಹಣದಲ್ಲಿ ಜೀವನ ನಡೆಸುತ್ತಿದ್ದಳು. ಇತ್ತ ಅಂಗಡಿಯಿಂದ ಹೇಗೊ ಜೀವನ ನಡೆಯುತ್ತಿತ್ತು. ಆದರೆ ಅತ್ತೆ ತನ್ನ ಪಾಲಿನ ವೈರಿ ಆಗಿ ದ್ದಾರೆ. ಅಂಗಡಿ ಬಗ್ಗೆ ಅಪರಿಮಿತ ದ್ವೇಷವಿದೆ ಆಕೆಗೆ. ತನ್ನ ಮನೆ, ತನ್ನ ಮನೆಯ ಮುಂಭಾಗ ಇಲ್ಲಿ ಅಂಗಡಿ ಏಕೆ ಹೂಡಿದೆ ? ಎನ್ನುತ್ತಾರೆ. ನಿಜ. ಹೊರಗೆ ಮನೆ ಮಾಡಿ ಅಂಗಡಿ ಹೂಡಿದರೆ, ಅಂಗಡಿ ಹಾಗು ಮನೆ ಬಾಡಿಗೆ ಸೇರಿ ಸಾವಿರ ರೂ. ಕೊಡಬೇಕಾಗುತ್ತದೆ. ಇಲ್ಲಿ ಅತ್ತೆಯು ಎಲ್ಲಾ ಆಜ್ಞೆ ಪಾಲಿಸುತ್ತ ತಾನು ಹೇಗೆ ಬಾಳುವುದು ? ಗಂಡ ಕೈ ತುಂಬಾ ಸಂಪಾದಿಸು ತ್ತಿದ್ದರೆ ತಾನು ಹಗಲು ರಾತ್ರಿ ಮನೆಯಲ್ಲಿಯೇ ಉಳಿದು, ಆಕೆ ಹೇಳಿದಂತೆ ಎರಡೆರಡು ಬಾರಿ ಮಡಿ ಉಟ್ಟು ಅಡಿಗೆ ಮಾಡುತ್ತಿದ್ದೆ. ಆದರೆ ಈಗ ಪರಿ ಸ್ಥಿತಿ ಹಾಗಿಲ್ಲ, ಅಂಗಡಿಗೆ ತನ್ನ ಹಗಲು ರಾತ್ರಿಯ ದುಡಿಮೆ ಬೇಕಿದೆ. ಅಂಗಡಿ ಬೆಳೆಯುತ್ತಿದೆ, ರಾತ್ರಿ ಒಂಭತ್ತಕ್ಕೆ ಬಂದು ಊಟ ಮಾಡಿ, ಮಲ ಗುವ ವೇಳೆಗೆ ಸಾಕಾಗಿರುತ್ತದೆ. ಬಚ್ಚಲ ಮನೆ ಒಲೆಗೆ ಹೊಟ್ಟು ತುಂಬಿ

ಕೆಂಡಾ ಹಾಕಿರುತ್ತಾರೆ. ಆಗ ಆ ಹೊಗೆಯಲ್ಲಿ ಪಾತ್ರೆ ತೊಳೆಯುವ ಹಾಗಿಲ್ಲ ಬೆಳಿಗ್ಗೆ ಎದ್ದು ಹೊರಗೆ ಕಸ ಗುಡಿಸಿ ನೀರು ಹಾಕುವುದರಿಂದ ಎಲ್ಲಾ ತಾನೇ ಮಾಡಿಕೊಳ್ಳಬೇಕು.

ಚಿಂತಿಸಿ ಸೋತು ಹೋದಳು ಆಕೆ ತುಂಬಾ ಮಡಿ ಬೇರೆ ಜಾತಿಯವರನ್ನು ಕೆಲಸಕ್ಕೆ ಇಟ್ಟುಕೊಳ್ಳಲು ಒಪ್ಪುವುದಿಲ್ಲ. ತನ್ನನ್ನು ತುಂಬಾ ಪ್ರೀತಿಯಿಂದ ಆದರಿಸುತ್ತ ಇದ್ದವರು.ದಿನೇಶನ ತಾಯಿ ಅವರ ಬಳಿ ಹೇಳಿಕೊಂಡು,

"ಯಾರಾದರೂ ಬ್ರಾಹ್ಮಣರು ಅಡಿಗೆ ಕೆಲಸಕ್ಕೆ ಸಿಕ್ತಾರಾ ?" ಎಂದಾಗ ಆಕೆ ಉತ್ತರಿಸಿ, "ಬೇರೆ ಯಾರನ್ಯಾಕೆ ಹುಡುಕ್ತಿ ? ನಾನೇ ಬಂದು ಎರಡು ಹೊತ್ತು ಮಡೀಲಿ ಅಡಿಗೆ ಮಾಡಿಟ್ಟು ಹೋಗ್ತೀನಿ. ಮಗಳ ಮದುವೆಗೆ ದುಡ್ಡು ಕೂಡಿ ಹಾಕ್ತ ಇದ್ದೀನಿ ತಿಂಗಳಿಗೆ ನೂರು ರೂ ಕೊಡು" ಎಂದರು.

ಅವಳು ಅನುಮಾನದಿಂದ, "ನೀವು ನಿಮ್ಮನೆಯ ಕೆಲಸವೂ ತೂಗಿಸಿ ಕೆಲಸ ಮಾಡಬಲ್ಲಿರಾ ?" ಎಂದಳು.

"ನೋಡಮ್ಮ , ನಮ್ಮನೇಲಿ ನಮ್ಮ ದೀಪಾ, ಪಾತ್ರೆ ಕಸಾ, ಬಟ್ಟೆ ಎಲ್ಲಾ ಮಾಡ್ತಾಳೆ. ಗಂಡಾ–ಹೆಂಡ್ತಿ ಎರಡು ಮಕ್ಕಳಿಗೆ ನಾನು ಕಾಫಿ ತಿಂಡಿ ಅಡಿಗೆ. ಮಾಡ್ಬೇಕು. ಕೈ ಕಾಲಿಗೆ ಕಚ್ಚಿಕೊಳ್ಳೋ ಮಕ್ಕಳು ಯಾರಿವೆ ? ಇಪ್ಪತ್ತು ವರ್ಷದ ದಿನೇಶ, ಇಪ್ಪತ್ನಾಕು ವರ್ಷದ ದೀಪ, ಇವರ ಸಂಬಳದಲ್ಲಿ ಹೇಗೋ ಊಟ ತಿಂಡಿ ನಡೀತಿದೆ, ದಿನೇಶನಿಗೆ ಒಂದು ದಾರಿ ಮಾಡಿದೆ, ಹಾಗೆ ದೀಪ ಮದುವೆಗೂ ಒಂದು ದಾರಿ ಮಾಡಮ್ಮ. ನನ ತಮ್ಮನ ಮಗನೆ ಇದ್ದಾನೆ, ಅವನೂ ಒಂದು ಚಿಟ್‌ಫಂಡಲ್ಲಿ ಕೆಲಸ ಮಾಡಿ ಆರ್ನೂರು ರೂ. ಸಂಪಾದಿಸ್ತಾನೆ. ತಂದೆ ತಾಯಿ ಇನ್ನು ನಾಕು ಜನ ಮಕ್ಕಳಿದ್ದಾರೆ. ಅವರಪ್ಪನು ದುಡಿತಾರೆ, ಹೊಲ ಮನೆ ಇದೆ, ಚಿನ್ನಾ ಬಣ್ಣಾ ಇಲ್ಲದೇ ಹೋದರೂ, ಹೊಟ್ಟೆ ತುಂಬಾ ಅನ್ನಾ ಇರೋ ಮನೆ, ನಮ್ಮ ದೀಪಾನು ಕೆಲಸ, ಬೊಗಸೆ ಚೆನ್ನಾಗಿ ಕಲ್ತಿದ್ದಾಳೆ, ತುಂಬಿದ ಮನೆ ಹೊಂದಿಕೊಂಡು ಹೋಗ್ತಾರೆ, ಆದರೆ ಈ ಮದುವೆಗೆ ಹತ್ತು ಸಾವಿರವಾದರೂಬೇಕು. ದಿನೇಶನಿಗೆ ಐನೂರು ಕೊಡ್ತಿದ್ದಿ, ನೂರಿಟ್ಕೊಂಡು ನಾನ್ನೂರು ನನ್ನ ಕೈಗೆ ಹಾಕ್ತಾನೆ ನನಗೆ ನೂರು ಕೊಡು. ತಿಂಗಳಿಗೆ ಐನೂರು ರೂ. ಬ್ಯಾಂಕಿಗೆ ಕಟ್ಟೀನೆ ಎರಡು ವರ್ಷದಲ್ಲಿ ಮದುವೆ ಆಯ್ತು ಅನಿಸ್ತೀನಿ" ಎಂದರು.

ಅವಳು ಒಪ್ಪಿ—"ಎರಡು ಮನೆ ಕೆಲಸಕ್ಕೆ ಸಮಯ ಹೇಗೆ ಸರಿ ಮಾಡ್ಕೋತೀರಿ ?" ಎಂದಳು.

ಬೆಳಿಗ್ಗೆ ಆರಕ್ಕೆ ಎದ್ದು, ನಿಮ್ಮನೆ ನೀರು ನಿಡಿ ಅಡಿಗೆ ಮುಗಿಸಿ, ಎಂಟೂ ವರೆಗೆ ನಿಮ್ಮನೆಗೆ ಬರ್ತೀನಿ, ಹತ್ತು ಗಂಟೆಗೆ ಮನೆಗೆ ಹೋಗ್ತೀನಿ. ಸಂಜೆ ಏಳು ಗಂಟೆಗೆ ಬಂದು ಒಂದು ಗಂಟೆಯಲ್ಲಿ ನಿಮ್ಮನೆ ಅಡಿಗೆ ಮುಗಿಸಿ ಹೊರಟು ಬಿಡ್ತೀನಿ. ನಿಮ್ಮತ್ತೆ ಮಡಿ ವಿಷಯ ನನಗೆ ಗೊತ್ತು, ನಮ್ಮ ಜನಮಾನರು ಪೂಜೆ ಮಡಿ ಜಾಸ್ತಿ. ನಮ್ಮನೆಗೆ ಬಂದು ಆಕಿ ತೀರ್ಥ ಪ್ರಸಾದ ತಗೊಳ್ಳೋರು ನಾನು ಮಡೀಲಿ ಅಡಿಗೆ ಮಾಡ್ತೀನೀಂದ್ರೆ ಅವರು ಒಪ್ತಾರೆ. ಬೇರೆಯವ ರಾದ್ರೆ ಮಡಿ ಮೈಲಿಗೆ ಸರಿ ಹೋಗದ ಆಕೆ ಒಪ್ಪಲ್ಲ" ಎಂದರು.

ಅವಳ ಚಿಂತೆ ಅರ್ಧ ಪರಿಹಾರವಾಯಿತು. ಮಾರನೆಯ ದಿನದಿಂದಲೇ ಅವರಿಗೆ ಬರಲು ಒಪ್ಪಿಸಿ ಬಂದಳು. ಆ ದಿನ ಅಡಿಗೆ ಮಾಡಲು ಅವನು ಬಂದಾಗ—

"ಏನೇ ಇದು ಅಧ್ವಾನ ? ಒಂದು ಮನೇಲಿ ಎರಡು ಒಲೆ ಹೂಡಿ ಅಡಿಗೆ ? ಸೊಸೆ ಬಂದರೂ ನನಗೆ ಕಾಟಕರ್ಮ ತಪ್ಪಲಿಲ್ಲ" ಎಂದಳು.

ಅವಳು ಶಾಂತಳಾಗಿ—"ಅಮ್ಮ—ನಿಮ್ಮ ಮಗಳ ಸಂಬಳ ಬರೋವರಿಗೆ ಅಂಗಡಿಯಿಂದಲೇ ನಮ್ಮ ಜೀವನ ನಡೀಬೇಕು. ಅಂಗಡಿ ಮುಚ್ಚಿದರೆ, ಮೂರು ತಿಂಗಳುದ್ದ ಯಾರನ್ನು ಕೇಳಬೇಕು ಹೇಳಿ ?" ಎಂದಳು.

ಸತೀಶಾ ಒಳಗಿನಿಂದ ಬಂದವನು ಸಿಡುಕಾಗಿ "ಏಕಮ್ಮ ಇಲ್ಲದ ಅಬ್ಬರಾ ಮಾಡ್ತಿ ? ಮನೆ ಕೆಲಸವೂ ತೂಗಿಸಿಕೊಂಡು ಮನೆಗೆ ಸಂಪಾದಿಸ್ತಾ ಇರೋಳು ಅವಳು ನಿನಗೆ ಒಂದಿಷ್ಟು ಅಡಿಗೆ ಕೆಲಸಾ, ಕಾಫಿ ತಿಂಡಿ, ನಾಲ್ಕು ಜನಕ್ಕೆ ಮಾಡ್ಲಿಕ್ಕಾಗಲ್ವಾ ?" ಎಂದ.

"ಅವಳು ತವರು ಮನೆಯವರನ್ನೆಲ್ಲಾ ತಂದು ಇಲ್ಲಿ ಕೂಡಿ ಹಾಕಿ ಕೊಂಡರೇ ನಾನು ಎಲ್ಲರಿಗು ಅಡಿಗೆ ಮಾಡಿ ಹಾಕಿ ಕೊಂಡಿರಲಾ ? ನಾನು ಅಡಿಗೆಯವಳಲ್ಲಪ್ಪಾ, ಬೇಕಾದರೆ ಮಗ ಸೊಸೆಗೆ ಮಾಡಿ ಹಾಕ್ತೇನೆ, ಆದರೆ ಈ ನಡುವೆ ಏನೇನು ಕೈಲಾಗಲ್ಲ" ಎಂದು ಅಳತೊಡಗಿದರು.

"ಈ ರಾಮಾಯಣಾ ಸಾಕಾಗಿದೆ. ನೀನು ನಿನ್ನ ತಂಗಿಯ ಮನೆಗೆ ಹೊರಟು ಬಿಡು" ಎಂದ. ಆಕೆ ಅಳುತ್ತಲೆ ಇದ್ದರು. ಅವಳ ಸ್ಟೌವ್ ಹಚ್ಚಿ

ತಮ್ಮ ಕಡೆಯ ಅಡಿಗೆ ಮಾಡಿಕೊಂಡಳು. ಸತೀಶಾ ಊಟಾ ಮಾಡಿ, ಹೊರಗೆ ಹೋದ.

“ಅಮ್ಮ ನೀವು ಊಟಾ ಮಾಡಿ” ಎಂದ ಮೃದುವಾಗಿ.

“ದರಿದ್ರದೋಳೀ ಮಗನ್ನ ಬುಟ್ಟಿಗೆ ಹಾಕಿ ಕೊಂಡೆಯಲ್ಲ, ಅವನು ಎಂದೂ ನನಗೆ ಒಂದು ಮಾತು ಅನ್ನಲಾರದವನು ಬಾಯಿಗೆ ಬಂದದ್ದು ಅಂದು ಹೋದ. ಹೊಟ್ಟೆ ತುಂಬಿ ಹೋಗಿದೆ. ಈಗ ನನಗೆ ಊಟಾ ಮಾಡಿ ಅಂತ ಕಳ್ಳ ಉಪಚಾರ ಮಾಡ್ತಿಯಾ ಮುಳ್ಳಿ” ಎಂದರು.

“ಅಮ್ಮ ನಿಮ್ಮ ಮನಸಿನಲ್ಲಿ ಏನಿದೆ ಹೇಳಿ ?” ಎಂದಳು.

“ನನಗೆ ಎರಡು ಹೊತ್ತು ಬಿಸಿ ಅಡುಗೆ ಬೇಕು. ನಾನು ಈ ಕಟ್ಟೆಗೆ ಒಲೆ ಹಚ್ಚಿ, ಅನ್ನ ಗೊಡ್ಡು ಸಾರು ಮಾಡ್ಕೊಂಡು ತಿನ್ನೋದು. ನೀವು ಆ ಸ್ಟೌವ್ ಮೇಲೆ ಬಗೆ ಬಗೆ ತರಕಾರಿ, ಚಪಾತಿ, ಹುಳಿ, ಪಲ್ಯ ತಿನ್ನೋದು ಹೋಗ್ಬೇಕು. ಒಂದು ಮನೇಲಿ ಎರಡು ಒಲೆ ಹಚ್ಚಬಾರದು” ಎಂದರು.

“ಅಮ್ಮ ನಾಳೆಯಿಂದ ಪದ್ಮಮ್ಮನಿಗೆ ಅಡಿಗೆಯನ್ನು ಒಪ್ಪಿಸಿದ್ದೀನಿ; ಬೆಳಿಗ್ಗೆ ಸಂಜೆ ಮಡೀಲಿ ಬಂದು ಅಡಿಗೆ ಮಾಡ್ತಾರೆ. ಎಲ್ಲರಿಗೆ ಒಂದೇ ಅಡಿಗೆ ಬೆಳಿಗ್ಗೆ ಅನ್ನ ಎರಡು ತರಕಾರಿ ಹಾಕಿ ಹುಳಿ, ಒಂದು ಪಲ್ಯ, ಒಂದು ಚಟ್ನಿ ಚಪಾತಿ, ರಾತ್ರಿ ಬಿಸಿಸಾರು ಅನ್ನ, ಪಲ್ಯ ಹೇಳಿದ್ದೇನೆ. ಪದ್ಮಮ್ಮನ ಮನೇಲಿ ನೀವು ತೀರ್ಥ ಪ್ರಸಾದ ತಗೋತೀರಲ್ಲ. ಅವರ ಮನೆ ಮಡಿ ಒಪ್ಪಿಗೆ ಆಗುತ್ತದೆ” ಎಂದಳು.

ಭಾಗಿರಥಮ್ಮ ಸಶಂಕೆಯಿಂದ– “ಪದ್ಮಮ್ಮ ಅಡಿಗೆ ಮಾಡಿದ್ರೆ ನಾನು ಸಂತೋಷವಾಗಿ ಊಟಾ ಮಾಡ್ತೀನಿ. ಆದರೆ ತಮ್ಮನೆ ಕೆಲಸ ಬಿಟ್ಟು, ಅವರು ಇಲ್ಲಿ ಬಂದು ಮಾಡ್ತಾರೇನೆ ?” ಎಂದರು.

“ಅಮ್ಮ ಅವರ ಮಗಳ ಮದುವೆಗೆ ದುಡ್ಡು ಕೂಡಿಸ್ತಿದ್ದಾರೆ. ನಾನು ಹೀಗೆ ಅವರ ಸಹಾಯ ತಗೋತಿದ್ದೀನಿ” ಎಂದು ಎಲ್ಲಾ ವಿವರಿಸಿದಳು.

“ನಮ್ಮ ಅನ್ನ ನಾವು ಸಂಪಾದಿಸಿದರೆ ಸಾಕಾಗಿದೆ. ನನ್ನ ಮಗನ ಸಂಬಳದಲ್ಲಿ ಬಂದ ಮೇಲೆ ಈ ಅಡಿಗೆಯವರು, ಆಳುಕಾಳುಗಳು ಪಾರು ಪತ್ಯ ನನಗೆ ಬೇಡ; ಇದೆಲ್ಲಾ ನಾನು ಸಹಿಸಲ್ಲ. ಮಗನ ಸಂಬಳ ಜತನವಾಗಿ ನೋಡಿಕೊಳ್ಳೋಳು ನಾನು” ಎಂದರು.

"ಹಾಗೆ ಮಾಡಿ ಅಮ್ಮ, ಆಗ ನಾನು ಅಂಗಡಿ ಬೇರೆ ಕಡೆ ವರ್ಗಾಯಿಸ್ತೀನಿ. ನಮ್ಮ ತಂದೆ, ತಮ್ಮ ಅಂಗಡಿ ನೋಡಿಕೊಳ್ತಾರೆ. ನಿಮ್ಮ ಮಗನ ಸಂಬಳದಲ್ಲಿ ತಾವು ಜೀವನವನ್ನು ನಡೆಸುವಾಗ ನಾನು ಮಡಿ ಸೀರೆ ಕಚ್ಚೆ ಹಾಕಿ ಉಟ್ಟು ಎರಡು ಹೊತ್ತು ಅಡಿಗೆ ಮಾಡಿಕೊಡುತ್ತೇನೆ" ಎಂದಳು.

"ಈಗಂತು ಎರಡು ಹೊತ್ತು ಮುಸುರೆ ಉಜ್ಜಿಕೊಂಡು ಬಿದ್ದಿರು. ಅಡಿಗೇನೋ ಪದ್ಮಮ್ಮನ ಗೊತ್ತು ಮಾಡಿ, ಧಿಮಾಕು ಮಾಡ್ತಿದ್ದಿ. ಆದರೆ ಕಸ ಮುಸುರೆಗೆ ಬೇರೆ ಹೆಂಗಸರು ಬಂದರೆ ನಾನು ಸುಮ್ಮನಿರಲ್ಲ" ಎಂದರು.

ಅವಳು ಮಾತಾಡದೆ ಸುಮ್ಮನಿದ್ದಳು. ಸತೀಶ ಎಲ್ಲಾ ಕೇಳಿಸಿಕೊಂಡು ಜುಗುಪ್ಸೆಗೊಂಡ.

ಈ ಹುಡುಗಿ ಎಷ್ಟು ತಗ್ಗಿ ನಡೆಯುತ್ತಾಳೆ. ಆದರೆ ಅಮ್ಮ ಹೇಗೆ ಜೋರು ಮಾಡುತ್ತಾಳೆ, ಆದರೆ ಅಮ್ಮ ಹೇಳೆ ಜೋರು ಮಾಡುತ್ತಾಳೆ. ನ್ಯಾಯವಾಗಿ ತನ್ನ ಅಂಗಡಿ ಕೆಲಸಕ್ಕೆ ಬಹು ವೇಳೆ ಉಪಯೋಗಿಸುವ ಆ ಹುಡುಗಿಗೆ ನೆರವಾಗಿ ತಾನು ಅಡಿಗೆ. ಕೆಲಸ ಮಾಡಿಕೊಂಡಿರಬಾರದೆ ? ಎನಿಸುತ್ತಿತ್ತು. ಈ ಮನೆಗೆ ಸೇರಿ ಆ ಹುಡುಗಿಗೆ ಏನು ಸುಖ ಸಿಕ್ಕ ಹಾಗಾಯಿತು ?

ತನ್ನಿಂದ ಸುಖ ದಾಂಪತ್ಯವಿಲ್ಲ. ತನಗೆ ಹಿಂದೆ ಸುಮನಳಿಂದಾದ ಮೋಸ ಮನಸ್ಸಿಗೆ ಜುಗುಪ್ಸೆ ಮೂಡಿಸಿದೆ. ಆಫೀಸಿನ ಪರಿಸ್ಥಿತಿ ಹಾಗಾಗಿ ಇವಳೇ ತನಗೆ ಅನ್ನ ಹಾಕುವಂತೆ ಆದಾಗ ಇವಳನ್ನು ಮುಟ್ಟಲು ಒಲಿಸಲು ಮನಸ್ಸಾಗುತ್ತಿಲ್ಲ. ಅವಳು ತನ್ನನ್ನು ಓಲೈಸಲು ಪ್ರಯತ್ನಿಸಲಿಲ್ಲ. ತುಂಬಾ ಗಂಭೀರವಾಗಿ, ಯಾಂತ್ರಿಕವಾಗಿರುತ್ತಾಳೆ. ಕೋಣೆಯಲ್ಲೇ ಕೆಳಗೆ ಚಾಪೆ ಹಾಸಿ ದಿಂಬಿಟ್ಟುಕೊಂಡು ಮಲಗುತ್ತಾಳೆ. ತಾನು ಮಂಚದ ಮೇಲೆ ತನ್ನ ಹಾಸಿಗೆಯ ಮೇಲೆ ಮಲಗುತ್ತಾಳೆ. ಇದುವರಿಗೂ ಯಾಂತ್ರಿಕವಾಗಿತ್ತು ಬದುಕು. ಆದರೆ ಅಮ್ಮ ಬಂದು ಅವಳನ್ನು ಕಿರಿಕಿರಿ ಮಾಡಲು ಪ್ರಾರಂಭಿಸಿದಾಗ ಮನಸು ಧ್ರವಿಸಿತು. ಆಗಾಗ ಅವಳಿಗೆ ಸಮಾಧಾನ ಹೇಳಬೇಕೆನಿಸುತ್ತಿತ್ತು.

ಪದ್ಮಮ್ಮ ಬಂದು ಅಡಿಗೆ ಮಾಡತೊಡಗಿದರು. ಆದರು ತಾಯಿ ಧಾಂಧಾಟ ಅಸಮಾಧಾನ ನಿಲ್ಲಲಿಲ್ಲ. ಬೆಳಿಗ್ಗೆ ಎದ್ದು ನಾನೇ ಕಾಫಿ ಕಾಸ್ಕೋ

ಬೇಕು. ಲೌಡಿ ! ಧಿಮಾಕು ನೋಡು ಸ್ಟೌವಲ್ಲಿ ಮಾಡಿ ಗಂಡಸಿಗೆ, ತಮ್ಮನಿಗೆ ಕೊಟ್ಟು ತನಗಿಂತ ಮುಂಚೆ ತಾನೇ ಕುಡಿತಾಳೆ. ಆಶ್ಚರ್ಯ ಎಂದರೇ ಈ ಹಾರಾಟ ಯಾವುದಕ್ಕೂ ಗೋದಾ ಉತ್ತರ ಕೊಡುತ್ತಿರಲಿಲ್ಲ.

ಒಮ್ಮೆ ಸತೀಶನೇ ಬೇಸತ್ತು "ಅಮ್ಮ ನಿಂದು ಅತಿ ಆಯ್ತು, ನಾವಿಬ್ಬರು ತಿಂತಾ ಇರೋದು ಅವಳು ಸಂಪಾದಿಸಿದ ಅನ್ನ ನಿನಗೆ ಆ ಪ್ರಜ್ಞೆ ಸಹ ಇಲ್ವಾ ? ಆ ಹುಡುಗಿ ಹೊರಗೆ ಅಂಗಡಿ ಕೆಲಸ ಅಷ್ಟು ಮಾಡಿಕೊಂಡು ಮನೇಲಿ ಪಾತ್ರೆ ಬಟ್ಟೆ, ಕಸ ಎಲ್ಲಾ ತಾನೇ ನಿರ್ವಹಿಸಿ ಬಳಲಿ ಬೆಂಡಾಗ್ತಾಳೆ. ನೀನು ಕೂತ ಕಡೆ, ಏನು ಹೀಗೆ ಧಿಮಾಕು ಮಾಡ್ತಿಯಮ್ಮ ?" ಎಂದ.

ಮಗ ಬೈದಾಗ ಅವರು ಅತ್ತು ಕರೆದು, ಮಾಡುವರೇ ಹೊರತು ತಾಯಿ ಏನು ಸುಧಾರಿಸಲಿಲ್ಲ. ಅವನ ಸಂಬಳ ಬರಲು ಇನ್ನು ಒಂದು ತಿಂಗಳು ಉಳಿದಿತ್ತು.

ಭಾಗೀರಥಮ್ಮ ಆಗಾಗ "ನಿನ್ನ ಸಂಬಳ ತಂದು ನನ್ನ ಕೈಗೆ ಹಾಕು. ಆ ಮನೆ ಮುಂದಿನ ಅಂಗಡಿ ತೆಗೆಸ್ತೀನಿ. ಅದನ್ನ ಕೆಡವಿಸಿ, ಪುಟ್ಟ ಮನೆ ಕಟ್ಟಿಸ್ತೀನಿ" ಎಂದು ಏನೇನೋ ಹೇಳುವರು. ತಮ್ಮ ಮನೆ, ತಮ್ಮ ಜಾಗ, ಮಗ ಸೊಸೆಗೆ ಅದರ ಮೇಲೆ ಏನು ಹಕ್ಕಿಲ್ಲವೆಂದು ಅವರ ಭಾವನೆ.

ಒಂದು ದಿನ ಮೂರು ಗಂಟೆಯ ಸಮಯ. ಗೋದಾ ಅಂಗಡಿಯಲ್ಲಿ ಕುಳಿತಿದ್ದಳು. ಯಾರೋ ಬಂದ ಹಾಗಾಯಿತು. ಸಾಮಾನು ಕೊಳ್ಳಲು ಬಂದ ಗಿರಾಕಿ ಎಂದು ಓದುತ್ತಿದ್ದ ಪುಸ್ತಕವನ್ನ ಕೆಳಗಿರಿಸಿ, ತೀರ ಅಂಗಡಿ ಮುಚ್ಚಿ ಬೀಗ ಹಾಕುವಾಗ ಬಂದರಲ್ಲ ಎಂದು ನೋಡಿದರೆ ಸತೀಶ.

"ಗೋದಾ ನಿನ್ನ ಕೂಡ ಕೊಂಚ ಮಾತಾಡಬೇಕಿತ್ತು. ಕೊಂಚ ನನ್ನ ಜೊತೆ ಬರ್‍ತಿಯಾ ?" ಎಂದ.

ಗೋದಾ ತಮ್ಮನಿಗೆ ಅಂಗಡಿ ನೋಡಿಕೊಳ್ಳಲು ಹೇಳಿ ಅವನೊಂದಿಗೆ ಹೊರಟಳು. "ಅಂಗಡಿ ಬೀಗ ಹಾಕಿ, ಕಾಫಿ ಅಂತ ಮನೆಗೆ ಹೋಗಬೇಡಾ, ಇಲ್ಲಿಂದಲೇ ಇನ್‌ಸ್ಟ್ಯೂಟಿಗೆ ಹೋಗು" ಎಂದು ತಮ್ಮನಿಗೆ ಹೇಳಿದಾಗ ಸತೀಶ ಅವಳ ಬುದ್ಧಿವಂತಿಕೆ ಮೆಚ್ಚಿದ.

ಸತೀಶ ಅವಳನ್ನು ಸ್ಕೂಟರ್ ಮೇಲೆ ಕೂಡಿಸಿಕೊಂಡು, ಆ ಜಿಲ್ಲೆಯ

ದೊಡ್ಡ ಹೋಟೆಲಿಗೆ ಕರೆತಂದ. ಇಬ್ಬರು ಪ್ಯಾಮಿಲಿ ರೂಂನಲ್ಲಿ ಕುಳಿತರು. ಸತೀಶ ಜಾಮೂನು, ಮಸಾಲೆ ದೋಸೆಗೆ ಅಪ್ಪಣೆ ಮಾಡಿದ.

ಆರು ತಿಂಗಳಿಂದ ನಿನ್ನ ಗುಣ ಸ್ವಭಾವ ಪರೀಕ್ಷೆ ಮಾಡಿದ್ದೇನೆ ಗೋದಾ ನೀನು ಚೊಕ್ಕ ಚಿನ್ನ ಆದರೆ ನಮ್ಮ ಸಂಸಾರಕ್ಕೆ ತುಂಬ ಪರೀಕ್ಷೆಗಳು ಬರ್ತಾ ಇವೆ. ನನಗೆ ಬಾಂಬೆಗೆ ವರ್ಗ ಆಗಿದೆ, ಜೊತೆಯಲ್ಲೆ ನನ್ನ ಗೆಳೆಯ ಒಬ್ಬನಿಗೂ ಆಗಿದೆ. ಅವನ ದೊಡ್ಡಪ್ಪನ ಮಗ ನಾಲ್ಕು ಜನ ಗೆಳೆಯರೊಂದಿಗೆ ಒಂದು ರೂಮ್ ಮಾಡಿಕೊಂಡು ಇದ್ದಾನೆ. ಸದ್ಯಕ್ಕೆ ನಾವಿಬ್ಬರು ಅಲ್ಲಿ ಹೋಗಿ, ಅವರೊಂದಿಗೆ ಕೂಡಿಕೊಳ್ತೀನೆ. ಮನೆ ಮಾಡಬೇಕಾದರೆ ಕಡೆಪಕ್ಷ ಒಂದು ವರ್ಷವಾದರೂ ಆಗುತ್ತೆ. ನೀನು ಅಮ್ಮನ ಗೋಣಗಾಟ ಅನುಭವಿಸಿ ಕೊಂಡಿರ ಬೇಕು. ನಿನ್ನ ತಾಳ್ಮೆ, ಸದ್ಗುಣ, ಎಲ್ಲಾ ನಾನು ಪರೀಕ್ಷಿಸಿದ್ದೇನೆ. ಆದರೆ ಅಮ್ಮ ಏಕೆ ಕಿರಿಕಿರಿ ಮಾಡ್ತಾಳೆ ? ಆಗ ಆ ಪಾಪಿಷ್ಟ, ದುಷ್ಟ ಸೊಸೆ ಸಿಕ್ಕಿದ್ದಳು. ಒಂಭತ್ತು ಗಂಟೆಗೆ ಎದ್ದು, ಬೆಡ್ ಕಾಫಿ ಕುಡಿದು, ಹತ್ತುಕಾಲಿಗೆ ಸಿಡಿಸಿಡಿ ಮಾಡ್ತ 'ಹೊತ್ತಾಯ್ತು..... ಬೇಗ ಬಡಿಸಿ ಅಂತ ಊಟಕ್ಕೆ ಕೂಡೋಳು. ಅವಳಿಗೆ ನಮ್ಮಮ್ಮ ತುಪ್ಪ ಬಿಸಿಸಾರು, ಬಗೆಬಗೆ ಪಲ್ಯಗಳು ಬಡಿಸಿ. 'ನಿಧಾನವಾಗಿ ತಿನ್ನಮ್ಮ' ಅಂತ ಉಪಚರಿಸೋಳು. ಆದರೆ ನೀನು ಬೆಳಿಗ್ಗೆ ಐದು ಗಂಟೆಗೆದ್ದು ದುಡೀತೀ ದುಡ್ಡು ಕೊಟ್ಟು, ಆಕೆಗೆ ಸುಲಭ ಆಗಲೀಂತ ಅಡಿಗೆಯವರನ್ನ ನೇಮಿಸಿದ್ದಿ. ಅದಕ್ಕು ನಿನ್ನದೇ ಧಿಮಾಕು ಅಂತಾಳೆ. ತಾನು ಕೂತು ತಿಂತಾ ಇದ್ದಾಳೆ, ನಾನು ನಿನ್ನ ಪರವಾಗಿ, ವಾದ ಮಾಡಿದಷ್ಟು ಇನ್ನು ನಿನ್ನ ಮೇಲೆ ಹಠ ರೋಷ, ಸಾಧಿಸ್ತಾಳೆ" ಎಂದ.

ಗೋದಾ ಧ್ವನಿ ತಗ್ಗಿಸಿ. "ಹೌದು ! ಈಗ ಮನೆ ನಂದು. ನನ್ನ ಮನೇಲಿರಬೇಕಾದ್ರೇ ನಾನು ಹೇಳಿದ ಹಾಗೆ ಕೇಳ್ಬೇಕು. ಅವಳ ಸಂಬಳ ಬರಲಿ ಮೊದಲು ನಿನ್ನ ಅಂಗಡಿ ತೆಗೆಸ್ತೀನೀಂತ ಹಾರಾಡ್ತಿರುತ್ತಾರೆ" ಎಂದಳು.

"ಅಂಗಡಿ ತೆಗಿಬೇಡಾ ಗೋದಾ ಒಂದು ವರ್ಷ ನಾನು ಇರಲ್ಲ. ನೀನು ಯಾವ ಹವ್ಯಾಸವೂ ಇಲ್ಲದೆ ಹೇಗೆ ಇರ್ತಿ ? ಈಗ ನನಗೆ ಆರು ತಿಂಗಳ ಸಂಬಳ ಬಡ್ಡಿ ಸಮೇತ ಇಪ್ಪತ್ತು ಸಾವಿರ ಬಂದಿದೆ, ಹದಿನೈದು ಸಾವಿರ ನಿನ್ನ ಕೈಗೆ ಕೊಟ್ಟು ಹೋಗ್ತೀನಿ. ನೀನು ಅಂಗಡಿ ಬಂಡವಾಳದ ಮೇಲೆ ಹಾಕ್ಕೊ. ನಾನು ಐದು ಸಾವಿರ ಬೊಂಬಾಯಿಗೆ ತಗೊಂಡು ಹೋಗ್ತೀನಿ. ಅಮ್ಮನ

ಮುಂದೆ ಸಂಬಳದ ವಿಷಯ ಹೇಳಲ್ಲ. ಮನೆ ತನ್ನದು ಅಂತ ಏನೋ ಅಧಿಕಾರ ಚಲಾಯಿಸ್ತಾಳೆ, ನೀನು ತುಂಬ ಹೆದರ್‍ಲಿಕ್ಕೆ ಹೋಗಬೇಡಾ" ಎಂದು ಕೆಲವು ಸುಳಿವು ಸೂಕ್ಷ್ಮ ಹೇಳಿದ. ಅನಂತರ ಹೋಟಲಿಂದ ಅವಳನ್ನು ಅಂಗಡಿಯ ಬಳಿ ತಂದಿಳಿಸಿ ತಾನು ಮತ್ತೆ ಆಫೀಸಿಗೆ ಹೊರಟುಬಿಟ್ಟ.

ಅವಳು ನಾಲ್ಕು ಗಂಟೆಗೆ ಮನೆಗೆ ಬಂದಾಗ ಆಕೆ ಸಿಡುಕುತ್ತ, "ಅಕ್ಕ ತಮ್ಮ ಇಬ್ಬರು ಎಲ್ಲಿ ಹಾಳಾಗಿ ಹೋಗಿದ್ರೋ? ಮೂರೂಪರೆಗೆ ಅಂಗಡಿ ಹತ್ತಿರ ಬಂದು ನೋಡಿದೆ ಅಲ್ಲೂ ಇರಲಿಲ್ಲ. ಏನು ನಿಮ್ಮ ಹಾವಳಿ?" ಎಂದರು. ಅವಳು ಸುಮ್ಮನಿದ್ದಳು.

"ಪಾಪೀ ಒಂದು ಮಾತು ಹೇಳ್ತೀನಿ ನೋಡೇ ... ಬರೋವಾರ ಅವನ ಸಂಬಳ ಬರತ್ತೆ. ನಿನ್ನ ಅಂಗಡಿ ಎತ್ತಬೇಕು. ನಿನ್ನ ತಮ್ಮನ್ನ ನಿಮ್ಮ ತವರಿಗೆ ಕಳಿಸಬೇಕು. ಆ ನಿನ್ನ ಅಂಗಡಿಯ ಗಂಟು, ಗದಡಿ, ಏನೇನು ಆಸ್ತಿಗಳು ಇದೆಯೋ? ಎಲ್ಲಾ ಕೊಟ್ಟು ಕಳಿಸು, ಅದೆಲ್ಲಾ ದರಿದ್ರ ಗಂಟು ತರೋ ಹೊತ್ತಿಗೆ ನನ್ನ ಮಗನಿಗೆ ಆರು ತಿಂಗಳು ಸಂಬಳ ಹೋಯ್ತು. ನಿನ್ನಂಥ ದರಿದ್ರದೋಳನ್ನ ಸೊಸೆಯಾಗಿ ತಂದುಕೊಂಡು, ಮನೆ ಶಾಂತಿಯೇ ಹಾಳಾಯ್ತು" ಎಂದು ಏನೇನೋ ರೇಗತೊಡಗಿದರು. ಆದರೆ ಅವಳ ಮನಸು ಶಾಂತವಾಗಿತ್ತು-ಉಲ್ಲಾಸವಾಗಿತ್ತು.

ಈಕೆ ಹೀಗೆ ರೇಗಾಡುತ್ತಿರುವುದರಿಂದಲ್ಲವೇ ಗಂಡನಿಗೆ ತನ್ನ ಮೇಲೆ ಸಹಾನುಭೂತಿ ಹುಟ್ಟಿರುವುದು, ಈ ಸಹಾನುಭೂತಿ ಮುಂದೆ ಪ್ರೇಮವಾಗಲಾರದೆ?

"ಲೇ.... ದರಿದ್ರದೋಳೆ? ಅಂಗಡಿಯ ಮೊದಲ ಭಾಗನ್ನ ಹಜಾರದಂತೆ ಮಾಡಿಸಿ ಹಿಂದೆ ಉಳಿದ ಜಾಗದಲ್ಲಿ ಎರಡು ರೂಂ ಕಟ್ಟಿಸ್ತೀನೆ. ಒಂದಡಿಗೆ ಮನೆ. ಒಂದು ಬಚ್ಚಲ ಮನೆ, ನಾನ್ನೂರು ರೂ.ಗೆ ಯಾರಾದರೂ ಬಾಡಿಗೆಗೆ ಬರ್‍ತಾರೆ. ನಿನ್ನ ಅಂಗಡಿ ಬರೋವಾರ ಎತ್ತಿ ಬಿಡಬೇಕು. ರಮೇಶನಿಗೆ ಹೇಳಿ ಕಳಿಸಿದ್ದೀನಿ. ಸತೀಶನಿಗೆ ಇಪ್ಪತ್ತು ಸಾವಿರ ಬರೋದಿದೆ. ಒಂದು ಸಣ್ಣ ಮನೆ ಆಗಿ ಬಿಡಬೇಕು, ಬರೋವಾರದಿಂದ ನೀನು ಮನೆ ಹೊಸಿಲು ದಾಟದರೆ ಪರಿಕೆ ತಗೊಂಡು ಹೊಡೀತೀನಿ. ನಿನ್ನ ತಮ್ಮನ್ನ ತವರು ಮನೆಯವರನ್ನ ಸೇರಿಸ ಕೂಡದು. ದಿನ ಎರಡು ಹೊತ್ತು ಮಡಿ ಅಡುಗೆ ಮಾಡಿಕೊಂಡು

ಮನೆ ಕೆಲಸ ಮಾಡಿಕೊಂಡು ಬಿದ್ದಿರಬೇಕು. ಪದ್ಮಮ್ಮನ್ನ ಈ ತಿಂಗಳು ಸಂಬಳ ಕೊಟ್ಟು ಬಿಡಿಸಬೇಕು" ಎಂದನು.

ಪದ್ಮಮ್ಮ ಸಹ ಆ ದಿನ ಬಂದವರು "ಯಜಮಾನರಿಗೆ ನಲವತ್ತು ಮೈಲಿ ದೂರದ ಊರಿಗೆ ವರ್ಗವಾಗಿದೆಯಮ್ಮ, ನಾವು ಸಂಸಾರ ಅಲ್ಲಿ ಹೊರಡ್ತಿದ್ದೀವಿ ನಿಮ್ಮತ್ತೆ ತುಂಬ ಸಿಡುಕ್ತಾರೆ. ಬರೋವಾರ ತಿಂಗಳ ಪೂರ್ತಿ ಸಂಬಳ ಕೊಟ್ಟು ಬಿಡು. ಆ ಊರಲ್ಲೇ ದಿನೇಶ ಅಂಗಡಿ ಇಡ್ತೀನಿ ಅಂತಿದ್ದಾನೆ ಹೋಗಿದ್ದರೂ ಟ್ರೈನಿಂಗ್ ಕೊಟ್ಟಿದ್ದಿ" ಎಂದರು. ಅವಳು ಮನದಲ್ಲೇ ಒಂದು ಯೋಜನೆ ರೂಪಿಸಿಕೊಂಡು ಗಂಡನಿಗೆ ಆಫೀಸ್ ಅಡ್ರೆಸಿಗೆ ಒಂದು ಕಾಗದ ಬರೆದು ಹಾಕಿದಳು. ಒಂದೇ ಮನೆಯಲ್ಲಿದ್ದರೂ ಮಾತಾಡುವ ಹಾಗಿಲ್ಲ. ಅತ್ತೆಯು ಸರ್ಪಗಾವಲು ಹೀಗಾಗಿ ಕಾಗದ ಬರೆದಳು.

ಒಂದನೇ ತಾರೀಕಿಗೆಂದು ಕಾಯುತ್ತಿದ್ದ ಭಾಗಿರಥಮ್ಮ ಇನ್ನು ಮೂರು ದಿನಗಳ ಮುಂಚೆಯೇ ಸತೀಶ ಒಂದು ಪ[illegible] ಹೇಳಿದ. "ಅಮ್ಮ ನಮಗೆ ಸಂಬಳ ಸಿಗೋಹಾಗಿಲ್ಲ. ಇಲ್ಲಿನ ಆಫೀಸ್ ಮುಚ್ಚಿ ಬಿಡ್ತಿದ್ದಾರೆ, ಕೆಲವರನ್ನಂತು ತೆಗೆದು ಹಾಕಿದ್ದಾರೆ. ಕೆಲವರಿಗೆ ಬಾಂಬೆ ಬ್ರಾಂಚಲ್ಲಿ ಕೆಲಸ, ನಾನು ಸೋಮವಾರ ಆ ಬಾಂಬೆ ಬ್ರಾಂಚಿಗೆ ಜಾಯಿನ್ ಆಗಬೇಕು" ಎಂದ.

ಭಾಗಿರಥಮ್ಮ ಹೌಹಾರಿ, "ಇಷ್ಟು ದಿನ ದುಡಿದ ಸಂಬಳ ಇಲ್ಲಾಂದ್ರೆ ಹೇಗೋ ಮಗು ? ಆ ದುಡ್ಡು ಸಿಕ್ಕಿದ್ರೆ ಇಲ್ಲಿ ಮನೆ ಎಬ್ಬಿಸ್ತಿದ್ದೆ. ನಾನೂರ ರೂ. ಮನೆ ಬಾಡಿಗೆ ಸಿಗ್ತಿತ್ತು. ಆ ಟೈಪಿಂಗ್ ಅಂಗಡೀಲಿ ಹಗಲು–ರಾತ್ರಿ ದುಡಿದ್ರೇ ಒಂದು ಆರುನೂರು ರೂ. ಸಿಗ್ತಿತ್ತು" ಎಂದು ನುಡಿದರು.

"ಮೂರು ಸಾವಿರ ರೂ.ಗಳ ಸಂಬಳಕ್ಕೆ ದುಡಿದೋನು ಆರುನೂರು ರೂ.ಗಳಿಗೆ ದುಡೀಲೇನಮ್ಮ. ಆ ಬಾಡಿಗೆ, ಈ ಸಂಬಳ ಸಾಕಾಗತ್ತಾ ?" ಎಂದ.

"ಈ ದರಿದ್ರದೋಳನ್ನ ಕಟ್ಕೊಂಡಿದಕ್ಕೆ ದರಿದ್ರವನ್ನ ಅನುಭವಿಸ್ಲೇಬೇಕಪ್ಪಾ. ಮೂರು ಸಾವಿರ ರೂಪಾಯಿಗಳ ಸಂಬಳ ಮರೆತು ಬಿಡು ನೀನು.

ಇರೋ ಒಬ್ಬ ಮಗಾ ಬಾಂಬೆಗೆ ಹೋಗಿ ಕೂತರೇ ನಾನು ಹೇಗೆ ಸಹಿಸಲಿ ? ಒಂದು ಸಾವಿರದಲ್ಲಿ ನಾವು ಮೂರು ಜನ ಹೇಗೋ ಬಾಳಿ ಬದುಕ ಬಹುದು. ಅವಳ ತಮ್ಮನ ನಾಳೀನೆ ತವರಿಗೆ ಓಡಿಸ್ತೀನಿ, ರಮೇಶನ್ನ ಕರಿಸ್ತೀನಿ" ಎಂದರು.

"ರಮೇಶನ್ನ ಕರೆಸಿ, ನೀನು ಮಾಡ್ತಿ ಅಮ್ಮ ? ಮನೆ ಕಟ್ಟಿಸಲು ದುಡ್ಡೆಲ್ಲಿದೆ ? ನನಗೆ ಸಂಬಳಾ ಬಂದಿಲ್ಲಾಂತ ಹೇಳಿದೆನಲ್ಲ. ಎಂದ ಗಡುಸಾಗಿ.

ಆಕೆಯೂ ಗಡುಸಗಿ-"ನಿನ್ನ ಸಂಬಳಾ ಯಾರು ನಂಬಿದ್ದಾರಪ್ಪ, ನಾನು ಈ ಮನೆ ಒತ್ತಿಹಾಕಿ, ವಲವತ್ತು ಸಾವಿರ ಸಾಲಾ ತೆಗೀತೀನಿ. ಆ ಕಡೆ ಮನೆ ಕಟ್ಟಿಸಿ, ಬಾಡಿಗೆಗೆ ಕೊಡ್ತೀನಿ, ನಾನ್ನೂರು ರೂಗಳಿಗೆ, ನೀನು ಹಗಲು ಸಂಜೆ ಟ್ಯೂಷ್ ಮಾಡಿ, ಒಂದು ನಾನ್ನೂರು ರೂ ಸಂಪಾದಿಸು ಎಂದು ಅಧಿಕಾರ ವಾಣಿಯಿಂದ ಹೇಳ ತೊಡಗಿದರು.

"ಅಮ್ಮ ನಿನ್ನ ಈ ಯಾವ ಹುಚ್ಚು ಯೋಚನೆಗಳಿಗೂ ನಾನು ಸಹಕರಿಸಲ್ಲ ನಾನು ಬರೋವಾರ ಊರಿಗೆ ಹೋಗ್ತೀನೆ" ಎಂದ.

ಆಕೆ ಗಡುಸಾಗಿ-"ಹೋಗು, ನೀನು ಹೋದ್ರೇನು ? ಕಾವೇರಿಯ ಮಗ ರಮೇಶ ನನಗೆ ಮಗನಿಗಿಂತ ಹೆಚ್ಚು. ನಾನು ನಾಳೆ ಊರಿಗೆ ಹೋಗಿ ಸಾಲದ ವ್ಯವಸ್ಥೆ ಮಾಡಿ, ಅವನನ್ನ ಕರ್‍ಕೊಂಬರ್‍ತೀನಿ. ಏ....ದರಿದ್ರದೋಳೇ ನಿನ್ನ ಅಂಗಡಿಯ ಟೆಂಟ್, ಇನ್ನೊಂದು ವಾರದೊಳಗೆ ಎತ್ತಿಬಿಡಬೇಕು. ಜೊತೆಗೆ ನಾನು ಹೇಳಿದ ಹಾಗೆ ಕೇಳ್ಕೊಂಡು ಬಿದ್ದಿರೋ ಹಾಗಿದ್ರೇ ಇಲ್ಲಿ ಬಿದ್ದಿರು, ಇಲ್ಲದಿದ್ದರೆ ನಿಮ್ಮಪ್ಪನ ಮನೆಗೆ ತೊಲಗಿ ಹೋಗು" ಎಂದರು.

ಮಾರನೆಯ ದಿನವೂ ಇದೇ ಆಜ್ಞೆ ಗುಡುಘುಡಿಸಿ ಆಕೆ ಊರಿಗೆ ಹೊರಟರು. ಕೊಂಚ ಚಿಂತಾಕ್ರಾಂತಳಾಗಿದ್ದಳು ಗೋದಾ-"ಗೋದಾ ಅಮ್ಮ ಏಕೆ ಹೀಗಾಡ್ತಾಳೆ ? ಹೋಗಲಿ ನೀನು ಅಂಗಡಿ ತೆಗೆದ್ಬಿಡು. ಒಂದು ವರ್ಷ ಹೇಗಾದರೂ ಇದ್ಬಿಡು. ಕೊಂಚ ಕಿರಿಕಿರಿ ಸ್ವಭಾವ ನಿಜ, ನನಗೆ ಬರೋ ವರ್ಷದಿಂದ ಐದು ಸಾವಿರ ಸಂಬಳಾ ಕೊಟ್ಟು, ಅಲ್ಲೆ ಕ್ವಾರ್ಟರ್ಸ್ ಕೊಡ್ತಾರೆ, ಚೀಫ್ ಸೂಪರಿಡೆಂಟ್ ಅಂತ ಪೋಸ್ಟ್ ಕೊಡ್ತಿದ್ದಾರೆ, ಮೊದಲಿಂದ ಅಮ್ಮನಿಗೆ ಆ ರಮೇಶನ ಮೇಲೆ ವಿಪರೀತ ಮೋಹಾ ಅವನ ಸಮಾನ ಬುದ್ಧಿವಂತ ಇಲ್ಲಾಂತ ನಂಬಿದ್ದಾಳೆ" ಎಂದ.

ಗೋದಾ ಮಾತಾಡಿ—"ಆ ರಮೇಶನಿಗಾಗೇ ನಾನು ಭಯ ಪಡ್ತಿದ್ದೀನಿ. ಕಾವೇರಮ್ಮ ಸಾತ್ವಿಕರು, ಜೋಯಿಸರು ಸಜ್ಜನರು. ಆದರೆ ಈತ ಮಹಾ ಕಾಯಕ, ಹಣದದಾಹ, ಯಾರಿಗಾದರೂ ಉಪಕಾರ ಮಾಡೋ ನೆಪದಲ್ಲಿ ಅವರ ಹಣಾ ನುಂಗಿ ಹಾಕ್ತಿರ್ತಾನೆ. ಹಳ್ಳಿಯ ಮುಗ್ಧ ಜನ ಇವನನ್ನು ನಂಬಿ ಸಾಕಷ್ಟು ಶೋಷಣೆ ಗೊಳಗಾಗಿದ್ದಾರೆ. ನೀವಿಲ್ಲದ ಮನೇಲಿ ಅವನು ಬಂದು ದರ್ಬಾರು ಮಾಡಿದರೆ, ನಾನು ಇಲ್ಲಿರ್ಸಾರೆ, ನೀವು ಒಪ್ಪಿದರೆ ?" ಎಂದು ನಿಲ್ಲಿಸಿದಳು.

"ಹೇಳು ಗೋದಾ ಏನು ನಿನ್ನ ಯೋಚನೆ ?" ಎಂದ.

"ಪದ್ಮಮ್ಮನ ಗಂಡನಿಗೆ ಬೇರೆ ಊರಿಗೆ ವರ್ಗ ಆಗಿದೆ, ಅವರೆಲಾ ಹೊರಟು ಹೋಗ್ತಿದ್ದಾರೆ. ಆ ಖಾಲಿ ಮನೆಯನ್ನ ನಾನು ಬಾಡಿಗೆಗೆ ಹಿಡೀ ತೇನೆ, ನಮ್ಮ ತಂದೆ ತಾಯನ್ನ ಕರಿಸ್ಕೋತೀನೆ. ಅಂಗಡಿ ನಮ್ಮ ತಂದೆ, ನನ್ನ ತಮ್ಮ, ನಾನು ನೋಡ್ಕೋತೀನಿ. ಹೊರಗಿಂದ ಮಾಲು ತರೋ ಕೆಲಸ ಸುಲಭವಾಗಿ ನಮ್ಮ ತಂದೆ, ನನ್ನ ತಮ್ಮ, ನೋಡ್ಕೋತಾರೆ. ಅಲ್ಲಿನ ವ್ಯಾಪಾರ ನಾನು ನೋಡ್ಕೋತೀನಿ. ತಂದೆ ತಾಯಿ ರಕ್ಷಣೇಲಿ ಸುಖವಾಗಿ ರ್ತೀನಿ ಇದಕ್ಕೆ ಒಪ್ಪಿಗೆ ಇದ್ದರೆ ?" ಎಂದು ಅಪ್ಪಣೆ ಕೇಳಿದಳು.

ಸಹೃದಯನಾದ ಸತೀಶ "ಖಂಡಿತ ಹಾಗೆ ಮಾಡು ಗೋದಾ ನನಗೂ ಆ ರಮೇಶನ ಕಂಡ್ರಾಗಲ್ಲ ಹೆಂಡತಿಗೆ ಒಂದಿಷ್ಟು ಒಡವೆ, ಸೀರೆ ತಂದ್ಕೊಟ್ಟು ಪೋಸಿಮಾಡ್ತಾನೆ ಆದರೆ ಇಡಿ ತಿಂಗಳಲ್ಲಿ ಎರಡು ದಿನ ಮನೇಲಿರಲ್ಲ. ಆ ಸಲವೂ ಮನೆ ರಿಪೇರಿ ಮಾಡಿಸ್ತೀನಿಂತ ಅಮ್ಮನಿಗೆ ಸಾಲಾ ಮಾಡಿಸಿದ. ಒಂದು ರೂಪಾಯಿ ಖರ್ಚಾಗೋ ಕಡೇ ಒಂಬತ್ತುರೂ ಲೆಕ್ಕಾಚಾರ ತೋರಿಸಿದ ಸಿಕ್ಕಾಪಟ್ಟೆ ಬಡ್ಡಿ ಸಾಲಾ ಮಾಡಿಸಿದ. ಆ ಸಾಲಾ ಕೊಡೊ ಸಾಹುಕಾರನು ಇವನ ಗಳಸ್ಯ ಕಂಠಸ್ಯ, ಇಬ್ಬರದು ತುಂಬ ಕಾರುಬಾರಿದೆ, ಪ್ರಾಮಾಣಿಕರನ್ನ ಹಿಡಿದು ಮಾಡಿಸಿದ್ರೇ ಆಗಿನ ಕಾಲಕ್ಕೆ ಇದು ಇಪ್ಪತ್ತು ಸಾವಿರ ರೂಪಾಯಿ ಮುಟ್ಟೋ ಕೆಲಸ ಆದರೆ ಈ ಪುಣ್ಯಾತ್ಮ, ನಲವತ್ತು ಸಾವಿರದ ಲೆಕ್ಕಾಚಾರ ತೋರಿಸಿದ. ಅದನ್ನ ಬಡ್ಡಿ ಸಮೇತ ತೀರಿಸೋ ಹೊತ್ಗೆ ಎಂಟು ವರ್ಷ ಹಿಡೀತು, ತಿಂಗಳಿಗೆ ಎಂಟು ನೂರು ರೂ. ನಮ್ಮ ತಾಯಿ ಮಗನ ಖರ್ಚು ಎರಡು ಸಾವಿರ ಸಾಲದ ಬಾಬತ್ತು ಬಡ್ಡಿ ಸಮೇತ ಎಂಟು ವರ್ಷ ಹೀಗೆ

ನಡೆದಿದೆ, ಸಿಕ್ಕಪಟ್ಟೆ ದುಡ್ಡು ತಿಂದಿದ್ದಾನೆ. ಆ ತಂಗಿಯ ಮನೆ ಅಂತ ಮೂರು ಮೂರು ತಿಂಗಳು ಹೋಗಿ ಕೂತಾಗ ಸಾಲಾ ತೀರ್‍ಸಿರಲ್ಲ ಔಷಧಿಗೆ ಖರ್ಚಾಯ್ತಪ್ಪಾ ಈ ಮೂರು ತಿಂಗಳು ತೀರಿಸಿಲ್ಲ ಅಂತಳೆ. ನನಗಂತು ಆಗ ಎಲ್ಲರ್‍ದರಲ್ಲೂ ಮನಸ್ಸು ಕೆಟ್ಟಿತ್ತು ಏನೂ ವಿಚಾರಿಸ್ತಿರಲಿಲ್ಲ. ಈಗ ತುಂಬ ಮೋಸ ಹೋದೆ ಅಂತ ಪಶ್ಚಾತಾಪ ಪಡ್ತೀನಿ. ಈಗ ಇಲ್ಲಿ ಹಣ ಹಾಕಿ ಕಟ್ಟಿಸಿದ ಅಂಗಡಿ ವ್ಯರ್ಥವಾಯ್ತಲ್ಲ. ನಿಂಗೆ ಹತ್ತಾರು ಸಾವಿರ ರೂಗಳು ನಷ್ಟವಾಯಿತಲ್ಲ" ಎಂದ.

"ಹದಿನೈದು ಸಾವಿರ ಖರ್ಚಾಗಿತ್ತು. ಮರ ಮುಟ್ಟು, ಚೌಕಟ್ಟು, ಅಂಗಡಿ ಬಾಗಿಲು ತಗೊಂಡೀನಿ, ಪದ್ಮನ್ನನ ಮನೆ ಮುಂಭಾಗ ಅಂಗಳ ಇದೆ. ಅಲ್ಲಿ ಗೋಡೆ ಒಂದು ಭಾಗಕ್ಕೆ ಹಾಕಿ, ಬಾಗಿಲು ಹೊಂದಿಸಿದರೆ ಸಾಕು, ಉಳಿದ ಮೂರು ಭಾಗಕ್ಕೆ ಗೋಡೆ ಇದೆ, ಅಂಗಡಿ ಮುಂಭಾಗ, ಮನೆ ಹಿಂಭಾಗ ಆಗತ್ತೆ" ಎಂದಳು.

"ಮುಂಭಾಗದ ವಿಶಾಲ ಅಂಗಳದಲ್ಲೆ ಅವರು ತಂದೆ–ಮಗ ಮಲಗ್ತಿದ್ದದ್ದು. ಒಳಗಿನ ಮನೆ ನಮ್ಮ ಮನೆ ಹಾಗೇ ವಿಶಾಲವಿಲ್ಲ. ಒಂದು ಪುಟ್ಟ ಮನೆ, ಅಡಿಗೆ ಮನೆ, ಬಚ್ಚಲು ಮನೆ ಸಾಕಾಗತ್ತಾ ?" ಎಂದ.

"ಪರವಾಗಿಲ್ಲ ಹಳ್ಳೀಲಿ ಅದಕ್ಕಿನ್ನ ಚಿಕ್ಕ ಮನೇಲಿ ಇದ್ವಿ. ಆತ ಅಂಗಡಿ ಹೂಡ್ಲಿಕ್ಕೆ ಒಪ್ಪಿದರೆ ಸಾಕು" ಎಂದಳು.

ಮಾರನೆಯ ದಿನ ಸತೀಶ, "ನಾನು ನಿನ್ನ ಜೊತೆ ಬರ್‍ತೀನಿ. ಮನೆ ಮಾಲಿಕ ನರಸಿಂಹರಾಯರು ನನಗೆ ಮೊದಲಿಂದ ಪರಿಚಿತರು, ನೀನಾದ್ರೆ ಇಲ್ಲಿಗೆಲ್ಲಾ ಹೊಸಬಳು" ಎಂದ.

"ಆರು ತಿಂಗಳಿಂದ ಅವರು ನಮ್ಮ ಅಂಗಡೀಲಿ ಸಾಮಾನು ಕೊಂಡ್ಕೋತಾ ಇದ್ದಾರೆ" ಎಂದಳು. ಗಂಡ–ಹೆಂಡತಿ ಇಬ್ಬರು ಹೋಗಿ ಮಾತಾಡಿದರು. ನರಸಿಂಹರಾಯರು ನಾನ್ನೂರು ರೂ.ಗಳ ಬಾಡಿಗೆಗೆ ಮನೆ ಕೊಡಲೊಪ್ಪಿದರು. ಅಂಗಡಿ ವಿಷಯಕ್ಕು ಒಪ್ಪಿದರು. ಪದ್ಮಮ್ಮ ಇದ್ದಾಗ ಇನ್ನೂರೈವತ್ತು ರೂ. ಕೊಡುತ್ತಿದ್ದರು. ಅಂಗಡಿ ಕಟ್ಟಿಸಿದ ಲೆಕ್ಕ ಬಾಡಿಗೆಯಲ್ಲಿ ಹಿಡಿದುಕೊಳ್ಳಬಾರದೆಂದರು.

"ಆದರೆ ಹದಿನೈದು ಸಾವಿರದವರೆಗೆ ಖರ್ಚು ಬರುತ್ತೆ. ತಿಂಗಳಿಗೆ ನೂರು ರೂ. ಹಿಡ್ಕೋತ್ತೀವೆ" ಎಂದಳು.

"ಇಲ್ಲಮ್ಮ ಅಂಗಡಿ ಯೋಜನೆ ನಿಂದು, ಬಾಡಿಗೆ ಐನೂರು ಅಂದು ನಾನ್ನೂರು ರೂ. ತಗೊಂಡಿದ್ರೆ ಏನು ಮಾಡ್ತಿದ್ದೆ. ಐದು ವರುಷ ನಾನ್ನೂರು ರೂ. ಬಾಡಿಗೆ ಮಾತ್ರ ತಗೋತೀನಿ. ಆ ಹದಿನೈದು ಸಾವಿರ ನನಗೆ ಸಂಬಂಧ ಇಲ್ಲ. ಅಂಗಡಿ ಹಾಕಲಿಕ್ಕೆ ಒಪ್ಪಿದ್ದೀನಿ, ಐದೂ ವರುಷದ ನಂತರ ವರ್ಷಕ್ಕೆ ನೂರು ರೂ. ಜಾಸ್ತಿ ಮಾಡ್ತೀನಿ" ಎಂದರು. ಅವಳು ಒಪ್ಪಿದಳು.

ಅತ್ತೆ ಬರುವ ಹಿಂದಿನ ದಿನವೇ ಅವಳು ಮನೆ ಬದಲಾಯಿಸಿದಳು. ಒಂದು ವಾರದಲ್ಲಿ ಮುಂಭಾಗದ ಅಂಗಳಕ್ಕೆ ಅಂಗಡಿ ಆಕಾರ ಬಂದಿತ್ತು, ಭಾಗಿರಥಮ್ಮ ಹತ್ತು ದಿನಗಳ ಕಾಲ ತಂಗಿಯ ಮನೆಯಲ್ಲಿದ್ದು ಕಡೆಗೆ ರಮೇಶನ್ನ ಹಿಡಿದು ತಂದಿದ್ದರು.

"ಲೌಡಿಗೆ ಸರಿಯಾಗಿ ಬುದ್ಧಿ ಹೇಳಯ್ಯ ! ಏನೊ ಅಂಗಡಿ–ಗಿಂಗಡಿ ಅಂತ ಹೂಡಿ ದೊಡ್ಡಮ್ಮನ್ನ ಗೋಳಾಡಿಸ್ತಿದ್ದಾಳಂತೆ ? ನಮ್ಮನೆ ಸೊಸೆ ಆಗಿ ಅಂಗಡಿ ಕಟ್ಟೆ ಮೇಲೆ ಕೂತು ವ್ಯಾಪಾರ ಮಾಡ್ತಾಳಾ ?" ಎಂದ.

ಸತೀಶ ಸಿಡಿದು, "ಅತ್ತಿಗೆಗೆ ಲೌಡಿ ಅಂದರೆ ನೀನು ಸುಮ್ಮನಿರ್ತಿಯಾ? ಬಾಯಿ ಬಿಗಿ ಹಿಡಿದು ಮಾತಾಡು, ಹಿಂದೆ ಅತ್ತಿಗೇನು ಸೇಲ್ಸ್‌ಗರ್ಲ್ ಆಗಿದ್ದರು. ನಿನ್ನಾಟ ಏನಿದ್ದರೂ ಅಮ್ಮನ ಹತ್ತಿರ ಅಕೇನು ಮೂರ್ಖಳು, ನಿನಗೆ ಮೂರು ಕಾಸು ಲಾಭ ಆದರೆ ಮಾಡಿಕೊ ನನ್ನ ಸಂಸಾರದ ತಂಟೆಗೆ ಬರಬೇಡ" ಎಂದ.

ರಮೇಶ ಕೋಪದಿಂದ, "ನೋಡಿ ದೊಡ್ಡಮ್ಮ ಹೇಗೆ ಮಾತಾಡ್ತಾನೆ. ಈ ಜಿಲ್ಲೇಲಿರೊ ಎಂ.ಎಲ್.ಎ. ಸಹ ನನಗೆ ನೋಡಿದ ತಕ್ಷಣ ಸಲಾಂ ಹೊಡೀತಾರೆ ಇವನು ತಮ್ಮ ಆಗಿ ಹೇಗೆ ಮಾತಾಡ್ತಾನೆ" ಎಂದ.

"ಎಲ್ಲಾ ಆ ಮಳ್ಳಿ ಹೇಳಿಕೊಟ್ಟಿದಾಳೆ. ಮೊದಲು ಹೀಗಿದ್ದನ ನಮ್ಮ ಸತೀಶಾ ? ಅವನು ಬಾಂಬೆಗೆ ಹೋಗಲಿ ಅವಳ ಬಾಲ ಕತ್ತರಿಸ್ತೀನಿ" ಎಂದಳು. ಮಗ ಮುಂಬಾಯಿಗೆ ಹೋಗುವುದು ಒಂಟಿಯಾಗಿ ಎಂದವರಿಗೆ ಖಾತ್ರಿ ಇತ್ತು.

ರಾತ್ರಿ ಆದರೂ ಸೊಸೆ ಸುಳುವಿಲ್ಲ.ರಮೇಶನ ಮನೆ ಮುಂದಿದ್ದ ಅಂಗಡಿ

ಜಗುಲಿ, ಒಡೆಸಿದ ಬೆಳಗಾಗುವ ವೇಳೆಗೆ ಅಲ್ಲಿ ನೆಲಸವು ಮಾಡಬೇಕೆಂದು ಭಾಗಿರಥಮ್ಮನ ಆಜ್ಞೆ.

ಅಬ್ಬರಿಸುತ್ತ ಹುಡುಕಾಡಿ, "ಅವಳೆಲ್ಲಿ ಹೋದಳು ? ಪದ್ಮಮ್ಮನ ಮನೆಗೆ ಹೋಗಿ ಕೂತಳಾ ? ರಾತ್ರಿ ಅಡಿಗೆ ಮಡೀಲಿ ಆಗ್ಬೇಕು ಅವಳೆ ಮಾಡ ಬೇಕು" ಎಂದರು.

ಸತೀಶ ಬೇಸರದಿಂದ,"ನಿನ್ನ ಕಿರಿಕಿರಿ ಮಡಿ ಗಲಾಟೆಗೆ ನಾನು ಅವಳನ್ನ ಇಲ್ಲಿ ಬಿಟ್ಟು ಹೋಗಲ್ಲಮ್ಮ. ಪದ್ಮಮ್ಮ ಊರಿಗೆ ಹೋದರು. ಅದೇ ಮನೆ ಅವಳು ಬಾಡಿಗೆ ಹಿಡಿದು ಮುಂಭಾಗಕ್ಕೆ ಅಂಗಡಿ ಕಟ್ಟಿಸಿದ್ದಾಳೆ. ಅವರಪ್ಪ, ಅವರಮ್ಮನ ಜೊತೆ ಇದ್ದಾಳೆ, ಅವಳ ತಂದೆ ತಮ್ಮ ಅಂಗಡಿ ನೋಡಿ ಕೊಳ್ತಾರೆ. ನಿನ್ನ ಕಿರಿಕಿರಿ ಸಹಿಸಿಕೊಂಡು ಇಲ್ಲಿರಲ್ಲಮ್ಮ ನನ್ನ ಮನೆಗೆ ನನ್ನ ಹುನೆ ಅಂತ ನೀನು ಅಧಿಕಾರ ಮಾಡ್ತಿದ್ದೆ ನೀನೆ ಇಲ್ಲಿರು ನಾನು ಬರೋ ವರ್ಷ ಕ್ವಾರ್ಟರ್ಸ್ ಸಿಕ್ಕಿದ ಮೇಲೆ ಅವಳನ್ನ ಕರಕೊಂಡ್ಹೋಗ್ತೀನಿ" ಎಂದ.

ಆಕೆ ರೋಷಾವೇಶದಿಂದ, "ಅಂತು ನೀವು ಗಂಡಾ-ಹೆಂಡ್ತಿ ಇಷ್ಟು ಒಂದಾಗಿದ್ದಿರೇನು ? ಆಗ್ಲಿ......ಆಗ್ಲಿ ನನಗೆ ಒಂತುತ್ತು ಅನ್ನಕ್ಕೆ ಯಾರ ಹತ್ತಿರ ಕೈ ಚಾಚೋ ಹಾಗೇ ಇಲ್ಲಿ ಮನೆ ಬಾಡಿಗೆ ಬರುತ್ತೆ ತಿಂತೀನಿ" ಎಂದು ಹಾರಾಡಿದರು. ಮಾರನೆಯ ದಿನ ಸತೀಶ ಮುಂಬಯಿಗೆ ಹೊರಟು ಬಿಟ್ಟ. ಹೋಗುವಾಗ ತಾಯಿಗೆ ನಮಸ್ಕರಿಸಿದ.

"ಸತೀಶಾ ನಿನ್ನ ಬಿಟ್ಟು ಹೆಂಗಿರಲೊ ? ಜೀವಮಾನ ಪೂರ್ತಿ ನಿಮ್ಮಪ್ಪ ನಿಂದ ದೂರವಿದ್ದೆ ಈಗ ನೀನಿಲ್ಲದೇ ಹೇಗಿರಲೊ ? ವಾರ ವಾರ ಒಂದು ಕಾರ್ಡ್ ಹಾಕ್ತಿರಪ್ಪ ದುಡ್ಡು ಕಾಸು ಬೇಡಾ ನನಗೆ ಕಾರ್ಡ್ ಒಂದು ಹಾಕ್ತ ಇರು" ಎಂದರು.

"ಆಗಲಮ್ಮ" ಎಂದ ಮಗನನ್ನು ಇಷ್ಟು ಪ್ರೀತಿಸುವ ತಾಯಿ ಸೊಸೆ ಎಂದರೆ ಏಕೆ ಕಿಡಿಕಾರುತ್ತಾರೊ ? ಅವನಿಗೆ ವಿಚಿತ್ರವೆನಿಸುತ್ತಿತ್ತು.

ಸೊಸೆಯ ಮೇಲೆ ಕಾರಣವಿಲ್ಲದೇ ಜೋರು ಮಾಡಬೇಕೆಂಬ ಅವಳ

ಆಸೆ ನೆರವೇರಲಿಲ್ಲ. ಗೋದಾ ಭಾಗಿರಥಮ್ಮನ ಕೈಯಲಿ ಸಿಗಲಿಲ್ಲ. ಮುಂಬೈಯಿಂದ ತಿಂಗಳಿಗೊಂದು ಅಥವ ಎರಡು ಪತ್ರಗಳು ಆಕೆಗೆ ಬರುತ್ತಿದ್ದವು. ಕಾರ್ಡುಗಳಲ್ಲಿ ಒಂದೆ ಏಕತಾನದ ಸುದ್ದಿ ಅಮ್ಮ ನಾನು ಕ್ಷೇಮವಾಗಿದ್ದೇನೆ, ನೀನು ಸುಖವಾಗಿದ್ದಿ ಎಂದು ನಂಬಿದ್ದೇನೆ. ನಿನ್ನ ಆರೋಗ್ಯ ಚೆನ್ನಾಗಿ ನೋಡಿಕೊ ಇತಿ ನಿನ್ನ ಮಗ ಸತೀಶ. ಆಕೆ ನೂರೆಂಟು ಬಗೆಯಲ್ಲಿ ಮಗನಿಗಾಗಿ ಹಂಬಲಿಸಿ ನೂರೊಂದು ಬಗೆಯ ಪ್ರಶ್ನೆ ಕೇಳಿ ಬರೆದರೂ ಯಾವುದಕ್ಕು ಉತ್ತರವಿರಲಿಲ್ಲ. ಮೂರು ತಿಂಗಳಲ್ಲಿ ಮನೆ ಕಟ್ಟಿಸುವ ಕಾರ್ಯ ಮುಗಿದಿತ್ತು. ಮುಂದೆ ಮೂರು ತಿಂಗಳು ಬಾಡಿಗೆಗಾಗಿ ಜನರಿಗೆ ಕಾದರು. ಆ ಮನೆ ನೋಡಿದಾಗ ಆಕೆಯ ಕಳವಳದಿಂದ,

"ತೀರ ಪುಟ್ಟ ಮನೆಯಲ್ಲೋ ?" ಎಂದರು. ಒಂದು ಪುಟ್ಟ ಹಜಾರ ಅದರಲ್ಲೇ ಒಂದು ಪುಟ್ಟ ಅಡಿಗೆ ಮನೆ, ಒಂದು ಬಚ್ಚಲ ಮನೆ, ಹಿಂಭಾಗದ ಓಣಿ ಹಾದು ಬಂದು ತಮ್ಮ ಆ ಹಿತ್ತಲಿನಲ್ಲಿರುವ ಬಾವಿಯಿಂದನೀರು ಹಿಡಿಯುಬೇಕು ಹಾಗು ಅಲ್ಲಿರುವ ಶೌಚಗೃಹ ಉಪಯೋಗಿಸಬೇಕು.

ರಮೇಶ ಔಧ್ಯತೆಯಿಂದ, "ಇಂಥಾ ಮನೆ ಸಿಗಬೇಕಾದರೆ ಪುಣ್ಯ ಮಾಡಿರಬೇಕು. ನಾನ್ನೂರು ರೂಪಾಯಿಗೆ ಕಡಿಮೆ ಸಿಗೋ ಮನೆ ಅಲ್ಲ, ಯಾರು ಕೇಳಿದರೂ ನಾನ್ನೂರೈವತ್ತು ಹೇಳು ನಾನ್ನೂರಕ್ಕೆ ಕುದುರಿಸು."

"ಇಗೊ ! ನಲವತ್ತು ಸಾವಿರದಲ್ಲಿ ಎಂಟು ನೂರು ರೂ. ಉಳಿದಿದೆ" ಎಂದು ಪ್ರಾಮಾಣಿಕವಾಗಿ ಕೊಟ್ಟಿದ್ದ ಆದರೆ ಆ ಪುಟ್ಟ ಮನೆಗೆ ಇಪ್ಪತ್ತೆರಡು ಸಾವಿರ ಹಿಡಿಸಿಕೊಂಡು ಅವನು ಸಾಕಷ್ಟು ನುಂಗಿ ನೀರು ಕುಡಿದಿದ್ದನೆಂದು ಅವರು ಊಹಿಸುವ ಹಾಗಿರಲಿಲ್ಲ ದೊಡ್ಡಮ್ಮ ದೊಡ್ಡಮ್ಮ ಎಂದು ಅವನು ಕೃತಕ ವಿನಯ ತೋರುತ್ತಿದ್ದ ಪರಿ ಹಾಗಿತ್ತು.

"ಸಧ್ಯ ! ಐವತ್ತು ಸಾವಿರದ ಮೇಲೆ ಖರ್ಚು ಬರುತ್ತೆ ಅಂತಿದ್ದೆ. ಎಲ್ಲಾ ಸಾಹುಕಾರರಿಂದ ತಂದ ನಲವತ್ತು ಸಾವಿರ ಸಾಲದಲ್ಲೇ ಮುಗೀತಲ್ಲ. ಈಗಿನ ಕಾಲದಲ್ಲಿ ಇಟ್ಟಿಗೆ, ಸಿಮೆಂಟ್, ಮರಳು ಮುಟ್ಟಿದರೆ ಸಾಕು ಸಾವಿರಾರು ರೂ. ಖರ್ಚು. ಕೆಲಸಗಾರರಂತು ಅಟ್ಟದ ಮೇಲೆ ಕೂಡಿತಿರ್ತಾರೆ" ಎಂದು ಉದ್ಗಾರ ತೆಗೆಯುತ್ತಿದ್ದ.

ಆದರೆ ಯಾರು ಬಂದರೂ ಮನೆ ಚಿಕ್ಕದು. ಸಾಮಾನು ಸಂಜಾಮು

ಇಟ್ಟುಕೊಳ್ಳಲು ಸಾಲದು. ನಾವೆಲ್ಲ ಮಲಗಬೇಕು ? ಟಿ.ವಿ. ಎಲ್ಲಿ ಇಟ್ಕೊಬೇಕು ? ಮಂಚ ಎಲ್ಲಿ ಹಾಕಬೇಕು ? ಎಕ್ಸ್ಟ್ರಾ ರೂಂ ಸಹ ಇಲ್ಲ. ಹಜಾರ ಸಹ ಪುಟ್ಟದ್ದು" ಎಂದು ನೂರು ಕೊಂಕು ತೆಗೆಯುತ್ತಿದ್ದರು. ಮೂರು. ತಿಂಗಳಾಗಿ, ಕೈಲಿದ್ದ ಪುಟ್ಟಗಂಟು ಖರ್ಚಾಗಿ ಕೈ ಬರಿದಾದಾಗ ಭಾಗಿರಥಮ್ಮ ಹೆದರಿದರು. ಆ ಪಕ್ಕದ ಮನೆ ಹನುಮಂತಾಚಾರ್ರಿಗೆ ಹೇಳಿ ಮನೆ ಬೀಗದ ಕೈ ಒಪ್ಪಿಸಿ ತಂಗಿಯ ಮನೆಗೆ ಬಂದರು.

"ಮನೆಗೆ ಯಾರು ಬರಲಿಲ್ಲ ಬರಿಗೈ ಆಗಿದೆ ಕಣೆ. ಮನೆಗೆ ಯಾರಾದರೂ ಬಾಡಿಗೆ ಬರುವವರಿಗೂ ನಿನ್ನ ಮನೇಲಿ ಇರ್ತೀನಿ" ಎಂದು ರಾಗ ಹಾಡುತ್ತ ಬಂದರು.

ಬರಿಗೈಯಲ್ಲಿ ಬಂದ ಅಕ್ಕನನ್ನು ಎಂದಿನಂತೆ ನಗುಮುಖದಿಂದ ಸ್ವಾಗತಿಸಿ ಆದರದ ಉಪಚಾರ ಮಾಡಲಿಲ್ಲ ಕಾವೇರಮ್ಮ.

"ನಿಂದೇನಕ್ಕ ಹುಚ್ಚು ಯೋಜನೆ ? ನಲವತ್ತು ಸಾವಿರ ರೂ.ಗೆ ಮನೆ ಭೋಗ್ಯಕ್ಕೆ ಹಾಕಿದ್ದಿ. ಹತ್ತು ವರ್ಷದಲ್ಲಿ ಬಿಡಿಸಿಕೊಳ್ಳಬೇಕು. ಆಗ ವರ್ಷಕ್ಕೆ ಮೂರು ಸಾವಿರ ರೂ. ಬಡ್ಡಿ ಸೇರಿ ತೊಂಬತ್ತು ಸಾವಿರ ಕೊಡದಿದ್ರೆ ಮನೆ ಹೋಗತ್ತೆ. ನೀನು ಹಣ ಎಲ್ಲಿಂದ ತರ್ತಿ ?" ಎಂದರು.

ಭಾಗಿರಥಮ್ಮ ಚಿಂತೆಯಿಂದ, "ಏಕೆ ನಮ್ಮ ಸತೀಂಗೆ ಮುಂಬಯಲ್ಲಿ ದೊಡ್ಡ ಕೆಲಸ ಇಲ್ಲವಾ ? ಪ್ರಾವಿಡೆಂಟ್ ಫಂಡ್, ಇನ್ಷ್ಯೂರೆನ್ಸ್ ಮೇಲೆ ಸಾಲ ಮಾಡಿದ್ರೆ ತೊಂಬತ್ತು ಸಾವಿರ ಸಿಗಲ್ವಾ ? ಲಕ್ಷಾಂತರ ರೂ.ಗಳ ಈ ಮನೆ ಉಳಿಸಿಕೋಬೇಕಾದರೆ ತೊಂಬತ್ತು ಸಾವಿರ ಕೊಟ್ಟು ಬಿಡಿಸ್ಕೋತಾನೆ" ಎಂದರು.

"ಏನೋ ನಿಂದೆಲ್ಲಾ ಕಾಲಿನಿಂದ ತೆಗೆದು ತಲೆಗೆ ಹಾಕೋ, ತಲೇದು ತೆಗೆದು ಕಾಲಿಗೆ ಹಾಕಿ ಅಂದಾದುಂದಿ ಮಾಡೋ ಸ್ವಭಾವ" ಎಂದು ಅಸಮಾಧಾನದಿಂದ ನುಡಿದರು.

ಒಂದು ತಿಂಗಳಲ್ಲಿ ಆಕೆ ಸ್ವಾಭಿಮಾನ ಚುಚ್ಚುವ ಅನೇಕ ಪ್ರಸಂಗಗಳು ನಡೆದವು. ಬರಿಗೈಯಲ್ಲಿ ತಂಗಿ ಮನೆಗೆ ಬಂದದ್ದು ಮೂರ್ಖತನವಾಯಿತೆಂದುಕೊಂಡರು. ಹಿಂದೆಲ್ಲ ಸತೀಶನ ಸಂಬಳ ಪೂರ್ತ ತರುತ್ತಿದ್ದರು. ಸಾವಿರಾರು ರೂ. ಸಾಲದ ಕಂತಿಗೂ ಕಟ್ಟದೇ ತಂಗಿಯ ಕೈಗೆ ಹಾಕುತ್ತಿದ್ದರು.

ಈಗ ಬರಿಗೈಯಲ್ಲಿ ಬಂದ ತಾವು ಆಕೆಗೆ ಬೇಕಾಗಿಲ್ಲ ಎಂದು ಅರಿವಾಯಿತು. ಪುಣ್ಯಕ್ಕೆ ಯಾರೋ ಒಬ್ಬ ಒಂಟಿ ಉದ್ಯೋಗಸ್ತ. ಮೂನ್ನೂರು ರೂ.ಗಳಿಗಾದರೇ ಆ ಮನೆಗೆ ಬಾಡಿಗೆಗೆ ಬರುವುದಾಗಿ ಹೇಳಿದ್ದ. ಹನುಮಂತಾಚಾರ್ಯರ ಕಾಗದ ಕಂಡು ಊರಿಗೆ ಬಂದರು.

"ನಾನ್ನೂರು ಎಂದು ಹಠ ಹಿಡಿದರೆ ಯಾರೂ ಬರೋದಿಲ್ಲ ಬಾಯಿರಾ ? ಮೂನ್ನೂರು ರೂ.ಗೆ ಕೊಟ್ಟು ಬಿಡ್ರಿ" ಎಂದರು.

ಸಧ್ಯ ಹೊಟ್ಟೆ ಪಾಡಿಗಾದರೆ ಸಾಕು ಬಂದಷ್ಟು ಬರಲಿ ಎಂದು ಆಕೆ ತಂಗಿ ಮನೆಯಿಂದ ಬಂದು ಸಂಸಾರ ಹೂಡಿದರು. ತಿಂಗಳಿಗೆ ಸರಿಯಾಗಿ ಮೂನ್ನೂರು ರೂ. ಕೊಡುತ್ತಿದ್ದ. ಮೂನ್ನೂರು ರೂ.ಗಳಲ್ಲಿ ಹೇಗೋ ಎಲ್ಲಾ ಮಾಡಿಕೊಂಡು ಕಾಲ ಹಾಕುತ್ತಿದ್ದರು. ಒಂದು ವರ್ಷ ಉರುಳಿತು. ಆ ಹುಡುಗ ರಜಕ್ಕೆಂದು ಹೋದವನು, ವಿವಾಹವಾಗಿ ಬಂದ. ಬೇರೆ ದೊಡ್ಡ ಮನೆ ಬಾಡಿಗೆ ಹಿಡಿದ.

ಪುನಃ ಎರಡು ತಿಂಗಳು ಖಾಲಿ ಬಿತ್ತು. ಈ ಬಾರಿ ಬಂದವನು ಒಬ್ಬ ತರಲೆ. ಸರಿಯಾಗಿ ಬಾಡಿಗೆ ಕೊಡುತ್ತಿರಲಿಲ್ಲ. ಬಾಯಿ ಮಾಡಿದರೆ ಸಿಕ್ಕಾಪಟ್ಟೆ ದಬಾಯಿಸುತ್ತಿದ್ದ. ಉಪವಾಸ, ವನವಾಸ ತಡೆಯಲಾರದೆ ಮಗನ ಹತ್ತಿರ ಹೊರಟು ಬಿಡಬೇಕೆಂದು ನಿಶ್ಚಯಿಸಿದರು.

"ಕ್ವಾರ್ಟರ್ಸ್ ಹೊಡಿದೊಡನೆ ನಿನ್ನ ಸೊಸೆಯನ್ನು ಕರೆಸಿಕೊಳ್ತಾನಂತೆ ನೀನ್ಯಾಕೆ ಇಲ್ಲಿ ಒದ್ದಾಡ್ತಿ ? ಹಾಯಾಗಿ ಮಗನ ಹತ್ತಿರ ಹೋಗು. ಚಿಕ್ಕ ಮನೆ, ದೊಡ್ಡ ಮನೆ ಸೇರಿಸಿ, ಮುಂದೆ ಬಾಡಿಗೆಗೆ ಕೊಡೋಣ" ಎಂದ ಸತೀಶ.

ತೀರ ಹತ್ತಿರದ ಎರಡು ಮನೆಯು ಆಚೆಯೇ ಇದ್ದರೂ ಗೋದಾಳ ಸುದ್ದಿ ಯಾವುದು ತಿಳಿಯಲಿಲ್ಲ. ಗೋದ್ವಾ ಮುಂಬಯಿಗೆ ಹೋಗಿ ಎರಡು ವಾರ ಆಯಿತೆಂದು ತಿಳಿದಾಗ ಆಕೆಗೆ ಹೊಟ್ಟೆ ಉರಿಯಿತು. ಮಗನಿಗೆ ಅಲ್ಲಿ ಪ್ರಮೋಷನ್ ಸಿಕ್ಕಿ ಐದು ಸಾವಿರ ರೂ. ಸಂಬಳ ಆಗಿರಬಹುದು. ಹಾಗು ಕ್ವಾರ್ಟರ್ಸ್ ಸಿಕ್ಕಿರಬಹುದು. ಮಗನ ಜೊತೆ ವೈಭೋಗ ಅನುಭವಿಸಲು ಅವಳೊಬ್ಬಳಿಗೇನ- ಹಕ್ಕಿರುವುದು ತಮಗಿಲ್ಲವೆ ? ಎಂದು ಆಕೆಗೆ ಕೋಪದಿಂದ ರಮೇಶನ ಜೊತೆಗೆ ಮುಂಬಯಿಗೆ ಬಂದರು.

"ಐದುಸಾವಿರ ರೂ. ಆಗತ್ತೆ ಸಾಹುಕಾರರಿಂದ ಸಾಲ ತರ್‍ತೀನಿ" ಎಂದು ಏನೋ ರುಜು ಹಾಕಿಸಿಕೊಂಡು ಹೋದ. ಆದರೆ ಮುಂಬೈ ತಲುಪಿ ವಿಳಾಸ ಹಿಡಿದು ಹೋದಾಗ ನಾಲ್ವರು ಗೆಳೆಯರಿಂದ ತಿಳಿದ ಸುದ್ದಿಯೆ ಬೇರೆ. ಸತೀಶ ಹಾಗು ಇಲ್ಲಿಂದ ಹೋದ ದಕ್ಷಿಣದವರಿಗೆ ಅಲ್ಲಿ ಮಲತಾಯಿ ಧೋರಣೆ. ಸಂಬಳ ಹುದ್ದೆ ಯಾವುದರಲ್ಲಿ ಆವರುಗಳಿಗೆ ಸೀನಿಯಾರಟಿ ಪರಿಗಣಿಸದೇ ೫ಸಾವಿರ ದೈನೂರು ರೂ. ಕೊಡುತ್ತಿದ್ದರು. ಇಲ್ಲಿನ ಅನ್ಯಾಯ ಪ್ರತಿಭಟಿಸಿ, ಎಂಟುಜನ ವರ್ಷದ ಮೇಲೆ ಮುಷ್ಕರ ಮಾಡಿದ್ದಕ್ಕೆ ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಿದರು. ಸತೀಶ ಮನನೊಂದು ಖಾಯಿಲೆ ಬಿದ್ದಿದ್ದ. ಅಲ್ಲಿನ ಆಪ್ತಗೆಳೆಯ್ರ ಆಸ್ಪತ್ರೆ ಸೇರಿಸಿದ್ದ. ನಾಲ್ಕು ದಿನದ ಮೇಲೆ ಗೋದಾಳಿಗೆ ಟೆಲಿಗ್ರಾಂ ಕೊಟ್ಟಿದ್ದ. ಗೋದಾ ಬಂದು ಅವನನ್ನು ಗೆಳೆಯರು ಹೇಳಿದ ನರ್ಸಿಂಗ್ ಹೋಮ್ ಸೇರಿಸಿದಳು. ಹಗಲು ರಾತ್ರಿ ಅಲ್ಲಿ ಕುಳಿತು ಗಂಡನ ಸೇವೆ ಮಾಡಿದಳು. ಹತ್ತು ಸಾವಿರದವರೆಗೆ ಖರ್ಚು ಬಂತು. ಸತೀಶನಿಗೆ ಡಿಸ್ಚಾರ್ಜ್ ಆಗಿ ಮೂರು ದಿನದ ಮೇಲೆ ಚೆನ್ನಾಗಿ ಮನಸ್ಸಮಾಧಾನ ಹೇಳಿ ಊರಿಗೆ ಕರೆದೊಯ್ದಳು" ಎಂದು ಆ ಕೋಣೆಯ ಗೆಳೆಯರು ಹೇಳಿದಾಗ ಭಾಗಿರಥಮ್ಮ ಪೆಚ್ಚಾದರು.

ಬಂದ ದಾರಿಗೆ ಸುಂಕವಿಲ್ಲ ಎಂಬಂತೇ ಮರಳಿ ಊರಿಗೆ ಬಂದರು ಮಗನನ್ನು ನೋಡಬೇಕೆಂಬ ಹಂಬಲದಿಂದ ವರ್ಷ ಎರಡು ತಿಂಗಳಾದರೂ, ಎಂದು ಆ ಮನೆಗೆ ನುಗ್ಗದಿದ್ದವರು ಈ ದಿನ ಬಂದರು. ಅಲ್ಲೇ ಹಜಾರದ ಮಂಚದ ಮೇಲೆ ಮಲಗಿದ್ದ.

"ಸತೀಶೂ... ಹುಲಿ ಹಾಗೆ ಇದ್ದೋನು ನೀನು ಹೇಗೆ ಆಗಿ ಹೋಗಿದ್ದೆಯಾ ? ಆ ಪಾಪೀನ್ನ ಮದುವೆ ಆಗಿದ್ದೇ ನಿನಗೆ ಮೇಲಿಂದ ಮೇಲೆ ಕಷ್ಟ ಬಂತಲ್ಲೋ" ಎಂದು ಗೋದಾಳನ್ನು ದೂಷಿಸುತ್ತ ಇನ್ನೇನೋ ಬೈಯ ತೊಡಗಿವರು.

ಅವನು ವಿಷಾದದಿಂದ ನಕ್ಕು "ಆಮ್ಮ ಅವಳು ದುಡ್ಡನ್ನು ನೀರಿನ ಹಾಗೆ ಖರ್ಚು ಮಾಡಿ. ನನ್ನ ಉಳಿಸಿಕೊಂಡಿದ್ದಾಳೆ. ಬರಿ ದುಡ್ಡು ಔಷಧದಿಂದ ಸಹ ನಾನು ಉಳೀತಿರಲಿಲ್ಲ. ಪ್ರೀತಿ, ಪ್ರೇಮ ಮಾನಸಿಕ ಧೈರ್ಯ ಎಲ್ಲಾ ನೀಡಿದ್ದಾಳೆ. ನೀನು ಆ ಸ್ಥಿತೀಲಿ ಬಂದಿದ್ರೆ ಹೌಹಾರ್ತಿದ್ದೆ. ನೀನು

ನನ್ನಿಂದ ಪಡೆಯುತಿಕ್ಕೆ ಬಂದೋಳು. ಆದರೆ ಅವಳು ಪಡೆಯಲಿಕ್ಕೆ ಬರಲಿಲ್ಲ. ನೀಡಲಿಕ್ಕೆ ಬಂದೋಳು" ಎಂದ.

"ಹೌದಪ್ಪಾ ನಾನು ಬಹಳ ಪಡೆದಿದ್ದೇನೆ" ಎಂದರು.

"ಎಂಟು ವರ್ಷದ ಸಂಬಳ ನಾನೇ ಉಳಿಸಿಕೊಂಡಿದ್ರೇ ಇವತ್ತು ಕೈಲಿ ಐವತ್ತು ಸಾವಿರ ಇರ್ತಿತ್ತು. ಎಲ್ಲಾ ನಿನ್ನ ಉಚ್ಚಾಟಕ್ಕೆ ಸುರಿದೆ. ಮನೆ ರಿಪೇರಿ ನೆಪ ಮಾಡಿ ಎಲ್ಲಾ ಅವನು ನುಂಗಿ ಹಾಕಿದ. ಈಗಲು ಆ ಅಂಗೈ ಅಗಲದ ಮನೆ ಕಟ್ಟಿಸಿ ಒಂದಕ್ಕೆ ಡಬ್ಬಲ್ ಲೆಕ್ಕ ತೋರಿಸಿದ್ದಾನೆ. ನೀನು ದೊಡ್ಡ ಮನೆ ಒತ್ತೆ ಹಾಕಿದಿ. ಅದು ಹೋಗುತ್ತೆ" ಅಂದ.

"ನಿನ್ನ ನಂಬಿ ಒತ್ತೆ ಹಾಕಿದ್ದೀನಪ್ಪಾ" ಎಂದರಾಕೆ.

"ಹೂಂ ದುಡ್ಡಿನ ಗಿಡ ಹಾಕಿದ್ದೀನಿ. ತೊಂಬತ್ತು ಸಾವಿರ ರೂ. ಕೊಟ್ಟು ಬಿಡಿಸ್ಕೊಳ್ತೀನಿ" ಎಂದು ವ್ಯಂಗ್ಯವಾಗಿ ನುಡಿದ.

"ಆ ಮನೆಗೆ ಬರ್‍ತಿಯಾ ಇಲ್ಲವೋ ಅಪ್ಪಾ" ಎಂದರು.

"ಏನ್ಮಾಡ್ಬೇಕಮ್ಮ ಬಂದು ? ಅದು ನಿನ್ನ ಮನೆ, ತನ್ನ ಮನೆ. ನನ್ನ ಮನೆ ಅಂತ ಹಾರಾಡಿದಿ. ನಿನ್ನ ಭದ್ರ ಕೋಟೆಲಿ ನನಗೆ ಏಕೆ ಪ್ರವೇಶ ಕೊಡ್ತಿ ನನ್ನ ಹೆಂಡ್ತಿ ಅಂಗಡಿ, ಕಾರಣವಿಲ್ಲದೇ ತೆಗೆಸಿ ಅವಳನ್ನ ಓಂಟಿಯಾಗಿ ಬೀದಿಗೆ ಅಟ್ಟಿದಾಗಲೇ ನಿನ್ನ ಮೇಲೆ ನನ್ನ ಮನಸು ಮುರಿದು ಹೋಯ್ತು. ಪುನಃ ಆ ಮನೆಗೆ ನಾನು ಏನಿದೇಂತ ಬರಬೇಕು ?" ಎಂದ.

ಆಕೆ ಹತಾಶರಾಗಿ "ಹೀಗೆ ಮಾತಾಡಿದರೆ ಹೆಂಗಪ್ಪಾ ? ನಾನು ಅವಳನ್ನ ಬೀದಿಗೆ ಅಟ್ಟಿದೆನಾ ? ಅಂಗಡಿ ಬೇಡಾ..... ನಾನು ಅನ್ನ ಹಾಕ್ತೀನಿ ನನ್ನ ಸೇವೆ ಮಾಡಿಕೊಂಡಿರಮ್ಮ ಅಂದೆ. ತಪ್ಪಾ ?" ಎಂದರು.

"ನೀನು ಮಾಡಿದ್ದೆಲ್ಲಾ ನಿನ್ನ ಮೂಗಿನ ನೇರಕ್ಕೆ ಸರಿಯಾಗಿದೆಯಮ್ಮ. ಹದಿನೈದು ಸಾವಿರ ಖರ್ಚು ಮಾಡಿ. ಸ್ವಂತ ಮನೆ ಅಂತ ನಂಬಿ ಅಂಗಡಿ ಕಟ್ಟಿಸಿದ್ದಳು. ಆದರೆ ಹುಟ್ಟಿ ಕಿಚ್ಚಿಗೆ ಅಂಗಡಿ ತೆಗೆಸಿದೆ. ನಲವತ್ತು ಸಾವಿರ ರೂ. ಖರ್ಚು ಮಾಡಿ, ಅಲ್ಲಿ ಬಾಡಿಗೆ ಮನೆ ಕಟ್ಟಿಸಿದೆ. ಅವನು, ರಮೇಶ ಅದಕ್ಕೆ ಇಪ್ಪತ್ತು ಸಾವಿರವಾದರೂ ಪೂರ್ತಿ ಖರ್ಚು ಮಾಡಿದ್ದಾನಾ ? ಮನೆ ಆಕಾರ ಇದೆಯಾ ಅದಕ್ಕೆ ? ಯಾರು ಬರ್‍ತಾರೆ ಬಾಡಿಗೆಗೆ ? ಯಾರಾದರೂ ಒಂಟಿ ಬಡಗಗಳು, ಆರು ತಿಂಗಳು. ಎಂಟು ತಿಂಗಳು ಇದ್ದು ಹೋಗ್ತಾರೆ ?

ಆಮೇಲೆ ಆರಾರು ತಿಂಗಳು ಖಾಲಿ ಇರುತ್ತೆ. ಇಂಥಾ ಮನೆ ನಂಬಿ ಜೀವನ ಏನು ಮಾಡ್ತಿ ? ನಿನ್ನ ತಂಗಿ ಬಂಗ್ಳೆಯಲ್ಲಿ ಹೋದರೆ ಅನ್ನ ಹಾಕ್ತಾಳಾ ? ಬಂಗ್ಳೆ ದಾಸನಾದಾಗ ನನಗೆ ಆರಾರು ತಿಂಗಳು ಅನ್ನ ಹಾಕಿದವಳು ಅವಳು ನಿನ್ನ ಕುಸುಬಿಷ್ಟಿ ಸಹಿಸಿ ನಿನ್ನ ಸೇವೆ ಮಾಡಿದಳು. ಆದರೆ ನೀನೇ ಅವಳಿಗೆ ಅಪಾರ ಕಷ್ಟಕೊಟ್ಟೆ. ಬರಿ ಹೊಟ್ಟೆ ಕಿಚ್ಚು, ಅಸೂಯೇ, ಅಧಿಕಾರ ದಾಹ ಅವಳು ಸಂಪಾದಿಸಿ ಅನ್ನ ಹಾಕ್ತಾಳೆ. ಎಲ್ಲ ಮನೆ ಆಡಳಿತ ಅವನ ಪಾಲಾಗತ್ತೋ ಅಂತ ನಿನಗೆ ಭಯ. ಈಗ ಮುಂಬೈನಲ್ಲಿ ಐದು ಸಾವಿರ ರೂ ಸಂಬಳ ಕ್ವಾರ್ಟರ್ಸ್ ಆಗಿದ್ರೂ ತಾಯಿ ಅನ್ನೋ ಹಕ್ಕು ಸಾಧಿಸಿ ಬಂದು ಅಲ್ಲಿ ಇರ್ತಿದ್ದಿ ಅತ್ತೆ ಅನ್ನೋ ಅಧಿಕಾರ ಸಾಧಿಸಿ ಅವಳ ಮೇಲೆ ಅಧಿಕಾರ ಚಲಾಯಿಸ್ತಿದ್ದಿ. ಆದರೆ ನಾನು ಅಲ್ಲಿನ ರಾಜಕೀಯದಲ್ಲಿ ಸೋತು ಎಲ್ಲಾ ಕಳೆದುಕೊಂಡು ಹತಾಶನಾಗಿ, ಕಾಯಿಲೆ ಬಿದ್ದಾಗ ನನಗೆ ಮಾನಸಿಕ ಧೈರ್ಯ ನೀಡಿ, ನನಗಾಗಿ ಹತ್ತಾರು ಸಾವಿರಕ್ಕೂ ಖರ್ಚು ಮಾಡಿ, ಪ್ರಾಣ ಉಳಿಸಿಕೊಂಡಳು. ಆಪ್ತ ಗೆಳೆಯರಿದ್ದರು ಎರಡು ಮೂರು ಜನ. ಆದರೆ ಯಾರು ನನಗಾಗಿ ಮೂರು ಕಾಸು ಖರ್ಚು ಮಾಡೋ ಸ್ಥಿತಿಯಲ್ಲಿರಲಿಲ್ಲ. ಅವರ ಹೊಟ್ಟೆ ಅವರಿಗೆ ಸಾಕಾಗಿರುತ್ತೆ. ಆ ಸ್ಥಿತೀಲಿ ನಿನಗೆ ಹೇಳಿ ಕಳಿಸಿದ್ರೆ ಏನು ಮಾಡ್ತಿದ್ದಿ? ಮನೆ ಒತ್ತೆ ಹಾಕಿ ಹತ್ತಾರು ಸಾವಿರ ತಂದು ಮಗನ್ನ ಪ್ರಾಣ ಉಳಿಸ್ತಿದ್ಯ ? ನಿನ್ನ ಹಠಕ್ಕೆ ಎಂದೋ ಒತ್ತೆ ಹಾಕಿದ ಮನೇನ್ನ, ಮುಂದೆಂದೋ ನಾನು ತೊಂಬತ್ತು ಸಾವಿರ ಕೊಟ್ಟು ಬಿಡಿಸಿಕೊಳ್ಳಬೇಕು. ನಿಂದೆಲ್ಲಾ ಇಂಥಾ ಅಡ್ಡಾದಿಡ್ಡಿ ಯೋಜನೇನೆ ಅಷ್ಟು. ಈಗ ನಾನಿಟ್ಟ ದುಡ್ಡು ಮುಳುಗಿತು. ಆ ಆಫೀಸೇ ಪಾಪರಾಗ್ತಿದೆ. ಅದು ಬೇರೆ ಸಂಸ್ಥೆಗೆ ಸೇರಿ ಹೋಗ್ತಿದೆ. ಅಲ್ಲಿನವರು ನಮ್ಮನ್ನ ಕ್ಯಾರೇ ಅನ್ನಲ್ಲ" ಎಂದ.

"ನಾನು ಗೋವಿಂದ ಮೂರ್ತಿಗೆ ಹೇಳಿದ್ದೀನಪ್ಪಾ ತಿಂಗಳಿಗೆ ಐನೂರು ರೂ. ಕೊಡ್ತಾರಂತೆ. ಬೆಳಗ್ಗಿನಿಂದ ಸಂಜೆಯವರಿಗೆ ಟೈಪ್ ಮಾಡಬೇಕು" ಎಂದ.

"ನಿಂದೆಲ್ಲಾ ಇಂಥಾ ತ್ಯಾಪೇ ದಾರಿ ಯೋಚನೆಯೆ. ನನಗೆ ಈಗ ಎದೇ ನೋವು ನಿಶ್ಯಕ್ತಿ ಇದೆ. ಆರು ತಿಂಗಳು ಬೆಡ್‌ರೆಸ್ಟ್ ಬೇಕೂಂತ ಡಾಕ್ಟರ್ ಹೇಳಿದ್ದಾರೆ. ತಿಂಗಳಿಗೆ ಮುನ್ನೂರು ರೂಗಳ ಔಷದಾ ಬೇಕಾಗುತ್ತೆ. ಒಳ್ಳೆ

ಹಾಲು, ಮೊಸರು, ತರಕಾರಿ, ತುಪ್ಪ, ಒಳ್ಳೆ ದರ್ಜೆ ಊಟಾ ಬೇಕಾಗುತ್ತೆ. ಅವಳು ತನ್ನ ಜೀವಾನ್ನೆ ಒತ್ತೆಯಿಟ್ಟು ನನ್ನ ಸೇವೆ ಮಾಡ್ತಿದ್ದಾಳೆ. ನೀನು ಏನು ಮಾಡ್ತಿ ? ಆ ಮನೆಗೆ ಬಂದರೆ?" ಎಂದ. ಆಕೆ ತೀರ ಬೆದರಿ ಹೋದರು.

ತಮಗೆ ಈಗ ಹೊಟ್ಟೆಗಿಲ್ಲ. ಮಗ ಸಾಕುತ್ತಾನೆ, ಎಂದು ನಂಬಿದ್ದರು ಮಗನ ಪರಿಸ್ಥಿತಿ ಹೀಗಾದಾಗ ಆಕೆಗೆ ತಮ್ಮ ತಪ್ಪುಗಳೆಲ್ಲಾ ಗಣನೆಗೆ ಬಂದವು. ಸುಮನ ಓಡಿ ಹೋಗಿ, ಮಗ ವೈರಾಗ್ಯ ಶಾಲಿಯಾಗಿ ಉಳಿದಾಗ, ಎಲ್ಲಾ ದುಡ್ಡು ಪಡೆದು ತಾವು ವಾಹಿವಾಟು ಪ್ರಾರಂಭಿಸಿದರು. ಆಗಾಗ ತಂಗಿಯ ಮನೆಗೆ ಹೋಗಿ, ಧಂಡಿಯಾಗಿ ದುಡ್ಡು ತೆತ್ತು ಉಪಚಾರ ಮಾಡಿಸಿಕೊಂಡು ಬರುತ್ತಿದ್ದರು.

ತಮಗೂ ಅರವತ್ತು ವರ್ಷ ಆಗಿ ತೀರಾ ನಿಶ್ಪ್ರಾಣ ಶುರುವಾದಾಗ ಆಕೆಗೆ ಸೊಸೆ ಯೋಚನೆ ಬಂತು. ಕಾವೇರಮ್ಮನು ಒಮ್ಮೆ ಹಂಗಿಸಿ, "ಮಗನ ದುಡ್ಡು ಇಸ್ಕೊಳ್ತಾ ದರ್ಬಾರು ಮಾಡ್ತ ಕೂತ್ಕೋ ಬೇಡಾ ಒಬ್ಬ ಮೊಮ್ಮಗ ಬೇಡ್ವಾ ? ಸೇವೆ ಮಾಡ್ಲಿಕ್ಕೆ ಸೊಸೆ ಬೇಡ್ವಾ ?" ಎಂದರು.

"ಅವನ ಮದುವೆ ಕಥೆ ಹಾಗಾಯ್ತಲ್ಲೇ..... ಈಗ ಹೆಣ್ಣು ಅಂದರೆ ಸಿಡಿದು ಬೀಳ್ತಾನೆ. ಪುನಃ ಮದುವೆಗೆ ಒಪ್ತಾನಾ ?" ಎಂದರು.

"ನೀನು ಬುದ್ಧಿ ಹೇಳು, ಆ ರಾಕ್ಷಸೀನ್ನ ನೆನಪಿಕೊಂಡು ಜೀವಮಾನ ಪೂರ್ತಿ ಒಂಟಿಯಾಗಿರೋಕ್ಕಾಗತ್ತಾ ? ಇಲ್ಲೊಂದು ಹುಡುಗಿ ಇದೆ. ಕಡು ಬಡವರು, ಎಮ್ಮೆ ಸಾಕಿಕೊಂಡು ಸಗಣಿ ಎತ್ತಿ ಹಾಕಿ ಜೀವನ ಮಾಡ್ತಿದ್ದಾಳೆ. ಅವನಿಗೆ ಬೇಕಾಗಲಿ ಬಿಡಲಿ ನಿನ್ನ ಸೇವೆಗಂತು ಒಂದು ಹುಡುಗಿ ಸಿಕ್ಕಿದ್ದಾಳೆ ಅನ್ಕೊ. ನಿನಗೂ ವಯಸ್ಸಾಯಿತು, ಕೂಡಿಸಿ ಮಾಡಿ ಹಾಕೋಕೆ ಒಂದು ಹುಡುಗಿ ನಿನಗೆ ಬೇಡ್ವೇ ?" ಎಂದು ಭೋಧಿಸಿದ್ದರು.

ಆಕೆಯ ಭೋಜನೆಗೆ ವಶರಾಗಿ, ಮಗನಿಗೆ ಆಗಾಗ ಬಲವಂತ ಮಾಡು ತ್ತಿದ್ದರು. ಅಂತೂ ವಿಹಾಹದ ಶಾಸ್ತ್ರ ಆಗಿತ್ತು, ಮುಂದೆ ನಡೆದ ಕಥೆ ಬೇರೆ. ಈಗ ಮಗ ಸೊಸೆ ಇಬ್ಬರೂ ತಮ್ಮ ಪಾಲಿಗಿಲ್ಲ ಚಿಂತೆಯಿಂದ ತತ್ತರಿಸಿದರಾಕೆ.

ಕಾಯಿಲೆ ಬಿದ್ದರು. ಒಂದೆರಡು ದಿನ ಹನುಮಂತಾಚಾರ್ಯರ ಹೆಂಡತಿ ಗಂಜಿ ತಂದಿಟ್ಟರು. "ಮಗ ಸೊಸೆ ಪಕ್ಕದಲ್ಲೇ ಇದ್ದು ನಮಗೇನ್ರಿ ಕರ್ಮ

ನಮ್ಮನೆ ಕೆಲಸವೇ ನಮಗೆ ಸಾಕಾಗಿದೆ. ದಿನಾ ನಾನು ಮಾಡಲಾರೆ" ಎಂದರು.

ಆಗರಿವಾಯಿತು ಭಾಗಿರಥಮ್ಮನಿಗೆ, ನನ್ನ ಮನೆ......ನನ್ನ ಮನೆ...... ಎಂದು ಹಾರಾಡಿ, ಹೀಗೆಲ್ಲಾ ಮಾಡಬಾರದಿತ್ತೆಂದು. ಗೋದಳಿಗೆ ಹೇಳಿ ಕಳಿಸಿ ಕಲ್ಲು ನೀರು, ಕರಗುವಂತೇ ಬೇಡಿಕೊಂಡರು. ಗೋದಾ ಯಾವುದು ಮನಸ್ಸಿನಲ್ಲಿಟ್ಟು ಕೊಳ್ಳದೇ ಬಂದು ಅತ್ತೆ ಸೇವೆ ಮಾಡುತ್ತಿದ್ದಳು.

ಸತೀಶನೇ ಆಗಾಗ ಕಟಕಿ ಆಡುತ್ತಿದ್ದ. "ಆ ಮನೆ ಏಕೆ ನಾನ್ನೂರು ರೂ. ದಂಡಾ ಎಲ್ಲರೂ ಇಲ್ಲೇ ಬಂದು ಬಿಡಿ" ಎಂದಾಗ ಸತೀಶ ವ್ಯಂಗ್ಯ ದಾಗಿ......

"ಈ ಮನೆ ತಾನೇ ನಮಗೇನು ಉಳಿಸಿದ್ದಿಯಮ್ಮಾ ? ಇದರ ಮೇಲು ನಲವತ್ತು ಸಾವಿರ ರೂ. ಸಾಲ ತೆಗೆದಿದ್ದಿ ವರ್ಷಕ್ಕೆ ಐದು ಸಾವಿರ ಬಡ್ಡಿ ಬೆಳೀತಿದೆ" ಎಂದಾಗ ಆಕೆ ತಮ್ಮ ಮೂರ್ಖತನಕ್ಕೆ ನೊಂದು ತಲೆತಗ್ಗಿಸಿದರು.

"ಒಟ್ಟು ಸಾಲ ಎಷ್ಟಿದೆ ಅತ್ತೆ ? ಎಷ್ಟು ಕೊಟ್ಟರೆ ಈಗ ಮನೆ ಬಿಡಿಸಿ ಕೊಳ್ಳಬಹುದು ?" ಎಂದು ಗೋದಾ.

"ನಲವತ್ತು ಸಾವಿರ ಮೊದಲ ಹಂತದ ಸಾಲಾ ಐದು ಸಾವಿರ ಈ ವರ್ಷದ ಬಡ್ಡಿ, ಐದು ಸಾವಿರ ಮುಂಬೈಗೆ ಹೋಗ್ಲಿಕ್ಕೆ ಸಾಲಾ ಮಾಡಿಸಿದ್ದ. ಎಷ್ಟು ಖರ್ಚಾಯ್ತೋ ಉಳಿದ ಹಣಾ ಸಹ ಕೊಡಲಿಲ್ಲ" ಎಂದರು.

"ಊಂ ಕೊಡ್ತಾನೆ ಅವನಿಗೆ ಸೂಳೆಚಾಳಿ ಮಜಾಮಾಡ್ಲಿಕ್ಕೆ ನಿಮ್ಮಂಥಾ ಮೂರ್ಖರಿಂದ ಕಿತ್ತಿದ್ದ ಹಣಾ ಬೇಕಲ್ಲ. ಹೆಂಡ್ತೀನ್ನ ಮರಳು ಮಾಡ್ಲಿಕ್ಕೆ ಒಂದಿಷ್ಟು ಸ್ವೀಟ್ಸ್, ಸೀರೆ ತಗೊಂಡು ಹೋಗ್ತಾನೆ. ಐದು ಸಾವಿರ ಇದ್ದರೆ ಐವತ್ತೂ ರೂ. ಹೆಂಡ್ತಿಗೆ ಖರ್ಚು ಮಾಡ್ತಾನೆ. ಆ ಸ್ವೀಟ್ಸ್ ಸೀರೆಗಳೇ ಗಂಡಾ ತಂದು ಕೊಟ್ಟು ಮಹಾನಿಧಿ ಅಂತ ಆ ಚಂದ್ರಿಕಾ ಆನಂದ ಪಡ್ತಾಳೆ. ಅತ್ತೆ ಮಾಡಿದ ರುಚಿ ರುಚಿ ಅಡಿಗೆ ತಿಂತಾ ಯಾವಾಗಲೂ ಕಾದಂಬರಿ ಓದ್ತಾ ಕನಸಿನ ಲೋಕದಲ್ಲಿರೋ ಅವಳಿಗೆ ತನ್ನ ಗಂಡಾ ಎಂಥಾ ಮೋಸಗಾರ ಅಂತ ಅರಿವಿದೆಯಾ ? ಹೆಂಡತಿಗೆ ಐವತ್ತು ರೂ. ಖರ್ಚು ಮಾಡಿ, ಮರಳು ಮಾಡಿ, ತನ್ನ ಬೀದಿ ಹುಡುಗೀರಿಗೆ ಸಾವಿರಾರು ರೂ. ಚೆಲ್ತಾನೆ. ಚಿಕ್ಕಪ್ಪಾ ಚೆನ್ನಾಗಿ

ಪೌರೋಹಿತ್ಯದಲ್ಲಿ ಗಳಿಸ್ತಾರೆ. ನಾಲ್ಕು ಎಕ್ರೆ ಗದ್ದೆ, ದೇವಸ್ಥಾನದ ಉತ್ಪತ್ತಿ ಇದೇಂತ ಮನೆ ನಡೀತಾ ಇದೆ" ಎಂದ.

ಆಕೆ ಪಶ್ಚಾತಾಪದಿಂದ–"ನಾನು ಅವನನ್ನ ನಂಬಿ, ತುಂಬಾ ತಪ್ಪು ಮಾಡಿದೆ. ಈಗೇನು ಮಾಡಲಿ ಹೇಳಿ" ಎಂದರು

"ಅತ್ತೇ ಆ ಮನೆಗೆ ಬಂದು ಅಂಗಡಿ ಹೂಡ್ತೀನಿ. ಅಲ್ಲಿ ಬಾಡಿಗೆ ನಾವ್ಕೊಡ್ತ ತಪ್ಪುತ್ತೆ. ಚಿಕ್ಕ ಮನೆ ಅಂಗಡಿ, ಮಳಿಗೆ ಮಾಡ್ತೀವಿ ಅಮ್ಮ ಮಡೀಲಿ ಅಡಿಗೆ, ಕಾಫಿ ತಿಂಡಿ ಮಾಡ್ತಾಳೆ. ಅಪ್ಪಾ, ತಮ್ಮ ನಾನು ಅಂಗಡಿ ನೋಡ್ಕೋತೀವಿ. ಇವರು ಕೊಂಚ ದಿನ ರೆಸ್ಟ್ ತಗೊಳ್ಳಲಿ. ನಾನು ವರ್ಷಕ್ಕೆ ಹತ್ತು ಸಾವಿರ ಮನೆಗಾಗಿ ಕಟ್ತೀನಿ, ಐದು ಸಾವಿರ ಬಡ್ಡಿ, ಐದು ಸಾವಿರ ಅಸಲು, ಎಂಟು ವರ್ಷಕ್ಕಾದರೂ ಮನೆ ಸಿಗುತ್ತೆ. ವಾಯಿದೆ ಒಳಗೆ ಮನೆ ಬಿಡಿಸಿಕೊಂಡ ಹಾಗಾಗತ್ತೆ" ಎಂದಳು.

"ನೀನು ಕಷ್ಟಪಟ್ಟು ಅಂಗಡೀಲಿ ದುಡಿದ ದುಡ್ಡು ಎಂಬತ್ತು ಸಾವಿರ ಹಾಳಾಗತ್ತಲ್ಲ ಗೋದಾ ನಮ್ಮಮ್ಮನ ಮೂರ್ಖತನದಿಂದ ಹಿಂದೆ ಹದಿನೈದು ಸಾವಿರ ರೂಗಳ ಅಂಗಡಿ ಹಾಕಿಸಿದ್ದೆ. ಅದನ್ನ ಕೆಡವಿಸಿದಳು, ನಮ್ಮದಾದ ಒಂದು ಸೊಗಸಾದ ಸ್ವಂತ ಮನೆ ಇತ್ತು. ಅದಕ್ಕೆ ಈಗ ಎಂಬತ್ತು ಸಾವಿರ ತರೋಸ್ತಿತಿ ಮಾಡಿದಳು" ಎಂದ.

"ಇರ್ಲಿ ಬಿಡಿ, ಹಿಂದೆ ಹಾಳಾದದ್ದಕ್ಕೆ ನಾನು ಚಿಂತೇ ಪಡಲ್ಲ, ಮುಂದೆ ದೇವರು ಕೈ ತುಂಬ ಕೊಡಲಿ. ಅಂಗಡಿ ಚೆನ್ನಾಗಿ ಅಭಿವೃದ್ಧಿ ಆದರೆ ಐದು ವರ್ಷದಲ್ಲಿ ಮನೆ ಬಿಡಿಸಿ ಕೊಳ್ತೀನಿ" ಎಂದಳು.

ಸುಮಾರು ಎರಡು ತಿಂಗಳು ಕಳೆಯಿತು. ಅತ್ತೆಗೂ ಶ್ರದ್ಧೆಯಿಂದ ಸೇವೆ ಮಾಡುತ್ತಿದ್ದಳು. ಗಂಡನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ರಾತ್ರಿ ಚಿಕ್ಕ ಮನೆಯಲ್ಲಿ ತಂದೆ, ತಾಯಿ ತಮ್ಮ ಮಲಗುತ್ತಿದ್ದರು. ಚಿಕ್ಕ ಮನೆಯ ಮುಂಭಾಗದ ಹಜಾರವೇ ಅಂಗಡಿಯಾಗಿತ್ತು.

ಸತೀಶನ ಆರೋಗ್ಯ ಸುಧಾರಿಸಿತ್ತು. ಆಗಾಗ ಹೊರಗೆ ಹೋಗಿ ಬರು

ತ್ತಿದ್ದ. "ಏನಾದರೂ ಕೆಲಸ ಸಿಕ್ಕಿತೇನಪ್ಪ ?" ಎಂದು ತಾಯಿ ಕೇಳು ತ್ತಿದ್ದರು.

ಒಂದು ದಿನ ಸಿಡಾರ್ ಎಂದು ರೇಗಿ–"ನನಗೆ ಅನ್ನ ಹಾಕ್ತಾ ಇರೋಳು ಅವಳು. ನೀನ್ಯಾಕೆ ಭೂಭಾರ ಮಾಡ್ತಿ ?" ಎಂದ.

ಆಕೆ ನೊಂದುಕೊಂಡು-ಒಂದುವಾರ ಒಪ್ಪತ್ತು ಮಾಡಿ ರಾಯರಿಗೆ ಸೇವೆ ಮಾಡಿದರು. ಆ ದಿನ ರಾತ್ರಿ ಮಲಗಲು ಬಂದಾಗ ಕೆಳಗೆ ಚಾಪೆ ಇರಲಿಲ್ಲ. "ನನ್ನ ಚಾಪೆ ಎಲ್ಲಿ ?" ಎಂದು ಗೋದಾ ಅತ್ತಿತ್ತ ಹುಡುಕಿದಳು. ಸತೀಶ ಅವಳನ್ನು ತೋಳಿನಲ್ಲಿ ಸೆಳೆದ, ಮಂಚದ ಮೇಲೆ ಕೂಡಿಸಿಕೊಂಡ,

ಕೆಲಸವಿಲ್ಲದ ಗಂಡನಿಗೆ ಅನ್ನ ಹಾಕೋದಲ್ಲದೆ ಮಗನನ್ನು ಹೇಗೆ ಹೆತ್ತು ಕೊಡಬೇಕೂಂತ ಚಿಂತೆಯಾ ಗೋದಾ ?" ಎಂದ.

ಗೋದಾಳ ಮುಖ ಅರಕ್ತವಾಯಿತು. ಲಜ್ಜೆಯಿಂದ ತಲೆತಗ್ಗಿಸಿ "ನಾನು ನಿಮ್ಮ ಮನಸ್ಸಿಗೆ ಬೇಸರ ಮಾಡಬಾರದೂಂತ ದೂರವಿದ್ದೆ" ಎಂದಳು.

"ನಿನ್ನ ಗುಣ ಸ್ವಭಾವ ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿದೆ ಗೋದಾ. ಹೆಣ್ಣು ಅಂದರೆ ಹುಣ್ಣು ಅಂದ್ಕೊಂಡಿದ್ದೆ. ಮದುವೆ ಆದ ಒಂದು ತಿಂಗಳಲ್ಲಿ ಅವಳ ದುರಾಶೆ, ಮೋಸಾ, ವಂಚನೆ ಎಲ್ಲಾ ಅನುಭವಿಸಿ ಮನಸಿಗೆ ಬಲವಾದ ಗಾಯವಾಗಿತ್ತು. ಆದರೆ ನಿನ್ನ ಜೊತೆ ಕಳೆದ ಈ ಎರಡೊರೂಷ ಚೇತೋಹಾರಿ ಅನ್ನಿಸ್ತಿದೆ. ನನ್ನ ಒಲಿಸಿಕೊಳ್ಳಿಕ್ಕೆ ಎಂದೂ ಪ್ರಯತ್ನಿಸಲಿಲ್ಲ ನೀನು, ಕಾಮವನ್ನ ಗೆದ್ದೆ. ಆದರೆ ನಿರ್ಮಲ ಪ್ರೇಮದಿಂದ ನನ್ನ ಅರಾಧಿಸಿದೆ, ನಿನಗಾಗಿ ನಾನು ಏನು ಕೊಡಲಿಲ್ಲ. ಆದರೆ ನನಗಾಗಿ ನೀನು ಎಲ್ಲಾ ಕೊಟ್ಟೆ.

"ಇದು ನಿನಗೆ ಬಹುಮಾನ" ಎರಡೆಳೆ ಸರ ಐವತ್ತು ಸಾವಿರ ರೂ. ಡ್ರಾಫ್ಟ್ ಇತ್ತು. ಅವಳು ಅದನ್ನು ಪಡೆದು "ಏನಿದೆಲ್ಲಾ ? ಎಲ್ಲಿತ್ತು ? ಹತ್ತು ವರ್ಷದ ದುಡಿಮೆಯುದು, ಪ್ರಾವಿಡೆಂಟ್ ಫಂಡ್ ಇನ್‌ಷ್ಯೂರೆನ್ಸ್ ಎಲ್ಲಾ ತಗೊಂಬಿಟ್ಟೆ, ಅರವತ್ತೈದು ಸಾವಿರ ಬಂತು. ಐವತ್ತು ಸಾವಿರ ಮನೆ ಬಿಡಿಸಿ ಕೊಳ್ಳಿಕ್ಕೆ, ಜೊತೆಗೆ ನಿನಗೆ ಮದುವೆ ಆದಾಗಿಂದ ಏನು ಒಡವೆ

ಕೊಟ್ಟಿಲ್ಲ ನಿನಗೆ ಎರಡೆಳೆ ಸರ ತಂದಿದ್ದೇನೆ" ಎಂದು ತಾನೇ ಅವಳ ಕೊರಳಿಗೆ ಸರ ಹಾಕಿ ದಿಟ್ಟಿಸಿ ನೋಡಿದ. ಕಿವಿಯಲ್ಲಿ ಹೊಳೆಯುತ್ತಿದ್ದ ಚಿನ್ನದ ರಿಂಗ್ಸ್ ಕೊರಳಲ್ಲಿ ಎರಡೆಳೆ ಸರ ಗೋದಾ ಮುದ್ದಾಗಿ ಕಾಣಿಸಿದಳು.

"ಜೈನ್ ಪ್ಲಾಸ್ಟಿಕ್ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಸಿಕ್ಕಿದೆ ಗೋದಾ. ಸಧ್ಯಕ್ಕೆ ಸಾವಿರದೈನೂರು ರೂ.ಗಳು ಕೊಡ್ತಾರೆ. ಮುಂದೆ ಜಾಸ್ತಿ ಆಗಬಹುದು" ಎಂದ.

ಮಾರನೆಯ ದಿನ ಗೋದಾ ಅತ್ತೆಯ ಕಿವಿಗೆ ವಿಷಯ ಹಾಕಿದಳು. ಆಕೆ ಸಂಭ್ರಮದಿಂದ, "ಹೌದೇನೋ ಮಗು ಒಂದು ವಾರ ರಾಯರ ಸೇವೆ ಮಾಡಿದ್ದೆ. ಗುರುಗಳು ಕಣ್ಣು ತೆರೆದರು" ಎಂದೇನೊ ಹೇಳಲಾರಂಭಿಸಿ ದರು.

"ಪ್ರೈವೇಟ್ ಕಂಪನಿಯ ಪ್ರೈವೇಟ್ ಕೆಲಸ ಅಮ್ಮ. ಬಿಡುವಾದಾಗ ನಾನು ಬಂದು ಗೋದಾಳ ಅಂಗಡಿಯ ಮೇಲೆ ಕೂಡ್ತೀನಿ. ಅಂಗಡೀನೇ ನಮಗೆ ನಿಜವಾಗಿ ಅನ್ನ ಹಾಕೋದು" ಎಂದ.

"ಅವಳ ಅಂಗಡಿಯ ಬಗ್ಗೆ ನಾನೇನು ಮಾತಾಡಲ್ಲಪ್ಪಾ. ಗೋದಾ ನನ್ನ ಸೊಸೆ ಅಲ್ಲ ಮಗಳೂಂತ ತಿಳಿದುಕೊಂಡಿದ್ದೇನೆ" ಎಂದರು.

"ಅತ್ತೇ ಮನೆ ಸಾಲ ಚುಕ್ತ ಮಾಡಿ ಮನೆ ಬಿಡಿಸಿಕೊಳ್ಳೋಣಾ ಬನ್ನಿ" ಎಂದಳು.

ಭಾಗಿರಥಮ್ಮ ಸಂತಸದಿಂದ, "ನಿಜಕ್ಕು ನಿನ್ನ ಅಂಗಡಿ, ನನ್ನ ಕಷ್ಟ ಗಳೆಲ್ಲ ಪರಿಹರಿಸಿತು ಕಣೆ, ಇಂಥಾ ಒಳ್ಳೆ ಲಾಭಾ ಉಂಟಾ? ನಾನು ಮೂರ್ಖ ತನ ಮಾಡಿ ಮನೆ ಕಳ್ಕೋತ ಇದ್ದೆ. ನೀನು ಉಳಿಸಿದಿ" ಎಂದರು.

ಮನೆಗೆ ಸತೀಶ ದುಡ್ಡು ಕೊಟ್ಟ ವಿಷಯ ಮುಚ್ಚಿಟ್ಟಳು. ಸತೀಶನು ಇದಕ್ಕೆ ಸಮ್ಮತಿಸಿದ್ದ. ತಾಯಿ ಏಕೆ ಮೆತ್ತಗಿದ್ದಾಳೆಂದು ಅವನಿಗೆ ತಿಳಿದಿತ್ತು. ಸತೀಶನಿಗೆ ಸಂಬಳ ಬರುತ್ತಿದೆ ಎಂದರಿವಾದಾಗ ಭಾಗಿರಥಮ್ಮ ಮತ್ತೆ ಬಾಲ ಬಿಚ್ಚಲಾರಂಭಿಸಿದರು.

"ಸೊಪ್ಪಿನ ಪಲ್ಯ ಏಕೆ ಮಾಡ್ತೀರಿ ಲಕ್ಷ್ಮಮ್ಮ. ನನಗೆ ಸೊಪ್ಪಿನ ಪಲ್ಯ ಸೇರಲ್ಲ ಹುರುಳಿಕಾಯಿ ಪಲ್ಯ ಮಾಡ್ರಿ, ಕೊಬ್ಬರಿ ಚಟ್ನಿ ಮಾಡ್ರಿ, ನಾಳೆ

ಪೂರಿ ಮಾಡ್ರಿ" ಎಂದು ಏನೇನೋ ಜೋರು ಮಾಡಲಾರಂಭಿಸಿದರು. ಗೋದಳ ತಾಯಿ ಲಕ್ಷ್ಮಮ್ಮನು ಕೊಂಚ ಅಸಹನೆ ಸ್ವಭಾವದವರು.

"ನಾನೇನು ನಿಮ್ಮ ಅಡಿಗೆಯವಳಲ್ಲ. ನನ್ನ ಮಗಳು ಹೇಳಿದ್ದು ಮಾಡ್ತೀನಿ. ಸುಮ್ಮನೆ ಉಂಡು ಎದ್ದು ಹೋಗಿ. ಕೂತು ಉಂಡೋರಿಗೆ ನಾಚಿಕೆ ಆಗಬೇಕು" ಎಂದರು.

"ನನ್ನ ಮಗನ ಮನೆ ಅನ್ನ ನಾನು ತಿಂತಿದ್ದೀನಿ. ಮಗಳ ಮನೆ ಹೊಕ್ಕು ಅನ್ನ ತಿಂತಿರೋಳು ನೀನು" ಎಂದು ಗಲಾಟೆ ಮಾಡಿದರು.

"ನನ್ನ ಗಂಡಾ ಅಂಗಡಿ ಮೇಲೆ ಕೂತು ದುಡಿದದ್ದು ತಿಂತಿದ್ದೀನಿ" ಎಂದಾಕೆ ಜಗಳವಾಡಿದರು. ಆ ದಿನ ಲಕ್ಷ್ಮಮ್ಮ ಮಗಳಿಗೆ "ನಿಮ್ಮತ್ತೆಗೆ ನಾನು ಅಡಿಗೆ ಮಾಡಿ ಹಾಕಲ್ಲ ಕಣೆ. ಆಕೆ ಸ್ವಭಾವ ನಂಗೆ ಸಾಕಾಗಿದೆ" ಎಂದರು.

ತಾಯಿಯನ್ನು ಹೊರಗೆ ಕರೆದೊಯ್ದು ಗೋದಾ –

"ಅಮ್ಮ, ನಿನ್ನ ಅಪ್ಪನ್ನ ಹಳ್ಳಿಗೆ ಕಳಿಸಿಬಿಡ್ತೀನಿ. ಮೊದಲಾದರು ನಿಮ್ಮ ಹೆಸರಲ್ಲಿ ಎಮ್ಮೆ ಮಾರಿದ ದುಡ್ಡಾದರು ಇತ್ತು. ಈಗ ಏನು ಇಲ್ಲ ಆಗಾಗ ಕೈಲಾದಷ್ಟು ದುಡ್ಡು ಕಳಿಸ್ತೀನಿ" ಎಂದಳು.

ಲಕ್ಷ್ಮಮ್ಮ ಹೆದರಿ ಹೌಹಾರಿ, "ಹೀಗೆಲ್ಲಾ ಮಾತಾಡಿದ್ರೆ ಹೇಗೆ ಗೋದಾ ? ಇಲ್ಲಿ ತಿಂದುಂಡು ಸುಖವಾಗಿದ್ದೀವಿ" ಎಂದೇನೊ ಹೇಳತೊಡಗಿದರು.

ಗೋದಾ ಕಟುವಾಗಿ, "ನೋಡಮ್ಮ ನೀನು ಇಲ್ಲಿ ಸುಖವಾಗಿರಬೇಕಾದರೆ ಅತ್ತೇನ್ನ ಹೊಂದ್ಕೋಬೇಕು. ಅವರಿಗೆ ಮಾಡೋದು ಭಾರ ಅನ್ಸೋ ಹಾಗೆ ಜಗಳವಾಡಬೇಡಾ ಇವರು ಬಾಂಬೆಗೆ ಹೋಗಲಿಕ್ಕೆ ಮೊದಲು ಇಪ್ಪತ್ತು ಸಾವಿರ ಕೊಟ್ಟು ಹೋಗಿದ್ದರು. ಈಗ ಐವತ್ತು ಸಾವಿರ ಕೊಟ್ಟು, ಮನೆ ಬಿಡಿಸಿಕೊಂಡವರು ಅವರೆ. ಅವರ ತಾಯಿಗೆ ಇಲ್ಲಿ ಕೂತು ತಿನ್ನೋ ಹಕ್ಕಿದೆ. ನೀನು ಇಲ್ಲದ ಕುಸು ಬಿಸ್ಸಿ ಮಾಡಬೇಡ. ಭಯ–ಭಕ್ತಿಯಿಂದ ಅಲ್ಲವಾದರೂ ಪ್ರೀತಿಯಿಂದ ಅವರ ಸೇವೆ ಮಾಡು" ಎಂದಳು.

ಅತ್ತೆಗೂ ಒಮ್ಮೆ ಏಕಾಂತದಲ್ಲಿ ಕರೆದು, "ಮನೇಲಿ ಜಗಳ ರಸ ಕ

ಅವರಿಗೆ ಸರಿ ಹೋಗಲ್ಲತ್ತೆ. ತಿಂಗಳಿಗೆ ಇನ್ನೂರು ರೂ. ಕಳಿಸ್ತೀನಿ. ಕಾವೇರಿ ಮನೆಗೆ ಹೋಗಿ ಬಿಡಲಿ ಅಂತಾರೆ" ಎಂದರು.

ಭಾಗೀರಥಮ್ಮ ಹೆದರಿ, "ಏಕಮ್ಮ ನಾನೇನು ಮಾಡಿದೆ ?" ಎಂದರು.

"ನೀವು ಕೂತು ತಿಂದು ಅಧಿಕಾರ ಚಲಾಯಿಸಿದರೆ ಅಮ್ಮನಿಗೆ ತಾನೇಕೆ ಅಡಿಗೆಯವಳಾಂತ ಅನಿಸತ್ತೆ ಅತ್ತೆ. ನೀವು ಮಡಿ ಉಟ್ಟುಕೊಂಡು ತರಕಾರಿ ಹೆಚ್ಚೋದು ಎಲ್ಲಾ ಮಾಡಬೇಕು. ಕೈಲಾದಷ್ಟು ಸಹಾಯ ಮಾಡಿ. ಇಬ್ಬರು ಪ್ರೀತಿಯಿಂದ ಅಕ್ಕ–ತಂಗಿಯರ ಹಾಗಿರಿ. ಈ ವಯಸ್ಸಿನಲ್ಲಿ ಕಾಮ ಕ್ರೋಧಾ ಏಕತ್ತೆ ? ನಿಮ್ಮ ಮಗನ ಸಂಪಾದನೆ ಸಾವಿರದೈನೂರು ರೂ ಇದ್ದರೇ ನಮ್ಮಪ್ಪಾ ನನ್ನ ತಮ್ಮ ಅಂಗಡಿ ಮೇಲೆ ಕೂತು ದುಡಿದದ್ದು ಎರಡು ಸಾವಿರವಾಗುತ್ತೆ. ಅವರು ಇಲ್ಲಿದ್ದಾರೆ ನಾವು ಇಲ್ಲಿರ್ತೀವಿ."

"ನಮ್ಮನೇಲಿ ಅವರು ಬಾಡಿಗೆಗಿದ್ದಾರಲ್ಲೇ ತಿಂಗಳಿಗೆ ನನಗೆ ಮುನ್ನೂರಾದರೂ ಬಾಡಿಗೆ ಕೊಡಬೇಕಲ್ಲ. ನಾನು ಬರಿಗೈಯಲ್ಲಿ ಹೇಗಿರಲಿ ? ಬರಿ ಎರಡು ಹೊತ್ತು ಊಟ ಹಾಕಿಬಿಟ್ಟರೇ ಸಾಕಾ ?" ಎಂದರು.

ಅತ್ತೆಯ ಧೋರಣೆ ಬಗ್ಗೆ ಅವಳಿಗೆ ಆಶ್ಚರ್ಯ ಆಯಿತು. "ಆ ಮನೆಗೆ ಐವತ್ತು ಸಾವಿರ ರೂ.ಗಳನ್ನು ಕೊಟ್ಟು ಬಿಡಿಸಿಕೊಂಡದ್ದು ಯಾರತ್ತೆ ? ನಿಮ್ಮ ಆ ಬಾಡಿಗೆಯ ದುರಾಶೆ, ಮೂರ್ಖತನದಿಂದ ಪೂರ್ತಿ ಮನೆ ಹೋಗ್ತಿತ್ತು. ಇವರಿಗೆ ಆ ವಿಷಯಕ್ಕೆ ಬಹಳ ಅಸಮಾಧಾನವಿದೆ. ಮನೆ ನಿಮ್ಮದು ಮಾತ್ರ ಇಲ್ಲ ಅವರದು ಇತ್ತು. ಆದರೆ ನೀವು ಎಂಥಾ ಮೂರ್ಖತನ ಮಾಡಿ ಅರವತ್ತು ಸಾವಿರ ಅವರ ತಲೆಗೆ ನಷ್ಟ ಕಟ್ಟಿದಿರಿ ಈಗ ಮುನ್ನೂರು ರೂ. ಕೇಳಿದರೆ ಅವರು ಸುಮ್ಮನೆ ಇರ್ತಾರಾ ? ಅವರಿಗೆ ತುಂಬಾ ಅಸಮಾಧಾನ ಇದೆಯಮ್ಮ. ಸಧ್ಯ ನಗ್ತ ನಗ್ತ ಊಟ ತಿಂಡಿ ಮಾಡಿಕೊಂಡಿದ್ದೀರಿ ಸಾಕು ಅವರು ಯಾವಾಗಲು ಕೋಪದಿಂದ ಹಾರಾಡಿದರೆ ತಿನ್ನೋ ಅನ್ನ ನಿಮಗೆ ಭೂಭೂರ ಅನಿಸತ್ತೆ" ಎಂದಳು.

ಆಕೆ ಅಸಮಾಧಾನದಿಂದ "ಸುಮ್ಮನಾದರು. ಇಬ್ಬರನ್ನು ಹದ್ದು ಬಸ್ತಿನಲ್ಲಿ ಇರಿಸಿದ್ದರಿಂದ ಬೀಗಿತ್ತಿಯರ ಜಗಳ ನಿಂತಿತು. ಅತ್ತೆ ಏಕೆ ಈ ವಯಸ್ಸಿನಲ್ಲಿ ಹಣಕ್ಕೆ ಆಸೆ ಪಡುತ್ತಾರೆ ಎಂದು ಆಗಾಗ ಗೋದಾಳಿಗೆ ಅಚ್ಚರಿ ಆಗುತಿತ್ತು.

ಪಕ್ಕದ ಮನೆ ಹನುಮಂತಚಾರ್ಯರ ಹೆಂಡತಿ ಭಾಗಿರಥಮ್ಮನಿಗೆ ಆಪ್ತರು. ಆಕೆ ಆಗಾಗ ತಮ್ಮ ಮನದಲ್ಲಿದ್ದದ್ದು ಹನುಮಂತಚಾರ್ಯರ ಪತ್ನಿ ಜಯಮ್ಮನಿಗೆ ಹೇಳುವರು. ಒಮ್ಮೆ ಆಕೆ ಗೋದಾಳ ಬಳಿ ಬಂದು, "ನಿಮ್ಮತ್ತೆಗೆ ಈ ವಯಸ್ಸಿನಲ್ಲಿ ಸಹ ಚಿನ್ನ ಬಣ್ಣದ ಆಸೆ ಇದೆ ಕಣೆ. ನಿಮ್ಮ ತಾಯಿಯ ಕೊರಳ ತುಂಬ ಕರಿಮಣಿ ಗೊಂದರಂತೆ ಚಿನ್ನದ ಗುಂಡಿದೆಯಂತೆ, ತಮ್ಮದು ಬರಿ ನಾಕು ಗುಂಡು, ತಾಳಿ, ಕೋವಿ, ಕರಿಮಣಿ ಸರ ಅಂತ ಮಗ ಒಂದು ಪೈಸೆ ಕೊಡಲ್ಲ. ಸೊಸೆಯ ಕೈಗೊಂಬೆ ಆಗಿದ್ದಾನೆ. ಅವಳೋ ಅನ್ನ ಹಾಕೋದೇ ಹೆಚ್ಚು ಅನ್ನೋ ಹಾಗೆ ಆಡ್ತಾಳೆ. ಇನ್ನು ಚಿನ್ನಕ್ಕೆ ಎಲ್ಲಿ ಆಸೆ ಪಡಲಿ ? ಅಂತ ಏನೇನೋ ದೂರ್ತಾರೆ" ಎಂದು ಚಾಡಿ ಹೇಳಿದರು. ಗೋದಾ ಒಂದು ದಿನ ಅಕ್ಕ ಸಾಲಿಯ ಬಳಿ ಹೋಗಿ ಮುವ್ವತ್ತು ಗೊಂಡು, ಒಂದ ಹದಿನಾರು ಹರಳಿನ ಬೇಸರಿ ಹಾಗು ದೊಡ್ಡಂಚಿನ ಹಸಿರು ರೇಶ್ಮೆ ಸೀರೆ ತಂದಳು.

ಅತ್ತೆಗೆ ಕುಂಕುಮ ಇಟ್ಟು, "ಅತ್ತೆ ಹಿರಿಮುತ್ತೈದೆ ನೀವು. ಈ ಬೇಸರಿ ಮೂಗಿಗೆ ಹಾಕಿಕೊಳ್ಳಿ ಕರಿಮಣಿಯ ಜೊತೆ ಚಿನ್ನದ ಗುಂಡು ಪೋಣಿಸ್ಕೊಳ್ಳಿ" ಎಂದಳು.

ಭಾಗಿರಥಮ್ಮ ಕಂಗಾಲಾಗಿ, "ಇದೆಲ್ಲಾ ನನಗೆ ಏಕಮ್ಮ ? ನೀನು ಹುಡುಗಿ ಏನಾದರೂ ಮಾಡಿಸಿಕೊ" ಎಂದರು.

"ಪರವಾಗಿಲ್ಲ ತಗೊಳ್ಳಿ, ಅಂಗಡೀಲಿ ಸ್ವಲ್ಪ ಲಾಭಾ ಬಂದಿತ್ತು ತಗೊಂಡೆ ಬರೋ ತಿಂಗಳು ಇನ್ನೊಂದು ರೇಶ್ಮೆ ಸೀರೆ ತೆಗೆದುಕೊಡ್ತೀನಿ. ಪುರಾಣಕ್ಕೆ ಹೋಗುವಾಗ ಬಣ್ಣವಾಗಿ ಉಟ್ಟುಕೊಂಡು ಹೋಗಿ."

ಆ ದಿನ ಮನೆಗೆ ಬಂದಾಗ ಆಕೆ ಪ್ರಸನ್ನತೆಯಿಂದ, "ನಿಜವಾಗಲು ಗೋದಾ ಬಂಗಾರದಂಥಾ ಹುಡುಗಿಯಪ್ಪಾ ನನ್ನ ಮನಸ್ಸಿನ ಆಸೆಗಳು ನೆರವೇರಿಸಿದಳು" ಎಂದರು.

ಸತೀಶ ಬೇಸರದಿಂದ ತಾಯಿ ಕಡೆ ನೋಡಿ ಒಳಗೆ ಬಂದ. ಗೋದಾ ಕಾಫಿ ತೆಗೆದುಕೊಂಡು ರೂಮಿಗೆ ಹೋದಳು. ಆಕೆಯೂ ರೂಮಿನ ಬಳಿ ಬಂದರು.

"ಅಲ್ಲ ಬಸುರಿ ಹುಡುಗಿ ನೀನು ಏನಾದರು ತೆಗೆದುಕೊಳ್ಳೋದು ಬಿಟ್ಟು

ಆಕೆಗೆ ಏಕೆ ಈ ಮುದಿವಯಸ್ಸಿನಲ್ಲಿ ಇದೆಲ್ಲಾ ತೆಗೆದು ಕೊಡ್ಲಿಕ್ಕೆ ಹೋದೆ. ಹನುಮಂತಚಾರ್ಯರ ಮನೇಲಿ ಹೋಗಿ ನಿನ್ನ ಮೇಲೆ ನೂರು ದೂರು ಹೇಳಿದ್ದಾಳೆ."

"ಇರ್ಲಿ ಬಿಡಿ, ನಮಗೆ ಇನ್ನು ಅವಕಾಶವಿದೆ ಎಂದಾದರು ತೆಗೆದುಕೊಂಡರಾಯ್ತು. ಹನುಮಂತಚಾರ್ಯರ ಹೆಂಡತಿ ದೂರು ಹೇಳಿದ ಹಾಗೆ ಹೇಳಿದರು ಆದರೆ ನಂಗೇನು ತುಂಬಾ ತಪ್ಪು ಅನಿಸಲಿಲ್ಲ. ಏನೋ ಚಿನ್ನದ ಆಸೆ ಇರಬಹುದು. ಆದಕ್ಕೆ ಒಂದು ಬೇಸರ. ಒಂದಿಷ್ಟು ಚಿನ್ನದ ಗುಂಡುಗಳು ಮಾಡಿಸಿ ಕೊಟ್ಟೆ" ಎಂದಳು.

"ಏನೋ ಸಾತ್ವಿಕಳಾದರೆ ಈ ವಯಸ್ಸಿನಲ್ಲಿ ಮೊಮ್ಮಗನ್ನ ಆಡಿಸೋ ಬಯಕೆ ಬರಬೇಕು. ಬಸುರಿ ಹುಡ್ಗಿ ನೀನು ನೂರು ಕೆಲಸಾ ಮಾಡ್ತಿ, ತಾನು ಕೂತುಕೊಂಡು ತಿಂತಾಳೆ. ನಿಂಗೆ ಕೂಡಿಸಿ ಆರೈಕೆ ಮಾಡೋ ಒಳ್ಳೆತನವೂ ಇಲ್ಲ. ನಾಳೆ ಮೊಮ್ಮಗು ಹುಟ್ಟಿದರೂ ಪ್ರೀತಿಯಿಂದ ಎತ್ತಿ ಆಡಿಸ್ತಾಳೋ ಇಲ್ಲವೋ ?" ಎಂದ.

"ಇರ್ಲಿ ಬಿಡಿ, ಅವರಿಗೇನೋ ಸೇವೆ ಮಾಡಿಸಿಕೊಳ್ಳೋ ಚಪಲ, ಒಂದಿಷ್ಟು ಮಾಡ್ತೀನಿ. ನಮ್ಮ ಮಗನ್ನ ಎತ್ಲಿಕ್ಕೆ ನೀವು ಕಾತುರರಾಗಿದ್ದೀರಲ್ಲ ಸಾಕು ; ಅಮ್ಮ ಗಮನಿಸಿ ಆರೈಕೆ ಮಾಡ್ತಿದ್ದಾಳೆ ಸಾಕು" ಎಂದರು.

ಕೇಳಿಸಿಕೊಳ್ಳುತ್ತಿದ್ದ ಭಾಗಿರಥಮ್ಮ ಭೂಮಿಗಿಳಿದು ಹೋದರು. ಎಂಥ ಬಸುರಿಯು ? ತಮ್ಮ ಸಿಟ್ಟು, ಸೇಡು ಜಗಳ, ಕದನದಲ್ಲಿ ಮುಳುಗಿದ್ದ ತಾವು ಯಾವುದು ಗಮನಿಸಿಲ್ಲ. ತಂದೆ ತಾಯಿಗಳ ಬಲ, ಗಂಡನ ಬಲ ಎಲ್ಲಾ ಇದ್ದು ಈ ಹುಡುಗಿ ತನ್ನನ್ನು ಕಡೆಗಣಿಸಿಲ್ಲ. ಪ್ರೀತಿಯಿಂದಲೆ ನೋಡಿಕೊಂಡಿದ್ದಾಳೆ. ತಾವು ಬಸುರಿ ಬಯಕೆ ಎಂದು ಹಿರಿಯರಾಗಿ ಒಂದು ತಿಂಡಿ ಸಹಾ ಮಾಡಿ ಕೊಟ್ಟಿಲ್ಲ. ಆದರೆ ಅವಳೇ ತಮಗೆ ಏನೇನೋ ತಂದಿದ್ದಾಳೆ. ನಿಜಕ್ಕು ಗೋದಾ ನೀನು ಆಕಾಶದಲ್ಲಿರಳಿದ ಹೂವು, ಸಾಮಾನ್ಯಳಲ್ಲ. ಇನ್ನು ಮುಂದೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಕೊಂಡರು. ಅಂದಿನಿಂದ ಅವರು ನಡವಳಿಕೆಯೇ ಬದಲಾಯಿತು. ಗೋದಳಿಗೆ ಬಗೆ ಬಗೆ ತಿಂಡಿ ಮಾಡಿಕೊಡುವುದು ಎಣ್ಣೇ ನೀರು ಹಾಕುವುದು ಎಲ್ಲಾ ತಾವೇ ಮಾಡು

ವರು. ಗೋದಳಿಗೆ ಒಂಭತ್ತು ತಿಂಗಳು ತುಂಬಿ ಮುದ್ದಾದ ಗಂಡು ಮಗು ಹುಟ್ಟಿತು. ಭಾಗಿರಥಮ್ಮನ ಪತಿ ಬಂದರು.

"ಇನ್ನು ಮೇಲೆ ಈ ಊರಲ್ಲೇ ಇರ್ತೀನಿ. ಮೊಮ್ಮಗನ್ನ ಬಿಟ್ಟು ಇರಲಾರೆ" ಎಂದರು. ವೇದಪ್ರಕಾಶ್ ಎಂದು ಮೊಮ್ಮಗನಿಗೆ ಹೆಸರಿಟ್ಟರು.

ಮನೆ ನಂದಗೋಕುಲವಾಗಿತ್ತು, ಬೀಗಿತ್ತಿಯರು ಅಕ್ಕ ತಂಗಿಯರಂತಿದ್ದರು. ಆ ಊರಿನ ರಾಯರ ಮಠದಲ್ಲಿ ಜಾಸ್ತಿ ಕಾಲಾ ಕಳೆಯುತ್ತಿದ್ದರೂ ಭಾಗಿರಥಮ್ಮನ ಪತಿ ದಿನಕ್ಕೆ ಎರಡು ಗಂಟೆ ಮೊಮ್ಮಗನ್ನ ಆಡಿಸುವುದು ತಪ್ಪುತ್ತಿರಲಿಲ್ಲ.

"ಜೀವಮಾನ ಪೂರ್ತಿ ಅಲೆಮಾರಿ ಆಗಿದ್ದ ನಿನ್ನ ತಾತಾ ನಿನ್ನಿಂದಾ ಮನೆ ಸೇರಿದರು" ಎಂದು ಆಗಾಗ ಭಾಗಿರಥಮ್ಮ ಮೊಮ್ಮಗನನ್ನ ಮುದ್ದಿಸುತ್ತಿದ್ದರ .

"ಜೀವನದಲ್ಲಿ ಸಹನೆ, ತಾಳ್ಮೆ, ಪ್ರೀತಿ ಪ್ರೇಮ ಹಾಗು ಶ್ರಮ ದುಡಿಮೆಗಳಿಂದ ಎಂಥಾ ಕಷ್ಟ ಬೇಕಾದರೆ ಗೆಲ್ಲ ಬಹುದು. ಎಂಥಾ ಕಲ್ಲಿನಂಥಾ ಹೃದಯದವರನ್ನ ಕರಗಿಸಬಹುದು ಅನ್ನಿಕ್ಕೆ ನಮ್ಮ ಗೋದಾ ಉದಾಹರಣೆ. ನಮ್ಮ ಗೋದಳಿಗೆ ಕಾಮ, ಕ್ರೋಧಾ, ಲೋಭಾ ಯಾವ ಕೆಟ್ಟ ಗುಣಗಳಿಲ್ಲ ಅದೊಂದು ಆಕಾಶದಲ್ಲರಳಿದ ಹೂವು" ಎಂದು ಸೊಸೆಯನ್ನು ಬಗೆ ಬಗೆಯಾಗಿ ಹೊಗಳುತ್ತಿದ್ದರು.

ಸಿರಿತನವಿರದಿದ್ದರೂ ಪ್ರೀತಿ, ವಿಶ್ವಾಸ ತುಂಬಿದ ಆ ಕುಟುಂಬ ಈಗ ನಂದಗೋಕುಲದಂತೆ ನಳನಳಿಸುತ್ತಿತ್ತು.

ಸುಖ ಶಾಂತಿಯಿಂದ, ಸಮೃದ್ಧಿಯಿಂದ ಸಾಗುತ್ತಿದ್ದ ಸಂಸಾರದಲ್ಲಿ ಗೋದಾ ನೆಮ್ಮದಿಯಿಂದಿದ್ದಳು. ಕಾಲದ ಪರಿವೆಯೆ ಅವಳಿಗೆ ಇರಲಿಲ್ಲ. ಪುಟ್ಟ ಪ್ರಕಾಶನಿಗೆ ಎಂಟನೆ ವರ್ಷ ತುಂಬಿ ಮುಂಜಿ ಮಾಡಿದಾಗ, ಅವನಿಗೆ ಚಿನ್ನದ ಜನಿವಾರ ಹಾಗು ಬೆಳ್ಳಿ ಪಂಚ ಪಾತ್ರೆ, ಉದ್ಧರಣೆ ಎಲ್ಲಾ ಮಾಡಿಸಿ ಗಂಡನಿಗೆ ಚಿನ್ನದ ಉಂಗುರ ಮಾಡಿಸಿದಳು.

ಸತೀಶ ನಗುತ್ತ–"ನನಗ್ಯಾಕೆ ಚಿನ್ನದ ಉಂಗುರ ಗೋದಾ ? ನನ್ನ ಮುಂಜೀಲೇ ನಮ್ಮಪ್ಪಾ ತಾಮ್ರದ ಪಂಚ ಪಾತ್ರೆ, ಉದ್ಧರಣೆ ಅರಕಪ್ಪಾಲೆ, ಧರ್ಭೆಯ ಉಂಗುರ, ಖಾದಿ ನೂಲಿನ ಮಡಿ ಪಂಚೆ ಶಲ್ಯ ತೆಗೆದುಕೊಟ್ಟರು. ಈಗ ಮಗನ ಮುಂಜಿಗೆ ರೇಷ್ಮೆ ಪಂಚೆ, ಶಲ್ಯ ಚಿನ್ನದ ಉಂಗುರ ತೆಗೆದಿದ್ದಿ." ಎಂದ.

"ಮೊನ್ನೆ ನಿಮಗೆ ಪ್ರಮೋಷನ್‌ದೂ ಅರಿಯರ್ಸ್ ಬಂತಲ್ಲ. ಅದು ಹಾಗೆ ಇಟ್ಟಿದ್ದೆ. ಈಗ ಅಂಗಡೀನು ತುಂಬಾ ಲಾಭದಲ್ಲಿ ನಡೆತೀದೆ. ಮಹ ಡಿಯ ಮೇಲೆ ಇನ್ನೊಂದು ಅಂಗಡಿ ಕಟ್ಟಿಸಿ ಸ್ಯಾರಿ ಸೆಂಟರ್ ಶುರು ಮಾಡ ಬೇಕೂಂತಿದ್ದೀನಿ." ಎಂದಳು.

"ಧೀರೆ, ಸಾಹಸಿ, ಏನೇನೋ ಮಾಡ್ತಿಯ್ಯೋ ಮಾಡು." ಎಂದ. ಗೋದಳ ತಾಯಿ ಲಕ್ಷ್ಮಮ್ಮ ಅರವತ್ತಾದರೂ......ಗಟ್ಟಿ ಮುಟ್ಟಾಗಿದ್ದರು. ಆದರೆ ಗೋದಳ ಅತ್ತೆ ಭಾಗಿರಥಮ್ಮ ಈಗ ತುಂಬಾ ಜೀರ್ಣವಾಗಿದ್ದರು. ಸತೀಶನ ತಂದೆಯವರು ಈಗ ಎಂಬತ್ತು ವರ್ಷದವರು, ಆದರೂ ಗಟ್ಟಿ ಮುಟ್ಟಾಗಿದ್ದು ಮನೆ ಮಟ್ಟದಲ್ಲಿ ದೇವರ ಪೂಜೆ ಗಂಟೆಗಟ್ಟಲೆ ಮಾಡುತ್ತ ತಣ್ಣೀರು ಸ್ನಾನಾ ಮಾಡಿಕೊಂಡು ತಮ್ಮ ವ್ರತ, ನೇಮ, ನಡೆಸಿಕೊಂಡೇ ಇದ್ದರು.

"ಮುತ್ತೈದೆ, ಸಾವಿತ್ರಿಯಾಗಿ, ಅವರೆದುರು ಕಣ್ಣು ಮುಚ್ಚಿಕೊಂಡ್ರೆ ಸಾಕು. ಮೊಮ್ಮಗನ ಬಾಲಲೀಲೆ ಎಲ್ಲಾ ನೋಡಿದೆ. ಅವನ ಮುಂಜಿ ಒಂದು ನೋಡಿದ್ರೆ ತೃಪ್ತಿಯಾಗಿ ಪ್ರಾಣ ಬಿಡ್ತೀನಿ." ಎನ್ನುತ್ತಿದ್ದರು.

ಗೋದ ಮೃದುವಾಗಿ, "ಅಮ್ಮಾ ನೀವು ಮೊಮ್ಮಗನ ಮದುವೆ ನೋಡಬೇಕು." ಎಂದು ಉತ್ತೇಜಿಸುತ್ತಿದ್ದಳು. ಆದರೆ ಅತ್ತೆಯ ದೇಹ ಬಹಳ ಜೀರ್ಣವಾಗಿದೆ. ಅವರಿನ್ನು ಬಹಳ ದಿನಗಳ ಕಾಲ ಬದುಕುವುದಿಲ್ಲ ಎನಿಸಿ, ಅವರಾಸೆ ತೀರಿಸಲು ಮಗನಿಗೆ ಮುಂಜಿ ಹೂಡಿದ್ದಳು.

ಮುಂಜಿ ವೈಭವವಾಗಿ ನಡೆಯಿತು. ಮುಂಜಿಯ ಮನೆ ಕೆಲಸ ಮಾಡಲು ಜನ ಬೇಕಾಗಿತ್ತು. ಭಾಗಿರಥಮ್ಮನ ಕೈಲಂತು ಏನು ಆಗುವುದಿಲ್ಲ. ಲಕ್ಷ್ಮಮ್ಮ ಮನೆ ಮಟ್ಟದ ಅಡಿಗೆ ಕೆಲಸ ಮಾತ್ರ ಮಾಡುವಷ್ಟು ಶಕ್ತ ರಿದ್ದರು. ಈಗ ಚೆನ್ನಾಗಿ ಶ್ರೀಮಂತಿಕೆ ಬಂದ ಮೇಲೆ ನೆಂಟರಿಷ್ಟರು ಅತ್ಮೀ

ಯರು, ಬಂದು ಹೋಗುವವರು ಜಾಸ್ತಿ ಆಗಿದ್ದರು. ಮೊದಲಿನ ಹಾಗೆ ಮನೆ ಮಟ್ಟಿಗೆ ಮಾಡುವ ಹಾಗಿಲ್ಲ. ಹಪ್ಪಳಾ, ಸಂಡಿಗೆ, ಹುಳಿ ಪುಡಿ, ಉಂಡೆ. ಚಕ್ಕುಲಿ ಮಾಡಲು, ನೆಂಟರಿಷ್ಟರು ನಾಕಾರು ದಿನ ಉಳಿದಾಗ ಕಾಫಿ ತಿಂಡಿ, ಎಲೆಗೋಮೆ ಮಾಡಲು ಜನ ಹುಡುಕಲಾರಂಭಿಸಿದಳು.

ಅವಳ ಆಪ್ತ ಸ್ನೇಹಿತೆ ಕುಮುದ–"ನಮ್ಮ ಚಿಕ್ಕಮ್ಮನ ಕುಟುಂಬ ದವರೆ ಇದ್ದಾರೆ. ತಂದೆ ತಾಯಿ ಮಗಳು, ಮಗ ಸೊಸೆ ದೂರಾ ಇದ್ದಾರೆ. ಇವರು ಬಡವರು, ತಾಯಿ ಮಗಳು ಬರುವರು, ಐನೂರು ರೂ. ಹಾಗು ಎರಡು ಹೊಸ ಸೀರೆ ಕೊಡಿಸಿದ್ದೆ. ನನ್ನ ನಾದಿನಿ ಮದುವೇಲಿ ಬಂದು ಹದಿ ನೈದು ದಿನ ದುಡಿದಿದ್ದರು." ಎಂದಾಗ.

"ಮಹಾ ತಾಯಿ ನನಗು ಆ ಕುಟುಂಬ ಪರಿಚಯಿಸಿ ಪುಣ್ಯ ಕಟ್ಕೋ, ನಮಗೆ ಈಗ ಕೆಲಸಕ್ಕೆ ಬ್ರಾಹ್ಮಣ ಜನ ಬೇಕಾಗಿದ್ದಾರೆ." ಎಂದಳು ಗೋದ.

ಗಂಗಾಬಾಯಿ ಅವರ ಮಗಳು ಜಯಲಕ್ಷ್ಮಿ ಇಲ್ಲಿ ಬಂದ ಸೇರಿದರು. ಜಯಲಕ್ಷ್ಮಿ ತುಂಬಾ ರೂಪವತಿ, ಎಸ್ಸೆಲ್ಸಿ ಪಾಸಾದ ಮೇಲೆ ಬಡತನದ ಕಾರಣದಿಂದ ಮುಂದೆ ಓದಿರಲಿಲ್ಲ. ನಲವತ್ತು ಪರ್ಸಂಟೇಜ್ ತೆಗೆದ ಅವಳಿಗೆ ಕೆಲಸ ಸಿಗುವ ಭರವಸೆಯೂ ಇರಲಿಲ್ಲ. ಒಂದು ಹೆಣ್ಣು ಮಕ್ಕಳ ಫ್ಯಾನ್ಸಿ ಸ್ಟೋರಲ್ಲಿ ಕೆಲಸ ಮಾಡುತ್ತಿದ್ದ ಜಯಲಕ್ಷ್ಮಿ ... ಬಣ್ಣವಾಗಿ ಅಲಂಕರಿಸಿ ಕೊಂಡು ಮುಂಜಿ ಮನೆಯಲ್ಲಿ ಓಡಾಡಿದಾಗ ಮುವ್ವತ್ತು ವರ್ಷದ ಕೃಷ್ಣ ಅವಳಿಗೆ ಮರುಳಾದ.

ಮುಂಜಿ ಮುಗಿದು ಅವರನ್ನೆಲ್ಲಾ ಕಳಿಸಿಕೊಟ್ಟು..... ಮೇಲೆ ಒಂದು ದಿನ ಗೋದಾ ಮಾತು ತೆಗೆದಳು.

"ನೀನೇ ನಮ್ಮ ಮೊಮ್ಮಗನ ಮುಂಜಿ ಸೀರೆ ಉಟ್ಟು ಹಾಯಾಗಿ ಕೂತೆ, ಮಗನ ಮದುವೆಯ ರೇಷ್ಮೆ ಸೀರೆ ಉದೋದ್ಯಾವಾಗ ?" ಎಂದಳು.

"ಕೃಷ್ಣನ ಮದುವೆ ಚಿಂತೆ ನನಗಿದೆ ಕಣೆ, ತಿಂಗಳಿಗೆ ಅವನ ಹೆಸರಿಗೆ ಎರಡು ಸಾವಿರ ಸಂಬಳ ಕೊಡ್ತಿದ್ವಿ, ಸಾವಿರ ಮನೆಗೆ ಹಾಕಿದರೂ, ಸಾವಿರ ಕೊಡಿಟ್ತ ಇದ್ದಾನೆ. ಮೊನ್ನೆ ಮಾಧವರಾಯರ ಹೆಂಡ್ತಿ ಹತ್ತಿರ ಮಾತಾಡು ವಾಗ ಹೇಳಿದ್ದೆ. ಅವನಿಗು ಎರಡು ಸಾವಿರ ಸಂಬಳಾ ಬರತ್ತೆ, ನಲವತ್ತು

ಸಾವಿರವರಿಗೆ ಕೊಡಿಟ್ಟಿದ್ದಾನೆ. ವಾಲೆ, ಜುಂಕಿ, ಬಳೆ, ಎರಡೆಳೆ ಸರ ಹಾಕ್ತೀವಿ ನಿಮ್ಮ ರತ್ನ ಮೇಲೆ ಇಷ್ಟವಿದೆ.ಅವಳಿಗು ಈಗ ಇಪ್ಪತ್ತೆಂಟಾಯ್ತು. ಎಲ್ಲೂ ವರ ಕುದರಲಿಲ್ಲಾಂತ ಚಡಪಡಿಸುತ್ತಿದ್ದರು. ಆಗ ಹೇಳಿದ್ದೀನಿ ಒಂದು ದಿನ ಕರ್ಕೊಂಬರ್ತಾರೆ" ಎಂದರು.

"ಆದರೆ ರತ್ನ ಚೆನ್ನಾಗಿಲ್ಲಮ್ಮ ಇಪ್ಪಂಟೂಂತ ಅವರು ಹೇಳ್ತಾರೆ. ಕೃಷ್ಣನಿಗಿನ್ನ ಎರಡು ವರ್ಷ ದೊಡ್ಡ ಹುಡುಗಿ. ಈಗ ಮೂವ್ವತ್ತೆರಡು ವರ್ಷ ಅನಿಸತ್ತೆ" ಎಂದಳು. ಲಕ್ಷ್ಮಮ್ಮ ಕೋಪದಿಂದ—

"ಇಲ್ಲದ ಸೋರಾಗ ಹಾಡಬೇಡ ನನ್ನ ಮಗನ ವಿಷಯ ನನಗೆ ಸೇರಿದ್ದು. ಎಷ್ಟು ದಿನ ನಿನ್ನ ಅಂಗಡಿಯ ಊಳಿಗ ಮಾಸ್ಕೊಂಡಿರ್ತಾನೆ. ರತ್ನನ್ನ ಮಾಡಿಕೊಂಡ್ರೆ ಎರಡು ಲಕ್ಷದವರಿಗೆ ಕೊಡ್ತಾರೆ, ಸ್ವಂತ ಅಂಗಡಿ ಹೊಡ್ತಾನೆ. ಈಗ ಅವನು ಹತ್ತು ಸಾವಿರದವರಿಗೆ ಸಂಪಾದಿಸಿದರೂ ಎರಡು ಸಾವಿರ ಕೊಡ್ತಿ ನಿನ್ನ ಶ್ರೀಮಂತಿಕೆ ಬೆಳೀತೀದೆಯೋ ಹೊರತು ನಮಗೆ ಬರಿ ಜೀವನೋಪಾಯ" ಎಂದರು.

ತಾಯಿಯ ಧೋರಣೆ, ಅಹಂಕಾರದ ಮಾತು ಕೇಳಿ ಗೋದಾ ಸಿಟ್ಟು ಗೊಳ್ಳಲಿಲ್ಲ. ಮುಂಜಿ ಮನೆಯಲ್ಲಿ ಮಾಧವರಾಯರ ಹೆಂಡ್ತಿ ರುಕ್ಮಿಣಮ್ಮನ ಹತ್ತಿರ ತಾಯಿಯ ನಿಕಟವಾಗಿ ಹರಟುತ್ತಿದ್ದದ್ದು ಕೇಳಿಸಿಕೊಂಡಿದ್ದಳು. ರತ್ನ ಕುರೂಪದ ಕಾರಣದಿಂದಲೇ ಮದುವೆ ನಿಂತ ಹುಡುಗಿ, ಅವಳಿಗೆ ಎರಡು ಲಕ್ಷರೂ.ಗಳನ್ನು ಕೊಟ್ಟು ಹತ್ತು ತೊಲ ಚಿನ್ನ ಹಾಕಿ ವಿವಾಹ ಮಾಡಿಕೊಡು ವರು ಎಂಬ ಪ್ರತೀತಿ ಇತ್ತು.

ರುಕ್ಮಿಣಮ್ಮ ಮಗಳನ್ನು ಕರೆದುಕೊಂಡು ಬರ್ತಾರೆ ಎಂದು ರತ್ನಮ್ಮ ಕಾದದ್ದೇ ಬಂತು. ಮಧ್ಯವರ್ತಿ ಒಬ್ಬಾಕೆ ಕೈಲಿ ಹೇಳಿ ಕಳಿಸಿದರು.

"ಅಯ್ಯೋ! ಆ ಹುಡುಗಿ ರತ್ನ ಒಪ್ಪಲಿಲ್ಲಂತೆ ಕಣ್ರೀ. ಆ ಜಾಯಿಂಟ್ ಫ್ಯಾಮಿಲಿ ಆ ಗಡಸು ಧನಿಯು ಅತ್ತೆ......ಸೆಕೆಂಡ್ ಪಿ.ಯು.ಸಿ. ಓದಿರೋ ಅಂಗಡಿ ಕೆಲಸಗಾರ ಗಂಡ. ನನನೇನು ಗ್ರಹಚಾರ! ಬಿ.ಎ. ಓದಿದ್ದೀನಿ. ಡಾಕ್ಟರ್, ಇಂಜಿನಿಯರ್ ಬೇಡ, ಒಬ್ಬ ಬ್ಯಾಂಕ್ ಆಫೀಸರೋ......? ಒಬ್ಬ ಲೆಕ್ಚರರೋ ಆದರೆ ವಿವಾಹವಾಗ್ತೀನಿ ಅಂತಾಳಂತೆ" ಎಂಬ ಮಾತು ಹೇಳಿ ದರು. ಲಕ್ಷ್ಮಮ್ಮ ಕೋಪದಿಂದ ಕಿಡಿಕಿಡಿ ಆದರು. ಕೃಷ್ಣ ಶಾಂತನಾಗಿ—

"ಅಳತೆ ಮೀರಿದ ತುತ್ತು ನುಂಗ್ತೀನಿ ಅಂತ ಹೋಗಬಾರದು. ಅಕ್ಕ ವಿವೇಕಿ ಅಕ್ಕ ಒಂದು ಹಡುಗೀನ್ನ ಮೆಚ್ಚಿದ್ದಾಳೆ. ನನಗೂ ಇಷ್ಟವಿದೆ" ಎಂದ.

ಲಕ್ಷ್ಮಮ್ಮ ಅನುಮಾನದಿಂದ,"ಯಾರೇ ನೀನು ಇಷ್ಟಪಟ್ಟ ಹುಡುಗಿ?" ಎಂದರು.

"ನಮ್ಮ ಮುಂಜಿ ಮನೆಗೆ ಕೆಲಸ ಮಾಡ್ಲಿಕ್ಕೆ ಗಂಗಾಬಾಯಿಾ ಅವರ ಮಗಳು ಜಯಲಕ್ಷ್ಮಿ ಬಂದಿದ್ರಲ್ಲಮ್ಮ. ಜಯಲಕ್ಷ್ಮಿ ಮುದ್ದಾದ ಹುಡುಗಿ ಕೆಲಸದಲ್ಲಿ ರಥಚಕ್ರ. ಆ ಹುಡುಗಿ ಕೃಷ್ಣನಿಗೆ ಈಡು ಜೋಡಿದೆ" ಎಂದಳು.

"ಹೋಗಿ, ಹೋಗಿ ಆ ಕಡು ದರಿದ್ರರ ಮನೆಯ ಹುಡುಗೀನಾ ? ಮಗಳ ಮದುವೆಗೆ ಎರಡು ಸಾವಿರ ಖರ್ಚು ಮಾಡೋ ಯೋಗ್ಯತೆ ಇದೆಯಾ ?" ಎಂದರು.

ಗೋದಾ ನಕ್ಕು, "ನನ್ನ ಮದುವೆಗೆ ನೀವೇನು ಖರ್ಚು ಮಾಡಿದಿರಿ. ದತ್ತಂಬಟ್ಟರು ಧರ್ಮದ ತಾಳಿ ಗುಂಡು ಕೊಟ್ಟರು. ಇವರ ಚಿಕ್ಕಮ್ಮ ಒಂದು ಹೋಳಿಗೆ ಪಾಯಿಸದ ಊಟ ಮಾಡಿ ಆಯಿತೂನಿಸಿದರು. ಹನ್ನೆರಡು ವರ್ಷದ ಹಿಂದೆ ನಾವು ಯಾವ ಸ್ಥಿತಿಯಲ್ಲಿ ಇದ್ದೆವು ನೆನೆಸಿಕೊ" ಎಂದಳು.

ಲಕ್ಷ್ಮಮ್ಮ ಸೋಲದೇ, "ಆದರೆ ಕೃಷ್ಣ ಎರಡನೆ ವರ ಅಲ್ಲ, ಎರಡು ಸಾವಿರ ರೂ ಸಂಪಾದಿಸ್ತಾನೆ" ಎಂದರು.

ಕೃಷ್ಣ ಬೇಸರದಿಂದ, "ಅಕ್ಕ ಅಮ್ಮನ್ನ ನಂಬಿದರೆ ನನ್ನ ಮದುವೆ ಗಣಪತಿ ಮದುವೆ ಆಗತ್ತೆ. ಹತ್ತು ವರ್ಷದಲ್ಲಿ ನೀನು ಇಟ್ಕೊಂಡು ಅನ್ನ ಹಾಕಿದ್ದಿ. ಓದಿನಲ್ಲಿ ನಾನು ಮುಂದುವರಿಯಲಿಲ್ಲ. ಆದರೆ ಅಂಗಡಿ ಕೆಲಸದಲ್ಲಿ ಪಳಗಿಸಿದ್ದಿ. ತಿಂಗಳಿಗೆ ಎರಡು ಸಾವಿರ ಸಂಬಳದ ಹಾಗೆ ಈಗ ನೂರು ವರ್ಷದಿಂದ ಸಂಬಳ ಕೊಡ್ತಿದ್ದಿ, ನನಗೆ ಬಡತನ ಕಂಡ ಹುಡುಗಿಬೇಕು. ರತ್ನಳಂತಹ ಧಿಮಾಕಿನ ಹುಡುಗೀನ್ನ ಸುಧಾರಿಸಲಾರೆ, ಮುವ್ವತ್ತು ವರ್ಷ ಆದರೂ ಗಂಡು ಸಿಗದೆ ಕೊಳಲಾಡ್ತಾರೆ. ಆಮೇಲೆ ಹಣದ ಬಲದಿಂದ ಒಬ್ಬ ಬಡಪಾಯಿನ್ನ ಬೇಟೆ ಆಡಿದರೂ, ಗಂಡನಾಗಿ ಬಂದ ಆ ಪ್ರಾಣಿ ಮೇಲೆ ಆಕ್ರೋಶ ತೋರಿಸ್ತಾರೆ. ಕಷ್ಟ ಸುಖ ಕಂಡ ಹುಡುಗಿ ಆದರೆ ಒಳ್ಳೇದು" ಎಂದ.

"ಗಂಗಾಬಾಯಿ ಸ್ಥಿತಿಗತಿ ನಾನು ವಿಚಾರಿಸಿದ್ದೀನಪ್ಪ. ಮಗ ತಂದೆ ತಾಯಿಗೆ ಮೂರು ಕಾಸು ಕಳಿಸಿಲ್ಲ. ಹೇಗೋ ಇದ್ದಾರೆ, ಐನೂರು ರೂಪಾಯಿ ಸಹ ಖರ್ಚು ಮಾಡೋ... ಸ್ಥಿತೀಲಿಲ್ಲ. ಎರಡು ಸಾವಿರ ರೂ. ಖರ್ಚು ಮಾಡಿ ನಮ್ಮ ಮನೇಲಿ ನಾನೇ ವಿವಾಹ ಮಾಡ್ತೀನಿ. ನನಗೂ ಹೆಣ್ಣು ಮಕ್ಕಳಿಲ್ಲ. ಒಂದು ಕನ್ಯಾದಾನದ ಪುಣ್ಯ ಬರಲಿ" ಎಂದರು.

"ಬೇಕಾದರೆ ನಾನು ಪೋಸ್ಟಾಫೀಸಿಂದ ಹಣ ತೆಗೀತೀನಕ್ಕ....." ಎಂದ ಕೃಷ್ಣ.

"ಬೇಡಾ .. ಐದು ವರುಷ ನೀನು ತಿಂಗಳಿಗೆ ಸಾವಿರ ಕಟ್ಟು. ಬಡ್ಡಿ ಸಮೇತ ಬೆಳೀಲಿ, ಈ ಮದುವೆಗೆ ಒಡವೆ, ಚಿನ್ನ ಬಣ್ಣ, ಲಾಡು ಊಟ ಇವುಗಳಿಗೆ ನಾನು ಮದುವೆ ಹಣ ಖರ್ಚು ಮಾಡಿಸಲ್ಲ. ಬದುಕು ಸ್ಥಾಪಿಸಿ ಕೊಳ್ಳಲಿಕ್ಕೆ ಆ ಹಣ.....ಇರಲಿ. ಒಂದಿನ ಬೆಳಿಗ್ಗೆ ಹುಡುಗಿಗೆರಡು ಧಾರೆ ಸೀರೆ ಉಡುಸಿ ಕೌಮಾರ ಕುಂಕುಮವಿಟ್ಟು, ಮಧುಮಗಳ ಕೇಶ ಶೃಂಗಾರ ಎಣ್ಣೆ ಗಂಟ್ಹಾಕಿ ಒಂದು ಮೇಲು ಹೊದಿಕೆ ರೇಶ್ಮೆ ಸೀರೆ ಹೊದಿಸ್ತೀವಿ. ಹುಡುಗಿ ಜಾಣೆ ತನಗೆ ಬಂದ ದುಡ್ಡು ಪೋಲು ಮಾಡದೆ ಹೇಗೋ ಚೀಟಿ ಕಟ್ಟಿ ಅರ್ಧ ತೊಲದ ರಿಂಗ್ಸ್ ಕಿವಿಗೆ ಮಾಡಿಸಿಕೊಂಡಿದ್ದಾಳೆ. ನಾವು ಸಧ್ಯಕ್ಕೆ ಒಡವೆ ತಂಟೆಗೆ ಹೋಗೋದು ಬೇಡ.ಎರಡು ತೊಲದ ಮಾಂಗಲ್ಯದ ಜೈಸೊಂದು ಹಾಕ್ತೀನಿ. ನಿಂಗೆ ಅಂಗಡೀಲಿ ಐನೂರು ಸಂಬಳ ಜಾಸ್ತಿ ಮಾಡಿದ್ದೀನಿ. ಅದನ್ನ ಹಿಡ್ಕೋತೀನಿ ದೀರ್ಘಾವದಿ ಸಾಲ ಹತ್ತು ಸಾವಿರ ಹಿಡ್ಕೋತೀನಿ.

"ಹುಡುಗಿಗೆ ಮಂಗಳ ಗೌರಿ ಪೂಜೆ ಮಾಡಿಸೋದು, ಹಸೆಗೆ ಕರೆ ತಂದು ಶುಭ ಮಹೂರ್ತದಲ್ಲಿ ತಾಳಿ ಕಟ್ಟಿಸೋದು, ಒಂದಿನ್ನೂರು ಜನಕ್ಕೆ ಹೋಳಿಗೆ ಪಾಯಸದೂಟ, ಪುರೋಹಿತರಿಗೆ ಮುನ್ನೂರು ಸಂಭಾವನೆ, ಮನೆ ಮುಂದೊಂದು ಚಪ್ಪರ, ಸಂಜೆ ಲಾಜಹೋಮ, ಸಪ್ತಪದಿ ಮಾಡಿಸಿ, ಒಂದಿಪ್ಪತ್ತು ಬ್ರಾಹ್ಮಣರಿಗೆ, ಮುತ್ತೈದೇರಿಗೆ ಫಲ ತಾಂಬೂಲ ನಮ್ಮ ಮಾವ ಅವರೇ ಮದುವೆ ಮಾಡಿಸ್ತಾರೆ" ಎಂದರು.

ಗಂಗಾಬಾಯಿ ಮನೆಗೆ ಒಂದು ದಿನ ಅಕ್ಕ–ತಮ್ಮ ಹೋಗಿ ಬಂದರು.

ವಿಷಯ ತಿಳಿದು ಗಂಗಾಬಾಯಿ.... ಹೀರಿ ಹೀರಿ ಹಿಗ್ಗಿದರು, "ನಿಮ್ಮಂಥಾ ಸಹೃದಯರ ಮನೆ ಸೇರ್ಲಿಕ್ಕೆ ನನ್ನ ಮಗಳು ಪುಣ್ಯ ಮಾಡಿದ್ದಳು" ಎಂದರು.

ಗೋದಾ ಜಯಲಕ್ಷ್ಮಿಯನ್ನು ಪಕ್ಕದಲ್ಲಿ ಕೂಡಿಸಿಕೊಂಡು, "ನಮ್ಮದು ಜಾಯಿಂಟ್ ಫ್ಯಾಮಿಲಿ ಜಯ, ನಮ್ಮತ್ತೀ–ಮಾವ, ನಮ್ಮಪ್ಪ–ಅಮ್ಮ ಎರಡು ಜೋಡಿ ಮುದುಕರು. ಜೊತೆಗೆ ನಾನು ನಮ್ಮ ಯಜಮಾನರು, ಮಗ ಜೊತೆಗೆ ನೀನು ಕೃಷ್ಣ. ಎಂಟೊಂಭತ್ತು ಜನದ ಅಡಿಗೆ ಕೆಲಸ.... ನಿನಗೆ ಬೀಳತ್ತೆ ನಾನು ಅಂಗಡಿಗೆ ಹೊರಡ್ತೀನಿ, ಕೃಷ್ಣ ಮಾಲು ತರಲಿಕ್ಕೆ ಹೋಗ್ತಿರ್ತಾನೆ, ಅತ್ತೆಗಂತೂ ಕೂತ ಕಡೆ ಊಟ–ತಿಂಡಿ ಆಗ್ಬೇಕು. ನಮ್ಮಮ್ಮನಿಗೂ......ಅರವತ್ತಾಯಿತು. ಪ್ರಕಾಶ ಕಾನ್ವೆಂಟಿಗೆ ಹೋಗೋ ಹುಡುಗ !" ಎಂದಳು.

ಜಯಾ ಮೃದುವಾದ ಸ್ವರದಲ್ಲಿ, "ಜಾಯಿಂಟ್ ಫ್ಯಾಮಿಲಿ ಅಂತ ನನಗೇನು ಬೇಸರವಿಲ್ಲಕ್ಕ, ಕೆಲಸ ಕಾರ್ಯಕ್ಕೆ ನಾನು ಹೆದರಲ್ಲ, ಹತ್ತು ಜನದ ಅಡಿಗೆ ಲೀಲಾ–ಜಾಲವಾಗಿ ಮಾಡ್ತೀನಿ. ತಂದೆ–ತಾಯಿಗೆ ಕಷ್ಟ ಕೊಡದ ಹಾಗೆ ವಿವಾಹವಾಗ್ತಿದೆ. ಇದು ನನಗೆ ಅತ್ಯಂತ ಸಂತೋಷ, ಆದರೆ ನಿಮ್ಮನೆ ಸೊಸೆಯಾಗಿ ನಾನು ಬಂದ ಮೇಲೆ ಈ ಅಂಗಡಿಯ ಕೆಲಸಕ್ಕೆ ಹೋಗ್ಲಿಕ್ಕಾಗಲ್ಲ. ಇಲ್ಲಿಂದ ಅಂಗಡಿ ಹತ್ತು ನಿಮಿಷದ ಹಾದಿ. ಆದರೆ ಆ ಮನೆಗೆ ಬಂದರೆ ಎರಡು ಮೈಲಿ ಆಗತ್ತೆ. ಬೆಳಿಗ್ಗೆ ಒಂಭತ್ತರಿಂದ ಎರಡು ಗಂಟೆವರೆಗೆ ಸಂಜೆ ನಾಲ್ಕು ಗಂಟೆಯಿಂದ ಒಂಭತ್ತರವರೆಗೆ ಅಂಗಡಿಗೆ ಹೋಗಿ ಕೂತರೇ ಮನೆ ಕೆಲಸ ಹೇಗೆ ಮಾಡಲಿ ?" ಎಂದಳು.

ಗೋದಾ ನಕ್ಕು, "ನಮ್ಮನೆ ಸೊಸೆಯಾಗಿ ನೀನು ಬಂದರೆ ಅಂಗಡಿ ಕೆಲಸ ಬಿಡಲೇಬೇಕಾಗತ್ತೆ, ನಿನಗೆಷ್ಟು ಸಂಬಳ ಬರ್ತಿತ್ತು ? ಏನು ಮಾಡ್ತಿದ್ದೆ ?" ಎಂದಳು.

"ಐನೂರು ರೂ. ಸಂಬಳ ಬರ್ತಿತ್ತಕ್ಕ ಮುನ್ನೂರು ರೂ. ಸಂಬಳ ಮನೆಗೆ ಕೊಡ್ತಿದ್ದೆ. ಅಪ್ಪ ಒಂದು ಕ್ಯಾಂಟಿನ್ನಲ್ಲಿ ಕೆಲಸ ಮಾಡಿ ಮುನ್ನೂರು ರೂ. ತರ್ತಾರೆ. ಇನ್ನೂರು ರೂ. ಈ ಮನೆ ಬಾಡಿಗೆಗಾಗತ್ತೆ, ಉಳಿದ ನೂರು ರೂ. ನಾನು ಕೊಟ್ಟ ಮುನ್ನೂರು ರೂ.ಗಳಲ್ಲಿ ನಾನ್ನೂರು ರೂ. ಮನೆ ಖರ್ಚು ನಡೀತಿತ್ತು. ನನ್ನ ಬಳಿ ಉಳಿದ ಇನ್ನೂರು ರೂ.ಗಳಲ್ಲಿ ನೂರು

ರೂ. ರಿಂಗ್ಸ್‌ಗೆ ಸಾಲಾ ಮಾಡಿದ್ದು ತೀರಿಸಿದೆ, ಇದು ಮೂರು ಸಾವಿರ ರೂ.ಗಳ ಕಿವಿಯ ರಿಂಗ್ಸ್, ಒಂದು ಪಾಂಡ್ಸ್ ಪೌಡರ್ ಮಾತ್ರ ನಾನು ಉಪಭೋಗಿಸ್ತೀನಿ, ಒಂದು ಜೊತೆ ಚಪ್ಪಲಿ ತಗೊಂಡ್ರೇ ನಾಲ್ಕು ವರುಷ ಉಪಭೋಗಿಸ್ತೀನಿ. ಮನೆ ಮುಂದೆ ಕೊಂಡ ಏಳೆಂಟು ನೈಲೆಕ್ಸ್ ಸೀರೆ, ಪೂನಂ ಸೀರೆ ಅವುಗಳ ಒಳಲಂಗ ಕುಪ್ಪುಸಾ ಇವಿಷ್ಟೇ ನನ್ನ ಆಸ್ತಿ." ಎಂದಳು.

"ಮದುವೇಲಿ ನಾನು ಎರಡು ತೊಲದ ಮಾಂಗಲ್ಯ ಸರ ಹಾಕ್ತೀನಿ. ರಿಂಗ್ಸ್, ಮಾಂಗಲ್ಯ ಸರ ಇದೇ ನಿನ್ನ ಒಡವೆಗಳು. ಎಂಟ್ನೂರು ರೂ.ಗಳ ಒಂದು ರೇಶ್ಮೆ ಸೀರೆ, ಮುನ್ನೂರು ರೂ.ಗಳ ಒಂದು ಧಾರೆ ಸೀರೆ ಹಾಕ್ತೀನಿ, ಸದ್ಯಕ್ಕೆ ನೀನು ಒಡವೆ ಸೀರೆಗೆ ಆಶೆ ಪಡಬೇಡ, ಮನೆ ಕೆಲಸ ಎಲ್ಲಾ ನೀನು ಚೆನ್ನಾಗಿ ನಿರ್ವಹಿಸಿದರೇ ತಿಂಗಳಿಗೆ ಇನ್ನೂರು ರೂ. ಕೊಡ್ತೀನಿ, ನೀನು ಕೂಡಿಟ್ಟು ಚೀಟಿ ಕಟ್ಟಿ, ನಿನಗೇನು ಬೇಕೋ ತಗೊ, ನಿಮ್ಮ ತಂದೆಗೆ ಬೆಳಿಗ್ಗೆ ಕ್ಯಾಂಟಿನ್ ಕೆಲಸ ಮುಗಿಸಿ ಬಂದು, ಐದವರಿಗೆ ವಿಶ್ರಾಂತಿ ತಗೊಂಡು ನಮ್ಮ ಅಂಗಡಿಗೆ ಬಾ ಅನ್ನು, ಐದರಿಂದ ಓಂಬತ್ತರವರಿಗೆ ಅಂಗಡೀಲಿ ರಷ್ ಇರತ್ತೆ. ನಾನು, ಕೃಷ್ಣಾ ಇಬ್ಬರೇ ಆಗಲ್ಲ. ನಿಮ್ಮ ತಂದೆಗೆ ತಿಂಗಳಿಗೆ ನಾನ್ನೂರು ರೂ. ಕೊಡ್ತೀನಿ." ಎಂದಳು.

ಜಯಲಕ್ಷ್ಮಿ ಸಂತಸದಿಂದ–"ನಮ್ಮ ತಂದೆಗೆ ಕೆಲಸ ಕೊಡ್ತ ಇಕೋದು ತುಂಬಾ ಸಂತೋಷ ಅಕ್ಕ.....ನಾನು ಹೊರಟ ಮೇಲೆ ಅವರ ಗತಿ ಏನೂಂತ ಅತ್ಯಂತ ಚಿಂತೇ ಇತ್ತು. ಆದರೆ ನನಗೆ ಏಕೆ ಇನ್ನೂರು ರೂ......ನಮ್ಮನೆ ಕೆಲಸ ನಾನು ಮಾಡಿದ್ದಕ್ಕೆ ಹಣಾ ತಗೋಬೇಕಾ ?" ಎಂದಳು.

"ಹಾಗಲ್ಲ. ಕೃಷ್ಣನಿಗೆ ಬರೋದು ಎರಡೂವರೆ ಸಾವಿರ ಸಂಬಳ, ಸಾವಿರಾ ಮನೆ ಖರ್ಚಿಗೆ ಹಾಕ್ತಾನೆ. ತಂದೆ ತಾಯಿ, ಗಂಡಾ ಹೆಂಡ್ತಿ ನಾಲ್ಕು ಜನರ ಊಟದ ಖರ್ಚಿಗೆ. ಸಾವಿರ ರೂ, ರಿಕರಿಂಗ್ ಡಿಪಾಸಿಟ್ ಮೂರು ವರ್ಷದಿಂದ ಕಟ್ತಾ ಇದ್ದಾರೆ. ಮೂರು ವರ್ಷದಿಂದ ಅಂಗಡಿ ಅಭಿವೃದ್ಧಿಯಾದ ಮೇಲೆ ಈ ಸಂಬಳಾ ಶುರು ಮಾಡಿದ್ದೀವಿ. ಮೊದಲು ಬರಿ ಜೀವನೋಪಾಯದ ಮಟ್ಟದಲ್ಲಿತ್ತು. ಈಗ ನಮ್ಮ ಯಜಮಾನ್ರಿಗು ಮೂರು ಸಾವಿರ ರೂ ಬರುತ್ತೆ. ಮದುವೆ ಆದ ಹೊಸತರಲ್ಲಿ ನಾನು ತುಂಬಾ ಕಷ

ಪಟ್ಟಿದ್ದೀನಿ. ಇವತ್ತು ಹನ್ನೆರಡು ವರ್ಷದ ಮೇಲೆ ನಾನು ಚಿನ್ನ ಬಣ್ಣಾ ಕಂಡಿದ್ದೇನೆ." ಎಂದು ತನ್ನ ಜೀವನದ ಕೆಲವು ಪ್ರಸಂಗ ಹೇಳಿದಳು.

"ತುಂಬಿದ ಮನೆ ಕೆಲಸ ಜವಾಬ್ದಾರಿ ಕಷ್ಟವೇ....ಆದರೆ ನಾದಿನಿ ಅಂತ ಬಿಟ್ಟಿ ದುಡಿತ ದುಡಿಸಲ್ಲ. ಕೃಷ್ಣ ನಿನಗೆ ಸದ್ಯಕ್ಕೇನು ತೆಕ್ಕೊಡೋ ಹಾಗಿಲ್ಲ, ಐನೂರು ರೂ. ಮಾಂಗಲ್ಯದ ಸಾಲ ತೀರಿಸ್ತಾನೆ ; ಎರಡು ವರ್ಷ, ನಾನು ನಿನಗೆ ಇನ್ನೂರು ರೂ. ಕೊಡ್ತೀನಿ. ಆ ದುಡ್ಡು ನಿನ್ನ ಸ್ವಾತಂತ್ರ್ಯ." ಎಂದಳು.

"ಆಗ್ಲಕ್ಕ. ನಾನು ನಿಮಗೆ ಮೆಚ್ಚಿಕೆಯಾಗಿ ನಡ್ಕೋತೀನಿ." ಎಂದಳು. ಗೋದಾ ಸ್ವಲ್ಪ ಅನುಮಾನಿಸಿ —

"ಅಮ್ಮನವರು ಸ್ವಲ್ಪ ರಸಕಸಿ ಸ್ವಭಾವ, ನೀನೆ ಸ್ವಲ್ಪ ಹೊಂದ್ಕೊಂಬಿಡು ಇಲ್ಲದಿದ್ದರೆ ಮನೆ ರಣರಂಗ ಆಗತ್ತೆ. ಮೊದಲು ನಮ್ಮತ್ತೇನು ಒಂದು ಥರ ಇದ್ದರು, ಈಗ ನಾನೇ ಮನೆ ಯಜಮಾನಿ." ಎಂದಳು.

"ಅಲ್ಲಿ ಬಂದಾಗ ಹದಿನೈದು ದಿನ ಅವರ ಸ್ವಭಾವ ನೋಡಿದ್ದೀನಲ್ಲಕ್ಕ. ನಾನಾಗಿ ಮಾತು ಬೆಳೆಸಿ ಜಗಳಾ ಆಡಲ್ಲ." ಎಂದಳು.

"ತುಂಬಾ ಮೆತ್ತಗಿದ್ದು ಎಲ್ಲಾ ಅನುಭವಿಸ್ತಾ....ನಮಗೆ ನಾವೇ ಸೀತೆ, ಸಾವಿತ್ರಿ ಅಂತ ಬಿರುದು ಕೊಟ್ಕೋ ಬಾರದು. ಇನ್ನೊಬ್ಬರಿಗೆ ನಾವು ಅವಿಧೇಯರಾಗಿರಬಾರದು. ಆದರೆ ನಮ್ಮ ವಿಧೇಯತೇ ಅವರು ಬಳಸಿ ಕೊಂಡು ಅದನ್ನ ಗುಲಾಮಗಿರಿ ಮಟ್ಟಕ್ಕಿಳಿಸಿದರೆ ಪ್ರತಿಭಟಿಸಬೇಕು." ಗಂಡನಾಗಲಿ, ಅತ್ತೆಯಾಗಲಿ, ಪ್ರತಿಯೊಬ್ಬರ ಹತ್ತಿರ ಈ ಸೂತ್ರ ನೆನಪಿಟ್ಕೊ ಆದರೆ ನಮ್ಮ ಕೃಷ್ಣ ವಿವೇಕಿ, ನಿನ್ನ ಸಜ್ಜನಿಕೆ ದುರುಪಯೋಗ ಪಡಿಸಿ ಕೊಳ್ಳಲ್ಲ." ಎಂದಾಗ ಜಯಲಕ್ಷ್ಮಿ ಮೃದುವಾಗಿ ನಕ್ಕು—"ಅರ್ಥವಾಯಿ ತಕ್ಕ" ಎಂದಳು.

* * * *

ಕೃಷ್ಣ, ಜಯಲಕ್ಷ್ಮಿಯರ ಮದುವೆ ಸರಳವಾಗಿ ಹಾಗು ಶಾಸ್ತ್ರೋಕ್ತ ವಾಗಿ ಆಶ್ವೀಜ ಮಾಸದ ವಿಜಯದಶಮಿಯ ದಿನ ನೆರವೇರಿತು. ಎರಡನೆಯ

ಕೋಣೆ ಇದ್ದರೂ ಅದರಲ್ಲಿ ಅಂಗಡಿ ಸಾಮಾನು ತುಂಬಿತ್ತು. ನವ ದಂಪತಿಗಳಿಗೆ ಗೋದಾ ತನ್ನ ಕೋಣೆಯೇ ಬಿಟ್ಟು ಕೊಟ್ಟಳು. ಹಜಾರದಲ್ಲಿ ಒಂದೆಡೆ ಮಲುಗುತ್ತ ಮಲಗಿರುವ ಅತ್ತೆ, ತೀರ ಮೆತ್ತಗಾದ ಎಪ್ಪತ್ತರ ತಂದೆ, ಅರವತ್ತರ ಅಕ್ಕಮ್ಮ ಗಟ್ಟಿ ಮುಟ್ಟಿ ಇದ್ದರು. ಎಂಬತ್ತರ ಮಾವ. ರಾಯರ ಮಠ ಓಡಾಡಿ ಕೊಂಡಿದ್ದರು. ಮಠದಲ್ಲೇ......ಮಲುಗುವರು, ಕೃಷ್ಣಾ ಅಂಗಡಿಯ ಹಿಂಭಾಗದ ಆ ಗೌಡಾನಿನಲ್ಲಿ ಮಲುಗುತ್ತಿದ್ದ.

ಹಜಾರದ ಒಂದು ಭಾಗದ ಮಂಚದ ಮೇಲೆ ನರಳುತ್ತ ಮಲಗುವ ಭಾಗಿರಥಮ್ಮ. ಎದುರು ಭಾಗಕ್ಕೆ ಟಿ. ವಿ. ಯ ಬಳಿ ಲಕ್ಷ್ಮಮ್ಮ. ಮುಂದುಗಡೆಯ ವರಾಂಡದಲ್ಲಿ ತಂದೆ ಮಲಗುತ್ತಿದ್ದರು. ಗೋದಾ, ಸತೀಶ, ಪ್ರಕಾಶನ ಜೊತೆ ರೂಮಿನಲ್ಲೇ ಮಲಗುತ್ತಿದ್ದರು.

ಈಗ ನವ ದಂಪತಿಗಳಿಗೆ ಕೋಣೆ ಬಿಟ್ಟು ಕೊಟ್ಟ ಮೇಲೆ ಕೊಂಚ ಅಸ್ತ್ಯವ್ಯಸ್ತ ಆಯಿತು. ಗಂಡಾ ಹಾಗು ಮಗದೊಡನೆ ಗೋದಾ ವರಾಂಡದಲ್ಲಿ ಮಲಗ ತೊಡಗಿದಳು.

"ಅಪ್ಪಾ ನೀವು ಗೌಡಾನ್ ಕೋಣೆಲಿ ಮಲಗಿ ಬಿಡಿ." ಎಂದು ತಂದೆಯನ್ನು ಆ ಚಿಕ್ಕ ಮನೆ ಅಂಗಡಿಗೆ ಕಳಿಸಿದಳು. ಎಂದಿನಂತೆ ಹಜಾರದಲ್ಲಿ.... ಲಕ್ಷ್ಮಮ್ಮ, ಭಾಗಿರಥಮ್ಮ.

"ಮುದುಕರು ಅವರನ್ನ ಹೊರಗಟ್ತಾರೇನೆ ? ಆ ಧೂಳು ತುಂಬಿದ ಒಂಟಿ ಕೋಣೇಲಿ ಅವರೊಬ್ಬರೆ ಹೇಗೆ ಮಲಗ್ತಾರೆ ? ಕೆಮ್ಮು ಗಿಮ್ಮು ಹತ್ತಿ ಕೊಂಡಿರೇನು.....ಗತಿ ?" ಎಂದರು.

"ಇನ್ನು ಯಾರು ಮಲಗಬೇಕು ಹೇಳಮ್ಮ. ಇವರು ಮನೆ ಮಾಲೀಕರು. ಎರಡು ಮಾಲಿಕರಾಗಿ ಆ ಗೌಡಾನ್ ಕೋಣೇಲಿ ಒಂಟಿಯಾಗಿ ಏಕೆ ಮಲಗ್ತಾರೆ ? ಪ್ರಕಾಶೂಗೆ ಅವರಿರಲೇ ಬೇಕು." ಎಂದಳು.

"ಪ್ರಕಾಶೂ .... ತಂದೇನ್ನ ಬಿಟ್ಟು ಇದ್ದರೂ......ನೀನು ಗಂಡನ್ನ ಬಿಟ್ಟಿರಲಾರೆ." ಎಂದು ಮನದಲ್ಲೇ ಬೈದು ಕೊಂಡರು. ಇದು ಮಗಳ ಮನೆ, ಹತ್ತು ವರ್ಷದಿಂದ ಮಗಳು ತಮ್ಮನ್ನು ಈ ಮನೆಯಲ್ಲಿಟ್ಟುಕೊಂಡು ಅನ್ನ ಹಾಕುತ್ತಿದ್ದಾಳೆ ಎಂಬ ಕೃತಜ್ಞತೆ ಆಕೆಗಿರಲಿಲ್ಲ. ಆಕೆ ಮನದಲ್ಲಿ ಯಾರು ಅಸಮಾಧಾನ ತುಂಬಿತ್ತು. ತಾನು ಅಡಿಗೆ ಮಾಡಿ ದಣಿದು ಬೆಂಡಾಗುತ್ತೇನೆ.

ಈ ಮುದುಕಿ ಅತ್ತೆ ಎಂಬ......ನೆಪದಲ್ಲಿ ಅವಳಿಂದ ಎಷ್ಟು ಉಪಚಾರ ಮಾಡಿಸಿಕೊಳ್ಳುತ್ತದೆ. ಅತ್ತೆಗೆ ಹಾಸಿಗೆ ಹತ್ತಿರವೇ ಟೇಪ್‌ರಿಕಾರ್ಡರ್ ಇಟ್ಟು ಒಂದು ಐವತ್ತಕ್ಕು ಹೆಚ್ಚು ದಾಸರ ಕೀರ್ತನೆಗಳು ಹದಿನೈದು ಹರಿಕಥೆ ಕ್ಯಾಸೆಟ್ ತೆಗೆದುಕೊಟ್ಟಿದ್ದಳು. ಶ್ರೀ ತಿರುಪತಿ ದೇವಸ್ಥಾನದ ಬ್ರಹ್ಮೋತ್ಸವ ಕ್ಯಾಸೆಟ್ ಶ್ರೀ ವೆಂಕಟೇಶ್ವರ ವೈಭವ ಈ ವೀಡಿಯೋ ಕ್ಯಾಸೆಟ್‌ಗಳು ಇತ್ತು. ಆ ಮುದುಕಿ ಚೆನ್ನಾಗಿ ಊಟ ಗದಕುತ್ತಾಳೆ. ಆಗ ಯಾವ ಖಾಯಿಲೆ ಇರಲ್ಲ.. ಯಾವಾಗಲೂ ಹಾಡು ಕೇಳ್ತ......ವೀಡಿಯೋದಲ್ಲಿ ಬ್ರಹ್ಮೋತ್ಸವ ಅಥವ ವೆಂಕಟೇಶ್ವರ ವೈಭವ ನೋಡ್ತಾ ಮಲಗಿರತ್ತೆ. ಕೋಲು ಹಿಡಿದು ಕೊಂಡು ಬಚ್ಚಲ ಮನೆ ತಾರಾಡತ್ತೆ, ಎಲ್ಲಾ ನಾಟಕ... ಎಂದು ಬೈದು ಕೊಳ್ಳುತ್ತಿದ್ದರು.

"ಅಡಿಗೆ ಮನೆಗೆ ಬಂದು ಆಕೆ ಊಟಕ್ಕೆ ಕೂಡಬಾರದೇನೆ ? ನಡುಮನೆ ವರೆಗೆ ತಂದು ಬಡಿಸೋಕೆ ನನಗೆ ಸೊಂಟ ಬಿಟ್ಟು ಹೋಗತ್ತೆ" ಎಂದರು.

ಭಾಗಿರಥಮ್ಮ ನಡು ಮನೆಯಲ್ಲೇ ಮಂಚದಿಂದಿಳಿದು ಕೆಳಗೆ ಕೂತರೆ ಗೋದಾ, ಹರೀಶ, ಪ್ರಕಾಶ ಅಲ್ಲೇ ಕೂಡುತ್ತಿದ್ದರು ಅತ್ತೆಗೆ ಜೊತೆ ಎಂದು,

ಕೃಷ್ಣ ಹಾಗು ಗೋದಾಳ ತಂದೆ ಎರಡನೆಯ ಪಂಕ್ತಿ, ಅವರು ಅಡಿಗೆ ಮನೆಯಲ್ಲಿ ಕೂಡುತ್ತಿದ್ದರು. ಗೋದಾ ಊಟಕ್ಕೆ ಬಂದಾಗ ಕೃಷ್ಣ ಅಂಗಡಿಯ ಮೇಲೆ ಕೂಡುತ್ತಿದ್ದ. ಹರೀಶ ಹತ್ತಕ್ಕೆ ಆಫೀಸಿಗೆ ಹೋಗುವನು. ಮಗ ಪ್ರಕಾಶನನ್ನು ಸ್ಕೂಟರ್ ಮೇಲೆ ಕಾನ್ವೆಂಟಿಗೆ ಬಿಟ್ಟು ಬರುತ್ತಿದ್ದ. ಹೀಗಾಗಿ ಹತ್ತಕ್ಕೆ ಗೋದಾ, ಸತೀಶ, ಪ್ರಕಾಶ ಊಟಕ್ಕೆ ಕೂಡುವರು.

ಹನ್ನೆರಡಕ್ಕೆ ಕೃಷ್ಣ ಬರುವ ಆಗ ತಂದೆ–ಮಗ ಕೂಡುವರು.ತಾಯಿಯು ಯಾವ ಗೊಣಗಾಟಕ್ಕು ಬೆಲೆಯೇ ಕೊಡುತ್ತಿರಲಿಲ್ಲ ಗೋದಾ. ಒಮ್ಮೊಮ್ಮೆ ನಿಷ್ಠೂರವಾಗಿ ಹೇಳಿ ಬಿಡುವಳು, "ಅಮ್ಮ......ನಮ್ಮತ್ತೆಯ ಮೇಲೆ ಜೋಡಿ ಮಾಡಬೇಡಾ......ಅವರ ದೇಹ ಜೀರ್ಣವಾಗಿದೆ. ಆಕೆ ಎಷ್ಟು ದಿನ ಇರ್ತಾರೋ ಅಷ್ಟು ದಿನ ಚೆನ್ನಾಗಿ ನೋಡ್ಕೋಬೇಕು" ಎಂದಳು. ಈಗ ಸೊಸೆ ಬಂದ ಮೇಲೆ ಲಕ್ಷ್ಮಮ್ಮನಿಗೆ ಕೊಂಚ ಹಗುರಾಯಿತು. ಯಾರ ಮೇಲೂ ಜೋರು ತೋರಿಸೋ ಹಾಗಿಲ್ಲ. ಸೊಸೆಯ ಮೇಲಾದರೂ ಹರಿಹಾಯಬೇಕು.... ಎನಿಸು

ತ್ತಿತ್ತು. ಜಯಲಕ್ಷ್ಮಿ ಹೊಸಿಲು ತೊಳೆದು, ಬಾಗಿಲ ಮುಂಭಾಗ ಗುಡಿಸಿ ನೀರು ಹಾಕಿ ಹೊಸಲಿಗೆ, ಬಾಗಿಲ ಮುಂದೆ ರಂಗೋಲಿ ಹಾಕಿ ಒಳಗೆ ಬಂದಾಗ ಲಕ್ಷ್ಮಮ್ಮ ಕರ್ಕಶವಾಗಿ,

"ಬಂ ಅಲ್ಲಾಡಿಕೊಂಡು ಇಷ್ಟಗಲ ಗುಡಿಸಿ ಗೆದ್ದೆ ಅನ್ಕೊಂಡೆಯೊ ? ಆ ಕಡೆ ಅಡಿಗೆ ಮನೆ ಪಕ್ಕ ಗುಡಿಸು. ಇಲ್ಲದಿದ್ದರೆ ಅಡಿಗೆ ಮನೆಗೆ ಧೂಳು ಹಬ್ಬುತ್ತೆ" ಎಂದರು. ತಾಯಿ ಅತ್ತ ಹೊರಟ ಮೇಲೆ ಗೋದಾ ಬಂದು,

"ಕೆಲಸಗಾತಿ ಸಹ ಅಲ್ಲಿ ಪಾರಕೊಮ್ಮೆ ಗುಡಿಸ್ತಾಳೆ, ಹುಲ್ಲು, ಮುಳ್ಳುಕಂಟೆ ಬೆಳೆವ ಪ್ರದೇಶ ಇಷ್ಟು ದಿನ ಅಮ್ಮನೆ ಮುಂಭಾಗ ಗುಡಿಸಿ ನೀರು ಹಾಕೋಳು. ಈಗ ನೀನು ಒಳಗೆ ಬಂದು ಸ್ನಾನ ಮಾಡಿ ಅಡಿಗೆಗೆ ಕೂತು ಬಿಡು. ಎಂಟರ ಮೇಲೆ ಸಿದ್ದಮ್ಮ ಬಂದು ಮನೆ ಗುಡಿಸ್ತಾಳೆ" ಎಂದಳು.

ಗೋದಾ ಬಂದು ತಾಯಿಾ ಮಾಡಿದ ಕಾಫಿ ಎಲ್ಲರಿಗೆ ಕೊಟ್ಟು, "ಅಮ್ಮ ನಿಂಗೆ ಅಡಿಗೆ ಮನೆ ಕೆಲಸದಿಂದ ಬಿಡುಗಡೆ. ನನ್ನ ನಾದಿನಿ ಅಡಿಗೆ ಮಾಡ್ತಾಳೆ. ಮೊಳಕಾಲು ನೋವು ಅಂತ ಒದ್ದಾಡ್ತಿಯಲ್ಲ ವಿಶ್ರಾಂತಿ ತಗೊ" ಎಂದು.

"ಜಯಾ ಕಾಫಿ ಕುಡಿದು ಅನ್ನ ಎರಡು ತರಕಾರಿ ಹಾಕಿ ಹುಳಿ ಮಾಡು, ಚಪಾತಿ ಹಾಗೂ ಪಲ್ಯ ಮಾಡು, ಚಪಾತಿ, ಆರು ಚಪಾತಿ ಸಾಕು" ಎಂದಳು.

ಗೋದಾ ಅಂಗಡಿಗೆ ಹೊರಟ ನಂತರ, ಲಕ್ಷ್ಮಮ್ಮ ಒಳಗೆ ಬಂದರು. ಜಯಲಕ್ಷ್ಮಿ ಕುಕ್ಕರ್ ಏರಿಸಿ, ಹುರುಳಿಕಾಯಿ ಬಿಡಿಸುತ್ತಿದ್ದಳು.

ಆಕೆ ಕರ್ಕಶವಾಗಿ, "ಅಡಿಗೆ ಮನೆ ಪಕ್ಕದ ಅಂಗಳ ಗುಡಿಸಿದ್ಯೇನೆ ಸುಪನಾಕಿ ?" ಎಂದರು.

ಜಯಲಕ್ಷ್ಮಿ ಉದಾಸೀನವಾಗಿ, "ಗುಡಿಸಿಲ್ಲ ಅತ್ತೆ, ಭಾವ, ಪ್ರಕಾಶ ಹತ್ತು ಗಂಟೆಯ ಹೊತ್ತಿಗೆ ಆಫೀಸಿಗೆ ಹೋಗ್ತಾರೆ. ಮೊದಲು ಅಡಿಗೆ ಮಾಡ್ಬೇಕು" ಎಂದಳು.

"ನಿನ್ನ ಮುಖಕ್ಕೆ ಇಷ್ಟಾಕಾ ? ದೊಡ್ಡೋಳು ನಾನು ಹೇಳಿದ ಮಾತಿಗೆ ಬೆಲೆ ಇದೆಯೊ ? ಎಲ್ಲಾ ಹಾಳಾಗಲಿ ಒಂದು ಲೋಟಾ ಕಾಫಿ ಮಾಡಿಕೊಡು" ಎಂದರು.

ಮೂಲಂಗಿ ಹೆಚ್ಚುತ್ತಿದ್ದ ಜಯಲಕ್ಷ್ಮಿ ಏಳಲಿಲ್ಲ.

"ಕಿವಿ ಕೇಳಿಸಲಿಲ್ಲೇನೆ ಚಿತ್ರಾಂಗಿ, ತವರು ಮನೇಲಿ ಅನ್ನಕ್ಕೆ ಗತಿಕೆಟ್ಟು ಬಿದ್ದೋಳನ್ನ ಇಲ್ಲಿ ಕರ್ಕೊಂಬಂದದ್ಯಾಕೆ ? ನಮ್ಮೆಲ್ಲರ ಸೇವೆ ಮಾಡಲಿ ಅಂತಾನೆ ಎದ್ದು ಕಾಫಿ ಮಾಡು" ಎಂದರು.

"ಕುಕ್ಕರ್ ಉಗಿ ಬರೋದ್ರಲ್ಲಿ ತರಕಾರಿ ಹಾಕ್ಬೇಕತ್ತೆ. ಅಷ್ಟರಲ್ಲಿ ಕಾಫಿ, ನೀರು ಅಂತ ಏಳಲ್ಲ" ಧೈರ್ಯವಾಗಿ ಉತ್ತರಿಸಿ, ತರಕಾರಿ ಹೆಚ್ಚಿ, ತೊಳೆದು ಮೂರನೆ ಬಟ್ಟಲಿಗೆ ಹಾಕಿದಳು. ಕುಕ್ಕರ್ ಮುಚ್ಚಿ ವೈಟ್ ಹಾಕಿ, ಇನ್ನೊಂದೊಲೆ ಹೊತ್ತಿಸಿದಳು. ಕಾಫಿ ಮಾಡಿ ಅತ್ತೆಗೆ ಕೊಟ್ಟು ಚಪಾತಿಗೆ ಹಿಟ್ಟು ಕಲಿಸಿ ಲಟ್ಟಿಸತೊಡಗಿದಳು.

ಲಕ್ಷ್ಮಮ್ಮ ಕಾಫಿ ಕುಡಿದ ಲೋಟ ಕೆಳಗಿಟ್ಟು, "ಈ ಲೋಟ..... ತಕ್ಷಣ ಬಚ್ಚಲು ಮನೆಗೆ ಹೋಗಿ ತೊಳೆದುಕೊಂಡು ಬಾ..... ಎಂಜಲು ಲೋಟಾ ಇಲ್ಲಿಟ್ರೇ ನೊಣ ಹಾರಾಡತ್ತೆ" ಎಂದರು.

ಚಪಾತಿ ಹಿಟ್ಟು ಕಲಿಸಿದ ಅವಳೆದ್ದು ಕುಕ್ಕರ್ ಕೂಗಿದ್ದರಿಂದ ಕೆಳಗಿಳಿಸಿ ಒಗ್ಗರಣೆಗೆ ಬಾಂಡ್ಲಿ ಇಟ್ಟು ಹುಳಿ ಕಿವುಚತೊಡಗಿದಳು.

ಲಕ್ಷ್ಮಮ್ಮ ಕಿರುಚಾಡುತ್ತ, "ಏ..... ಕತ್ತೇ ಅಂಥಾ ಹೆಂಗಸೇ..... ಲೋಟ ತೆಗೆದು ತೊಳೆದುಕೊಂಡು ಬಾ ಅಂತ ಹೇಳಲಿಲ್ಲವಾ ? ಎಂಜಲು ಮುಸುರೆ ಹರವಿಕೊಂಡು ಅಡಿಗೆ ಏನು ಮಾಡ್ತಿ ? ಕಿವಿ ಕಿವುಡಾ..... ನಿಂಗೆ ? ಮಾತಾಡದೇ ಸೊಕ್ಕು ತೋರಿಸಿದ್ರೇ ನಾಲಿಗೆ ಕತ್ತರಿಸಿ ಬುದ್ಧಿ ಕಲಿಸ್ತೀನಿ. ನಿಮ್ಮಪ್ಪನ ಮನೇಲಿ ಇದೇ ಕಲಿಸಿದ್ದಾಳೇನು ನಿಮ್ಮಮ್ಮ ?" ಎಂದು ಕೂಗಾಡುತ್ತಿದ್ದಂತೆಯೇ ಗೋದಾ ಒಳಗೆ ಬಂದು,

"ಏನಮ್ಮ ನಿನ್ನ ಅರಚಾಟಾ ? ಇವರು ಮನೇಲಿ ಇದ್ದಾರೆ ಅನ್ನೋದು ಮರತ್ಹೋಯಿತೆ ?" ಎಂದರು.

ಮಕ್ಕಳನ್ನು ಕಂಡು ತಾಯಿಾ ಅವಕ್ಕಾದರು.

"ಈ ಸುಡುಗಾಡು ಹುಡುಗಿಗೆ ಎಂಜಲು ಮುಸುರೆ ಇದೆಂತೊ ನೋಡು. ಕಾಫಿ ಕುಡಿದ ಎಂಜಲು ಲೋಟ ಬಚ್ಚಲಿಗೆ ಹಾಕಿ ಕೆಲಸ ಮಾಡಮ್ಮ ಅಂದರೆ ಕಿವುಡಿ ಥರಾ ಕಿವಿ ಕೇಳದಂತೆ ಕಾಕಿ ಧಿಮಾಕು ತೋರಿಸ್ತಾಳೆ" ಎಂದಳು.

"ಸೊಸೆ ಕುಡಿದ ಲೋಟ ನೀನು ಏಕೆ ಬಚ್ಚಲಿಗೆ ಹಾಕಬಾರದು ? ಅವಳು ನಮ್ಮನೆ ಹುಡುಗೀನೇ__"

ಗೋದಾ ಏನೋ ಹೇಳಲೆತ್ನಿಸಿದಳು.

ಜಯಲಕ್ಷ್ಮಿ ಶಾಂತವಾಗಿ, "ಅದು ನಾನು ಕುಡಿದ ಲೋಟ ಅಲ್ಲಕ್ಕ." ಎಂದು ಶುರು ಮಾಡಿ ಅಕ್ಕ ಬಂದಾಗಿಂದ ಮಾಡಿದ ರಾಮಾಯಣ ವಿವರಿಸಿದಳು, "ಹೌದು ! ಹದಿನೈದು ನಿಮಿಷದಿಂದ ನಿಮ್ಮ ತಾಯಿ ಅಡಿಗೆ ಮನೇಲಿ ಏನೋ ರಾಮಾಯಣ ಮಾಡ್ತಾ ಇದ್ದರೆ ಅಂತ ಇವರು ಬಂದು ಕರೆದರು. ನೋಡಮ್ಮ ಸೊಸೆ ಅಂತ ಆ ಹುಡುಗಿಯ ಮೇಲೆ ಹುರಿವಣಿಗೆ ಮಾಡಬೇಡ. ಕೃಷ್ಣ ಅವಳ ಮೇಲೆ ಪಂಚಪ್ರಾಣ ಇಟ್ಟಿದ್ದಾನೆ. ನಾಳೆ ಅವನು ಸ್ವಂತ ಮನೆ ಮಾಡಿದರೆ ಅವಳೇ ಯಜಮಾನಿ. ನೀನು ಪ್ರೀತಿ ಪ್ರೇಮದಿಂದ ಅನುಸರಿಸಿದರೆ ನಿನಗೂ ಆ ಮನೇಲಿ ಸ್ಥಾನ ಇರತ್ತೆ."

"ನನ್ನ ಮಗನ ಮನೇಲಿ ನಾನಿರೋಕೆ ಇವಳು ಯಾವೋಳೆ ಹಕ್ಕು ಕೊಡೋಳು ನನ್ನ ಹಕ್ಕು ಅದು. ಇಂಥಾ ಗತಿಗೆಟ್ಟೋರ ಮನೆ ಹುಡುಗಿ ನಿನಗೆ ಬೇಕಾಗೇ ಇರಲಿಲ್ಲ. ನಿನ್ನ ಮನೆ ಊಳಿಗಕ್ಕೆ ತಂದು ಹಾಕ್ಕೊಂಡಿದ್ದಿ ನಾನು ಇಷ್ಟು ದಿನ ಊಳಿಗದೋಳಾಗಿ ಇದ್ದದ್ದಾಯಿತು. ಈಗ ಇವಳೊಬ್ಬ ಊಳಿಗದೋಳು. ಕೃಷ್ಣ ಅಂತು ನಿನ್ನ ದಾಸ ನಮ್ಮ ಬಡತನ ನೀನು ದುರುಪಯೋಗ ಪಡಿಸಿಕೊಂಡೆ. ನಿಮ್ಮತ್ತೆ ಮುದಿ–ಮುದಿ ಹೆಂಗಸು ಮಲಗಿದ್ರಾಳೆ. ಅವಳಿಗೆ ಪೀತಾಂಬರ ಉಡಿಸಿ, ಥಳಥಳ ಹೊಳೆಯೋ ಚಿನ್ನದ ಸರ ಹಾಕಿದ್ದಿ. ನಿಮ್ಮಪ್ಪಾ ಅಂಗಡಿಗೆ ಎಂಟೊರುಷ ದುಡಿದರು ಅವ. ಗೇನು ಕೊಟ್ಟ" ಎಂದು ಸಿಕ್ಕಾಪಟ್ಟೆ ಜಗಳ ಆಡಿದರು.

ಗೋದಾ ಬೇಸತ್ತು, "ನೀನು ಹೀಗೆಲ್ಲಾ ಬಾಯಿ ಮಾಡೋ ಹಾಗಿದ್ರೆ ಇರ್ಲೇಬೇಡಾ......ಹೊರಟು ಹೋಗು ಮಗಳ ಮನೆ ಅನ್ನ ತಿಂತಿದ್ದೀನಿ ಅನ್ನೋ ಕೃತಜ್ಞತೆ ನಿನಗಿಲ್ಲ. ಬರೀ ನನ್ನ ಮೇಲೆ ಜೋಡಿ ಮಾಡ್ತಿ. ನಮ್ಮಪ್ಪನ ಮೇಲೆ ಜೋಡಿ ಮಾಡ್ತಿ" ಎಂದಳು.

ಲಕ್ಷ್ಮಮ್ಮ ಉಪವಾಸ ಕುಳಿತರು. ರಾತ್ರಿ ಆದರೂ ಹಠ ಬಿಡಲಿಲ್ಲ. ಕಡೆಗೆ ಕೃಷ್ಣ ಬೇಸತ್ತು,

"ನಿನ್ನ ಮನಸ್ನಲ್ಲಿ ಏನಿದೆ ಹೇಳಮ್ಮಾ ?", ಎಂದ.

"ನನಗೆ ಇವಳ ಮನೆ ಹಂಗಿನ ಅನ್ನ ಸಾಕಾಗಿದೆ ಕಣೊ. ನೀನು ಕತ್ತೆ ದುಡಿತ ದುಡೀತಿ. ನೀನು ಸ್ವಂತವಾಗಿ ಒಂದು ಮನೆ ಮಾಡಿ ತಾಯಿಗೆ ಅನ್ನ ಹಾಕಬಾರದಾ ? ಎರಡು ಸಾವಿರ ಸಂಬಳಾ ಬರತ್ತೆ." ಎಂದರು.

"ಹೂಡಿದರೆ ಸ್ವಂತ ಮನೇನೆ ಹೂಡಬೇಕೂಂತ ಅಕ್ಕನ ಆಸೆ ಅಮ್ಮ. ಅದಕ್ಕಾಗಿ ಸಾವಿರ ರೂಪಾಯಿ ಡಿಪಾಸಿಟ್.... ಮಾಡಿಸ್ತಿದ್ದಾಳೆ." ಎಂದ. "ನೀನು ಲಕ್ಷ ಲಕ್ಷ ಕೂಡ್ಹಾಕಿ ಸ್ವಂತಮನೆ ಮಾಡೋದ್ರೊಳಗೆ ನಾನು ಸತ್ತು ಸುಣ್ಣವಾಗಿರ್ತೀನಿ. ಈಗ ಪ್ರೇಮಮ್ಮನ ಮನೆ ಹಿಂದಿನ ಮನೆ ನಾನೂರಕ್ಕೆ ಬಾಡಿಗೆಗೆ ಕೊಡ್ತಾರೆ, ನಾವು ಗಂಡ ಹೆಂಡ್ತಿ ಮಗಾ ಸೊಸೆಗೆ ಸಾಕು, ಕಮಟನ್ನವೋ, ಕದಾನ್ನವೋ ತಿನ್ಕೊಂಡು ಇರೋಣಪ್ಪಾ, ಇವನ ಹಂಗಿನ ಅನ್ನ ಸಾಕು. ಮಗ ದೊಡ್ಡೋನಾಗಿ ತಂದೆ ತಾಯಿನ್ನ ಸಾಕೋನಾದ್ರೆ ಗೆದ್ದೆಂತ ಕಾದಿದ್ದೀನಿ." ಎಂದರು. ಕೃಷ್ಣ ಗಂಭೀರವಾಗಿ—

"ಹೆಂಡ್ತಿ ಬಂದ ಮೇಲೆ ಬೇರೆ ಮನೆ ಮಾಡಬೇಕಾದ್ದು ನ್ಯಾಯ ಅಕ್ಕ. ನೀನು ಭಾವ ವರಾಂಡದಲ್ಲಿ ಮಲಗಿಕೊಂಡು ನಮಗೆ ಕೋಣೆ ಬಿಟ್ಟು ಕೊಡೋದೂಂದ್ರೆ ನಮಗೂ ತುಂಬಾ ಸಂಕೋಚಾ ಆಗುತ್ತೆ, ಚಿಕ್ಕ ಮನೆ ಸಿಕ್ಕರೆ ನಾನು ಬಾಡಿಗೆಗೆ ತಗೋತೀನಿ, ನಿನ್ನ ಅಂಗಡಿ ಕೆಲಸಾ ಅಂತು ಇದ್ದೇ ಇದೆ." ಎಂದ. ಗೋದಾ ಸೋತು—"ನಿನ್ನಿಷ್ಟ ಅಪ್ಪಾ ..." ಎಂದಳು.

* * * *

ಐದು ಸಾವಿರ ಅಡ್ವಾನ್ಸ್ ಕೊಟ್ಟು ಆ ಮನೆ ಬಾಡಿಗೆಗೆ ಹಿಡಿದ ಕೃಷ್ಣ. ದೊಡ್ಡ ಮನೆ ಎಂದರೆ ಮುಂಭಾಗದ್ದು ಎರಡು ಬೆಡ್‌ರೂಮಿನ ಮನೆ, ಮಧ್ಯೆ ಕಾಂಪೌಂಡ್, ಆ ಕಡೆ ಭಾಗಕ್ಕೆ ಒಂದು ಹಾಲು ಒಂದು ರೂಮ್...... ಅಡಿಗೆ ಮನೆ, ಬಚ್ಚಲ ಮನೆ, ನಲ್ಲಿಯಲ್ಲಿ ನೀರು ಚೆನ್ನಾಗಿ ಬರುತ್ತಿತ್ತು. ಅಚ್ಚುಕಟ್ಟಾದ ಪುಟ್ಟ ಮನೆ. "ಬ್ಯಾಂಕಲ್ಲಿ ದುಡ್ಡು ಎಷ್ಟಿದೆಯೋ ಮಗು ?" ಗ್ಯಾಸ್ ಕೊಂಡ್ಕೊಂಡ. ಕುಕ್ಕರ್ ಹಾಗು ಕೆಲವು ಮುಖ್ಯ ಪಾತ್ರೆಗಳು ಹೆಂಡತಿ ಜೊತೆಗೆ ಹೋಗಿ ತಂದ ದಿನ ಕೇಳಿದರು ಲಕ್ಷ್ಮಮ್ಮ. "ದುಡ್ಡು ಕಾಸಿನ ವಿಷಯಕ್ಕೆ ನೀನು ಬರಲೇ ಬೇಡ. ಏನಾದರು ದುಡ್ಡಿದ್ರೇ ಅವಳಿಗೆ

ಸೀರೆ, ಒಡವೆ ಮಾಡಿಸ್ತೀನಿ. ಬೆಳಿಗ್ಗೆ ನಾನು ಅವಳೂ ಏಳೋದು ಎಂಟು ಗಂಟೆಗೆ. ನೀನು ಸಾರಿಸೋದು, ಗುಡಿಸೋದು, ಅಡಿಗೆ ಎಲ್ಲಾ ಮಾಡ ಬೇಕು. ಸೊಸೇನ್ನ ಕಾಡಿಸಿ ಗೋಳಾಡಿಸೋದು ಮಾಡಿದರೆ ಮನೆಯಿಂದ ಹೊರಗೆ ಹಾಕ್ತೀನಿ." ಎಂದ. ಜಯಲಕ್ಷ್ಮಿಗೆ ಎರಡು ತೊಲದ ಬಳೆ ಮಾಡಿ ಸಿದ. ನಾಲ್ಕಾರು ಒಳ್ಳೆ ಸೀರೆ ತೆಗೆದುಕೊಟ್ಟ.

ಗಂಡನ ಉಗ್ರ ಪ್ರಣಯ ಪ್ರವಾಹದಲ್ಲಿ ಕೊಚ್ಚಿ ಹೋದಳು ಜಯ ಲಕ್ಷ್ಮಿ. ಬೆಳಿಗ್ಗೆ ಎಂಟರವರೆಗೆ ಅವಳನ್ನು ಹೊರಗೆ ಬಿಡುತ್ತಿರಲಿಲ್ಲ. ಎಂಟಕ್ಕೆ ಎದ್ದು ಸ್ನಾನಾ ಕಾಫಿ, ತಿಂಡಿ ಮುಗಿಸಿ ಅಂಗಡಿಗೆ ಹೋದರೆ ಒಂದು ಗಂಟೆಗೆ ಬರುತ್ತಿದ್ದ. ಒಂದು ಗಂಟೆಗೆ ಊಟಾ ಮುಗಿಸಿ ರೂಮ್ ಹೊಕ್ಕರೇ ನಾಲ್ಕು ಗಂಟೆಯವರೆಗೆ ಇವನ ಪ್ರಣಯದ ಧಾಳಿ, "ನಿನಗೆ ಸುಸ್ತಾದರೆ ನಾನಿಲ್ಲಿದಾಗ ಗಂಟೆ ಗಟ್ಟಲೆ ಮಲಗಿಕೊಂಡು ವಿಶ್ರಾಂತಿ ತಗೊ, ಅಮ್ಮನಿಗೆ ಹೇಳಿದ್ದೀನಿ. ನಿನಗೆ ಒಂದು ಕೆಲಸ ಮಾಡಿಸ ಕೂಡದೂಂತ." ಎನ್ನುತ್ತಿದ್ದ.

ಮೂವತ್ತು ವರ್ಷ ಹೆಣ್ಣು ಕಾಣದೆ ಹಸಿದವನು ಎನಿಸುತ್ತಿತ್ತು ಜಯ ಲಕ್ಷ್ಮಿಗೆ. ಸಂಜೆ ಬರುವಾಗ ಏನೇನೋ ತಿಂಡಿ ತೀರ್ಥ ತರುತ್ತಿದ್ದ. ಊಟಕ್ಕೆ ಕೂತಾಗ ತಾಯಿಗೆ ಗದರಿಸಿ, ಎಲ್ಲಾ ಪದಾರ್ಥ ಅವಳಿಗೆ ಉಪಚರಿಸಿ, ಬಡಿ ಸುಸುತ್ತಿದ್ದ. ತುಪ್ಪದ ಬಾಟಲಿ ಮಾತ್ರ ತನ್ನ ರೂಮಲ್ಲೇ ಇಟ್ಟುಕೊಂಡು ಊಟಕ್ಕೆ ಕೂತಾಗ ಧಾರಾಳವಾಗಿ ತಮ್ಮಿಬ್ಬರ ಎಲೆಗೆ ಬಡಿಸಿಕೊಂಡು ಒಳಗೆ ತಂದಿಟ್ಟುಕೊಳ್ಳುತ್ತಿದ್ದ. "ಪಾತ್ರೆ ತೊಳೀಲಿಕ್ಕೆ ಸಿದ್ದಮ್ಮನ್ನಾದರೂ ಹಾಕ್ಕೋ ತೀನಪ್ಪಾ. ಪಾತ್ರೆ, ಬಟ್ಟೆ, ಅಡಿಗೆ, ಕಸಾ ಎಲ್ಲಾ ನಾನೇ ಮಾಡ್ಬೇಕು. ನನಗೆ ಅರವತ್ತಾರು ವರ್ಷ ಕಣೋ." ಎಂದರು.

'ನೋಡಮ್ಮ ಅಕ್ಕ ಶ್ರೀಮಂತಳು. ಹತ್ತಾರು ಸಾವಿರ ರೂ.ಗಳ ಸಂಪಾದನೆ ಇದೆ. ಪಾತ್ರೆಗೆ, ಬಟ್ಟೆಗೆ, ಕಸಕ್ಕೆ ಕೆಲಸದವರನ್ನ ಇಟ್ಟಿದ್ದಳು. ಆದರೆ ನನಗೆ ಬರೋದು......ಎರಡು ಸಾವಿರ ರೂ. ಸಂಬಳ. ಎಲ್ಲಾ ಕೆಲಸ ನೀನು ಮಾಡಿದರೇ ನಿನಗೆ ಅಪ್ಪನಿಗೆ, ಊಟಾ ಹಾಕಬಲ್ಲೆ." ಎನ್ನುತ್ತಿದ್ದ. ಮಗಳ ಮನೆಗಿಂತ ಮಗನ ಮನೆಯೆ ಪರಮ ಹಿಂಸೆ ಎನಿಸಿತು ಲಕ್ಷ್ಮಮ್ಮನಿಗೆ. ಆ ಕಳ್ಳಿ ಗೋದಾಳೇ ತಮ್ಮನಿಗೆ ಹೇಳಿಕೊಟ್ಟು ಹೀಗೆ ಮಾಡಿಸುತ್ತಿರುವಳೆ ?

ತಾವು ಹತಾಶರಾಗಿ ಮತ್ತೆ ಆ ಮನೆಗೆ ಹೋಗಬೇಕೆಂದು ಅಕ್ಕ ತಮ್ಮ

ಆಟಾ ಹೂಡಿರುವರೆ ? ಹೌದು ! ಗೋದಾಳಿಗೆ ಅಂಗಡಿ ವ್ಯಾಪಾರವಿದೆ. ಅಡಿಗೆ ಮನೆಯ ಕೆಲಸ ಅವಳ ಕೈಲಿ ಸಾಧ್ಯವಿಲ್ಲ. ಅವರತ್ತೆ ಸೀವೆ, ಹಾಗು ಅಡಿಗೆ ಮಾಡಲು ಒಬ್ಬರು ಬೇಕೇ ಬೇಕು.

ಅದಕ್ಕೆ ಈ ಉಪಾಯ ಮಾಡಿರಬಹುದೇ ? ಎರಡು ಲೀಟರ್ ಹಾಲು ಕೊಳ್ಳುತ್ತಿದ್ದಳು. ಹಾಯಾಗಿ ನಾಲ್ಕಾರು ಭಾರಿ ಕಾಫಿ ಕುಡಿದು ಅಡಿಗೆ ಕೆಲಸ ಮಾತ್ರ ಮಾಡುತ್ತಿದ್ದೆ. ಸೊಸೆ ಬಂದ ಮೇಲೆ ಅಡಿಗೆ ಮನೆ ಕೆಲಸ ದಿಂದಲು ನಿವೃತ್ತಿ ನೀಡಿದ್ದಳು. ನಾನೇ ಆತುರ ಬಿದ್ದೆ, ಒಂದು ದಿನ ಗೋದಾನ್ನೇ ಕೇಳಬೇಕು, ಎಂದು ಅವಳ ಮನೆಗೆ ಬಂದರು.

"ಬಾನ್ಮ್ಮ ಗಂಗಾಬಾಯಿ ಕಾಫಿ ತಂದ್ಕೊಡಿ." ಎಂದಳು. ಗಂಗಾ ಬಾಯಿ ಕಾಫಿ ತಂದಿದ್ದರು. ಲಕ್ಷ್ಮಮ್ಮ ಬೆರಗಾಗಿ –

"ಇದೇನು ನಮ್ಮ ಬೀಗಿತ್ತಿ ಇಲ್ಲಿ ?" ಎಂದರು. "ಹದಿನೈದು ದಿನ ದಿಂದ ಇಲ್ಲೇ ಇದ್ದಾರಮ್ಮ . ನಮಗೂ ಜನ ಇಲ್ಲದೇ ಮನೆ ನಿಭಾಯಿಸ್ಲಿಕ್ಕಾಗಲ್ಲ. ಕೃಷ್ಣ ಏಕೋ ಈಗ ಮೊದಲಿನ ಹಾಗಿಲ್ಲ. ಜಯನ್ನ ಅಡಿಗೆ ಕೆಲಸಕ್ಕೆ ಕಳಿಸಪ್ಪ, ತಿಂಗಳಿಗೆ ಮುನ್ನೂರು ರೂ. ಕೊಡ್ತೀನಿ. ಅವಳಿಗೂ ಸೀರೆ ಬಟ್ಟೆ ಕೈ ಖರ್ಚಿಗಾಗತ್ತೆ. ಆ ಮನೆ ಕೆಲಸ ಅಂತು ಅಮ್ಮಾ.....ಮಾಡ್ತಾಳಲ್ಲಾಂದ್ರೆ, ಒರಟಾಗಿ – ಏನೇನೋ ಅಂದ, ಅಂಗಡಿಗೂ ತಡಲಾಗಿ ಬರ್‍ತಾನೆ. ಈಗ ಜಯನ್ನ ತಂದೇನ್ನ ಅಂಗಡಿಗೆ ತಗೊಂಡು ಅವರಿಗೆ ನಾನೂರು ರೂ. ಕೊಡ್ತಿದ್ದೀನಿ. ಗಂಗಾ ಬಾಯಿಗೆ ಇನ್ನೂರು ರೂ. ಕೊಡ್ತಿದ್ದೀನಿ. ಆ ಮನೆ ಬಿಟ್ಟು ಇಲ್ಲೇ ಇದ್ದಾರೆ, ಗಂಗಾಬಾಯಿ ಅತ್ತೆ ಹತ್ತಿರ ಹಜಾರದಲ್ಲಿ ಮಲಗ್ತಾರೆ. ಆತ ಸಮಾನ ತಂದೇ ಅಂಗಡಿ ಗೌಡಾನ್ ರೂಮಲ್ಲಿ ಮಲಗ್ತಾರೆ." ಎಂದಳು. ಲಕ್ಷ್ಮಮ್ಮ ಹೆದರಿ—

"ಅಯ್ಯೋ ಕೋಪಕ್ಕೆ ಅವನನ್ನ ಅಂಗಡಿಯಿಂದ ಮಾತ್ರ ಬಿಡಿಸ ಬೇಡಮ್ಮ . ಅದೇ ನಮ್ಮ ಜೀವನಾಧಾರ, ಹಗಲು ರಾತ್ರಿ ಅವಳ ರೂಮಲ್ಲಿ ಬಿದ್ದಿರ್ತಾನೆ. ಮಗನಿಗೆ ಮೋಹಿನಿ ಹಾಗೆ ಕಾಡ್ತಿದ್ದಾಳೆ." ಎಂದು ಅಲವತ್ತು ಗೊಂಡರು, ಗೋದಾ ನಕ್ಕು.

"ಹೊಸದಾಗಿ ಮದುವೆ ಆದ ಹುಡುಗ. ಚೆಲುವೆ ಹೆಂಡತಿ ಸಿಕ್ಕಿದ್ದಾಳೆ.

ನಾಲ್ಕು ದಿನ ಮಧು ಚಂದ್ರದ ಅಮಲಲ್ಲಿರಲಿ, ಈ ಅಂಗಡೀಲಿ ನನ್ನದೆಷ್ಟು ದುಡಿಮೆ ಇದೆಯೋ......ಅವನದು ಅಷ್ಟೇ ದುಡಿಮೆ ಇದೆ. ಅವನನ್ಯಾಕೆ ಅಂಗಡಿಯಿಂದ ಬಿಡಿಸಲಿ.....?" ಎಂದಳು.

"ಈಗ ನನಗಂತು ಪಡಿಪಾಟಲಾಗಿದೆ ಕಣೇ.....ಆ ಸುಕನಾತಿ ಕೈಲಿ ಒಂದು ಕೆಲಸ ಮಾಡಿಸ ಬಾರದೂಂತ ಅಪ್ಪಣೆ ಮಾಡಿದ್ದಾನೆ. ನಾನು ದುಡಿದು, ದುಡಿದು ಹೈರಾಣಾಗಿದ್ದೀನಿ. ಎಂಟು ದಿನ ಇಲ್ಲಿಗೇ ಬರಬೇಕೂಂತಿದೀನಿ." ಎಂದರು.

ಗೋದಾ ಒಪ್ಪದೇ—"ಖಂಡಿತ ಬೇಡಮ್ಮ. ಕೃಷ್ಣನಿಗೆ, ನನಗೆ ವಿರಸ ಆಗತ್ತೆ. ಮಗನ ಮನೆ ನಿನಗೆ ಶಾಶ್ವತ ತಿಳ್ಕೊ. ಕಷ್ಟವಾಗಲೀ, ಸುಖವಾಗಲಿ ನೀನು ಅಲ್ಲಿರಬೇಕು. ಮದುವೆ ಆದಮೇಲೆ ಇಲ್ಲಿ ಬಂದು ನನ್ನ ಬದುಕು ನಾವು ಸ್ಥಾಪಿಸಿಕೊಳ್ಳಬೇಕಾಗಿತ್ತು. ಆದರೆ ನಿರ್ಗತಿಕರಾಗಿ ಅಲ್ಲಿ ಉಳಿದ ನಿಮ್ಮ ಹೊಟ್ಟೆ ಪಾಡಿಗೆ ಚಿಂತಿಸಿ, ಇಲ್ಲಿ ಕರೆಸಿಕೊಂಡೆ, ಹನ್ನೆರಡು ವರ್ಷ ನಿಮ್ಮ ಕಟಿಟು ಬ ಕಾಪಾಡಿದೆ. ನೀನು ಮೊನ್ನೆ ರಣರಂಪಾ ಮಾಡಿ–"ಈ ಊಳಿಗ ಸಾಕಾಗಿದೆ ಅಂತ ಕೃಷ್ಣನಿಗೆ ಚುಚ್ಚಿಕೊಟ್ಟು ಬೇರೆ ಆದೆ.

ಕೃಷ್ಣ ನಿಮಗಾಗಿ ಅಲ್ಲಿ ಮನೆ ಹೂಡಲಿಲ್ಲ. ನಿನಗೆ ಆತ್ಮೀ ತನದ ಪಾರು ಪತ್ಯ, ಮನೆಯ ಬಡತನ, ಎರಡು ಸಿಗಲಿಲ್ಲ. ನನ್ನ ಬಿಗಿಮುಷ್ಟಿ ಅವರಿಗೆ ಬೇಕಾಗಿರಲಿಲ್ಲ. ರಿಕರಿಂಗ್ ಡೆಪಾಸಿಟ್ಟಲ್ಲಿ, ಮೂರು ವರ್ಷದಿಂದ ಕಟ್ಟಿದ ಹಣ ತೆಗೇ ಕೂಡದು. ಸ್ವಂತ ಮನೆಗೆ ತೆಗೀಬೇಕೂಂತ ನಿರ್ಭಂದಿಸಿದ್ದೆ. ಬೆಳಿಗ್ಗೆ ಐದು ಗಂಟೆಗೆ ಮಗು ಪ್ರಕಾಶ "ಮಾಮಾ ಬಾಗಿಲು ತೆಗಿ, ವರಾಂಡದಲ್ಲಿ ಚಳಿ ಆಗತ್ತೇ ...." ಅಂತ ಕೂಗ್ತಿದ್ದ. ಬೇಕಾಗಲೀ, ಬೇಡಾಗಲೀ ಹೊಸ ದಂಪತಿಗಳು ಎದ್ದು ಬರಬೇಕಾಗಿತ್ತು.

"ನೀನೇನೋ ಲಕ್ಷಾಂತರ ತರೋ ಶ್ರೀಮಂತ ಹುಡುಗಿಯೇ ಬೇಕೂಂತ ಮುವ್ವತ್ತು ವರ್ಷ ಆದರೂ ಮಗನ ಮದುವೆ ಮಾಡದೆ ಕೂತೆ. ಆದರೆ ಇತ್ತೀಚಿಗೆ ಅವನ ವರ್ತನೆ ಸರಿಯಾಗಿರಲಿಲ್ಲ. ಅಂಗಡಿಗೆ ಹರೆಯದ ಹುಡುಗೀರು ಬಂದ್ರೆ ಹಸಿದು ತಿನ್ನೋ ಹಾಗೆ ನೋಡ್ತಿದ್ದ. ಇನ್ನು ಮದುವೇ ಮಾಡದೆ ಬಿಡೋದು ತಪ್ಪೂಂತ ನಾನು ಯೋಚಿಸಿ ಈ ಮದುವೆ ಮಾಡಿದೆ. ಈ ಮದುವೆ ಆಗ್ದಿದ್ರೆ ಕೃಷ್ಣ ಕೆಲವು ಕೆಟ್ಟ ದಾರಿಗೆ ಹೋಗ್ತಿದ್ದ." ಎಂದಳು.

ಲಕ್ಷ್ಮಮ್ಮ ಎದ್ದು–"ಬರ್ತೀನಮ್ಮ, ಮಗನಿಗೆ ಮದುವೆ ಆಗಿದ್ದಕ್ಕೆ ನನಗೇನು ಅಸಮಾಧಾನವಿಲ್ಲ. ಈ ಮನೆ ಸಾಲ್ತಾ ಇರಲಿಲ್ಲ. ನೀವು ವರಾಂಡದಲ್ಲಿ ಮಲಗ್ತಿದ್ರಿ. ಹೀಗಾಗಿ ನಾನು ಬೇರೆ ಮನೆ ಮಾಡಿದೆ." ಎಂದರು.

ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಹಠದ ಸ್ವಭಾವದ ಆಕೆಯೊಡನೆ ಗೋದಾ ಜಾಸ್ತಿ ವಾದ ಬೆಳೆಸಲಿಲ್ಲ. ಒಮ್ಮೆಲ್ಲ ಆಕೆ ಸೊಸೆ, ಮಗನೊಡನೆ ಬೇರೆ ಹೊರಟಾಗ ನಿಜಕ್ಕೂ ಗೋದಾಳಿಗೆ ಮನೆ ತೂಗಿಸಲು ಕಷ್ಟವಾಗಿತ್ತು, ಆದರೆ ಧೈರ್ಯವಹಿಸಿ ಗಂಗಾಬಾಯಿ ಅವರನ್ನು ಕೇಳಿದಳು.

ಗಂಡನಿಗೆ ಬರುವ ನಾನ್ನೂರು ರೂ. ಸಂಬಳದಲ್ಲಿ ಮುನ್ನೂರು ರೂ. ಬಾಡಿಗೆ ಕೊಟ್ಟು, ಉಳಿದ ನೂರದಲ್ಲಿ ಹೇಗೆ ಸಂಸಾರ ಮಾಡಬೇಕೆಂಬ ಚಿಂತೆಯಲ್ಲಿದ್ದ ಆಕೆಗೆ ಗೋದಳ ಆಹ್ವಾನ ಅಮೃತಸ್ರಾಯವಾಯಿತು. ಆನಂದವಾಗಿ ಗಂಡನ ಜೊತೆ ಈ ಮನೆಗೆ ಬಂದು ಸೇರಿದರು, ಹೊಟ್ಟೆ ತುಂಬಾ ಊಟ......ವಾಸಕ್ಕೆ ಅದೇ ಮನೆ, ಕೈ ತುಂಬಾ ಸಂಬಳ, ಗಂಡ ಹೆಂಡತಿ ನಿಷ್ಠೆಯಿಂದ ದುಡಿಯು ....ತೊಡಗಿದರು. ಕೃಷ್ಣ ಒಂಬತ್ತರ ಮೇಲೆ ಬರುತ್ತಿದ್ದಳು.

ಆದರೆ ಈಗ ಒರಟಾಗಿ-"ಬೆಳಿಗ್ಗೆ ಒಂಬತ್ತಕ್ಕೆ ಬಂದು ಒಂದು ಗಂಟೆಯವರೆಗೆ ಇರಬೇಕು. ಸಂಜೆ ನಾಲ್ಕು ಗಂಟೆಗೆ ಬಂದು ಆರರವರೆಗೆ ಇರ್ತೀನಿ, ಮನೆ ಸಾಮಾನು, ತರಕಾರಿ ತರೋದಿರತ್ತೆ. ಏಳೂವರೆಗೆ ಬಂದು ಒಂಬತ್ತೂವರೆಯವರೆಗೆ ಕೂಡ್ತೀನಿ." ಎಂದ.

ಅವನಿಗೆ ಬುದ್ಧಿ ಹೇಳುವ ಹಾಗಿರಲಿಲ್ಲ. ಗೋದಾ ಈಗ ಗಂಗುಬಾಯಿ ಗಂಡನಿಗೆ ಅಂಗಡಿ ವಹಿಸಿದಳು. ಮಧ್ಯೆ ಅಕ್ಕ ತಮ್ಮ ಬರುತ್ತಿದ್ದರು, ಸಂಜೆ ವೇಳೆ ಮುನ್ನೂರು ರೂ.ಗಳನ್ನು ಕೊಟ್ಟು, ಒಂದು ಹುಡುಗನ್ನ ಹಾಕಿಕೊಂಡಿದ್ದಳು. ಆಗ ಬಿರುಸಾದ ವ್ಯಾಪಾರವಿರುತ್ತಿತ್ತು.

ಕೃಷ್ಣನೊಡನೆ ಮಾವ ವಿರಸ ಮಾಡಿಕೊಳ್ಳದೇ ತಿಂಗಳಿಗೆ ಎರಡು ಸಾವಿರ ಸಂಬಳ ಕೊಡುತ್ತಿದ್ದಳು. ನಾಲ್ಕು ತಿಂಗಳು ಉರುಳಿತು. ಒಂದು ದಿನ ಲಕ್ಷ್ಮಮ್ಮ ಅಂಗಡಿಗೆ ಬಂದು–

"ಅವಳೇನೋ ತುಂಬಾ ನರಳಾಡ್ತಿದ್ದಾಳೇ..... ಬಾಪ್ಪ." ಎಂದರು. ಗೋದಾ ತಾನು ಅವನ ಜೊತೆ ಬಂದಳು. ತಂದೆ ಮನೆಯಲ್ಲಿರಲಿಲ್ಲ, ಹತ್ತಿರದ ಅಶ್ವಥ್ ಕಟ್ಟೆಯ ಮೇಲೆ ಕೂತು ಹರಿಕಥಾಮೃತಸಾರ ಓದುತ್ತಿದ್ದರು. ಮನೆಯಲ್ಲಿ ಲಕ್ಷ್ಮಮ್ಮ ಒಬ್ಬರೆ ಸೊಸೆಯ ನರಳಾಟ ಗಂಟೆ ಗಟ್ಟಲೆ ಕೇಳಿಸಿದರೂ ಪಾತ್ರೆ ತೊಳೆಯುತ್ತ ಕೂತ ಆಕೆ ಎದ್ದಿರಲಿಲ್ಲ. ಎರಡೂವರೆ ತಿಂಗಳು ತುಂಬಿದ ಜಯಲಕ್ಷ್ಮಿಗೆ ಗರ್ಭಸ್ರಾವ ಆಗಿತ್ತು, ಅವಳು ಗರ್ಭಿಣಿ ಆಗಿದ್ದಾಳೆಂದು ಅವಳಿಗೂ, ಕೃಷ್ಣನಿಗೂ ಗೊತ್ತಿರಲಿಲ್ಲ. ಹೆಂಡತಿ ನೋವು ! ಆಯಾಸ ಯಾವುದು ಗಮನಿಸದೆ ಮೃಗೀಯ ವಿಹಾರ ಮಾಡುತ್ತಿದ್ದ ಕೃಷ್ಣ, ಅದು ಫಲ ತೋರಿಸಿತ್ತು. ನರ್ಸಿಂಗ್ ಹೋಮ್‌ನಿಂದ ವ್ಯಾನ್ ತರಿಸಿ, ಗೋದಳೇ ನಾದಿನಿಯನ್ನು ಆಸ್ಪತ್ರೆ ಸೇರಿಸಿದಳು. ಇದೇ ಸಮಯದಲ್ಲಿ ಮನೆಯಲ್ಲಿ..... ಭಾಗಿರಥಮ್ಮ ನೆಲ ಹತ್ತಿ ಮಲಗಿದ್ದರು. ಅಕ್ಕ ತಮ್ಮ ಇಬ್ಬರಿಗೂ ಆಸ್ಪತ್ರೆ ಅಲೆದಾಟವಾಯಿತು. ಭಾಗಿರಥಮ್ಮ ನರ್ಸಿಂಗ್ ಹೋಮ್ ಸೇರಿದ ನಾಲ್ಕನೆಯ ದಿನ ಸ್ವರ್ಗಸ್ಥರಾದರು.

ಆದರೆ ಜಯಲಕ್ಷ್ಮಿ ಎಂಟು ದಿನಗಳ ಕಾಲ ನರ್ಸಿಂಗ್ ಹೋಮ್‌ನಲ್ಲಿರಬೇಕಾಯಿತು. ಮೂಳೆ ಚಕ್ಕಳವಾಗಿ ಅಂತು ಬದುಕಿ ಬಂದಿದ್ದಳು. "ಆ ದಿನ ಗಂಟೆ ಗಟ್ಟಲೆ ನರಳಿದರೂ ಅತ್ತೆ ಬರಲಿಲ್ಲ. ತಾನು ಎದ್ದು ಬರುವ ಸ್ಥಿತಿಯಲ್ಲಿರಲಿಲ್ಲ." ಎಂದು ಜಯಲಕ್ಷ್ಮಿ ಅಕ್ಕಾ ತಮ್ಮನ ಮುಂದೆ ಹೇಳಿ ಅತ್ತಳು.

ಗೋದಾ ತಾಯಿಯನ್ನು ಬೈದು–"ಎಂಥಾ ಕಟುಕಳಮ್ಮ ನೀನು ! ಮನುಷ್ಯ ಚೆನ್ನಾಗಿದ್ದಾಗ ದ್ವೇಷ ಮಾಡಬೇಕು. ತೀರ ಈ ಥರ ಮಾಡೋದಾ ?" ಎಂದು ಬೈದಳು. ಸಾಕಷ್ಟು ರಕ್ತ ಸ್ರಾವ ಆಗಿತ್ತು.

ಅವಳು ನರ್ಸಿಂಗ್ ಹೋಮಿಂದ ಬಿಡುಗಡೆ ಆದ ಮೇಲೂ...... ಲಕ್ಷ್ಮಮ್ಮ–"ಹಾಸಿಗೆ ಹತ್ತಿರ ಹೋಗಿ ಅವಳ ಚಾಕರಿ ಮಾಡೋ ತಾಳ್ಮೆ ನನಗಿಲ್ಲಪ್ಪ. ಈ ಮನೆ ಅಡಿಗೆ, ಕಸ, ಮುಸುರೆ, ಬಟ್ಟೆ, ಸಾಕಾಗಿದೆ." ಎಂದರು.

ಗೋದಾಳೇ ತನ್ನ ಮನೆಯಲ್ಲಿ ಕರಿಸಿಕೊಂಡಳು. ಗಂಗಾಬಾಯಿ ಮಗಳನ್ನು ಜೀವದಂತೇ ನೋಡಿಕೊಂಡು ಕಾಪಾಡಿದಳು. ಇದೇ ಸಮಯ

ದಲ್ಲಿ ಭಾಗಿರಥಿ ಬಾಯಿಯವರ ವೈಕುಂಠ ಸಮಾರಾಧನೆ ಎಲ್ಲಾ ವಿಜೃಂಭಣೆ ಯಿಂದ ನಡೆದು, ಗೋದಾನದಿಂದ ಹಿಡಿದು ಕಾಶಿಗೆ ಹೊರಟ ಸತೀಶನ ತಂದೆ–"ನನ್ನ ಸಂಸಾರ ಬಂಧನ ಹರಿದು ಹೋಯಿತಮ್ಮ. ಶೇಷಾಯುಷ್ಯ ಕಾಶೀಲಿ ಕಲೀತೀನಿ, ಪುನಃ ನನ್ನ ನಿರೀಕ್ಷಿಸಬೇಡಿ." ಎಂದರು. ಗೋದಾ ಆರ್ತಳಾಗಿ–

"ಹೀಗೆ ಹೇಳಿದರೆ ಹೇಗೆ ಮಾವಾ. ಹಿರಿಯರ ಸೇವೆ ಮಾಡೋ ಪುಣ್ಯ ನಮಗೆ ಬೇಡವೆ ?" ಎಂದರು.

"ಅಮ್ಮ ನೀನೊಂದು ರತ್ನ. ಅವಳನ್ನ ಚೆನ್ನಾಗಿ ನೋಡ್ಕೊಂಡೆ, ನನ್ನ ಕಾಲದಲ್ಲಿ ಅವಳೇನು ಸುಖ ಪಡಲಿಲ್ಲ. ನನ್ನ ವೈರಾಗ್ಯ ಅವಳಿಗೆ ಬೇಕಾ ಗಿರಲಿಲ್ಲ. ನೀನು ಅವಳಿಗೆ ರೇಶ್ಮೆ ಸೀರೆ, ಚಿನ್ನಾ ಬಣ್ಣ......ವೀಡಿಯೋ ಕ್ಯಾಸೆಟ್ ಬೇಕಾದ್ದು ತೆಗೆಸಿಕೊಟ್ಟೆ, ಈಗಲು ಎಲ್ಲಾ ಕಾರ್ಯ ಧಾನ ಧರ್ಮ ಲೋಪವಿಲ್ಲದೇ ನಡೆಸಿದೆ. ನಾನು ಆತ್ಮಶ್ರದ್ಧ ಮಾಡಿಕೊಂಡಿದ್ದೀನಿ, ಗಯಾ ಬದರಿ ಎಲ್ಲಾ ಯಾತ್ರೆ ಆಗಿದೆ. ಈಗ ಕಾಶೀಲಿ ಉಳಿದ ದಿನ......ಕಳೀಬೇಕೂಂತ ಆಸೆ ಇದೆ. ನನಗೇನಾದರು ಆದರೆ ಸುದ್ದಿ ಮುಟ್ಟಿಸಲಿಕ್ಕೆ ಶೇಷಣ್ಣ ಕುಟುಂಬ ಅಲ್ಲಿದೆ." ಎಂದರು.

"ಪ್ರಕಾಶೂ ಮದುವೆ ನೋಡಬೇಡವೆ ಮಾವಾ ನೀವು ?" ಎಂದಳು.

"ಅಮ್ಮ ಪ್ರಪಂಚದ ವ್ಯಾಮೋಹ ನಾವಿಟ್ಕೊಂಡರೆ ಅದಕ್ಕೆ ವ್ಯಾಪ್ತಿ ಎಲ್ಲಿ ? ಪ್ರಪಂಚದ ವ್ಯಾಮೋಹ ಬಿಡ್ತಾ ಹೋಗಬೇಕು ಅರವತ್ತನೆಯ ವಯಸ್ಸಿನವರಿಗೆ ಮಗ ಮೊಮ್ಮಗ ವ್ಯಾಮೋಹ ಎಲ್ಲಾ, ಮೊಮ್ಮಗನ್ನ ಆಡಿ ಸಿದೆ. ಬಾಲಲೀಲೆ ನೋಡಿದೆ, ಮುಂಜಿ ನೋಡಿದೆ, ಸಾಕು. ನಿಮ್ಮ ಸಂಸಾರ ಚೆನ್ನಾಗಿರಲೀಂತ ದೂರದಿಂದಲೇ ಹಾರೈಸ್ತೀನಿ. ನಿಮ್ಮತ್ತೆಗೆ ಲೌಕಿ ಕದ ಆಸೆಗಳಿತ್ತು. ಪೂರೈಸಿದಿ, ಈ ನಿನ್ನ ಮಾವನಿಗೆ ಆಧ್ಯಾತ್ಮಿಕ ಆಸೆಗಳಿವೆ, ಒಪ್ಪಿಗೆ ಕೊಡಮ್ಮ." ಎಂದರು. "ಹೋಗಿ ಬನ್ನಿ ಮಾವಾ.... ನಿಮ್ಮಾಶೀರ್ವಾದ ನಮಗೆ ಯಾವಾಗಲೂ ಇರಲಿ." ಎಂದಳು.

ಅತ್ತೆ ಮಾವ ಇಬ್ಬರು ಇಲ್ಲವಾದ ಮನೆ ಬಿಕೋ ಎನ್ನುತ್ತಿತ್ತು. ನಡು ಮನೆಯ ಆ ಮಂಚ ಜಾಗ ಬದಲಿಸಿದ್ದರು. ಅಲ್ಲಿ ಜಯಲಕ್ಷ್ಮಿ ಮಲಗಿ ರುತ್ತಿದ್ದಳು. ಹೇಗೊ ಕೋಲು ಹಿಡಿದುಕೊಂಡು ಬಚ್ಚಲ ಮನೆ, ಹಿತ್ತಿಲು

ಎಡ ತಾಕುತ್ತಿದ್ದಳು. ಸಧ್ಯದ ಅಡಿಗೆ ಹಾಲು ಹಣ್ಣು, ಟಾನಿಕ್ ಅವಳಿಗೆ ಆರೈಕೆ ನಡೆಯುತ್ತ ಇತ್ತು. ಒಂದು ದಿನ ಒಂದು ಡಜನ್ ಮೂಸಂಬಿ, ಸೇಬು ತಂದ ಕೃಷ್ಣಾ–"ಈಗ ಹೇಗಿದ್ದಿ ಜಯಾ ?" ಎಂದ.

"ಹೇಗೋ ತಾರಾಡಿಕೊಂಡು ಓಡಾಡ್ತೀನಿ." ಎಂದಳು.

"ಬರೋವಾರದೊಳಗೆ ಅಲ್ಲಿ ಬಂದ್ಬಿಡು ಜಯಾ...ನನಗೆ ಒಬ್ಬನೇ ಬೇಜಾರಾಗಿದೆ." ಎಂದ. ಅವನ ಕಂಗಳಲ್ಲಿ.... ಕುಣಿಯುತ್ತಿದ್ದ ಕಾಮಾ ನೋಡಿ ಅವಳು ಜುಗುಪ್ಸೆಗೊಂಡಳು.

"ನಾನು ಈಗ ಒಂದು ಮೂಳೆ ಚಕ್ಕಳದ ಗೊಂಬೆ, ನೀವು ಹಿಂಡಿ ಹಿಪ್ಪೆ ಮಾಡೋದಿಕ್ಕೆ ನಿಮ್ಮ ಕೈಗೆ ಸಿಗಬೇಕಾದ್ರೆ ಇನ್ನು ನಾಕು ತಿಂಗಳಾದರು ಆಗಬೇಕು." ಎಂದು... ಕಟುವಾಗಿ ನುಡಿದಳು. ಅವನು ಕೊಂಚ ಅವಮಾನ ದಿಂದ.

"ಏನು ಹೀಗೆ ಮಾತಾಡ್ತಿ ಜಯಾ ?" ಎಂದ.

"ಅತಿಯಾದರೆ ಅಮೃತವೂ ವಿಷ. ಇನ್ನು ಮುಂದಾದರು ನೀವು ಹಿತಮಿತವಾದ ಸುಂದರ ದಾಂಪತ್ಯದ ಪಾಠ ಕಲಿಯಿರಿ."

ಕೃಷ್ಣ ಕೋಪಗೊಂಡು ಎದ್ದು ಹೋದ. ಸವಿಯಾದ ಸಿಹಿ ಜಾಮೂನ್ ಸವಿಯುತ್ತಿರುವಾಗಲೇ ಅದು ಕೈ ಜಾರಿ ಮಣ್ಣಲ್ಲಿ ಬಿದ್ದಂತೇ ಆಗಿತ್ತು ಕೃಷ್ಣನಿಗೆ. ದಾಂಪತ್ಯದ ಸಿಹಿ ಯಥೇಚ್ಚವಾಗಿ ಸವಿಯ ಬೇಕೆನ್ನು ವಾಗಲೇ ಅವಳಿಗೆ ಹೀಗಾಗಬೇಕೆ ? ಯಾವ ರೋಗ, ರುಜಿನದ ಭಯವಿಲ್ಲ. ದುಡ್ಡು ಕಾಸಿನ ಗೊಂದಲವಿಲ್ಲ. ಮುದ್ದಾದ ಹುಡುಗಿಯೊಬ್ಬಳು ಕೈಗೆ ಸಿಕ್ಕಳು. ಆನಂದವಾಗಿ ಅವಳ ಜೊತೆ ವಿಹರಿಸುವ ಎಂದರೇ ನಾಲ್ಕು ತಿಂಗಳಲ್ಲಿ ಹೀಗಾಗಬೇಕೆ ?

ಆ ದಿನ ಹಣ್ಣು ಕೊಳ್ಳಲು ಹೋಗಿದ್ದ ಕೃಷ್ಣ. ಅರ್ಧಕೇಜಿ ಸೇಬು, ಆರು ಮೂಸಂಬಿ ಕೊಡಿ. ಎಂದು ತೂಕಕ್ಕೆ ಹಾಕಲು ತಾನೇ ಹಣ್ಣು ಆರಿ ಸುತ್ತಿದ್ದ. ಯಾರೋ ಪಕ್ಕಕ್ಕೆ ನಿಂತಂತಾಯಿತು

"ನನಗೆ ಹಣ್ಣು ಕೊಡಿಸಲ್ವಾ...?" ಎಂಬ ಕೋಮಲವಾದ ಸ್ವರ. ಪಕ್ಕಕ್ಕೆ ತಿರುಗಿ ನೋಡಿದ. ಹಸಿರು ನೈಲೆಕ್ಸ್ ಸೀರೆ ಉಟ್ಟು, ಉದ್ದ

ತೋಳಿನ ಕೆಂಪು ಸಿಲ್ಕಿನ ಕುಪ್ಪುಸ ತೊಟ್ಟ ಗೌರವರ್ಣದ ನೀಳಾಕಾಯದ ಈ ಚೆಲುವೆ ಯಾರು ? ಪುಟ್ಟ ಪುಟ್ಟವಾಗಿ ಹೆಣೆದ ಎರಡು ಕುಚ್ಚಾದ ಜಡೆ. ಆಕೆಯ ದುಂಡು ಮೊಗಕ್ಕೆ ಅಂದಾ ನೀಡಿತ್ತು.

ಕೆಂಪು ಸೇಬಿನಂತೇ ದುಂಡಾದ ಸೇಬುಗಳು, ಆ ಕಪ್ಪಾದ ಮಿಂಚು ಗಂಗನ್ನು ಎಲ್ಲೋ ನೋಡಿದ್ದೇನೆ ಎನಿಸಿತು.

"ಗುರುತು ಸಿಗಲಿಲ್ಲವಾ ಮಿಸ್ಟರ್ ಕೃಷ್ಣ. ನರ್ಸಿಂಗ್ ಹೋಮ್ ನಲ್ಲಿ ನಿಮ್ಮ ಮಿಸೆಸನ್ನ ನೋಡಿ ಕೊಳ್ತ ಇದ್ದನಲ್ಲ. ಸ್ಪೆಷಲ್ ನರ್ಸ್ ಮೀರ." ಎಂದಳು.

"ಓ ಮೈ ಗಾಡ್ ! ನೀವಾ ಗುರುತು ಸಿಗಲಿಲ್ಲಾ......" ಎಂದ.

ಮೊಳಕಾಲು ಮುಚ್ಚುವ ಬಿಳಿ ಸ್ಕರ್ಟ್. ಬಿಳಿಯ ಅರ್ಧ ತೋಳಿನ ಅಂಗಿ......ತಲೆಗೆ ಧರಿಸುತ್ತಿದ್ದ ಹುಡ್......ಅಲ್ಲಿನ ರೂಪಾ ಇಲ್ಲ ?

"ಸಿಸ್ಟರ್ ಹೇಗಿದ್ದಾರೆ ನಮ್ಮೊಕೆ ?" ಕಂಡೀಷನ್ ಹೇಗಿದೆ ?" ಎಂದು ಆತಂಕದಿಂದ ಕೇಳುತ್ತಿದ್ದ ಆ ದಿನಗಳಲ್ಲಿ ಅವಳ ರೂಪದ ಬಗ್ಗೆ ಗಮನ ವಿರಲಿಲ್ಲ.

ಅವಳಿಗೂ ಅರ್ಧ ಡಜನ್ ಸೇಬು. ಅರ್ಧ ಕೇಜಿ ದ್ರಾಕ್ಷಿ ಕಟ್ಟಿಸಿದ. "ಅಯ್ಯೋ ! ಏನ್ರಿ ? ತಮಾಶೆಗೆ ಕೇಳಿದ್ರೆ ಹಣ್ಣು ಕಟ್ಟಿಸೇ ಬಿಟ್ರಿ. ಹ್ಲಾ ! ಒಂದು ಕಂಡೀಷನ್ ಮೇಲೆ ಹಣ್ಣು ತಗೋತೀನಿ." ವೈಯಾರವಾಗಿ ಕಣ್ಣು ಮಿಟುಕಿಸಿದಳು.

"ನಿಮ್ಮ ಯಾವ ಕಂಡೀಷನ್ ಬೇಕಾದರು ನೆರವೇರಿಸ್ತೀನಿ. ಹಣ್ಣು ತಗೊಳ್ಳಿ." ಅವಳ ಕೈ ಸ್ಪರ್ಶಿಸುತ್ತ ಹಣ್ಣಿನ ಪಟ್ನ ತುರುಕಿದ. ಇಬ್ಬರು ಹೊರಗೆ ಬಂದರು.

"ಏನು ಹೇಳಿ ನಿಮ್ಮ ಕಂಡೀಷನ್ !" ಎಂದ.

"ಸ್ಟೇಷನ್ ರೋಡಲ್ಲಿ ನಮ್ಮನೆ ಇದೆ. ಮನೆಗೆ ಬಂದು ಕಾಫಿ ಕುಡೀ ಬೇಕು. ಹಾಗಿದ್ರೆ ಮಾತ್ರ ಹಣ್ಣು ತಗೋತೀನಿ." ಎಂದಳು. ತನ್ನ ಮನೆ ಯಿಂದ ಮಾರ್ಕೆಟಿಗೆ ನಡೆದೇ ಬಂದಿದ್ದ ಕೃಷ್ಣ. ಅರ್ಧ ಮೈಲು ದೂರ, ಆದರೆ ಸ್ಟೇಷನ್ ರೋಡ್ ಮಾರ್ಕೆಟಿಂದ ಎರಡೂವರೆ ಮೈಲು, ರಿಕ್ಷಾ ಮಾಡಿದ, ಇಪ್ಪತ್ತು ರೂ. ಉಳಿತಾಯವಾಯಿತೆಂದು ಕೊಂ

ರಿಕ್ಷಾ ಅವಳು ಹೇಳಿದ ಮನೆ ಮುಂದೆ ನಿಂತಿತು. ಪುಟ್ಟ ಕಾಂಪೌಂಡಿನ ಮುಂದಿದ್ದ ಗೇಟು ತೆಗೆಯುತ್ತಿದ್ದಂತೆ ಅವನು ರಿಕ್ಷಾಗೆ ಇಪ್ಪತ್ತು ರೂ. ಕೊಟ್ಟು ಮುಂದೆ ಬಂದ. ಇಬ್ಬರು ಒಳಗೆ ಬಂದರು. ಹಜಾರದಲ್ಲಿ ಟಿ.ವಿ. ನೋಡುತ್ತಿದ್ದ ತನ್ನ ತಾಯಿಯನ್ನು ಪರಿಚಯಿಸಿ, "ಇವರು ನಮ್ಮ ಮಮ್ಮಿ ಡ್ಯಾಡಿ ಮಿಲಿಟರಿ ಸರ್ವಿಸ್‌ನಲ್ಲಿದ್ದಾರೆ. ವರ್ಷಕ್ಕೊಮ್ಮೆ ಬಂದು ತಿಂಗಳಿದ್ದು ಹೋಗ್ತಾರೆ" ಎಂದಳು.

"ಬೇಬಿ ನಂಗೆ ಡಿಸ್ಟರ್ಬ್ ಆಗತ್ತೆ" ಎಂದರಾಕೆ.

"ನನ್ನ ರೂಮಿಗೆ ಬನ್ನಿ ಕೃಷ್ಣ ಅಮ್ಮನಿಗೆ ಬಹಳ ಬಹಳ ಟಿ.ವಿ. ಹುಚ್ಚು" ಎಂದು ವರಾಂಡದಲ್ಲಿದ್ದ ಕೋಣೆಗೆ ಕರೆದೊಯ್ದಳು. ಆ ಕೋಣೆಯಲ್ಲೊಂದು ಡಬ್ಬಲ್ ಕಾಟ್, "ಕುರ್ಚಿ ಇಲ್ಲ ಸಾರಿ, ಮಂಚದ ಮೇಲೆ ಕೂಡಿ" ಎಂದಳು. ಅವನು ಮಂತ್ರ ಮುಗ್ಧನಾಗಿ ಕೂತ.

"ನನಗೆ ಸೀರೆ ಅಲರ್ಜಿ ನೈಟಿ ಹಾಕಿಕೊಂಡು ಬರ್ತೀನಿ" ಎಂದು ಒಳಗೆ ನಡೆದಳು. ಅವಳು ಕಾಫಿ ಲೋಟ ಹಿಡಿದು ಬಂದದ್ದು ಹತ್ತು ನಿಮಿಷದ ನಂತರ.

ಮೊಳಕಾಲ ಮೇಲಿನ ಸ್ಲೀವ್‌ಲೆಸ್ ನೈಟಿಯಲ್ಲಿ ಉಬ್ಬಿದ ಎದೆಗಳು ಎದ್ದು ಕಾಣುತ್ತಿದ್ದವು. ತೋಳುಗಳು, ತೊಡೆಗಳು ಎದ್ದು ಕಾಣುತ್ತಿದ್ದವು.

"ಈ ಡ್ರೆಸ್ ಹಾಕ್ಕೊಂಡ್ರೆ ಮಮ್ಮಿ ಬೈತಾಳೆ" ಅವನ ಭುಜದ ಸೊಂಕಿನಲ್ಲಿ ಕುಳಿತಳು. "ಏಕೆ......?" ಎಂದ.

"ತುಂಬಾ ಸೆಕ್ಸಿ ಕಾಣ್ತೀನಂತೇ..... ಮೋನಿ ಈ ಡ್ರೆಸ್ ಹಾಕ್ದಾಗ ನನ್ನ ತುಂಬಾ ಕಿಸ್ ಮಾಡ್ತಿದ್ದ" ಎಂದಳು.

"ಮೋನಿ ಯಾರು ?" ಕೃಷ್ಣ ಕೇಳಿದ.

"ತುಂಬಾ ತುಂಟ. ನನ್ನ ಬಾಯ್ ಫ್ರೆಂಡ್ ದುಬೈಗೆ ಹಾರಿದ. ಅವನಿಗೆ ದುಡ್ಡು ಸಂಪಾದಿಸೋ ಹುಚ್ಚು. ನಾನು ಅವತ್ತಿನಿಂದ ಒಂಟಿ. ಭಗ್ನ ಪ್ರೇಮಿ. ಕಡೇಪಕ್ಷ ಮೋನಿ ಹೋಲಿಕೆ ಇರೋ ಹುಡುಗ ಆದರೂ ಸಿಗಬಾರದೆ ಅಂತ ತಪಸು ಮಾಡ್ತಾ ಇದ್ದೆ. ದೇವರು ದೊಡ್ಡೋನು ನೀವು ಸೇಮ್ ನಮ್ಮ ಮೋನಿ [illegible]" ಎಂದಳು.

"ನನ್ನ ಪ್ರೀತಿಸ್ತಿಯ್ಯಾ ಮೀರಾ ?" ಕಾಫಿ ಕುಡಿದು ಲೋಟ ಕೆಳಗಿಟ್ಟು ಕೇಳಿದ.

ಮೀರಾ ಕಣ್ಣು ಮಿಟುಕಿಸಿ, "ಪ್ರೀತಿಸದ ಹುಡುಗನ ಮುಂದೆ ಇಂಥಾ ಡ್ರೆಸ್ ಹಾಕ್ಕೋತಾರಾ ?" ಎಂದು ಹಾಸಿಗೆ ಮೇಲೆ ಉರುಳಿದಳು.

ಅವಳ ಆ ಭಂಗಿ, ಅಸ್ತ್ಯವಸ್ತ ಸರಿದ ಉಡುಪು ನೋಡಿ ಕೃಷ್ಣ, "ಮೀರಾ......" ಎಂದ.

"ಬಾಗಿಲು ಹಾಕಿ ಬನ್ನಿ ಕೃಷ್ಣ ತುಂಬಾ ಟೈಮ್‌ವೇಸ್ಟ್ ಮಾಡ್ತಿದ್ದೀರಿ" ಎಂದಳು.

ಕೃಷ್ಣ ಎದ್ದು ಹೋಗಿ ಬಾಗಿಲು ಹಾಕಿ ಬಂದವನು ಮುಂದಿನ ಒಂದೊಂದು ಕ್ಷಣವೂ ಸಾರ್ಥಕ ಪಡಿಸಿಕೊಂಡ. ಮೀರಾ ಅವನಿಗೆ ಮೋಡಿ ಮಾಡಿದ್ದಳು.

* * * *

ಹಣ್ಣು ಬಿಡಿಸಿ ಕೊಡಲು ಬಂದ ಗಂಗುಬಾಯಿ......ಮಗಳಿಗೆ, "ಹಣ್ಣೀ ಆಗ್ಹೋಗಿದೆ ಜಯಾ ...ನಿನ್ನ ಗಂಡ ನಿನ್ನೆ ಬರಲೇ ಇಲ್ಲವಲ್ಲೇ" ಎಂದರು.

"ಬರಿ ಟಾನಿಕ್ ಕೊಡಮ್ಮ ಸಾಕು, ಹಣ್ಣುಗಿಣ್ಣು ಎಷ್ಟು ದಿನ ?" ಎಂದಳು. ಆದರೆ ಮುಂದಿನ ಎರಡು ದಿನ ಕಳೆದರೂ ಗಂಡಾ ಬರಲಿಲ್ಲ..

ಆ ದಿನ ಗೋದಾ ಊಟಕ್ಕೆ ಬಂದಾಗ, "ಅಕ್ಕ ನಿಮ್ಮ ತಮ್ಮ ಅಂಗಡಿಗೆ ಬರ್ತಿದ್ದಾರಾ ?" ಎಂದಳು.

"ಹೂಂ ಬರ್ತಿದ್ದಾನೆ.....ಏಕೆ ?" ಎಂದಳು ಗೋದಾ.

"ಮೂರು ದಿನ ಆಯ್ತು ಇಲ್ಲಿಗೆ ಬಂದು" ಎಂದಳು.

"ಹೇಳ್ತೀನಿ, ಏನೋ ಒಂಥರ ಹುಡುಗ" ಎಂದಳು ಗೋದಾ.

ಆ ದಿನ ಸಂಜೆ ಬರಿಗೈಯಲ್ಲಿ ಬಂದ ಕೊಂಚ ಒರಟಾಗಿ,

"ಏನು ಅಕ್ಕನ ಕೈಲಿ ಹೇಳಿ ಕಳಿಸಿದೆಯಂತೆ" ಎಂದ.

"ಏಕೆ ಮೂರು ದಿನದಿಂದ ಬರಲಿಲ್ಲ ?" ಎಂದಳು ಆರ್ತಳಾಗಿ.

"ಏನು ಮಾಡಬೇಕು ? ಇಲ್ಲಿ ಬಂದು ?" ಎಂದ ಒರಟಾಗಿ.

"ಹೀಗೆಲ್ಲಾ ಮಾತಾಡಿದರೆ ಹೇಗೆ ಅಂದರೇ ? ನಾನು ಆರೋಗ್ಯ ಸರಿ ಇದ್ದಾಗ ನಿಮ್ಮ ಎಲ್ಲಾ ಅಪೇಕ್ಷೆ ತೀರಿಸಿಲಿಲ್ಲವಾ ?"

"ನನ್ನ ಕೈಲಿ ಹಣವಿಲ್ಲ ನಿಮ್ಮಪ್ಪನ ಕೈಲಿ ಹಣ್ಣು–ಹಂಪಲು ತರಿಸಿಕೊ" ಎಂದ.

ಜಯಲಕ್ಷ್ಮಿ ಕಂಬನಿದುಂಬಿ, "ನನಗೆ ಹಣ್ಣು, ಟಾನಿಕ್ ಏನು ಬೇಡಾ ನಿಮ್ಮ ಪ್ರೀತಿ ಒಂದು ನನಗೆ ಸಾಕು" ಎಂದಳು.

"ಅದೊಂದು ಧಂಡಿಯಾಗಿದೆ ಬೇಗ ವಾಸಿ ಮಾಡಿಕೊಂಡು ಮನೆಗೆ ಬಾ ....." ಎಂದ.

ಒಂದು ದಿನ ಗೋದಾಳ ತಂದೆ ಬಂದು, "ರಾತ್ರಿ ಕೃಷ್ಣ ಗೊಡಾನಿನಲ್ಲಿ ಬಂದು ಮಲಗ್ತಾನೇನಮ್ಮ ?" ಎಂದರು.

ಗೋದಾ ಆಶ್ಚರಿಯಿಂದ, "ಇಲ್ಲವಲ್ಲ !" ಎಂದಳು.

ರಾತ್ರಿ ಅಂಗಡಿಯಿಂದ ಬಂದು ಊಟ ಮಾಡಿ ಹೊರಗೆ ಹೋಗಿ ಬಿಡ್ತಾನೆ. ಬೆಳಿಗ್ಗೆ ನಾಲ್ಕರ ಹೊತ್ತಿಗೆ, ಐದರ ಮೇಲೆ ಬರ್‍ತಾನೆ" ಎಂದರು.

ಗೋದಾ ಚಿಂತೆಯಿಂದ, "ಏನೇ ಆಗಲೀ .....ಈ ವಿಷಯ ಜಾಸ್ತಿ ಬಾಯಿ ಬಿಡಬೇಡಿ. ಪಾಪ ಆ ಹುಡುಗಿ ಇನ್ನು ಈಗ ಚೇತರಿಸಿಕೊಳ್ತಿದ್ದಾಳೆ" ಎಂದಳು.

ಮಾರನೆಯ ದಿನ ಪೋಸ್ಟ್ ಆಫೀಸಿಗೆ ಯಾವುದೋ ದುಡ್ಡು ತರುವುದಿತ್ತು, "ನನ್ನ ತಮ್ಮನ ಅಕೌಂಟಲ್ಲಿ ಹಣ ಎಷ್ಟಿದೆ ?" ಎಂದು ತನ್ನ ಪರಿಚಿತ ಗೆಳತಿಯೇ ಆದ ಆ ಉದ್ಯೋಗಿಯಲ್ಲಿ ಕೇಳಿದಳು. ಆಕೆ ತನ್ನ ಕಡತ ಪರೀಕ್ಷಿಸಿ ಒಂದು ಪೈಸೇನೂ ಇಲ್ಲ. ಮದುವೆ ಆದ ಹೊಸತರಲ್ಲಿ ಆಗ ಹದಿನೆಂಟು ಸಾವಿರ ತೆಗೆದಿದ್ದರು. ಮೊನ್ನೆ ಎಂಟು ದಿನದ ಹಿಂದೆ ಇಪ್ಪತ್ತು ಸಾವಿರ ತೆಗೆದರು. ಅದಕ್ಕು ಹಿಂದೆ ಇಪ್ಪತ್ತು ದಿನದ ಹಿಂದೆ ಎರಡು ಸಾವಿರ ತೆಗೆದಿದ್ದರು" ಎಂದಳು. ತಾನು ಇಡಿಸಿದ್ದ ನಲವತ್ತು ಸಾವಿರವೂ ಖರ್ಚಾಗಿದೆ" ಎಂದಾಗ ಅವಳಿಗೆ ವ್ಯಥೆಯಾಯಿತು. ಮದುವೆಯಾದ ಹೊಸತರಲ್ಲಿ ಅವಳಿಗೆ ಒಳೆಮಾಡಿಸಿ, ಕೆಲವು ಸೀರೆ ಗೀರೆ ತೆಗೆದುಕೊಟ್ಟಿದ್ದ. ಆದರೆ ಈಗ ? ಎರಡು ಸಾವಿರ ಆಸ್ಪತ್ರೆ ಖರ್ಚಿರಬಹುದು. ಆದರೆ ಎಂಟು ದಿನದ ಹಿಂದೆ ಇಪ್ಪತ್ತು ಸಾವಿರ ಏಕೆ ತೆಗೆದ. ಜಯಲಕ್ಷ್ಮಿ ಹದಿನೈದು ದಿನದಿಂದ ತವ್ಮುಲ್ಲಿ

ದ್ದಾಳೆ. ಇತ್ತೀಚೆಗೆ ಎಂಟು ದಿನದಿಂದ ಅವಳಿಗೆ ಹಣ್ಣು ತರುವುದು ಸಹ ಬಿಟ್ಟಿದ್ದಾನೆ.

ಏನಾದರೂ ಕೆಟ್ಟ ಚಾಳಿ ಕಲಿತಿರಬಹುದೆ ? ಎನಿಸಿತು. ಆದರೆ ಹೇಗೆ ಪತ್ತೆ ಮಾಡುವುದು ? ಯೋಚಿಸಿ ಸಾಕಾಯಿತು.

"ಜಯಂಗೆ ಏನಾದರೂ ಸರಗಿರ ಮಾಡಿಸ್ಲಿಕ್ಕೆ ಹಾಕಿದೆಯಾ ?" ಆ ದಿನ ಅಂಗಡಿಯಲ್ಲಿ ಕೂತಾಗ ಕೇಳಿದಳು.

"ಅವಳಿಗೆ ಏಕೆ ಸರಾ ?" ಎಂದ.

ಗೋದಾ ನಯವಾಗಿ, "ಹಾಗಾದರೆ ಇಪ್ಪತ್ತು ಸಾವಿರ ಏಕೆ ತೆಗಿದಿ ?" ಎಂದಳು.

ಕೃಷ್ಣ ಒರಟಾಗಿ, "ಅವೆಲ್ಲಾ ನನ್ನ ಸ್ವಂತ ವಿಷಯ ನೋಡಕ್ಕ. ನೀನು ತಿಂಗಳಿಗೆ ಐದು ಸಾವಿರ ಸ್ಥಳಿಯ ಚಿಟ್‌ಫಂಡ್‌ಗಳಿಗೆ ಕಟ್ತಿ. ಎರಡು ಸಾವಿರ ರಿಡರಿಂಗ್ ಡಿಪಾಸಿಟ್ ಕಟ್ತಿ. ಈ ಅಂಗಡಿಯಿಂದ ತಿಂಗಳಿಗೆ ಹನ್ನೆರಡು ಸಾವಿರದವರೆಗೆ ಆದಾಯ ಇದೆ. ನನಗೆ ಐದು ಸಾವಿರ ಸಂಬಳ ಕೊಡು ಅಂದರೆ ಕೊಡ್ತಿಯ್ಯಾ ?" ಎಂದ.

"ಐದು ಸಾವಿರ ಎಲ್ಲಾದರೂ ಸಿಗೋ ಹಾಗಿದ್ರೆ ಈ ಅಂಗಡಿ ಬಿಟ್ಟು ಬಿಡು" ಎಂದಳು ನಿಷ್ಠೂರವಾಗಿ.

"ಬಿಡೋ ಕಾಲ ಬಂದಾಗ ಬಿಡ್ತೀನೇಳು" ಎಂದ.

ಗೋದಾಳಿಗೆ ಅವನ ಮಾತಿನ ಧಾಟಿ ಅಹಂಕಾರ ಎಲ್ಲಾ ಆಶ್ಚರ್ಯವಾಯಿತು. ಒಂದು ತಿಂಗಳು ಗೋದಾಳ ಮನೆಯಲ್ಲಿ ಇದ್ದು ತಾಯಿಯ ಕೈ ಆರೈಕೆ ಪಡೆದ ಜಯಲಕ್ಷ್ಮಿ ಪುನಃ ಗಂಡನ ಮನೆಗೆ ಬಂದಳು.

ಇನ್ನು ತುಂಬಾ ನಿಶ್ಶಕ್ತಿ ಇತ್ತು. ಗೋದಾಳೇ ಆ ದಿನ ಬಂದು ತಾಯಿಗೆ, "ಅವಳಿಗಿನ್ನು ನಿಶ್ಶಕ್ತಿ ಇದೆ. ಸ್ವಲ್ಪ ಚೆನ್ನಾಗಿ ನೋಡಿಕೋ ಅಮ್ಮಾ !" ಎಂದಳು.

ಲಕ್ಷ್ಮಮ್ಮ ಸಿಡುಕುತ್ತ, "ಅವಳು ಗಟ್ಟಿಮುಟ್ಟ ಇದ್ದಾಗ ತಾನೇ ಯಾವ ಕೆಲಸ ಮಾಡಿದ್ದಳು ?" ಎಂದರು.

ಆ ರಾತ್ರಿ ಬಂದ ಕೃಷ್ಣ, "ಅಕ್ಕನ ಕಾಟಾ ಜೋರಾಗಿದೆ ಜಯಾ... ? ನಮ್ಮದಾಪ ಸ್ವತಂತ್ರ ಬದುಕು ನಮಗೆ ಬೇಡ್ವಾ ?" ಎಂದ.

ಜಯಲಕ್ಷ್ಮಿ ಅನುನಯದಿಂದ, "ನಿಮ್ಮಕ್ಕ ದೇವತೆ, ನಮ್ಮ ತಂದೆ, ತಾಯಿಗೂ ಬದುಕು ಕೊಟ್ಟಿದ್ದಾರೆ. ಇಂಥ ಕಷ್ಟ ಕಾರ್ಪಣ್ಯದಲ್ಲಿ ನನ್ಗೊಂದು ತವರು ಮನೆ, ತಾಯಿ ಆರೈಕೆ ಸಿಕ್ಕಿದ್ದು ಅವರ ಆ ಮನೆಯಲ್ಲೀ" ಎಂದಳು.

ಕೃಷ್ಣ ತಾತ್ಸರದಿಂದ, "ಅವಳಿಗೆ ದುಡೀಲಿಕ್ಕೆ ಜನಬೇಕು. ಕಾಳು ಹಾಕಿ ಹಕ್ಕೀನ್ನ ಹಿಡಿಯೋ ಹಾಗೆ ಜನನ್ನ ಹಿಡೀತಾಳೆ" ಎಂದ. ಅನಂತರ, "ನಾನು ಸ್ವಂತ ಅಂಗಡಿ ಹಾಕ್ತೀನಿ ನೀನು ಸಹಾಯ ಮಾಡಬೇಕು" ಎಂದ.

"ನಾನು ಕಡು–ಬಡವರ ಮಗಳು ನಾನೇನು ಸಹಾಯ ಮಾಡಬಲ್ಲೆ ?" ಎಂದಳು.

"ನಿಮ್ಮಪ್ಪನ ಮನೆ ಸೊತ್ತೇನು ಬೇಡಾ..... ನಾನು ನಿನಗೆ ಕೊಡಸಿರೊ ಮಾಂಗಲ್ಯ ಸರ, ಬಳೆಗಳು ಕೊಟ್ಟರು, ದಾರದಲ್ಲಿ ಪೋಣಿಸಿ, ಕರಿಮಣಿ, ತಾಳಿ ಹಾಕಿಕೊ, ಅಂಗಡೀಲಿ ಬಂದು ನನಗೆ ಒಳ್ಳೆ ಕಾಲ ಬಂದ್ರೆ ಎಲ್ಲಾ ಮತ್ತೆ ಮಾಡಿಸ್ತೀನಿ" ಎಂದ.

ಜಯಲಕ್ಷ್ಮಿ ಬೇಸರದಿಂದ. "ಇರೋದು ಇನು ಚಿನ್ನ. ಮಾಂಗಲ್ಯ ಸರದ ಸಾಲ ಇನ್ನು ನಿಮ್ಮಕ್ಕನಿಗೆ ತೀರಿಸ್ತಾ ಇದ್ದೀರಿ, ಈಗಲೇ ಅಂಗಡಿ ಹೇಗೆ ಬಿಡ್ತೀರಿ ?" ಎಂದಳು.

ಕೃಷ್ಣ ಉತ್ತರಿಸಿ, "ಸಧ್ಯಕ್ಕೆ ಅಕ್ಕನ ಅಂಗಡಿ ಬಿಡಲ್ಲ. ನಾನು ಹಾಕೋ ಅಂಗಡಿ ನನ್ನ ಗೆಳೆಯ ನೋಡಿಕೋತಾ ಇದ್ದಾನೆ. ಅವನಿಗೆ ತಿಂಗಳಿಗೆ ಐನೂರು ರೂ. ಸಂಬಳ ಕೊಡ್ತೀನಿ. ಹಾಗೆ ಕೊಟ್ಟರೂ ನನಗೆ ಸಾವಿರ ರೂ. ಗಳವರೆಗೆ ಆದಾಯ ಇದೆ. ಎರಡು ವರ್ಷ ಅದೆಲ್ಲಾ ಬಂಡವಾಳದ ಮೇಲೆ ಹಾಕ್ಕೋತೀನಿ. ಈ ಮಾಂಗಲ್ಯದ ಸರದ ಸಾಲ ತೀರಿದ ಮೇಲೆ ಅಂದರೆ ಒಂದೂವರೆ ವರ್ಷದ ಮೇಲೆ ಈ ಅಂಗಡಿ ಬಿಡೋದು" ಎಂದ.

ಜಯಲಕ್ಷ್ಮಿ ಪ್ರತಿಭಟಿಸದೇ ಸರ, ಬಳೆ ಕೊಟ್ಟಳು. ಪ್ರತಿದಿನ ರಾತ್ರಿ ಒಂಭತ್ತು ಗಂಟೆಗೆ ಅಕ್ಕನ ಅಂಗಡಿಯಿಂದ ಬಂದು ಊಟ ಮಾಡಿ ಹೊರಗೆ ಹೊರಟು ಬಿಡುತ್ತಿದ್ದ.

"ನಮ್ಮ ಅಂಗಡೀಲಿ ಸಾಮಾನು ತುಂಬಿರತ್ತೆ. ಬೇರೆ ಕಾವಲುಗಾರ ಇಲ್ಲ. ವಾಚ್‌ಮನ್ ಇಟ್ಟರೆ ಸಂಬಳ ಕೊಡೋರ್ಯಾರು ? ನಾನು ನನ್ನ

ಗೆಳೆಯ ಅಂಗಡೀಲಿ ಮಲಗ್ತೀವಿ. ನಿನಗು ಒಂದು ಮೂರು ತಿಂಗಳು ಫುಲ್ ರೆಸ್ಟ್ ಬೇಕಲ್ಲ" ಎಂದ. ಪ್ರತಿದಿನ ರಾತ್ರಿ ಮಗ ಹೊರಗೆ ಹೋಗಿ ಬೆಳಿಗ್ಗೆ ಆರು ಗಂಟೆಗೆ ಬರುವುದು. ಬಂದ ಮೇಲೂ ಸ್ನಾನ ಮಾಡಿ ಕಾಫಿ ಕುಡಿದು ಅಂಗಡಿಗೆ ಹೋಗಿ ಬಿಡುತ್ತಿದ್ದ. ಮಧ್ಯಾಹ್ನ ಬಂದು ಊಟ ಮಾಡಿ ಹಜಾರದಲ್ಲಿ ಮಲಗಿರುತ್ತಿದ್ದ. ಮಗನಿಗೆ ಸೊಸೆಯ ಮೇಲೆ ಮೊದಲಿನ ಮೋಹ ಇಲ್ಲ......ಎಂಬುದರಿವಾದೊಡನೆ ತಾಯಿ ಲಕ್ಷ್ಮಮ್ಮ ಮೆಲ್ಲನೆ ಬಾಲ ಬಿಚ್ಚಿದರು.

"ಸ್ವಲ್ಪ ಪಾತ್ರೆ ತೊಳೆಯೇ ಕಸ ಗುಡಿಸೇ .. ಎಂದು ಒಂದೊಂದೇ ಕೆಲಸ ಅಂಟಿಸತೊಡಗಿದರು. ಒಂದು ತಿಂಗಳಾದ ಮೇಲೆ ಜಯಲಕ್ಷ್ಮಿಯ ಬಿಚ್ಚಿಟ್ಟ ರಿಂಗ್ಸ್ ಕಾಣಿಸದಾದವು."ಎರಕೊಳ್ಳುವಾಗ ಬಿಚ್ಚಿಟ್ಟಿದ್ದೆ ಎಲ್ಲಿ ಹೋಯಿತು?" ಚಡಪಡಿಸಿದಳು.

"ಯಾರಿಗೆ ಗೊತ್ತು ? ನಿಮ್ಮಪ್ಪ ಅಮ್ಮನಿಗೆ ಒಳಗಿಂದ ಒಳಗೆ ಕೊಟ್ಟು ನಾಟಕಾ ಆಡ್ತಿದ್ದಿಯ್ಯಾ ?" ಎಂದು ಅವನೇ ರೇಗಾಡಿದ. ಪೆಟ್ಟಿಗೆಯಲ್ಲಿದ್ದ ನಾಲ್ಕಾರು ಒಳ್ಳೆಯ ಸೀರೆಗಳು ಮಾಯಾ ಆದಾಗ ಜಯಲಕ್ಷ್ಮಿ ಕಂಗೆಟ್ಟಳು.

"ನಿಮ್ಮ ಅಂಗಡಿ ಹೇಗೆ ನಡೀತಿದೆ ? ಇನ್ನೂ ಎರಡು ವರ್ಷ ಏನು ತೆಗೆಯೋ ಹಾಗಿಲ್ಲ. ಬಂದ ಲಾಭವೆಲ್ಲಾ... ಬಂಡವಾಳಕ್ಕೆ ಸುರೀಬೇಕು" ಎಂದ.

"ಅಂಗಡಿ ವಿಷಯ ನಿಮ್ಮ ತಂದೆ ತಾಯಿಗಳಿಂದ ಅಕ್ಕನಿಂದ ಏಕೆ ಮುಚ್ಚಿಟ್ಟಿದ್ದೀರಿ ? ದಿನಾ ರಾತ್ರಿ ನೀವು ಎಲ್ಲಿಗೆ ಹೋಗ್ತೀರಾಂತ ಅತ್ತೆ ಕೇಳಿದರು ? ನಾನು ಏನು ಹೇಳಲಿ ?" ಎಂದಳು.

"ಅವರ್‍ಯಾರೂ ನನ್ನವರಲ್ಲ ನೀನೊಬ್ಬಳು ನನ್ನವಳು. ನಿನಗೊಬ್ಬಳಿಗೆ ನಿಜ ಗೊತ್ತಿದ್ದರೆ ಸಾಕು" ಎಂದ.

"ಸರಿ ಮತ್ತೆ ನಿಜ ಹೇಳಿ ಬಿಡಿ ಯಾವೋಳು ಆ ಲೌಡಿ ? ನನ್ನ ಸೀರೆಗಳಿಂದ ಹಿಡಿದುಕೊಟ್ಟಿದ್ದಾರೆ ?" ಎಂದಳು.

"ಹಾಗೆಲ್ಲಾ ಮಾತಾಡಿದರೆ ಏಟು ಹೊಡಿಸ್ಕೋತಿ ?" ಎಂದು ಗದರಿಸಿದ.

"ಇಲ್ಲ, ನೀವು ಹೂಡಿರೋ ಅಂಗಡಿ ತೋರಿಸಿ, ಇಲ್ಲದಿದ್ದರೇ ನಿಮ್ಮನ್ನೇ ನಾನು ನಂಬಿಲ್ಲ" ಎಂದಳು.

"ಅವನ ತನಿಖೆ ಮಾಡಲಿಕ್ಕೆ ನೀನು ಯಾರೆ ? ನಮಗೆ ಅನ್ನ ಹಾಕ್ತಾ ಇರೋನು ಅವನು. ನಿಮ್ಮಪ್ಪನ ಮನೆಯಿಂದ ಏನು ತಂದಿದ್ದಿ ?" ಎಂದಳು ಲಕ್ಷ್ಮಮ್ಮ.

"ನಿಮ್ಮ ಸ್ವಾರ್ಥ ಆಸೆಗಳಿಗೆ ಮಗ ಸೊಸೆಯ ಜೀವನ ಹಾಳು ಮಾಡ ಬೇಡಿ ಅತ್ತೆ. ಅವರು ಕೆಟ್ಟ ದಾರಿಗೆ ಹೋಗ್ತಾ ಇದ್ದರೆ ತಿದ್ದಬೇಕಾದ್ದು ನನ್ನ ಕರ್ತವ್ಯ" ಎಂದಳು.

ಲಕ್ಷ್ಮಮ್ಮ ಕ್ರೋಧದಿಂದ, "ಅನ್ನಕ್ಕೆ ಗತಿ ಕೆಟ್ಟೋರ ಮಗಳಾದರೂ ಅವಳ ಗರ್ವ ನೋಡೋ.....ಅವಳಿಗೆ ಮುಖದ ಮೇಲೆ ಹೊಡೆದು ಬುದ್ಧಿ ಕಲಿಸು" ಎಂದರು.

ಮುಖ ಮಾಡಿ ನೋಡದೆ ಹೊಡೆದ, "ಹಾಕಿದ್ದು ....ತಿಂದ್ಕೊಂಡು, ಅಮ್ಮ ಹೇಳಿದ ಕೆಲಸ ಮಾಡಿಕೊಂಡು ಬಿದ್ದಿರು" ಎಂದ. ಅವನು ಹೊರಗೆ ಹೊರಟ ಮೇಲೆ ತನ್ನ ನಾಲ್ಕು ಸೀರೆ ಬಟ್ಟೆ ಜೋಡಿಸಿಕೊಂಡು ಗೋದಾಳ ಮನೆಗೆ ಬಂದು ಎಲ್ಲಾ ಹೇಳಿ ಕಣ್ಣೀರಿಟ್ಟಳು.

ಗೋದಾ ಚಿಂತೆಯಿಂದ, "ನಮ್ಮತ್ತೇನ್ನ ನರ್ಸಿಂಗ್ ಹೋಮ್‌ಗೆ ಸೇರಿಸಿದಾಗ ರುಕ್ಕಮ್ಮ ಅನ್ನೋ ನರ್ಸ್ ಪರಿಚಯ ಆಗಿದ್ದರು. ಆಕೆ ಆಕಸ್ಮಾತ್ ಮೊನ್ನೆ ಬ್ಯಾಂಕಿಗೆ ಹೋದಾಗ ಸಿಕ್ಕಿದರು. ಕೃಷ್ಣನ ವಿಷಯ ಹೇಳಿದಳು. ಆ ನರ್ಸ್ ಮೀರಾಳ ಮನೆಗೆ ರಾಜಾರೋಷವಾಗಿ ಬಂದು ಹೋಗ್ತಾನೆ ಅಂತ. ಅವನನ್ನು ಹೇಗೆ ತಿದ್ದಬೇಕೊ ಗೊತ್ತಿಲ್ಲ. ನಾನು ಬುದ್ಧಿ ಅಂತು ಹೇಳ್ತೀನಿ" ಎಂದಳು.

"ಅಕ್ಕಾ..... ನಿಮ್ಮ ಬುದ್ದಿವಾದ ಕೇಳೊ ಹಂತ ಅವರು ಮೀರಿದ್ದಾರೆ. ಮೊದಲು ನಾವಿದ್ದ ಏರಿಯಾದಲ್ಲಿ ಒಂದು ಮನೆ ಸಿಗುತ್ತೇನೊ ನೋಡ್ತೀನಿ. ನಮ್ಮ ತಂದೆ-ತಾಯಿನ್ನ ಕರೆದುಕೊಂಡು ಹೋಗಿ ಅಂಗಡಿ ಕೆಲಸಕ್ಕೆ ಸೇರ್ತೀನಿ ನನಗೂ ಒಂದು ಜೀವನೋಪಾಯ ಬೇಕಲ್ಲ" ಎಂದಳು.

"ಕೃಷ್ಣನಿಗೆ ಬುದ್ಧಿವಾದ ಹೇಳೋ ವಿಷಯದಲ್ಲಿ ನಾನು ಸೋಲ್ತೀನೊ ಗೆಲ್ತೀನೊ ? ಆದರೆ ನಿನಗೆ ಒಂದು ಬದುಕು ಸ್ಥಾಪಿಸಿಕೊಡೋದು ನನ್ನ

ಕರ್ತವ್ಯ. ಅಮ್ಮನ ಧೋರಣೆ, ಅಹಂಕಾರ ನೋಡಿ ನಾನು ಕೃಷ್ಣನಿಗೆ ಪೂರ್ತಿ ಕೊಡಬೇಕಾದ ಹಣ ಕೊಟ್ಟಿರಲಿಲ್ಲ. ಎರಡು ಸಾವಿರ ರೂ. ಸಂಬಳ ಕೊಟ್ಟು, ಒಂದು ಸಾವಿರ ಮನೆಗೆ ಹಾಕಿಸಿ ಒಂದು ಸಾವಿರ ರಿಕರಿಂಗ್ ಡಿಪಾಸಿಟ್ ಮಾಡಿಸ್ತಿದ್ದೆ. ಆದರೆ ನಾನು ಅವನಿಗಾಗಿ ಅಂತ ಬೇರೆ ಮೂರು ಸಾವಿರ ಡಿಪಾಸಿಟ್ ಮಾಡ್ತಿದ್ದೆ. ಮಹಡಿಯ ಮೇಲೆ ಒಂದು ಫ್ಯಾನ್ಸಿ ಸ್ಟೋರ್ ಹಾಕಿ ಕೊಡ್ತೀನಿ. ಬಳೆ, ಟೇಪ್, ಹೇರ್‌ಕ್ಲಿಪ್, ನೈಲಾನ್ ವೈರ್, ಸೋಪು, ಪೌಡರ್, ಲಿಪ್‌ಸ್ಟಿಕ್ ಎಲ್ಲಾ ಮಾರಾಟ ಮಾಡೋ ಅಂಗಡಿ. ನಲವತ್ತು ಸಾವಿರದಲ್ಲಿ ಅಂಗಡಿ ಕಟ್ಟಿಸಿ, ಐವತ್ತು ಸಾವಿರದಲ್ಲಿ ಅಂಗಡಿ ಹಾಕಿಸ್ತೀನಿ. ಬಂದ ಲಾಭ ನಿಂದು. ಧೈರ್ಯವಾಗಿ ಬದುಕು ಎದುರಿಸು ಇವತ್ತಲ್ಲ ನಾಳೆ ಕೃಷ್ಣ ಸರಿ ಹೋಗ್ತಾನೆ. ಕಾದು ನೋಡೋಣ" ಎಂದಳು. ಮಾರನೆಯ ದಿನ ಕೃಷ್ಣನ್ನ ಕರಿಸಿ ಬುದ್ಧಿ ಹೇಳಿ, "ಕಟ್ಟಿಕೊಂಡ ಹೆಂಡತಿಗೆ ದ್ರೋಹ ಮಾಡೋನಾದರೆ ನನ್ನ ಅಂಗಡಿ ಉದ್ಯೋಗ ನಿನಗಿಲ್ಲ" ಎಂದಳು.

"ನನ್ನ ಸ್ವಂತ ವಿಷಯ ನಿನಗ್ಯಾಕಕ್ಕ ? ಪ್ರಪಂಚ ವಿಶಾಲವಾಗಿದೆ. ದುಡಿಯೋರಿಗೆ ಎಲ್ಲಾದರೇನು ?" ಎಂದ. ತನ್ನ ಸಮಸ್ಯೆ ಮೀರಾಳಿಗೆ ಹೇಳಿದ. "ಅಯ್ಯೋ ! ಬಿಡಿ ನಮ್ಮ ಅಂಕಲ್‌ಗೆ ಹೇಳ್ತೀನಿ. ವಸುಧಾ ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಎರಡು ಸಾವಿರ ರೂ. ಸಂಬಳದ ಕೆಲಸ ಕೊಡ್ತಿಸ್ತೀನಿ" ಎಂದಳು.

ಆತ ಅವಳ ತಾಯಿಗೆ ಪರಮಾಪ್ತರೆಂದು.... ಆಗಾಗ ಬರುತ್ತಾರೆಂದು ಅವಳಿಂದಲೇ ತಿಳಿಯಿತು. ಹೇಳಿದಂತೇ ಮೂರು ದಿನದಲ್ಲಿ ಕೆಲಸ ಕೊಡಿಸಿದಳು. ಕೃಷ್ಣ ಬಿಟ್ಟು ಹೋದದ್ದು ಗೋದಾಳಿಗೆ ತೊಂದರೆಯಾದುದು ನಿಜ. ಆದರೆ ಸತೀಶ ನಂಬಿಕಸ್ಥನಾದ ಯುವಕನೊಬ್ಬನನ್ನು ತಾನೇ ಕರೆತಂದ. ಆತ ಅಂಗಡಿ ಕೆಲಸದಲ್ಲಿ ಚುರುಕಾಗಿದ್ದ. ಬಾಂಬೆಗೆ ಹೋಗಿ ಲೇಡಿಸ್ ಕಾರ್ನರ್‌ಗೆ ಬೇಕಾದ ಮಾಲು ತರಲು ಸಹ ಒಪ್ಪಿಕೊಂಡ.

ಮಹಡಿ ಮೇಲೆ ಅಂಗಡಿ ಕಟ್ಟಲು ಎರಡು ತಿಂಗಳು ಹಿಡಿಯಿತು. ಮಗಳ ಕಾರುಬಾರು ಗೊತ್ತಿರಲಿಲ್ಲ ಲಕ್ಷ್ಮಮ್ಮಂಗೆ,ಬಂದು ಜೋರು ಮಾಡಿ— "ಎಷ್ಟು ದಿನ ಇಲ್ಲಿ ಬಿದ್ದಿರ್ತಿ ? ನಿಮ್ಮಪ್ಪಾ ಅಮ್ಮ ಎಷ್ಟು ದಿನ ಇರ್ತಾರೆ ?

ಅಲ್ಲಿ ಆವಸು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರು." ಎಂದು ಸೊಸೆಗೆ ಏನೋ ಹೇಳಲೆತ್ತಿಸಿದ್ದರು.

ಗೋದಾ ತಾಯಿಗೆ ಬೈದು–"ಹೆಣ್ಣಿನ ಹೆಣ್ಣೇ ಶತ್ರು ಅನ್ನೋದು ನಿಜವಮ್ಮ. ನಿನ್ನ ಮಗನ ಹೊಲಸು ವಿದ್ಯೆಗಳು ಸಹಿಸಿಕೊಂಡು ಆ ಮನೆ ಮುಸುರೆ ಉಜ್ಜಿಕೊಂಡು, ಕಿರುಕುಳ ಸಹಿಸ್ತಾ. ಅರೆಹೊಟ್ಟೆ ಊಟಾ ಮಾಡಿಕೊಂಡಿರಲಿಕ್ಕೆ ಆ ಮನೆಗೆ ಬರಬೇಕಾ ? ನಾನಿನ್ನು ಬದುಕಿದ್ದೀನಿ. ಈ ಲಗ್ನ ಮಾಡಿಸಿದೋಳು ನಾನು, ಅವಳಿಗೆ ಬದುಕು ಕೊಡಬೇಕಾದ್ದು ನನ್ನ ಜವಾಬ್ದಾರಿ." ಎಂದಳು.

"ನಿನಗೆ ಶ್ರೀಮಂತಿಕೆ ಇದೆ. ಊಳಿಗಕ್ಕೆ ಜನಬೇಕು, ಸೇರಿಸ್ಕೋತಿ. ಗಂಡಾ ಹೆಂಡ್ತೀನ್ನ ಏಕೆ ಅಗಲಿಸ್ತೀಯ್ಯ ?" ಎಂದರು.

"ಅಂಥಾ ಪುಣ್ಯದ ಕೆಲಸ ಮಾಡಿರೋಳು ನೀನು, ಇಲ್ಲಿದ್ದಾಗ ನಾಯಿ ಮರಿ ಇದ್ದಾಗೆ ಇದ್ದ. ಅಲ್ಲಿ ಹೋಗಿ ನೂರು ಬಗೆ ದುಶ್ಚಾಳಿ ಕಲಿತಿದ್ದಾನೆ. ಮಗನನ್ನು ದಂಡಿಸೋ ತ್ರಾಣಾ ಇದೆಯಾ ನಿನಗೆ ? ಸೊಸೆ ಮಗನಲ್ಲಿ ಒಡಕು ಕಂಡಾಗ ಹಿಗ್ಗಿದ ಹೆಂಗಸು ನೀನೆಂಥಾ ತಾಯಿಯಾ ? ಬರೀ ನಿನ್ನ ಊಳಿಗಕ್ಕೆ ಈ ಹುಡುಗೀನ್ನ ಆ ಮನೆಗೆ ಕರೆದುಕೊಂಡು ಹೋದರೆ ನಾನು ಏಕೆ ಬಿಡ್ತೀನಿ ?" ಎಂದರು.

"ನನ್ನ ಮಗನಿಗೆ ನಾನು ಬೇರೆ ಹೆಣ್ಣು ಹುಡುಕಿ ಮದುವೆ ಮಾಡ್ತೀನಿ" ಎಂದರು.

"ಧಾರಾಳವಾಗಿ ಮಾಡು, ಹುಚ್ಚರೋ, ಹುಂಬರೋ ಯಾರು ಅವನಿಗೆ ಹೆಣ್ಣು ಕೊಡ್ತಾರೆ ನೋಡ್ತೀನಿ." ಎಂದಳು.

ಲಕ್ಷ್ಮಮ್ಮನಿಗೆ ಎಲ್ಲಾ ಕೆಲಸ ಮಾಡಲು ಕೈಲಾಗದು. ಸೊಸೆ ಇದ್ದರೆ ದುಡಿತ ಉಂಟಿಸಬಹುದೆಂಬ ಆಸೆಯೊಂದೇ ಇಟ್ಟುಕೊಂಡು ಬಂದಿದ್ದರು. ತಮ್ಮ ಕಾರ್ಯ ಫಲಿಸದೇ ನಿರಾಶೆಯಿಂದ ಹೊರಟು ಹೋದರು.

* * * *

ಫ್ಯಾನ್ಸಿ ಸ್ಟೋರ್ ಸ್ಥಾಪಿಸಿ ಆರು ತಿಂಗಳಾಗಿತು. ತಿಂಗಳಿಗೆ ಐದು

ಸಾವಿರದವರಿಗೆ ಲಾಭಾ ಬರುತ್ತ ಇತ್ತು. ಎಲ್ಲಾ ಅವಳ ಹೆಸರಿಗೆ ಬ್ಯಾಂಕಿಗೆ ಕಟ್ಟಿಸುತ್ತಿದ್ದಳು. ಲಕ್ಷ್ಮಮ್ಮ ಒಂದು ದಿನ–"ಹೋಗ್ಲಿ ನಿನ್ನ ಆ ರಂಭೇನೋ .. ಊರ್ವಸೀನೋ .. ಅವಳನ್ನೇ ಮದುವೇ ಆಗೋ......ಊರೆಲ್ಲಾ ಗುಲ್ಲಾಗಿದೆ. ಮದುವೆ ಏಕಾಗಬಾರದು ?" ಎಂದರು.

ಕೃಷ್ಣಾ ರೇಗಿ–"ಸುಮ್ನೆ ಇರಮ್ಮ ನೀವು, ರಂಭೇನು ಇಲ್ಲ. ಊರ್ವಸೀನೂ ಇಲ್ಲ." ಎಂದ.

ಮೊದಲ ತಿಂಗಳ ಸಂಬಳ ಪಡೆದು ಅವನು ಬರುವಾಗ ದಾರಿಯಲ್ಲೇ ಎದುರಾದಳು. "ಬನ್ನೀ ಸ್ವಲ್ಪ ಶಾಪಿಂಗ್ ಇದೆ." ಎಂದು ಸೀರೆ ಅಂಗಡಿಗೆ ಕರೆದೊಯ್ದು . ಎರಡು ಚಂದ್ರ ಸೀರೆ ತೆಗೆಸಿದಳು.

ಕೃಷ್ಣಾ ಒಂದು ಸೀರೆ ಮಾತ್ರ ತೆಗೆಸಿಕೊಟ್ಟ. ಅವಳು ಗುಂಮ್ ಎಂದಿದ್ದಳು. ರಾತ್ರಿ ಕೃಷ್ಣ ಸ್ವಲ್ಪ ರೇಗಿ-"ಅಲ್ಲಿ ನನ್ನದು ಸಂಸಾರ ಇದೆ. ತಂದೆ ತಾಯಿಗೆ ಅರೆ ಹೊಟ್ಟೆನಾದರೂ ಊಟಾ ಹಾಕ್ಬೇಕೋ ಬೇಡವೋ ....." ಎಂದ.

ತಿಂಗಳಿಗೆ ಆ ಮನೆಗೆ ಸಾವಿರ ರೂ. ಖರ್ಚು ಮಾಡಿದರೂ ....ಕಡು ಬಡತನದ ಸಂಸಾರ. ನಾನ್ನೂರು ಬಾಡಿಗೆ ಕಟ್ಟಿ, ನೂರು ರೂ. ಕೈ ಖರ್ಚಿಗಿಟ್ಟು ಕೊಂಡು, ಉಳಿದದ್ದು ಸಾಮಾನು ತರುತ್ತಿದ್ದ. ಒಂದು ಸೀಮೆ ಎಣ್ಣೆ ಸ್ಟೌನಲ್ಲಿ ಸಂಸಾರ. ತರಕಾರಿ ಇಲ್ಲ, ಹಾಲಿಲ್ಲ. ಒಂದಿಷ್ಟು ನೀರು ಮೊಸರು, ನೀಶು ಸಾರನ್ನ, ಊಟದ ಟೈಮಿಗೆ ಮಗಳ ಮನೆಗೆ ಹೋಗುವರು, ಮಗನನ್ನು ಬಾಯಿಗೆ ಬಂದಂತೇ ದೂರುವರು, ಕಾಫಿ ಚಪಲ ನಂಗೆ, ಕಾಫಿ ಕುಡಿದು ಎಂಟು ದಿನ ಆಯ್ತು ಕಣೆ." ಎನ್ನುವರು.

"ದಿವಕ್ಕೆ ಒಂದು ಹೊತ್ತು ಬಾ....ಬಂದಾಗ ಒಂದು ಲೋಟಾ ಕಾಫಿ ಕೊಡ್ತೀನಿ. ಮೈ ಮೇಲಿನ ಸೀರೆ ಜೀರ್ಣವಾದಾಗ ತಾಯಿ ಅಂತ ಎರಡು ಸೀರೆ ಕುಪ್ಪಸ ಕೊಡಿಸ್ತೀನಿ. ತಂದೆ ಅಂತ ಎರಡು ಪಂಚೆ, ಶರಟು, ಬನೀನು ಕೊಡಿಸ್ತೀನಿ. ಊಟಾ ತಿಂಡಿ ಪದ್ಧತಿ ಬೇಡ, ಮಗನ್ಯಾಕೆ ದೂರತಿ ? ನಿನ್ನ ಸ್ವಯಂಕೃತ ಅಪರಾಧ, ಮಹಡಿ ಮೇಲೆ ಅವನಿಗೆ ಸ್ವಂತ ಮನೆ ಕಟ್ಟಿಸಿ ಒಂದು ಅಂಗಡಿ ಹಾಕಿ ಕೋಡೋಳಿದ್ದೆ. ಐದೊರುಷ ಅವನ ಪಾಲಿನ ಹಣ ಕೂಡಿಸಿದ್ದರೆ. ನನ್ನ ಕಡೆಯಿಂದ ಲಕ್ಷಾಂತರ ಹಾಕ್ತ ಇದ್ದೆ. ಅವನು ದುಡಿ

ದಿದ್ದಾನೆ ಅನ್ನೋ ಕೃತಜ್ಞತೆ ಇದೆ. ಪೂರ್ತಿ ಸ್ವಾತಂತ್ರ್ಯ ಕೊಟ್ಟರೆ ಹೆಂಡ ಕುಡಿಸಿದ ಕಪಿ ಆಗ್ತಾನೆ ಅಂತ ಇದ್ದೆ. ಆದರೆ ಜಯನಿಗೆ ಅನ್ಯಾಯ ಮಾಡಲ್ಲ. ಇನ್ನೆರಡು ವರ್ಷದಲ್ಲಿ ಮನೆ ಕಟ್ಟಿಸ್ತಾಳೆ." ಎಂದರು.

"ಆದರೆ ಆ ಒಂಟಿ ಬಡಗಿ ಅಷ್ಟು ಹಣಾ ಸಂಪಾದಿಸಿ ಏನು ಮಾಡ್ತಾಳೆ. ಮಕ್ಕಳಿಲ್ಲ, ಮರಿ ಇಲ್ಲ." ಎಂದಳು.

ಅವಳ ರೂಪ, ಐಶ್ವರ್ಯ ಎಲ್ಲಾ ನೋಡಿ, ಒಬ್ಬ ಒಳ್ಳೆ......ಆದರ್ಶವಾದಿ ಬಂದರೆ ನಾನೇ ಎರಡನೇ ಮದುವೆ ಮಾಡಿಸ್ತೀನಿ. ಈ ಆರೋಗ್ಯನ ಅನೈತಿಕ ಸಂಬಂಧ ಊರಿಗೆ ಗೊತ್ತು. ನಾನು ಅವನಿಗೆ ಡೈವೋರ್ಸ್ ಕೊಡಿಸ್ತೀನಿ." ಎಂದಳು.

"ರಾಮ ರಾಮ, ಹೆಣ್ಣಿಗೆ ಎರಡನೆಯ ಮದುವೇನಾ ? ಕಲಿಗಾಲ ಕಣೇ ಕಲಿಗಾಲ." ಎಂದರಾಕೆ, ಗೋದಾ ತಿರಸ್ಕಾರದಿಂದ.

"ನಿನ್ನ ಮಗ ಕೆಟ್ಟು ಕೆರವಾಗಿ ಹೋದಾಗ ಕಲಿಯುಗ ಶುರುವಾಗಿರಲಿಲ್ಲವೇ ?" ಎಂದಳು. ಮಗಳಿಗೂ ತಮಗೂ ಯಾವಾಗಲೂ ಅಭಿಪ್ರಾಯ ಭೇದ, ಮಾತಿನ ಯುದ್ಧ ಎಂದರಿವಾದ ಅವರು "ಹೂಂ ನೀನು ದುಡ್ಡಿರೋಳು. ಶ್ರೀಮಂತಿಕೆ, ಏನು ಮಾಡಿದರು ನಡೆಯುತ್ತೆ." ಎಂದು ಹಂಗಿಸಿ ಹೋದರು.

ಪತ್ನಿಯನ್ನು ತ್ಯಜಿಸಿದೆನೆಂದು ಕೃಷ್ಣನಿಗೆ ಪಶ್ಚಾತ್ತಾಪವಾಗಲೇ ಇಲ್ಲ. ಉನ್ಮತ್ತ ಲೈಂಗಿಕ ಸ್ವಭಾವದ ಮೀರಾ ಅವನಿಗೆ ತುಂಬಾ ಇಷ್ಟವಾಗಿದ್ದಳು. ಮೀರಾ ತನ್ನ ಜೀವನ ಚರಿತ್ರೆ ಅವನಿಗೆ ಚುಟುಕಾಗಿ ತಿಳಿಸಿ–

ಒಬ್ಬ ವಿವಾಹಿತ ವ್ಯಕ್ತಿ ಅಮಾಯಕ ತರುಣಿಯಾದ ತನ್ನ ತಾಯಿಗೆ ಮೋಸ ಮಾಡಿದ, ಆಗ ಜನಿಸಿದ ಕನ್ಯೆ ತಾನು, ತಾಯಿ ಜೀವನೋಪಾಯಕ್ಕಾಗಿ ಒಪ್ಪಿ ಗಂಡಸನ್ನ ಅವಲಂಬಿಸಿದಳು. ಅವನು ಈ ಸ್ವಂತ ಮನೆ ಮಾಡಿ ಕೊಟ್ಟ. ತಿಂಗಳಿಗೆ ಸಾವಿರ ರೂ. ಬರುವಂತೇ ವ್ಯವಸ್ಥೆ ಮಾಡಿದ್ದಾನೆ.

ಮೊದಲೆಲ್ಲಾ ತುಂಬಾ ಬರುತ್ತಿದ್ದ. ಈಗ ಅರವತ್ತರ ಮುದುಕ, ಎಲ್ಲೋ ತಿಂಗಳಿಗೊಮ್ಮೆ ಬರ್‍ತಾನೆ. ಈ ಹಿನ್ನೆಲೆ ಇರುವ ನನಗೆ ವಿವಾಹ ಕನಸು ಎಂದು ಗೊತ್ತಿತ್ತು. ಪಿ. ಯು. ಸಿ., ನರ್ಸಿಂಗ್ ಕೋರ್ಸ್ ಮುಗಿಸಿ ಶಾರದ ನರ್ಸಿಂಗ್ ಹೋಮ್‌ನಲ್ಲಿ ಕೆಲಸಕ್ಕೆ ಸೇರಿದೆ. ಅಲ್ಲಿ ಎಂಟು ನೂರು ರೂ.ಗಳ ಸಂಬಳ, ನಾನು ನೈಟ್ ಡ್ಯೂಟಿ ಮಾಡಲ್ಲ. ಬಂದ ಸಂಬಳ ನನ್ನ ಆಕಾಂಕ್ಷೆಗೆ ಸಾಲದು, ಅಕಸ್ಮಾತ್ ನಿಮ್ಮ ಪರಿಚಯ ಆಯಿತು. ಬೇಕು ಬೇಕಾದ್ದು ತೆಕ್ಕೊಟ್ಟಿರಿ." ಎಂದಿದ್ದಳು. ಆಗಿನ ದಿನಗಳಲ್ಲಿ ಹೆಂಡತಿ ಮೈ ಮೇಲಿನ ಒಡವೆಗಳು ಬ್ಯಾಂಕಲಿದ್ದ ಹಣದಿಂದ ಚಿನ್ನದ ನಕ್ಲೆಸ್ ಎಲ್ಲಾ ..... ಮಾಡಿಸಿದ್ದ ಆದರೆ ಈಗ ಆರು ತಿಂಗಳಿಂದ ತಿಂಗಳಿಗೆ ಸಾವಿರ ರೂ. ಮಾತ್ರ ಕೊಡುತ್ತಿದ್ದ.

"ಈ ನಡುವೆ ನಿಮಗೆ ನನ್ನ ಮೇಲೆ ಪ್ರೀತಿ ಕಡಿಮೆ ಆಗಿದೆ." ಆ ದಿನ ಅಸಮಾಧಾನದಿಂದ ನುಡಿದಳು.

"ಏಕೆ ಹೀಗಂತಿ ಚಿನ್ನ, ನಿನ್ನ ನಾನೆಂದು ಕೈ ಬಿಡಲ್ಲ. ನಿನಗಾಗಿ ಜನ ರಿಂದ ದೂಷಿತನಾಗಿ ಅಪವಾದ ಹೊತ್ಕೊಂಡೆ. ಕೈ ಹಿಡಿದ ಹೆಂಡ್ತೀನ ದೂರ ಮಾಡ್ಕೊಂಡೆ." ಎಂದ.

"ಮಹಾ ತ್ಯಾಗ ಮಾಡಿದ್ದೀನಿ ಅಂತ ಜಂಭಾ ಕೊಚ್ಕೋಬೇಡಿ. ನಾನು ಅವಿವಾಹಿತೆಯಾಗಿ ಏನು ಕೆಟ್ಟ ಹೆಸರು ಗಳಿಸಿದ್ದೀನಿ. ಮುಂದೆ ನನ್ನ ಮದುವೆ ಕನಸಿನಲ್ಲೂ ಆಗಲ್ಲ. ನನ್ನ ಎಲ್ಲಾ ಆಸೆಗಳು ನೀವೇ ಪೂರೈಸ ಬೇಕು." ಎಂದಳು.

"ಪೂರೈಸ್ತಿದ್ದೀನಲ್ಲ ಚಿನ್ನ. ತಿಂಗಳಿಗೆ ಸಾವಿರ ರೂ. ನಿನಗೆ ಕೊಡ್ತಿದ್ದೀ ನಲ್ಲ." ಎಂದ.

"ಈ ಭಿಕ್ಷೆ ಸಾಕಾಗಿದೆ ಕಣ್ರಿ. ನಮ್ಮ ತಾಯಿಗೆ ಗಾಡ್‌ಫಾದರ್ ಆಗಿದ್ದ ಸೇಠ್‌ಜಿ ಏನೇನು ಕೊಡಿಸಿದ್ದಾರೆ ನೋಡಿ. ಮನ್ನೆ ಕಲರ್ ಟಿ. ವಿ. ಸೋಫಾ, ನಮ್ಮ ರೂಮಲ್ಲಿರೋ ಮಂಚ ಸಹ ಅವರು ಕೊಡಿಸಿದ್ದೆ. ಅಮ್ಮನ ಹತ್ತಿರ ಥಂಡಿಯಾಗಿ ಚಿನ್ನ ಇದೆ. ನನಗೆ ಇಪ್ಪತ್ತು ತೊಲ ಚಿನ್ನ ಬೇಕು." ಎಂದಳು.

"ನನ್ನಂಥೋನ್ನ ಕಟ್ಕೊಂಡು ಇಂಥಾ ಆಸೆಗಳಿಟ್ಕೊಂಡ್ರೆ ಹೇಗೆ ಚಿನ್ನ? ಕನ್ನ ಹಾಕೋಕು ಬರಲ್ಲ ನಂಗೆ." ಎಂದ.

"ನಿಮಗೆ ಕನ್ನ ಹಾಕೋಕೆ ಬರಲ್ಲ. ನಮ್ಮ ಅಂಕಲ್ ನಿಮಗೆ ಕೆಲವು ಕೆಲಸ ಒಪ್ಪಿಸ್ತಾರೆ ಮಾಡಿ, ಒಂದೊಂದ್ಸಲ ನೀವು ಬಾಂಬೆಗೆ ಹೋಗಿ ಬಂದರೆ ಐದೈದು ಸಾವಿರ ಸಿಕ್ಕತ್ತೆ" ಎಂದಳು.

"ಆದರೆ ಆತ ಸ್ಮಗ್ಲರ್ ಅಂತ ಹೆಸರಿದೆ ?" ಎಂದ, ಕೃಷ್ಣ.

"ಅಮ್ಯಾ! ಏನು ಗುಗ್ಗು ಇದ್ದೀರಿ. ಜನ ಬೆನ್ನ ಹಿಂದೆ ಏನು ಆದ್ಕೊಂಡ್ರೇನು ? ಲಕ್ಷ ಲಕ್ಷ ಸಂಪಾದಿಸಿಕೊಂಡು ಮಜವಾಗಿ ಇದ್ದಾರೆ. ನಿಮಗೂ ಕೈಗೆ ವಾಚು, ಒಂದಿಷ್ಟು ಒಳ್ಳೆ ಡ್ರೆಸ್ ಬೇಡವಾ ? ತೀರ ಬಡ ಬಿಕವಾಸಿ ಇದ್ದಾಗೆ ಇದ್ದೀರಿ. ನನ್ನ ಲೌವ್ವರ್ ಅಂತ ಹೇಳ್ಕೊಳ್ಳಿಕ್ಕೆ ನಾಚಿಕೆ ಆಗತ್ತೆ," ಎಂದು ಛೇಡಿಸಿದಳು.

ಅವನಿಗೆ ಒಂದು ಥರದ ಛಲ ಹುಟ್ಟಿದ ಹಾಗಾಯಿತು. ಹೆಂಡತಿ ಸೋತು ತನ್ನ ಬಳಿ ಬರಲಿಲ್ಲ. ಅಕ್ಕನ ಸಹಾಯದಿಂದ ಒಂದು ಅಂಗಡಿ ಸ್ಥಾಪಿಸಿ ಹಾಯಾಗಿದ್ದಾಳೆ. "ನಿನ್ನ ಅಕ್ಕ ಅವಳಿಗೆ ಮದುವೆ ಬೇರೆ ಮಾಡ್ತಳಂತಪ್ಪ. ಬಣ್ಣವಾಗಿ ಉಟ್ಟು ತೊಟ್ಟು ಕೂತಿರ್ತಾರೆ. ತಿಂಗಳಿಗೆ ಐದು ಸಾವಿರ ರೂ. ಗಳನ್ನು ಬೇರೆ ಸಂಪಾದಿಸ್ತಾಳಂತೆ, ಯಾರು ಮದುವೆ ಆಗಲ್ಲ ಹೇಳು ?"

ಎಂದು ತಾಯಿ ಲಕ್ಷ್ಮಮ್ಮ ನುಡಿದಾಗ–"ಅವನು......ಕ್ರೋಧದಿಂದ– "ಅವಳಿಗಾವ ಐಧು ಸಾವಿರ ಸಂಪಾದನೆಯಮ್ಮ. ಊಳಗಕ್ಕೆ ಬಿಟ್ಟು ಅಕ್ಕ ತನ್ನ ಬೊಕ್ಕಸ......ತುಂಬಿಸಿ ಕೊಳ್ತಾಳೆ." ಎಂದ.

"ಇಲ್ಲಪ್ಪ, ಅಂಗಡಿ ಅವಳ ಹೆಸರಿಗೇ ಅಂತೆ. ನಿನಗೆ ಮೂರು ವರುಷ ದಿಂದ ಎರಡು ಸಾವಿರ ಕೊಡ್ತಾ ಇದ್ದಾಳಲ್ಲ. ಆಗ ಮನದಲ್ಲಿ ಐದು ಸಾವಿರ ಅವನದು ಅಂತ ತೆಗೆದಿಡ್ತಿದ್ದಳಂತೆ, ಆದರೆ ಚಿಕ್ಕ ವಯಸ್ಸು, ಜಾಸ್ತಿ ಹಣದ ಸ್ವಾತಂತ್ರ ಕೊಡಬಾರದು. ಕೊಟ್ಟರೆ ಅವಳ ಮೇಲೆಯೆ ಎಲ್ಲೋ ತಿರುಗಿ ಬೀಳ್ತಿ ಅಂತ ಭಯವಿತ್ತಂತೆ.

ಐದು ವರ್ಷ ನೀನು ಕೂಡಿ ಮೊತ್ತ ಕೊಟ್ಟದ್ರೆ ಮಹಡಿ ಮೇಲೆ ಒಂದು ಮನೆ ಕಟ್ಟಿಸಿ, ನಿನಗೆ ಒಂದು ಸ್ವತಂತ್ರ ಅಂಗಡಿ ಸಹ ಹಾಕ್ಕೊಡೋ ಳಂತೆ. ಆದರೆ ನೀನು ಅಷ್ಟರಲ್ಲೇ ದುಡುಕಿ, ನಿನ್ನ ಕಡೆ ಹಣಾ ಎಲಾ

ತೆಗೆದು, ಸೂಳೆ, ಧಾಳಿ ಅಂತ ಶುರು ಮಾಡಿದ್ಳು, ಅವಳಿಗೂ ರೋಸಿದೆ. ತಾನು ಮುಂದೆ ನಿಂತು ವಿವಾಹ ಮಾಡಿದ್ದರಿಂದ ಈ ಹುಡುಗಿ ಬಾಳು ಹಾಳಾಯಿತು. ಎಂದು ನಿನ್ನ ಪಾಲಿಗೆ ಎಂದು ಇಟ್ಟಿದ್ದ ಹಣದಲ್ಲಿ ಆ ಹುಡುಗಿಗೆ ಅಂಗಡಿ ಕಟ್ಟಿಸಿ, ಅಂಗಡಿ ಹಾಕಿ ಕೊಟ್ಟಿದ್ದಾಳೆ. ಮುಂದೆ ಒಂದು ಮನೆ ಸಹ ಕಟ್ಟಿಸಿ ಅವಳ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸ್ತಾಳಂತೆ. ತಿಂಗಳಿಗೆ ಐದು ಸಾವಿರ ಕೂಡಿ ಹಾಕ್ತ ಇದ್ದಾಳೆ. ಮನೆ ಕಟ್ಟಿಸೋದೇನು ಹೆಚ್ಚು ಹೇಳು ? ನ್ಯಾಯವಾಗಿ ಆ ಅಂಗಡಿ ನಿನ್ನದಾಗಬೇಕಿತ್ತು. ನೀನು ಬೇರೆ ಕಡೆ ತ್ಯಾಪೇದಾರಿ ಮಾಡ್ತಿದ್ದಿ" ಎಂದರು.

ಅವನಿಗೆ ಹೊಟ್ಟೆ ಉರಿಯಿತು. ಹೌದು ! ಅಕ್ಕ ಬಹಳ ಧಾರಾಳಿ, ಅಷ್ಟೆ ಕಟ್ಟುನಿಟ್ಟು." ನನ್ನ ಅಂಗಡಿ ಚೆನ್ನಾಗಿ ಹತ್ತೋರೊಷದಿಂದ ದುಡಿದಿದ್ದಿ ನಿನಗೆ ಸ್ವಂತ ಅಂಗಡಿ ಮನೆ ಮಾಡಬೇಕೂಂತ ಸ್ವಲ್ಪ ಹಣಾ ಕೂಡಿ ಹಾಕ್ತಿದ್ದೀನಿ. ಆದರೆ ನೀನು ತಿಂಗಳಿಗೆ ಸಾವಿರ ಕೂಡಿ ಹಾಕಿ, ಐವೋರುಷಕ್ಕೆ ಬಡ್ಡಿ ಸಮೇತ ಎಪ್ಪತ್ತೈದು ಸಾವಿರ ಮಾಡಿ ನನಗೆ ಕೊಡಬೇಕು." ಎಂದಿದ್ದಳು.

ಆದರೆ ಆತುರದಲ್ಲಿ ತಾನು ಎಲ್ಲಾ ಹಾಳು ಮಾಡಿ ಬಿಟ್ಟೆ. ಈಗ ತನ್ನ ಪಾಲಿನ ಹಣಾ ಅವಳು ಲೂಟಿ ಹೊಡೆಯುತ್ತಿದ್ದಾಳೆ. ಮುಹಡಿ ಮೇಲಿನ ಅಂಗಡಿ ಆದ್ದರಿಂದ ಹಲವು ಭಾರಿ ಕಣ್ಣಿಗೆ ಬಿದ್ದಿದ್ದಳು.

ಮತ್ತೆ ಮೊದಲಿನ ಹಾಗೆ ಆರೋಗ್ಯ ಶಾಲಿಯಾಗಿ ಚೆನ್ನಾಗಿದ್ದಾಳೆ. ಎಷ್ಟು ಸುಂದರವಾಗಿ ಕಾಣಿಸುತ್ತಾಳೆ. ತಾನು ಆಶಿಸಿದ ಸೌಂದರ್ಯ ಅದು. ಮನಸಾರ ಒಂದು ಕಾಲದಲ್ಲಿ ಸವಿದ ಸೌಂದರ್ಯ. ತನ್ನನ್ನು ತಾನು ಅರ್ಪಿಸಿ ಕೊಂಡಿದ್ದಳು. ಆದರೆ ತಾಳಿ ಕಟ್ಟಿದ ಹೆಂಡತಿಯಾದರು ಈಗ ಎಷ್ಟು ಅಪರಿಚಿತಳಾಗಿದ್ದಾಳೆ. ಈ ಹತಾಶೆಯಲ್ಲಿ ಅವನು ಮಿಾರಾಳ ಮಾತಿಗೆ ಒಪ್ಪಿದ, ಸೇಠ್ ಬಂದು ಅವನಿಗೆ ಮಾಡಬೇಕಾದ ಕೆಲಸ ಹೇಳಿದ. ತಿಂಗಳಿಗೆರೆಡು ಭಾರಿ ಮುಂಬಯಿಗೆ ಹೋಗಿ ಬರುವುದು. ಇಲ್ಲಿ ಸೇಠ್ ಕೊಟ್ಟ ಸೂಟ್‌ಕೇಸ್ ಅವರಿಗೆ ತಲುಪಿಸುವುದು. ಅಲ್ಲಿ ಅವರು ಕೊಟ್ಟ ಸೂಟ್‌ಕೇಸ್ ಸೇಠ್‌ಗೆ ತಲುಪಿಸುವುದು. ಈ ಕೆಲಸಕ್ಕೆ ಅವನಿಗೆ ಐದು ಸಾವಿರ ರೂ. ಸಿಗುತ್ತಿತ್ತು. ಡಿಪಾರ್ಟ್‌ಮೆಂಟಲ್ ಸ್ಟೋರ್ ಸಹ ಸೇಠನದೇ ಆಗಿತ್ತು. ಹೀಗಾಗಿ ಆ ಭಾಗದ ಎರಡು ಸಾವಿರ ಸಂಬಳವೂ ಸಿಗುತ್ತಿತ್ತು.

ಆದರೆ ದುಡಿದ ದುಡ್ಡೆಲ್ಲಾ ವಿಾರಳ ದಾಹಕ್ಕೆ ಹೋಗುತ್ತಿತ್ತು. ಒಂದು ಸಾವಿರ ಅವನಿಗೆ ಜೀವನೋಪಾಯದ ದುಡ್ಡು. ತಂದೆ ತಾಯಿಗಳಿಗೆ ಗೋದಾಳಿ ವಾರ್ಷಕ್ಕೊಮ್ಮೆ ಬಟ್ಟೆ ಬರೆ ತೆಗೆದು ಕೊಡುತ್ತಿದ್ದಳು

"ಈ ಕಡಾನ್ನ ಸಾಕಾಗಿದೆಯಪ್ಪ. ಅವಳ ಮನೇಲಿ ಒಳ್ಳೆ ರಾಜ ಭೋಜನ ಹಾಕಿ, ಹತ್ತು ವರ್ಷ ಕಾಪಾಡಿದ್ದಳು. ನಾನೇ ಗರ್ವ ಮಾಡಿ ಬಂದೆ." ಎಂದು ಆಕೆ ಅಲವತ್ತು ಕೊಳ್ಳುವರು.

"ಅವಳ ಮನೆಗೆ ಹೊರಟು ಹೋಗಮ್ಮ. ನನಗು ಈ ಹಾಳು ಸಂಸಾರ ಸಾಕಾಗಿದೆ." ಎಂದ.

"ಅವಳ ಸೇರಿಸಲ್ಲಪ್ಪ. ಇಲ್ಲದಿದ್ರೆ ಇಲ್ಲ್ಯಾಕೆ ಅನುಭವಿಸ್ತ ಬಿದ್ದಿರ್‍ತಿದ್ದೆ." ಎಂದು ದಬಾಯಿಸುವರು. ತಂದೆ ಏನು ಮಾತಾಡದೇ ಹಾಕಿದ್ದು ತಿಂದು ಮಲಗುವರು.

ಅವನಿಗೂ ಈ ಮನೆ ಬಿಡುವ ಹಾಗಿಲ್ಲ. ಅದು ಎಷ್ಟು ಸ್ವಾತಂತ್ರ ಎನಿಸಿದರೂ ಅನೈತಿಕ ಸಂಬಂಧದ ಮನೆ. "ಭಾನುವಾರ ಸೋಮುವಾರ ಬರ ಬೇಡಿ. ಸೇಠಜಿ ಅಮ್ಮನಿಗಾಗಿ ಬಂದಿರ್ತಾರೆ, ತಾವು ಬಂದಾಗ ಅವರಿವರು ಇರೋದು ಅವರಿಗೆ ಸರಿ ಹೋಗಲ್ಲ." ಎಂದು ಕಟ್ಟುನಿಟ್ಟು ಮಾಡಿದ್ದಳು. ಮುಂಬೈ ಪ್ರಯಾಣಾ ಮಾಡಿ ಬಳಲಿ ಬಂದ ಎರಡು ದಿನ ಆಯಾಸಕ್ಕೆ ಮನೆ ಯಲ್ಲಿರುತ್ತಿದ್ದ. ಹೀಗಾಗಿ ತನ್ನದಾದ ಒಂದು ಮನೆ ಬೇಕೇ ಬೇಕಾಗಿತ್ತು.

ಮೂರು ವರ್ಷದಿಂದ ಮುಂದುವರಿದ ಸಂಬಂಧ. ಆದ್ದರಿಂದ ಹೆಂಡತಿ ಯಲ್ಲಿ ಹುಟ್ಟುವಂತೇ ಒಂದು ಬಗೆ ಅನಾಸಕ್ತಿಯೇ ಹುಟ್ಟಿತ್ತು. ಮೊದಲಿನ ಯಾವ ಹೊಸತನದ ಆಕರ್ಷಣೆ ಇಲ್ಲ. ಯಾಂತ್ರಿಕ ಸಂಸಾರ ಎನಿಸಿತ್ತು.

ಇದೇ ಸಂಸಾರ ಹೆಂಡತಿಯೊಡನೆ ಮಾಡಿದ್ದರೆ ಗೃಹಸ್ತವೆಂಬ ಬಿರುದಿ ರುತ್ತಿತ್ತು. ಈಗ ಊರವರೆಲ್ಲಾ ಕೆಟ್ಟ ಕೇಡಿಗ. ಸೂಳೆಕಾರ ಎಂಬಂತೆ ಅಸಹ್ಯ ಪಡುತ್ತಾರೆ. ಅವರೆಲ್ಲಾ ಸಂಸಾರ ಇಟ್ಟುಕೊಂಡು ಕದ್ದು ಮುಚ್ಚೀ ಕೆಟ್ಟ ಕೆಲಸ ಮಾಡುತ್ತಿಲ್ಲವೆ ? ಆದರೆ ಅಕ್ಕನಿಂದ ತನಗೆ ಈ ಗತಿ ಬಂದದು, ಕದ್ದು ಮುಚ್ಚಿ ತಾನು ಪೂರಳಲ್ಲಿಗೆ ಹೋಗಿ ಬಂದರೂ.....ಹೆಂಡತಿಗೆ ಒಂದು ಕದಾನ್ನವಾದರೂ ಹಾಕಿ, ನೋಟಕರ ಎದುರು ಗೃಹಸ್ಥನೆಂಬ ಫೋಸ್ ಕೊಡ

ಬಹುದಿತ್ತು. ಆದರೆ ಹೆಂಡತಿ ತನ್ನನ್ನು ತೊರೆದು ಹೋಗುವಂತೇ ಮಾಡಿದವಳು ತನ್ನ ಅಕ್ಕ.

ಜಯಲಕ್ಷ್ಮಿ ಅನಾರೋಗ್ಯದಲ್ಲಿದ್ದ ಆ ತಿಂಗಳದ್ದು ತನ್ನ ದೇಹ ಹಸಿದಿತ್ತು. ಆಗ ಪರಿಚಯವಾದವಳು ಮೀರ, ತಾನಾಗಿ ಗಂಡಸರನ್ನು ಆಕರ್ಷಿಸುವ ಪರಿ, ಆ ಉದ್ಧತ್ತ ನಡವಳಿಕೆ ನೋಡಿ ಅವನಿಗೆ ಇದೆಲ್ಲಾ ಕೆಲವು ದಿನದ ಸಂಬಂಧ ಎನಿಸಿತು. ಇವಳ ದುಡ್ಡಿದ ದಾಹ ತಣಿಸಿ ಕೆಲವು ದಿನ ಮಜಾ ಮಾಡೋಣಾ ಎನಿಸಿತು. ತಾಯಿಗಾಗೆ ತಾನು ದುಶ್ಚಾಳಿಗೆ ಬಿದ್ದಿದ್ದೇನೆ ಎಂದು ತಿಳಿದಿದ್ದರೂ ಪ್ರತಿಭಟಿಸಿರಲಿಲ್ಲ. ತಂದೇ ಪೇಚಾಡಿದಾಗ–

"ಪಾಪ ಅವನೇನು ಮಾಡ್ತಾನೆ ರುಚಿ ಕಂಡ ಬೆಕ್ಕು. ಮದುವೆ ಆದ ಹೊಸತರಲ್ಲೇ ರೋಗಿಷ್ಠೆ ಆಗಿ ಕೂತಳು. ಅವನಿಗೆ ಹುಡುಕಾಡೋ ಹಾಗಾಗಿದೆ. ಗೆಳೆಯರ ಜೊತೆ ಒಂದಿಷ್ಟು ಇಸ್ಪೀಟ್ ಆಡಿ ಬರ್ತಾನೆ. ರಾತ್ರಿ ಎಲ್ಲಿ ಹೋಗಿದ್ದೇ ಅಂತ ಕಾಡಿಸಬೇಡಿ ಏನಂಥಾ ಅನುಮಾನ" ಎಂದು ತನ್ನ ಪರವಾಗೇ ವಾದಿಸಿದ್ದರು. ಮಗ–ಸೊಸೆಯರಲ್ಲಿ ವಿರಸ ಬೆಳೆದರೇ ತನಗೆ ಲಾಭ ಎಂದವರಿಗೆ ಏನೊ ಒಳ ಆಸೆ. ಅತ್ತೆ–ಮಾವ ಬಡ–ಬಿಕನಾಸಿಗಳು ಅವರೇನು ಮಾಡುವರು. ಹೆಂಡತಿಗೆ ತಿಳಿದಾಗ ಒಂದಿಷ್ಟು ಅಳುತ್ತಾಳೆ. ಕೆಲವು ಕಾಲ ಮಜಾ ಮಾಡಿ ಕೈ ಬರಿದಾದಾಗ ತಾನೇ ಸುಮ್ಮನೆ ಆಗುವುದು. ಮೀರ ಹಣವಿಲ್ಲದೇ ಸೇರಿಸುವಳಲ್ಲ. ಆಮೇಲೆ ಹೆಂಡತಿ, ಸಂಸಾರ ಇದ್ದೇ ಇದೆ" ಎಂದುಕೊಂಡ.

ಆದರೆ ಈ ಸಂಬಂಧ ಕೆಲವು ದಿನ ಮಜಾ ಮಾಡುವ ಸಂಬಂಧವಾಗಲಿಲ್ಲ. ಮೀರ ಜಿಗಣೆಯಂತೇ ಗಂಟು ಬಿದ್ದಳು. ಹೆಂಡತಿಯೆ ತನ್ನ ತೊರೆದು ಹೋದಳು. ಮೂರು ವರ್ಷಗಳು ಉರುಳಿದರೂ ಅವಳು ಸೋಲಲಿಲ್ಲ.

ಈಗ ಮಹಡಿಯ ಮೇಲೆ ಮನೆ ಕಟ್ಟಿಸ್ತಿದ್ದಾಳೆ. ಅಂಗಡಿಗೆ ಇಬ್ಬರು ಕೆಲಸಗಾರರು ಬೇರೆ ಇದ್ದಾರೆ. ವಾಲೆ–ಜುಂಕಿ, ಎರೆಡೆಳೆ ಸರ ಬೇರೆ ಮಾಡಿಸಿಕೊಂಡಿದ್ದಾಳಂತೆ. ತಾನೋ ಬರಿಗೈ ದಾಸ. ಹಣದ ದಾಹದ ಹೆಣ್ಣನ್ನ ನಂಬಿ ಸುಂದರವಾದ ಬದುಕು ಹಾಳು ಮಾಡಿಕೊಂಡೆ ಎನಿಸುತ್ತಿತ್ತು.

ಒಮ್ಮೆ ಅವನು ರೈಲಲ್ಲಿ ಕೂತಿದ್ದಂತೆ ಪೋಲಿಸರು ಬಂದು ಎಳೆದುಕೊಂಡು ಹೋದರು. ಸೂಟ್‌ಕೇಸ್ ಸಮೇತ ಎಳೆದುಕೊಂಡು ಹೋದ

ಅವರು ಲಾಕಪ್ಪಿನಲ್ಲಿ ಹಾಕಿದರು. ಪೋಲೀಸರಲ್ಲಿ ಕೆಲವರು ಸೇಠನ ಚೇಲಗಳು ಇದ್ದರು. ಹೇಗೊ ಗುಪ್ತವಾಗಿ ಸೇಠ್‌ನ ಒಂದು ಚೀಟಿ ತಂದುಕೊಟ್ಟು ಅವನು ಓದಿದೊಡನೆ ಹರಿದು ಹಾಕಿದರು. "ನೀನು ನನ್ನ ಹೆಸರು ಹೇಳಬೇಡ. ನಿನ್ನದೇ ವ್ಯವಹಾರ ಎನ್ನು. ನಾನು ಲಾಯರನ್ನಿಡಿಸುವೆ ಒಂದಾರು ತಿಂಗಳು ಜೈಲು ಆಗಬಹುದು. ನಾನು ನಿನಗೆ ಮೊದಲಿನಂತೇ ಉದ್ಯೋಗ ಕೊಡುವೆ. ಒಂದು ಲಕ್ಷ ರೂ. ಜೈಲಿಂದ ಬಂದ ಮೇಲೆ ಇಡುಗಂಟು ಕೊಡುವೆ" ಎಂದು ಬರೆದಿದ್ದ.

ಅವನನ್ನು ಹಿಡಿದ ಪೋಲೀಸ್ ಅಧಿಕಾರಿ ನಿಷ್ಠಾವಂತ. "ಹತ್ತಾರು ವರ್ಷದಿಂದ ಈ ಸೇಠ್‌ನ ಕಳ್ಳ ವ್ಯವಹಾರಗಳು ನಡೆದಿದೆ. ಪ್ರತಿಸಲ ಬೇರೆಯವರನ್ನ ಮುಂದು ಮಾಡಿ ನುಣುಚಿಕೋತಾನೆ. ಹೋದ ಸಲ ಆರು ವರ್ಷ ಹಿಂದೆ ಒಬ್ಬ ಸಿಕ್ಕಿ ಹಾಕಿಕೊಂಡಿದ್ದ. ಅವನು ನಿನ್ನ ಹಾಗೆ ಬರಿಯ ಅಮಾಯಕ. ಆದರೆ ಸೇಠ್‌ನ ಪುಸಲಾವಣೆಗೆ ಮರುಳಾಗಿ ತಾನೇ ಸ್ವಂತವಾಗಿ ಈ ದಂಧೆ ಮಾಡುತ್ತಿರುವೆ ಎಂದ. ಏನು ಮಾಡಿದರೂ ನಿಜಾ ಹೇಳಲಿಲ್ಲ.

"ಅವನಿಗೆ ಆರು ವರ್ಷ ಶಿಕ್ಷೆ ಆಯಿತು. ಮೂರು ವರ್ಷ ಜೈಲಲಿದ್ದು ಸತ್ತು ಹೋದ. ನಿನಗೂ ಈಗ ಕಡಿಮೆ ಅಂದರೂ ಐದು ವರ್ಷದ ಸಜಾ ಆಗತ್ತೆ. ನಿಜ ಹೇಳಿದ್ರೆ ಅಪ್ರೂವರ್ ಅಂತ ಬಿಡ್ತೀವಿ" ಎಂದ.

ಸೇಠ್‌ನ ಗೌಡಾನ್ ಅವನು ಭೇಟಿ ಮಾಡುವ ಕಳ್ಳ ವ್ಯಕ್ತಿಗಳು, ಮುಂಬೈಯಲ್ಲಿ ತಾನು ಭೇಟಿ ಮಾಡುವ ವ್ಯಕ್ತಿಗಳು ಎಲ್ಲಾ ಹೇಳಿಬಿಟ್ಟ ಕೃಷ್ಣ.

ಅವರ ಆಧಾರದ ಮೇಲೆ ಸೇಠ್‌ನನ್ನು ಬಂಧಿಸಿ ಕೃಷ್ಣನನ್ನು ಬಿಡುಗಡೆ ಮಾಡಿದರು. ಸೇಠ್ ಕಡೆಯುವರಿಂದ ತೊಂದರೆ ಬರಬಹುದೆಂದು ಪೂರ್ತಿ ಎಲ್ಲಾ ವ್ಯವಹಾರ ಪತ್ತೆ ಮಾಡುವವರಿಗೆ ಒಂದು ತಿಂಗಳು ಅವನನ್ನು ಪೋಲೀಸ್ ಕಸ್ಟಡಿಯಲ್ಲಿರಿಸಿಕೊಂಡರು.

ಸೇಠ್ ಹಣದ ಬಲದಿಂದ ಜಾಮೀನು ಪಡೆದು ಹೋದ. ಅವನ ಅಂಗಡಿಯ ಸೇವಕರೆ ಕೆಲವರು, "ಈ ವ್ಯವಹಾರ ನಾವು ನಾಲ್ವರು ಸೇಠನಿಗೆ ತಿಳಿಯದ ಹಾಗೆ ನಿರ್ವಹಿಸುತ್ತಿದ್ದೆವು" ಎಂದು ಸುಳ್ಳು ಸಾಕ್ಷಿಗಳನ್ನು ಹೇಳಿ

ದರು. ಮೀರಾಳ ಮನೆಗೆ ಬಂದ. ಸೇಠ್‌ನ ದೊಡ್ಡ ಮಗನ ತೋಳ್ತೆಕ್ಕೆಯಲ್ಲಿದ್ದ ಅವಳನ್ನು ನೋಡಿದ.

ಮೀರಾ ಸಿಡಿದೆದ್ದು, "ಸೇಠ್‌ಗೆ ದ್ರೋಹ ಮಾಡಿದ ನೀನು ಪುನಃ ಇಲ್ಲಿ ಬರಬೇಡ ಬಂದರೆ ತಲೆ ಒಡಿಸ್ಕ್ಯೋತಿ" ಎಂದಳು.

ಕೃಷ್ಣ ವಿಹ್ವಲನಾಗಿ, "ಸೇಠ್‌ಗೆ ನಾನೇನು ದ್ರೋಹ ಮಾಡಿದೆ ಮೀರ?" ಎಂದ.

"ಇನ್ನೇನು ಮಾಡಬೇಕಿತ್ತು ನೂರು ವರ್ಷದಿಂದ ತಿಂಗಳಿಗೆ ಏಳು ಸಾವಿರ ತಿನ್ನಿಸಿದ ಅವರಿಗೆ ಉಪ್ಪುಂಡ ಕೃತಜ್ಞತೆ ತೋರಿಸಲಿಕ್ಕೆ ಆಗ್ತಿರಲಿಲ್ಲವಾ ? ನಿಮ್ಮ ಹೆಸರು ಹೇಳಿದ್ದರೆ ಗಂಟೇನು ಹೋಗ್ತಿತ್ತು......?" ಎಂದಳು.

ಕೃಷ್ಣ ಕೋಪದಿಂದ, "ನಾನು ಆರು ವರ್ಷ ಜೈಲಿಗೆ ಹೋಗ್ತಿದ್ದೆ ಮೀರಾ ?" ಎಂದ.

ಮೀರಾ ಕೋಪದಿಂದ, "ಹೋಗಿದ್ರೆ ಏನಾಗ್ತಿತ್ತು ? ಅವರು ಒಂದು ಲಕ್ಷ ರೂಪಾಯಿ ಕೊಡ್ತಿರಲಿಲ್ಲವಾ ?" ಎಂದಳು.

ಕೃಷ್ಣ ರೋಷದಿಂದ, "ಹೂಂ ಕೊಡ್ತಿದ್ದರು. ನೀನು ಆ ದುಡ್ಡಲ್ಲಿ ಮಜಾ ಮಾಡ್ತಿದ್ದೆ. ನಾನು ಅಲ್ಲಿ ಜೈಲಲ್ಲಿ ತೊಳಲಾಡ್ತಿದ್ದೆ. ಕೈ ಹಿಡಿದ ಹೆಂಡ್ತಿಗಾದರೆ ಗಂಡನ ಮಾನ–ಮರ್ಯಾದೆ, ಒಳಿತಿನ ಬಗ್ಗೆ ಅರಿವಿರತ್ತೆ. ಆತಂಕವಿರತ್ತೆ. ನೀನು ಸೂಳೆ, ನಿನಗೆ ನನ್ನ ಒಳ್ಳೇದು, ಕೆಟ್ಟದು ಏನು ಬೇಕು ನಿನಗೆ ಬೇಕಾದ್ದು ದುಡ್ಡು" ಎಂದ.

"ಜಾಸ್ತಿ ಮಾತಾಡದೇ ಹೋಗ್ರಿ. ತಿರುಗಾ ಅವನು ಬಂದ್ರೆ ಕಾಲು ಮುರಿಸಿ ಹಾಕ್ತೀನಿ ಅಂತ ಸೇಠ್ ಹೇಳಿದ್ದಾರೆ. ಜೀವದ ಮೇಲೆ ಆಸೆ ಇದ್ದರೆ ಈ ಕಡೆ ಬರಬೇಡಿ" ಎಂದಳು.

ಅವನು ವಿಹ್ವಲನಾಗಿ ಅಲ್ಲಿಂದ ಹೊರಟ. ಮನೆಗೆ ಹೋಗಲು ಮುಖವಿರಲಿಲ್ಲ. ಆದರೆ ಅಲ್ಲಿ ಹೋಗದೇ ಇನ್ನೆಲ್ಲಿ ಹೋಗುವುದು.?

ಮಗನ ಮುಖ ಕಂಡೊಡನೆ ತಾಯಿ ಅಳುತ್ತ, "ಊರೋರೆಲ್ಲಾ ಏನೇನೋ ಆಡ್ಕೋತಾ ಇದ್ದಾರಲ್ಲೋ ...? ಏನೋ ಕಳ್ಳ ನೋಟಿನ ದಂಧೆ ಅಂತೆ. ಇಂಥ ಕೆಲಸ ಮಾಡಿ ನಮ್ಮ ಮುಖಕ್ಕೆ ಏಕೆ ಮಸಿ ಬಳಿದ್ಯೋ ?" ಎಂದು ಅಳತೊಡಗಿದರು.

ಗೋದಾ ಬಂದಳು, "ಅಮ್ಮ ಏಕೆ ಹುಯಿಲೆಬ್ಬಿಸ್ತಿ ಕೆಟ್ಟ ಮಾರ್ಗಕ್ಕೆ ಹೋದಾಗಲೇ ಅವನನ್ನ ತಿದ್ದದೇ ಬೆಳೆಸಿದೋಳು ನೀನು. ಅದರ ಫಲ ಈ ಹಂತಕ್ಕೆ ಬಾತು" ಎಂದು ಬೈದು,

"ಕೃಷ್ಣ ನಿಜ ಹೇಳು ಏನು ನಿನ್ನ ಕಥೆ ?"

ಸೋತು ಸೊಪ್ಪಾಗಿದ್ದ ಕೃಷ್ಣ ಪೂರ್ತಿ ಕಥೆ ಹೇಳಿದ.

"ಆಯ್ತು ನಿನ್ನ ಕ್ಷಮಿಸ್ತೀನಿ. ಈಗಂತು ನಿನಗೆ ಯಾರು ಕೆಲಸ ಕೊಡಲ್ಲ. ದುಡಿಯೋರಿಗೇನು ಎಲ್ಲಾದರೂ ಕೆಲಸ ಕೊಡ್ತಾರೆ ಅಂದಿದ್ದಿ. ಆದರೆ ನನ್ನ ಬಿಟ್ಟು ಈಗ ನಿನಗೆ ಯಾರು ಕೆಲಸ ಕೊಡಲ್ಲ. ನೊಂದ ವ್ಯಕ್ತಿ ಅಮಾಯಕನಾಗಿ ಯಾರೋ ಮಾಡಿದ ತಪ್ಪಿಗೆ ಊರ ತುಂಬ ಕಳ್ಳನೋಟಿನ ದಂಧೆಯವ ಅಂತ ಹೆಸರು ಕೆಡಿಸಿಕೊಂಡೋನೂಂತ ಸ್ವಂತ ಅಕ್ಕನಾದ ನನಗೆ ಮಾತ್ರ ಗೊತ್ತು" ಎಂದಳು.

"ನಾನು ಮಹಾಪರಾಧಿ ಅಕ್ಕ" ಎಂದ ತಲೆ ತಗ್ಗಿಸಿ.

"ಆಯ್ತು ಅಷ್ಟು ಅಪರಾಧ ಪ್ರಜ್ಞೆ ನಿನಗಿದ್ದರೆ ಸಾಕು. ಆದರೆ ಈ ಪಶ್ಚಾತಾಪ, ಅಪರಾಧ ಪ್ರಜ್ಞೆ ಕಪಟ ನಾಟಕವಾಗಬಾರದು. ಬೇಡರ ದರೋಡೆಕಾರ ಪಶ್ಚಾತಾಪದಿಂದ ತಪಸ್ಸು ಮಾಡಿ ವಾಲ್ಮೀಕಿಯಾದ ಕಥೆ ನಿನಗೆ ಗೊತ್ತೋ ಇಲ್ಲವೋ ?"

"ನಾನು ಯಾವ ತಪಸ್ಸು ಮಾಡಲಿ ಅಕ್ಕಾ ...?" ಎಂದ.

"ಕರ್ತವ್ಯವೇ ನಿನ್ನ ತಪಸ್ಸು. ಮಹಡಿಯ ಮೇಲೆ ಜಯಾ ಮನೆ ಕಟ್ಟಿಸಿದ್ದಾಳೆ. ಅಂಗಡಿ ಬಡಾಯಿಸಿದೆ. ಈ ನಡುವೆ ಜಯಾಳ ಆರೋಗ್ಯ ಚೆನ್ನಾಗಿಲ್ಲ ಆಗಾಗ ಹೊಟ್ಟೆ ನೋವು ಕಾಡಿಸ್ತಿರತ್ತೆ. ಅಂಗಡಿ ಮಾಲಕಿ ಮಾತ್ರ. ಅವಳು ಅಂಗಡಿ ಮೇಲೆ ಕೂಡಲಾರಳು. ನೀನು ಉಳಿದ ಇಬ್ಬರು ಕೆಲಸಗಾರರೊಂದಿಗೆ ಕೆಲಸ ಮಾಡು. ಅವರಿಬ್ಬರಿಗೆ ಆರ್ನೂರು ಆರ್ನೂರು ಕೊಡ್ತಾಳೆ. ನಿನಗೆ ಸಾವಿರದೈನೂರು ಕೊಡ್ತಾಳೆ. ತಂದೆ–ತಾಯಿನ್ನ ಸಾಕಿ ಕೊಂಡು ಆ ಮನೇಲಿರು. ಅಮ್ಮ ಅನಾರೋಗ್ಯದಲಿರೋ ಸೊಸೆಗೆ ಸೇವೆ ಮಾಡು. ಮಗ ಸೊಸೆಗೆ ವಿರಸ ತಂದು ಆ ಮನೆಯ ಯಜಮಾನಿಕೆ ಪಟ್ಟ ನಿನಗೆ ಬರಲೀಂತ ಬಯಸಬೇಡ" ಎಂದಳು.

"ಆಗಲಮ್ಮ ನನಗೂ ಎಪ್ಪತ್ತರ ಹತ್ತಿರ ಬಂತು. ಇನ್ಯಾಕೆ ಕಾಮ ಕ್ರೋಧ ? ಒಂದು ಮೊಮ್ಮಗನ್ನ ಕಂಡು ಕಣ್ಣು ಮುಚ್ತೀನಿ" ಎಂದರು.

"ಸಧ್ಯ ! ಜಯಾಳ ಮನಸ್ಥಿತೀನು ಚೆನ್ನಾಗಿಲ್ಲ ದೈಹಿಕ ಸ್ಥಿತೀನು ಚೆನ್ನಾಗಿಲ್ಲ. ಮೊಮ್ಮಗೂಂತ ಆಶೇಪಡಲೇ ಬೇಡ. ಅವನು ಮಾಡಿರೋ ದ್ರೋಹಕ್ಕೆ ಅವನ ಮುಖ ನೋಡ್ಲಿಕ್ಕೆ ಅವಳು ಇಷ್ಟಪಡಲ್ಲ. ಅವಳಿಗಾಗಿ ಒಲಿದು ಮಾತಾಡಿಸಿ ಬರೋವರಿಗೆ ಅವಳ ತಂಟೆಗೆ ಹೋಗಬೇಡ ಕೃಷ್ಣ ಅವಳು ಹಿಂದಿನ ಹಾಗೆ ನಿನ್ನ ಕಾಮದ ಗೊಂಬೆಯಾಗಿ ನಿನ್ನ ಓಲೈಸಲಾರಳು" ಎಂದಳು.

"ಅವನ ಮುಖ ನೋಡೋ ಯೋಗ್ಯತೆ ಸಹ ನನಗಿಲ್ಲಕ್ಕ ನಾನೊಬ್ಬ ಪಾಪಿ" ಎಂದ.

"ಸರಿ, ಅಲ್ಲಿನ ಸಾಮಾನೆಲ್ಲಾ ಗಂಟು ಮೂಟೆ ಕಟ್ಟಿ ಮಹಡಿ ಮೇಲಿನ ಮನೆಗೆ ತಂದು ಹಾಕು. ಅಪ್ಪ–ಅಮ್ಮನ ಜೊತೆ ನಾಳೆಯಿಂದ಼್ಲೇ ಅಲ್ಲಿರು" ಎಂದಳು.

ನಂತರ ಮಹಡಿಯ ಮೇಲಿನ ಮನೆಗೆ ಬಂದಳು. ಮುಂದೆ ಅಂಗಡಿ ಅದರ ಹಿಂದೆ ಗೌಡಾನ್ ಪೂರ್ವಾಭಿಮುಖವಾಗಿ ಅಂಗಡಿ ಬಾಗಿಲಾದರೇ, ಉತ್ತರಭಿಮುಖವಾಗಿ ಮನೆ ಬಾಗಿಲು. ಬಾಲ್ಕನಿ ಹಾಗು ಮನೆಯೊಳಗೆ ಹೋದರೆ ವಿಶಾಲವಾದ ಹಜಾರ. ಹಜಾರದ ಒಂದು ಬದಿ ಮಂಚ ಹಾಕಿ ಅಲ್ಲಿ ಜಯಲಕ್ಷ್ಮಿ ಮಲಗುತ್ತಿದ್ದಳು. ಕಳೆದ ಎರಡು ತಿಂಗಳಿಂದ ಅವಳು ಅಂಗಡಿಗೆ ಸಹ ಜಾಸ್ತಿ ಹೋಗದಂತೆ ನೋವು ಕಾಡಿಸುತ್ತ ಇತ್ತು. ಹಜಾರದಲ್ಲಿ ಒಂದು ಬೆಡ್‌ರೂಮ್, ಇನ್ನೊಂದು ಅಡಿಗೆ ಮನೆ. ಹಿಂಭಾಗದ ಪ್ಯಾಸೇಜಲ್ಲಿ ಬಚ್ಚಲ ಮನೆ, ಲೆಟ್ರಿನ್ ಚಿಕ್ಕದಾದರೂ ಚೊಕ್ಕವಾದ ಮನೆ.

ರಾತ್ರಿ ಅವಳ ತಾಯಿ–ತಂದೆ ಬಂದು ಅಲ್ಲೇ ಮಲಗುತ್ತ ಇದ್ದರು.

ಗೋದಾ ಬಂದು, "ನಾಳೆಯಿಂದ ಅಪ್ಪ, ಅಮ್ಮ, ಕೃಷ್ಣ ಈ ಮನೇಲೆ ಬಂದಿರ್ತಾರೆ ಜಯ" ಎಂದಳು.

"ನಿಮ್ಮಿಷ್ಟ ಅಕ್ಕ, ನೀವು ಕಟ್ಟಿಸಿದ ಮನೆ ಇದು" ಎಂದಳು ನೀರಸವಾಗಿ.

ಗೋದಾ ವಿಷಾದದಿಂದ, "ಆಟಕ್ಕಾಗಿ ಮನೆ ನಿನ್ನ ಹೆಸರಿಗೆ ರಿಜಿಸ್ಟರ್ ಮಾಡಿಸಿದೆ ಅಂದ್ಕೊಂಡ್ಯಾ ? ಮನೆ, ಅಂಗಡಿ ಎರಡೂ ನಿನ್ನದೇ. ಅವನು

ನಿನ್ನ ನಡು ನೀರಲ್ಲಿ ಕೈ ಬಿಟ್ಟ. ಅಥವ ಅವನು ಹಾಕಿದ ಹೊರೆಹೊಟ್ಟೆ ಊಟ ಉಂಡು ನಮ್ಮಮ್ಮನ ಕಿರುಕುಳ ಎದುರಿಸ್ತಾ ಅವನಾಡೋ ಹೊಲಸು ಆಟ ನೋಡ್ಕೊಂಡು ಸುಮ್ಮನೆ ಬಿದ್ದಿರೋ ಜೀವನ ನಿನಗೆ ಕೊಡ್ತಿದ್ದ. ಭಾರತದಲ್ಲಿ ಸಾವಿರಾರು ಅಸಹಾಯಕ ಬಾಲ–ತರುಣಿಯರು ಅಂಥಾ ಜೀವನ ಅನುಭವಿಸ್ತಿದ್ದಾರೆ. ತವರು ಮನೆ ಬಲವಿಲ್ಲ ಉದ್ಯೋಗವಿಲ್ಲ. ಬಾಲತನದ ಕರಾಳ ಛಾಯೆಯಲ್ಲಿ ನಲುಗಿ ಪಾಲಿಗೆ ಬಂದದ್ದೆ ಪಂಚಾಮೃತ ಅಂತ ಆ ಕಹಿಬೇವಿನ ರಸ ಕುಡಿತ ಬಾಳ್ತಿದ್ದಾರೆ. ಆದರೆ ನಿನ್ನ ಬದುಕು ಹಾಗಾಗ್ಲಿಕ್ಕೆ ಬಿಡಲಿಲ್ಲ ನಾನು. ನಿನಗೆ ಆಶ್ರಯ ಕೊಟ್ಟೆ, ಆರ್ಥಿಕ ಸ್ವಾತಂತ್ರ್ಯ ಕೊಟ್ಟೆ. ಆದರೆ ನಾನು ಪೂರ್ತಿ ದೇವರಲ್ಲ. ನಿನಗೆ ಆರೋಗ್ಯ ಕೊಡಲಿಕ್ಕೆ ಆಗಲಿಲ್ಲ. ಮೂರು ವರುಷದಿಂದ ಆಗಾಗ ಬರ್ತಿದ್ದ ಹೊಟ್ಟೆ ನೋವು ಉಪೇಕ್ಷಿಸಿದಿ. ಆಗ ಆದ ಅಬಾರ್ಷನ್ನಲ್ಲಿ ಗರ್ಭಕೋಶದಲ್ಲಿ ಏನೋ ಸೋಂಕು ಆಗಿದೆ. ಒಂದು ಆಪರೇಷನ್ ಆಗಬೇಕೂಂದಿದ್ದಾರೆ. ಕೃಷ್ಣ ತೀರ ಸೋತು ಬಂದಿದ್ದಾನೆ. ಒಮ್ಮೆಲೇ ಅವನನ್ನು ಕ್ಷಮಿಸು ಎನ್ನಲಾರೆ ನಿಧಾನವಾಗಿ ಪರಿಶೀಲಿಸು ನಿನಗೊಪ್ಪಿಗೆಯಾದರೆ ಸ್ವೀಕರಿಸು" ಎಂದಳು. ಜಯಲಕ್ಷ್ಮಿ ಸುಮ್ಮನಿದ್ದಳು.

"ತನ್ನನ್ನ ಮರೆತು ದೂಡಿದ ದುಶ್ಯಂತನ್ನ ಶಕುಂತಲೆ ಹೇಗೆ ಸ್ವೀಕರಿಸಿದಳು ? ಅಗ್ನಿ ಪರೀಕ್ಷೆ ಮಾಡಿ ಸ್ವೀಕರಿಸಿದ ಶ್ರೀರಾಮನ್ನ ಸೀತೆ ಹೇಗೆ ಸ್ವೀಕರಿಸಿದಳು ? ತುಂಬು ಗರ್ಭಿಣಿಯಾದ ತನ್ನನ್ನು ಕಾಡಿಗಟ್ಟಿದ್ದ ಶ್ರೀರಾಮನ ಬಗ್ಗೆ ಸೀತೆ ದೂಷಿಸಲಿಲ್ಲ. ಕಡು ಕರುಣಿ ರಾಘುವನೊಳು ತಪ್ಪಿಲ್ಲ ಹೆಣ್ಣಾಗಿ ಜನಿಸಿದ್ದೇ ತಪ್ಪು ಎಂದಳು. ದಟ್ಟ ಕಾಡಿನಲ್ಲಿ ಅರ್ಧ ಸೀರೆ ಕತ್ತರಿಸಿ ಬಿಟ್ಟು ಹೋದ ನಳನಿಗಾಗಿ ದಮಯಂತಿ ತಪಸ್ಸು ಮಾಡಿ ಹುಡುಕಿ ಸ್ವೀಕರಿಸಿದಳು. ಇವರಿಗೆಲ್ಲಾ ಬೇರೆ ಮದುವೆ ಅವಕಾಶವೂ ಇತ್ತು. ಸ್ವತಹ ದಮಯಂತೀನ್ನ ವಿವಾಹವಾಗೋ ಆಶೆಯಿಂದ ನೂರು ಯೋಜನ ದೂರದಿಂದ ಋತುಪರ್ಣ ಬಂದಿದ್ದ. ಆದರೆ ಅವಳಿಗೆ ಬೇಕಾಗಿದ್ದು ತನ್ನ ನಳಮಹರಾಜ ಮಾತ್ರ. ಭಾರತೀಯ ಸಂಸ್ಕೃತಿಯ ಸತ್ವ ಇರೋದೇ ಹೆಣ್ಣಿನ ಕ್ಷಮಾ ಗುಣದಲ್ಲಿ, ಕ್ಷಮೆಯಾ ಧರಿತ್ರಿ ಅನ್ನೋ ಹಾಗಿದ್ರೇ ಹೆಣ್ಣಿನ ಸಂಸಾರಿಕ ಜೀವನ ಸಹನೀಯವಾಗೋದು" ಎಂದಳು.

"ಇವತ್ತಿನ ಸ್ತ್ರೀ ವಾದಿಗಳಿಗೆ, ವಿಮೆನ್ಸ್‌ಲಿಬ್‌ನೋರಿಗೆ ಇಂಥಾ ಉದ

ಹರಣೆ ಕಹಿ ಎನಿಸಬಹುದು. ಇಂಥಾ ಜಿಲ್ಲಾ ಮಟ್ಟದ ಊರಲ್ಲಿ ಸ್ತ್ರೀ ಸಮಾನತೆ ಅಂತ ಪ್ರತಿಪಾದಿಸ್ತ ಬೊಬ್ಬೆ ಹೊಡೆಯೋ ಕೆಲವು ಮಹಿಳಾವಾದಿಗಳ ಸಭೆಗೂ ನೀನು ಹೋಗಿ ಬಂದಿದ್ದ. ನಿನ್ನ ಅಭಿಪ್ರಾಯ ಏನಿದೆಯೊ ?" ಎಂದು ಮತ್ತೆ ಕೇಳಿದಾಗ,

"ಅಕ್ಕ ...ಸ್ಲೀವ್‌ಲೆಸ್ ಬ್ಲೌಸ್ ತೊಟ್ಟು ಬಾಬ್‌ಕಟ್ ಕೂದಲು ಹಾರಾಡಿಸ್ತಾ ವೇದಿಕೆ ಮೇಲೆ ಸ್ತ್ರೀ ಸ್ವಾತಂತ್ರ್ಯ ಅಂತ ಹಾರಾಡೋ ಆ ಜನಗಳು ಎಮನೆ ಬದುಕು ಕೊಡ್ತಾರೆಯೆ ? ಒಂದು ವರದಹನ ಆದರೆ ಆ ಮನೆ ಮುಂದೆ ಪಿಕೆಟಿಂಗ್ ನಡಿಸ್ತಾರೆ. ಅಥವ ನಮ್ಮಂಥಹವರು ಬೇಸತ್ತು ಸತ್ತರೆ ಹೆಂಗಸಿಗೆ ಅನ್ಯಾಯವಾಗ್ತಿದೆ. ಅತ್ಯಾಚಾರವಾಗ್ತಿದೆ ಅಂತ ತಮ್ಮ ಭಾಷಣಕೆ ಇನ್ನು ಹತ್ತು ನಿಮಿಷ ಜಾಸ್ತಿಯಾಗಿ ಪಾಯಿಂಟ್ಸ್ ಸಿಕ್ತಲ್ಲ ಅಂತ ಮೇಜು ಕುಟ್ಟಿ ಬೊಬ್ಬೆ ಹೊಡೀತಾರೆ.

ಸ್ವತಹ ಆ ಪ್ರೈಕಿ ಒಬ್ಬಾಕೆ ನನ್ನ ಹತ್ತಿರ ಚಂದ ಕೇಳ್ಲಿಕ್ಕೆ ಅಂಗಡಿಗೆ ಬಂದಾಗ, "ನೀವು ಸ್ವಂತ ಉದ್ಯಮಿ ಆ ಅಯೋಗ್ಯ ಗಂಡನಿಂದ ಡೈವೋರ್ಸ್ ತಗೊಳ್ಳಿ. ಸಂಘಕ್ಕೆ ಸಕ್ರಿಯವಾಗಿ ದುಡೀರಿ.ಆದರ್ಶವಾದಿ ಸಿಕ್ಕರೆ ಎರಡನೆಯ ಮದುವೆ ಮಾಡ್ಕೊಳ್ಳಿ" ಅಂತಾಳೆ. ಆದರೆ ಮನೇಲಿ ಒಬ್ಬ ವಿಧವೇ ನಾದಿನಿ ಇದ್ದಾಳೆ. ಅವಳನ್ನು ಕೆಲಸದೋಳಿಗಿನ್ನ ಕಡೆಯಾಗಿಟ್ಟು ಕಿರುಕುಳ ಕೊಡ್ತಾಳೆ. ಅವಳ ಮತ್ಸರ, ದ್ವೇಷಾ ಅತ್ತಿಗೆ ನಾದಿನಿ ವಿದ್ಯೆ ನೋಡಿದರೆ ಅಸಹ್ಯ ಆಗತ್ತೆ. ವೇದಿಕೆ ಮೇಲೆ ಭಾಷಣ ಬಿಗೀತಾಳೆ ಹೆಣ್ಣಿನ ಸ್ವಾತಂತ್ರ್ಯ ಸಮಾನತೆ ಅಂತ ಸಾಧಿಸಿ ಕತೆಗಳು ಬರೀತಾಳೆ. ಅವಳ ಪ್ರತಿ ಕಥೇಲು ಪುರುಷರು ಖಳನಾಯಕರು, ಆದರೆ ತನ್ನ ಅತ್ತಿಗೆ, ನಾದಿನಿ ಪಾಲಿಗೆ ತಾನೇ ಖಳನಾಯಕಿ ಆಗಿದ್ದಾಳೆ. ನಾನು ಕಷ್ಟಕ್ಕೆ ಸಿಕ್ಕಿದಾಗ ಯಾವ ಅತ್ತಿಗೆ, ನಾದಿನಿ ವಿದ್ಯೆ ತೋರಿಸದೆ ನನಗೆ ಬದುಕು ಕೊಟ್ಟೋರು ನೀವು. ಗಂಡನಿಗೆ ಬೇಡದೋಳು ಗುಂಡು ಕಲ್ಲಿಗೂ ಬೇಡಾಂತ ಅತ್ತೆ. ಅತ್ತಿಗೆ ನಾದಿನಿಯರಿಂದ ಹೀಯಾಳಿಕೆ ಅನುಭವಿಸ್ತ ಬಾಳೋ ಅನೇಕ ಹೆಣ್ಮಕ್ಕಳನ್ನು ನೋಡಿದ್ದೀನಿ. ಆದರೆ ನೀವು ಆಕಾಶದಲ್ಲರಳಿದ ಹೂವು, ಯಾವ ವಿಮೆನ್ಸ್‌ಲಿಬ್‌ನೋರು ನನಗೆ ಆದರ್ಶ ಅಲ್ಲ. ನನಗೆ ನೀವೆ ಆದರ್ಶ ನಿಮ್ಮ ಮಾತೇ ವೇದವಾಕ್ಯ....." ಎಂದಳು.

ಕೃಷ್ಣ ಅವನ ತಂದೆ–ತಾಯಿ ಇಲ್ಲೇ ಬಂದು ನೆಲೆಸಿದರು. ಕೃಷ್ಣನ ತಂದೆ ಬಾಲ್ಕನಿಯಲ್ಲೇ ಭಾಗವತ ಓದುತ್ತ ಕೂಡುವುದು. ಆಯಾಸವಾದರೆ ಅಲ್ಲೇ ಮಲಗುವುದು. ರಾತ್ರಿಯೂ ಅಲ್ಲೇ ಬಂದು ಮಲಗಿಕೊಳ್ಳುವರು. ಹಜಾರದಲ್ಲಿ ಕೆಳಗೆ ಹಾಸಿಕೊಂಡು ಲಕ್ಷ್ಮಮ್ಮ ಮಲಗುವರು. ಕೃಷ್ಣ ಅಂಗಡಿ ಭಾಗಕ್ಕೆ ಹೋಗಿ ಮಲಗುತ್ತಿದ್ದ. ಯಾವಾಗಲೂ ಮಲಗಿರುವ ಸೊಸೆ ಅವರಮ್ಮ ಪಥ್ಯದಡಿಗೆ ಮಾಡಿ ತಂದು ಬಡಿಸುತ್ತಿದ್ದರು.

ಲಕ್ಷ್ಮಮ್ಮನಿಗೆ ಸೊಸೆಯನ್ನು ಗದರಿಸುವಷ್ಟು ಧೈರ್ಯ ಇಲ್ಲದಿದ್ದರೂ ಸೊಸೆಗೆ ಆತ್ಮೀಯತೆ ಕೊಡುವಷ್ಟು ಉದಾರತೆಯೂ ಇರಲಿಲ್ಲ. ಆ ಪಥ್ಯದಡಿಗೆ ಏನು ಕಷ್ಟವಿರಲಿಲ್ಲ. ನೆನೆ ಹಾಕಿದ ಅಕ್ಕಿ ಅನ್ನ, ಕಾರ ಇಲ್ಲದ ಜೀರಿಗೆ ಒಗ್ಗರಣೆ ಕಟ್ಟು, ಸಪ್ಪೆಯಾಗಿ ಬೆಂದ ತರಕಾರಿ ಮೊಸರಿನರಾಯತ.

ಆದರೆ ಆಕೆ ಮನೆ ಅಡಿಗೆ ಮಾಡಿ ಗಂಡ ಮಗನಿಗೆ ಬಡಿಸುವಷ್ಟರಲ್ಲೇ ಸಾಕಾಗತ್ತೆ" ಎನ್ನುತ್ತಿದ್ದರು.

ಕೃಷ್ಣ ಅವಳಿಗೆ ಮನಕರಗುವಂತೇ ಕಾಗದ ಬರೆದು ಕೈಗೆ ಕೊಡುತ್ತಿದ್ದ. ಜಯಲಕ್ಷ್ಮಿಗೆ ಓದಿದಾಗಲು ಏನು ಸ್ಪಂದನ ಆಗುತ್ತಿರಲಿಲ್ಲ.

ಸುಮಾರು ಮೂರು ತಿಂಗಳು ಕಳೆಯಿತು. ಒಂದು ದಿನ ಆಸ್ಪತ್ರೆಗೆ ಹೋಗಬೇಕೆಂದು ತಾಯಿಯೊಡನೆ ಕೆಳಗಿಳಿದು ಬಂದಿದ್ದಳು ಜಯಲಕ್ಷ್ಮಿ.

ಗೋದಾ ಬಂದು ಮಾತಾಡಿಸಿ, "ಹೇಗಿದೆ ನಿಮ್ಮಿಬ್ಬರ ಆತ್ಮೀಯತೆ ?" ಎಂದಳು.

ಜಯಲಕ್ಷ್ಮಿ ಕೃಷ್ಣನ ಕೆಲವು ಪತ್ರಗಳು ನೀಡಿ ಅವರೇನೋ ಹಂಬಲಿಸಿ ನೂರು ಪತ್ರ ಬರೀತಾರೆ. ಆದರೆ ನನಗೆ ಏಕೋ ಮನದಲ್ಲಿ ಸ್ಪಂದನವೇ ಮೂಡಲ್ಲಕ್ಕ" ಎಂದಳು.

ಗೋದಾ ಚಿಂತಿಸುತ್ತಾ, "ನಿಜ ನಿನ್ನ ಮನಕ್ಕೆ ಬಲವಾದ ಗಾಯವಾಗಿ ಅದು ಹದವಾಗಿ ಹೋಗಿದೆ. ನಿನ್ನ ಮನಸ್ಸಿಗೆ 'ಚೈತನ್ಯ ಬರಬೇಕಾದರೆ ಅವನನ್ನು ಬಲವಾಗಿ ಪರೀಕ್ಷೆ ಮಾಡಬೇಕೂಂತಿದ್ದೀನಿ. ಈ ಪತ್ರಗಳಲ್ಲಿರೋ ಉದ್ಗಾರಗಳು ನಿಜವೋ......ಸುಳ್ಳೋ.... ನಿಜವಾದ ಪಶ್ಚಾತ್ತಾಪವೋ ಪರೀಕ್ಷೆ ಮಾಡ್ತೀನಿ" ಎಂದಳು. ಆ ಪರೀಕ್ಷೆಯ ವಿಧಾನವನ್ನು ಚುಟುಕಾಗಿ ತಿಳಿಸಿದಳು.

ಜಯಲಕ್ಷ್ಮಿ ನಗುತ್ತ, "ಇದು ಬಹಳ ಕ್ರೂರವಾದ ಕಠಿಣ ಪರೀಕ್ಷೆ ಆಯ್ತು" ಎಂದಳು.

"ಮತ್ತೆ ಅವನು ಮೂರು ವರ್ಷ ಪರಸ್ತ್ರೀ ಬೆನ್ನ ಹಿಂದೆ ಬಿದ್ದು, ಆಡಿದ ಆಟ ಕಡಿಮೆಯಾ ?" ಎಂದಳು. ಎಷ್ಟು ಕ್ರೂರವಾಗಿ ನಿನ್ನ ಮನಸು ಘಾಸಿಗೊಳಿಸಿದ್ದಾನೆ. ಅವನಿಗೆ ಈ ಪರೀಕ್ಷೆ ಮಾಡಿ ಗೆದ್ದರೆ......ಇದರಲ್ಲಿ ಅವನು ಗೆದ್ದರೆ ಈ ಕಾಗದಗಳಲ್ಲಿ ಬರೆದ ಪ್ರೇಮ ಸತ್ಯ......" ಎಂದಳು.

ಜಯಲಕ್ಷ್ಮಿ ಗೋದಾಳ ಸಾತ್ವಿಕ ರೋಷಕ್ಕೆ......ಮನದಲ್ಲೆ ತಲೆಬಾಗಿ ನಮಿಸಿದಳು.

*   *   *   *

ಜಯಲಕ್ಷ್ಮಿ ಗರ್ಭಕೋಶದ ಆಪರೇಶನ್ ಆಗಿ ಒಂದು ವಾರವಾಗಿತ್ತು. ಅದು ಒಂದು ಮೈನರ್ ಆಪರೇಷನ್ ಏನಲ್ಲ. ಅಂಡನಾಳಗಳಲ್ಲಿ ಸೊಂಕಾಗಿ ಮುಚ್ಚಿಕೊಂಡಿದ್ದವು. ಅದಕ್ಕೆ ಚಿಕಿತ್ಸೆ ಮಾಡಿದ್ದರು. ಮುಂದೆ ಮಕ್ಕಳಾಗುವ ಸಾಧ್ಯತೆ ಇದೆ" ಎಂದಿದ್ದರು. ಗೋದಾಳೇ ಗಂಗುಬಾಯಿ ಜೊತೆ ಹೋಗಿ ಆಪರೇಷನ್ ಮಾಡಿಸಿ ಬಂದಿದ್ದಳು.

ಆ ದಿನ ಮಹಡಿಯ ಮೇಲಿನ ಮನೆಗೆ ಬಂದು,"ಜಯಾಗೆ ಆಪರೇಷನ್ ಆಗಿದೆಯಪ್ಪಾ....." ಎಂದಳು.

ಊಟ ಮಾಡುತ್ತಿದ್ದ ಕೃಷ್ಣ ಹೌಹಾರಿ, "ಏನು ಆಪರೇಷನ್ ಅಕ್ಕ?" ಎಂದ. ಎರಡು ದಿನದಿಂದ ಸೊಸೆ ಕೆಳ ಮನೆಯಲ್ಲಿ ಇದ್ದರೂ ಲಕ್ಷ್ಮಮ್ಮ ವಿಚಾರಿಸಲು ಬಂದಿರಲಿಲ್ಲ.

"ಅವಳದು ಅನಾರೋಗ್ಯ, ಆಸ್ಪತ್ರೆ ಅಲೆದಾಟ ಇದ್ದದ್ದೇ" ಎಂದು ತಾತ್ಸಾರವಾಗಿ ನುಡಿದಿದ್ದರು. ಕೃಷ್ಣ ಮಾತ್ರ ಕಾಲು ಸುಟ್ಟ ಬೆಕ್ಕಿನಂತೆ ನಾಲ್ಕಾರು ಭಾರಿ ಅಕ್ಕನ ಮನೆಗೆ ಎಡೆತಾಕಿ,

"ಆಸ್ಪತ್ರೆಗೆ ನಾನು ಬರಲಾ ಅಕ್ಕ.....?" ಎಂದಿದ್ದ.

"ಮೂರು ವರ್ಷದಿಂದ ನೀನೇ ಬಂದಿದ್ದೆಯೇನು ? ಅವಳು ಇಲ್ಲಿ ನೋವು ಅನುಭವಿಸೋವಾಗ ನೀನು ಅಲ್ಲಿ ಯಾವ್ಯೋಳ ಜೊತೆಯೋ ಮಜಾ

ಮಾಡ್ತಿದ್ದೆ" ಕಟುವಾಗಿ ನುಡಿದು ಗಂಗುಬಾಯಿ ಜೊತೆ ತಾನು ಮಾತ್ರ ಹೊರಟಳು.

ಈ ದಿನ ಬಂದು ಬೇಕೆಂದೇ, "ಅವಳ ಗರ್ಭಕೋಶ ತೆಗೆದು ಹಾಕಿದ್ದಾರೆ. ಎಂಟು ದಿನ ಆಸ್ಪತ್ರೇಲಿರ್ತಾಳೆ ಬಂದ ಮೇಲೆ ಮೂರು ತಿಂಗಳು ನಮ್ಮಲ್ಲೇ ಇರ್ತಾಳೆ. ಅವರಮ್ಮನೇ ಆರೈಕೆ ಮಾಡ್ತಾಳೆ" ಎಂದಳು.

ಲಕ್ಷ್ಮಮ್ಮ ಕಂಗಾಲಾಗಿ, "ಗರ್ಭಕೋಶವೇ ತೆಗೆದು ಹಾಕಿದರೇ ಮಕ್ಕಳಾಗಲ್ಲಲ್ವೆ ? ಹಾಗಾದರೆ ನನಗೆ ಮೊಮ್ಮಗನ್ನ ನೋಡೋ ಭಾಗ್ಯವೇ ಇಲ್ಲವೆ ?" ಎಂದು ಒರಲಾಡಿದರು.

"ಅಮ್ಮ ಊರಾ ತುಂಬಾ ಸುದ್ದಿ ಹಬ್ಬಿಸಿ, ಜನರ ನಾಲಿಗೆಗೆ ಅವಳನ್ನ ಆಹಾರ ಮಾಡಬೇಡ. ಈಗಾಗ್ಲೆ ಮೂರು ವರ್ಷದಿಂದ ಸಾಕಷ್ಟು ನೊಂದಿದ್ದಾಳೆ. ಓಣೀಲಿ ಎಲ್ಲರ ಮುಂದು ಟ್ಯೂಬ್ ಸ್ವಚ್ಛ ಮಾಡಿಸಿಕೊಂಡಳ. ಇನಾಫೆಕ್ಷನ್ ಆಗಿದೇಂತ ಹೇಳಿದ್ದೀನಿ. ನೀನು ಅಷ್ಟೇ ಹೇಳು. ಇಲ್ಲಿ ಬಂದ ಮೇಲು ಮಕ್ಕಳಾಗಲ್ಲ, ಮರಿ ಆಗಲ್ಲಾಂತ ಅವಳ ಮನಸು ನೋಯಿಸಬೇಡಿ" ಎಂದಳು.

"ಆಗಲಮ್ಮ ಅವಳ ಚಿಂತೆಯೇ ನಿನಗೆ. ನನ್ನ ಮಗನಿಗೆ ಎಂಥಾ ಅನ್ಯಾಯ ಆಯ್ತಲ್ಲಾಂತ ನನಗೆ ಹೊಟ್ಟೆ ಉರೀತ ಇದೆ" ಎಂದರಾಕೆ

"ಅಕ್ಕ.....ಅವಳು ಚೆನ್ನಾಗಾದರೆ ಸಾಕು ಮಕ್ಕಳು ಬೇಡಾ, ಮರೀ ಬೇಡಾ ನಂಗೆ. ಅವಳ ಪ್ರೀತಿ ಒಂದು ಸಿಕ್ಕರೆ ನಾನು ಅವಳನ್ನ ದೇವತೆ ಹಾಗೆ ನೋಡ್ಕೋತೀನಿ" ಎಂದ.

"ಇನ್ಮೇಲೆ ದೇವತೆಯೇ ಅವಳು. ದೂರದಿಂದ ಪೂಜಿಸಬೇಕು" ಎಂದಳು

* * * *

ಅಂಗಡಿಯ ಇಬ್ಬರು ಕೆಲಸಗಾರರು ಮೂರು ತಿಂಗಳು ರಜ ಕೇಳಿ. ಹೋದಳು. ಇದು ಗೋದಾಳ ಏರ್ಪಾಟೆಂದು ಅವನಿಗೆ ತಿಳಿದಿರಲಿಲ್ಲ. ಗೋದಾ ಅಂಗಡಿಗೆ ಒಂದು ಹುಡುಗಿಯನ್ನು ಸೇಲ್ಸ್‌ಗರ್ಲ್ ಆಗಿ ಹಾಕಿದಳು.

“ಹರಣಿ ತುಂಬಾ ಬಡ–ಹುಡುಗಿ. ಮೂರು ತಿಂಗಳಿಗೆ ಮೂರು ಸಾವಿರ ಸಂಭಾವನೆ ಗೊತ್ತು ಮಾಡಿ ಕೆಲಸ ಕೊಟ್ಟಿದ್ದೀನಿ”

“ಆಯ್ತು ಅಕ್ಕ _ನೀನು ಹೇಗೆ ಹೇಳಿದರೆ ಹಾಗೆ” ಎಂದ.

“ಆದರೆ ಅಂಗಡಿ ಇನ್ನು ಮೇಲೆ ನಿಂದಪ್ಪ ಜಯಾ ತೀರಾ ಹತಾಶಳಾಗಿದ್ದಾಳೆ. ನನಗ್ಯಾಕೆ ಅಂಗಡಿ ಅಂತಾಳೆ ಅಂಗಡೀಲಿ ಕೂತು ಕೂತೇ ಆರೋಗ್ಯ ಹಾಳಾಯಿತಂತಾಳೆ. ಮನೆ ಒಂದು ಅವಳ ಹೆಸರಲ್ಲಿರಲಿ. ಅಂಗಡಿ ಅಂದ್ರೆ ಉರಿದು ಬೀಳ್ತಾಳೆ. ಅಂಗಡಿ ನಿನ್ನ ಹೆಸರಿಗೆ ಮಾಡಿ ಬಿಡ್ತೀನಿ” ಎಂದು ಅಂಗಡಿ ಅವನ ಹೆಸರಿಗೆ ಮಾಡಿಬಿಟ್ಟಳು.

ಹರಿಣಿ ತುಂಬಾ ಚೆಲುವೆ ದಿನಕ್ಕೊಂದು ಬಗೆ ಅಲಂಕಾರದಲ್ಲಿ ಅಂಗಡಿಗೆ ಬರತೊಡಗಿದಳು. ಬಾಸ್..... ಬಾಸ್ ಎಂದು ನೂರು ಬಗೆ ಸಲಿಗೆ ತೋರುವಳು, ಅವನು ಮಾತ್ರ ತೀರ ನಿರ್ಲಿಪ್ತನಾಗಿ ಇರುತ್ತಿದ್ದ. ದಿನಾ ಕೆಳಗಿನ ಮನೆಗೆ ಪತ್ನಿಯನ್ನು ನೋಡಲು ಬರುತ್ತ ಇದ್ದ. ಅವಳ ಹಾಸಿಗೆ ಬಳಿ ಕೂತು ಹಣ್ಣು ಬಿಡಿಸಿಡುತ್ತಿದ್ದ. ಜಯಾ ಕಣ್ಮುಚ್ಚಿ ಮಲಗಿರುತ್ತಿದ್ದಳು.

ಒಂದು ದಿನ ಹರಣಿ ಲಕ್ಷ್ಮಮ್ಮನ ಬಳಿ ಹೋಗಿ, “ಅಮ್ಮ ಅವರ ಹಿಂದಿನ ಚರಿತ್ರೆ ಎಲ್ಲಾ ನನಗೆ ತಿಳಿದಿದೆ. ಅವರ ಮೇಲೆ ನನಗೆ ತುಂಬಾ ಇಷ್ಟವಿದೆ. ಅವರೊಪ್ಪಿದರೇ ವಿವಾಹವಾಗ್ತೇನೆ” ಎಂದಳು. ಲಕ್ಷ್ಮಮ್ಮ ಹೀರಿ ಹೀರಿ ಹಿಗ್ಗಿದರು.

ಆ ದಿನ ಮಗನಿಗೆ ಊಟ ಹಾಕುವಾಗ ಅವಳನ್ನೂ ಜೊತೆಗೆ ಕೂಡಿಸಿ, “ಅಪ್ಪಾ......ಈ ಹುಡುಗಿ ರತ್ನದ ಗೊಂಬೆ ಇದ್ದಾಗಿದ್ದಾಳೆ. ನೀನು ಒಪ್ಪಿದರೆ ವಿವಾಹವಾಗ್ತಳಂತೆ. ನನಗೂ ಒಂದು ಮೊಮ್ಮಗ ಬೇಡೇನೋ? ಅವಳಿಂದಂತು ಏನು ಪ್ರಯೋಜನ ಇಲ್ಲ” ಎಂದರು.

ಕೃಷ್ಣ ಊಟದ ತಟ್ಟೆ ತಳ್ಳಿ ಎದ್ದು ನಿಂತ.

“ಅಮ್ಮ ಅವಳು ದೇವತೆ, ಅವಳಿಗೆ ನಾನು ಮತ್ತೊಮ್ಮೆ ದ್ರೋಹಾ ಮಾಡಲಾ ? ಅಕ್ಕ ಆಕಾಶದಲ್ಲರಳಿದ ಹೂವು ಅಂತ ಬದುಕಿನಲ್ಲಿ.... ಎಲ್ಲಿಂದ ಹೊಗಳಿಸಿಕೊಂಡಳು. ಅಂಥವಳ ತಮ್ಮನಾಗಿ ನಾನು ಕೊಚ್ಚೆಯ ಹುಳು ವಾಗಿ ಬಾಳಲಾ ?” ಎಂದ.

ಮಿಸ್ ಹರಿಣಿ ! ಇಂಥಾ ಭಾವನೆಗಳಿದ್ರೆ ನೀವು ಕೆಲಸಕ್ಕೇ ಬರಬೇಡಿ." ಎಂದ. "ಸಾರೀ.... ಸಾರ್.... ನೀವು ಒಂಟಿಯಾಗಿ ತೊಳಲಾಡ್ತೀರಲ್ಲಾಂತ ಕೇಳಿದೆ." ಎಂದಳು. "ಇನ್ಮೇಲೆ ಇಂಥಾ ಹಂಬಲ ನನ್ನ ಬಗ್ಗೆ ಇಟ್ಕೊಳ್ಳ ಬೇಡಿ." ಎಂದ. ಆ ದಿನವೇ ಹರಣಿಯಿಂದ ಗೋದಳಿಗೆ, ಜಯಲಕ್ಷ್ಮಿಗೆ, ಎಲ್ಲಾ ವಾರ್ತೆ ಮುಟ್ಟಿದೆಯೆಂಬುದು ಅವನಿಗೆ ಗೊತ್ತಿರಲಿಲ್ಲ. ಹರಣಿಯ ಕಾಟಾ ನಿಲ್ಲಲಿಲ್ಲ.

ಒಂದು ದಿನ ಹರಣಿ ಅವನೊಡನೆ ದಿಟ್ಟತನದಿಂದ ಮಾತಾಡಿ–

"ಸಾರ್.... ಮದುವೆ ಬೇಡ.... ನನಗು ಮದುವೆ, ಮಕ್ಕಳೊಂದ್ರೆ ಅಲರ್ಜಿ. ನಾವಿಬ್ಬರು ಪ್ರಣಯಿಗಳಾಗಿರೋಕೆ ಏನಡ್ಡಿ, ನನಗೇನು ಹಣದ ದಾಹ ಇಲ್ಲ. ಸೇಲ್ಸ್‌ಗರ್ಲ್ ಅಂತ ಪರ್ಮನೆಂಟಾಗಿ ಇಟ್ಕೊಳ್ಳಿ, ಅವರ ಸಂಬಳ ಕೊಟ್ರೆ ಸಾಕು. ನಮ್ಮನೇಲಿ ತಂಗಿ ಫ್ರೀ ಇದೆ. ನೀವು ಯಾವಾಗ ಬಂದರೂ ಸ್ವಾಗತಿಸ್ತೀನಿ." ಎಂದಳು.

ಫಟ್ಟನೆ ಅವಳ ಕೆನ್ನೆಗೆ ಹೊಡೆದ ಕೃಷ್ಣ. "ಹೆಂಗಸಾಗಿ ಅಂಥಾ...... ಹೊಲಸು ಜೀವನಕ್ಕೆ ಆಸೆ ಪಡಬೇಡಿ. ಒಬ್ಬ ಬಡವನ ಗೃಹಿಣಿ ಆಗಿ ಬದುಕಿ, ನಾನು ಕೆಲವು ಕಾಲ ಗೃಹಸ್ಥ ಅನ್ನೋ ಪಟ್ಟದಿಂದ ದೂರವಾಗಿ ಹೊಲಸಿನ ಹುಳುವಾಗಿ ಬದುಕಿದ್ದೆ. ಈಗ ಆ ಕಾಮ ನನ್ನಲ್ಲಿ ಸತ್ತಿದೆ. ನನ್ನ ಗೃಹ ಲಕ್ಷ್ಮಿಗೆ ಮಾಡಿದ ಅನ್ಯಾಯಕ್ಕೆ ಕೊರಗ್ತಿದ್ದೇನೆ. ಅವಳು ಬಂದು ಬೆಳಗಿದರೆ ಇದು ಮನೆ." ಎಂದ.

"ಆದರೆ ಅವರಿಗೆ ಮಕ್ಕಳು ಆಗಲ್ವಲ್ಲ ಸಾರ್......?" ಎಂದಳು.

"ಮಕ್ಕಳು ಯಾರಿಗೆ ಬೇಕು ? ನನ್ನಂಥಾ ಅಯೋಗ್ಯ ಸಂತಾನ ಬೆಳೆಸದಿರೋದೇ ವಾಸಿ. ಕೈ ಹಿಡಿದ ಹೆಂಡತಿಗೆ ನ್ಯಾಯವಾಗಿ ನಡಕೊಂಡು, ಅವಳ ನೊಂದ ಮನಕ್ಕೆ ತಂಪೆರೆದರೆ ಸಾಕು. ಅದೊಂದೆ ನನ್ನ ಬದುಕಿನ ಧ್ಯೇಯ." ಎಂದ.

ಎಲ್ಲಾ ಟೇಪ್ ರಿಕಾರ್ಡರ್‌ನಂತೇ ವರದಿ ಒಪ್ಪಿಸಿದಳು. ಜಯಲಕ್ಷ್ಮಿ ವಿಹ್ವಲಳಾಗಿ–"ಅಕ್ಕ ಅವರನ್ನ ಪರೀಕ್ಷಿಸಿದ್ದು ಸಾಕು. ನಾನು ನನ್ನ ಮನೆಗೆ ಹೋಗ್ತೀನಿ." ಎಂದಳು.

"ಜಡವಾದ ನಿನ್ನ ಮನದಲ್ಲಿ ರಾಗಲಹರಿ ತುಂಬಲೀಂತಾನೆ ನಾನು ಇಷ್ಟು ಮಾಡಿದ್ದು. ಅವನ ಬಗ್ಗೆ ನನಗೆ ಎಂದೋ ನಂಬಿಕೆ ಬಂದಿತ್ತು." ಎಂದಳು. ಅನಂತರ ನಕ್ಕು–"ಮೊದಲ ರಾತ್ರಿ ಇಲ್ಲಾಗಲೀ.... ನಾಳೆ ಅಲ್ಲಿ ಹೋಗುವಿಯಂತಿ." ಎಂದಳು.

ಆ ರಾತ್ರಿ ಅಂಗಡಿ ಮುಚ್ಚಿ ಒಂಬತ್ತಕ್ಕೆ ಕೃಷ್ಣಾ ಬಂದ. ಹಜಾರದಲ್ಲಿ ಜಯಲಕ್ಷ್ಮಿ ಮಂಚದ ಮೇಲಿರಲಿಲ್ಲ. ಗೋದಾ ಬಂದು "ಬಿಸಿಬೇಳೆ ಬಾತ್ ಇದೆ. ಇಲ್ಲೇ ಊಟಾ ಮಾಡು." ಎಂದು ಬಲವಂತವಾಗಿ ಊಟಾ ಮಾಡಿಸಿದಳು. "ರೂಮಲ್ಲಿದ್ದಾಳೆ ಹೋಗು." ಎಂದಳು. ಅಳುಕುತ್ತ ಬಂದು ನೋಡಿದ. ಶುಭ್ರ ಬಿಳಿ ಹಾಸಿಗೆ, ಬೀಳಿ ಮಲ್ಲಿನ ಸೀರೆಯುಟ್ಟು, ಮಲ್ಲಿಗೆ ದಂಡೆ ಮುಡಿದ ಹಾಲಿನ ಲೋಟಾ ಹಿಡಿದ ಜಯಾ ಮುಂದೆ ಬಂದು–"ನಾನು ನಿಮ್ಮನ್ನ ಪ್ರೀತಿಸ್ತೀನೆ." ಎಂದಳು.

"ಜಯಾ....ನನ್ನ ಕ್ಷಮಿಸಿದ್ದೆಯಾ ?" ಜಯಾ ಅವನೊಂದಿಗೆ–ನಿಧಾನವಾಗಿ ತನ್ನ ಕಥೆ ವಿವರಿಸಿ–"ನನಗೆ ಗರ್ಭಕೋಶ ತೆಗೆಸಿಲ್ಲ. ಜೊತೆಗೆ ಹರಣಿ ಶ್ರೀಮಂತ ಹುಡುಗಿ, ಅವಳ ವುಡ್‌ಬಿ ಇಂಜನಿಯರ್ ಪಾಟ್ನದಲ್ಲಿದ್ದಾನೆ. ಡಿಸೆಂಬರ್‌ನಲ್ಲಿ ಮದುವೆ, ನಾನು, ಅಕ್ಕ ನಿಮ್ಮನ್ನ ಪರೀಕ್ಷೆ ಮಾಡಿದಿವಿ, ನೀವು ಪರೀಕ್ಷೇಲಿ ಗೆದ್ದಿದ್ದೀರಾ ?" ಎಂದು ಅವನನ್ನಪ್ಪಿದಳು.

"ಎಂಥಾ ಕಠಿಣ ಪರೀಕ್ಷೆ ಮಾಡಿದ್ದಾಳೇಂತ ಕೋಪಾ ಬಂತಾ ?" ಎಂದಳು.

"ನೀನು ನನ್ನ ಕೆನ್ನೆಗೆ ಹೊಡೆದರೂ ಕೋಪವಿಲ್ಲ. ನಾನು ಮಹಾ ಪಾಪಿ, ಕಡೆಗೂ ನೀನು ನನ್ನ ಕ್ಷಮಿಸಿ, ನನ್ನವಳಾದೆಯಲ್ಲ." ಎಂದ.

ಅವಳು ನಕ್ಕು–"ಬರಿ ನಿಮ್ಮವಳಾದದ್ದು ಮಾತ್ರವಲ್ಲ. ದೇವರ ದಯೆ ಇದ್ರೇ ಮುಂದಿನ ವರ್ಷದ ಹೊತ್ತಿಗೆ ಒಂದು ಮುದ್ದಾದ ಪಾಪಾ ಕಾಣಿಕೆ ಕೊಡ್ತೀನಿ. ದಾಂಪತ್ಯ ಜೀವನ ಕಾಮದ ಕೆಸರಾಗಬಾರದು, ಪ್ರೇಮ ಸರೋವರವಾಗಿರಬೇಕು. ಅದು ನನ್ನ ಆಶೆ." ಎಂದಳು.

"ಆಗ ಕಾಮಾಂಧನಾಗಿದ್ದೆ, ತಪ್ಪು ಮಾಡಿದೆ. ಇನ್ನು ಮುಂದೆ ನಿನ್ನ ಹೂವಿನ ಹಾಗೆ ನೋಡ್ಕೋತೀನಿ." ಎಂದ.

"ನಿಮ್ಮಕ್ಕನ ಕೃಪೆಯಿಂದ ಐದಾರು ಲಕ್ಷ ಆಸ್ತಿ ಬೆಳೆದಿದೆ. ನಮ್ಮಿಬ್ಬರ ಮನಸು ಬೆಸೆದಿದೆ. ಗಂಡು ಮಗು ಹುಟ್ಟಿದರೇ ಅವರ ಮೇಲಿನ ಕೃತಜ್ಞತೆಗಾಗಿ ಗೋವಿಂದ ರಾಜ ಎಂದು ಹೆಣ್ಣಾದರೆ ರಂಗಲಕ್ಷ್ಮೀ ಎಂದಿಡೋಣಾ .....ಅಂದ್ಕೊಂಡಿದ್ದೀನಿ." ಎಂದಳು.

"ನಮಕ್ಕ ಗೋದಾ ದೇವತೆ. ವಿವಾಹವಾದ ಹೊಸತರಲ್ಲಿ ಅವಳ ಬದುಕಿನಲ್ಲಿಯೂ ನೂರು ಶೋಧನೆ ಬಂದಿತ್ತು. ಅವರತ್ತೇ ನಮ್ಮಮ್ಮನಿಗಿಂತ ಕೆಟ್ಟೋರು, ಆದರೆ ತನ್ನ ಮೇಲೆ.....ಉರಿದುರಿದು ಬೀಳೋ ಅವರನ್ನು ಪಾಲಿಸಿದಳು. ಕಡೆಗೆ ಆಕೇನೆ ಇದೊಂದು ಕಾಮ ಕ್ರೋಧ ಸೋಂಕಿಲ್ಲದ ಅಪೂರ್ವ ರತ್ನ, ಆಕಾಶದಲ್ಲಿ ಅರಳಿದ ಹೂವು ಅಂತಿದ್ದರು." ಎಂದ.

"ಹೌದು ! ಇವತ್ತು ನಮ್ಮ ಬದುಕು ರೂಪಿಸಿದವರು ಅವರೆ. ಜಡವಾಗಿದ್ದ ನನ್ನ ಮನಸ್ಸಿಗೆ ಚೈತನ್ಯ ತುಂಬಿದವರು ಅವರೆ." ಎಂದು ನಿಯಾನ್ ದೀಪ ಆರಿಸಿ, ಬೆಡ್‌ಲೈಟ್ ಹಚ್ಚಿದಳು. ಹಿತವಾದ ಹಸಿರು ಬಣ್ಣದ ಪ್ರಶಾಂತ ಬೆಳಕು ಚಿಮ್ಮಿತು. ದಂಪತಿಗಳಿಬ್ಬರ ಮನದಲ್ಲಿಯೂ ಪ್ರಸನ್ನತೆ ತುಂಬಿತ್ತು.

# ಕೀರ್ತಿ ಪ್ರಕಾಶನ

2, ಎಸ್.ಡಿ.ಎಂ. ಲೇನ್,

ಮನವರ್ತಿಪೇಟೆ, ಬೆಂಗಳೂರು-53